ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದು ಫೈನಲ್ ಪಂದ್ಯ!

ಸಿಂಗಾಪುರದಲ್ಲಿ ನಡೆಯುತ್ತಿರುವ ವಿಶ್ವ ಚೆಸ್ ಚಾಂಪಿಯನ್ ಶಿಪ್‌ನ 13ನೇ ಪಂದ್ಯವೂ ಡ್ರಾದಲ್ಲಿ ಅಂತ್ಯವಾಗಿದೆ. ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ಮತ್ತು ಭಾರತದ ಚೆಸ್ ಮಾಸ್ಟರ್ ಡಿ. ಗುಕೇಶ್ ಅವರು ತಲಾ 6.5 ಪಾಯಿಂಟ್‌ಗಳೊಂದಿಗೆ ಸಮಬಲ ಸಾಧಿಸಿದ್ದು, 14ನೇ ಪಂದ್ಯ ಗೆದ್ದವರು ಚಾಂಪಿಯನ್ ಆಗಲಿದ್ದಾರೆ. ಒಂದು ವೇಳೆ ಈ ಪಂದ್ಯವೂ ಡ್ರಾದಲ್ಲಿ ಕೊನೆಗೊಂಡರೆ ಟೈಬ್ರೇಕರ್‌ನಲ್ಲಿ ವಿಜೇತರನ್ನು ನಿರ್ಧರಿಸಲಾಗುತ್ತದೆ.

ಪುಟ ತೆರೆದಂತೆ...

ರಾಜಕಾರಣಿ ಎಂದು ಕರೆಯಲು ಮನಸ್ಸಾಗದ ಒಬ್ಬ ಸ್ಟೇಟ್ಸ್‌ಮನ್ ಕುರಿತು
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಐತಿಹಾಸಿಕ ಕಾದಂಬರಿ ಎಂಬ ಥ್ಯಾಂಕ್‌ಲೆಸ್ ಜಾಬ್
ಕಾಡುದಾರಿ
ಹರೀಶ್ ಕೇರ
ಸಂ.ಗಮ | 7

ಮಾತಂದ್ರೆ ಮಾತು



ಬೆಂಗಳೂರಿನ ಟೆಕ್ಕಿ ಅತುಲ್ ಸುಭಾಷ್ ಆತ್ಮಹತ್ಯೆ ಘಟನೆಯಿಂದ ಇಡೀ ದೇಶವೇ ಆಘಾತಕ್ಕೊಳಗಾಗಿದೆ. ಅತುಲ್ ಅವರ ವಿಡಿಯೊ ಹೃದಯ ವಿದ್ರಾವಕವಾಗಿದೆ. ನಕಲಿ ಸ್ತ್ರೀವಾದ ಖಂಡನೀಯ. ಈ ಪ್ರಕರಣದಲ್ಲಿ ಕೋಟ್ಯಂತರ ರು. ಸುಲಿಗೆ ಮಾಡಲಾಗಿದೆ. ಇದೇ ಕಾರಣಕ್ಕೆ ಶೇ.99ರಷ್ಟು ಮದುವೆಗಳಲ್ಲಿ ಪುರುಷರು ತಪ್ಪು ಮಾಡುತ್ತಾರೆ ಎಂದು ಹೇಳಲಾಗುತ್ತಿದೆ.

– ಕಂಗನಾ ರಣಾವತ್
ನಟಿ, ಸಂಸದೆ

ದಾರಿದೀಪೋಕ್ತಿ

ಸೂರ್ಯ ಸಾಯಂಕಾಲ ಮುಳುಗಿದಾಗ ಶಾಂತಿ ಮತ್ತು ಸಾರ್ಥಕತೆಯನ್ನು ನೀಡುತ್ತಾನೆ. ಬೆಳಗ್ಗೆ ಮೂಡಿದಾಗ ಹೊಸ ಅವಕಾಶ ಮತ್ತು ಭರವಸೆಯನ್ನು ಅರಳಿಸುತ್ತಾನೆ. ನಾವು ಏನೇ ಮಾಡಿದರೂ ಅದರಿಂದ ಬೇರೆಯವರಿಗೆ ಒಳ್ಳೆಯದಾಗಬೇಕು. ಆ ರೀತಿ ನಮ್ಮ ನಡತೆ ಇರುವಂತೆ ವರ್ತಿಸಬೇಕು.

ವಕ್ರತುಂಡೋಕ್ತಿ

ಹೆಂಡತಿಯೊಂದಿಗೆ ಆಗಾಗ ರೆಸ್ಟೋರೆಂಟಿಗೆ ಹೋಗಬೇಕು. ಕಾರಣ, ಸದಾ ಮನೆಯಲ್ಲೊಂದೇ ಜಗಳವಾಡಬಾರದು.

ಒಕ್ಕಲಿಗ ಸಂಪ್ರದಾಯದಂತೆ ಸಕಲ ಸರಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ
ಗಣ್ಯರು, ಕುಟುಂಬಸ್ಥರು, ಮದ್ದೂರಿನ ಅಭಿಮಾನಿಗಳಿಂದ ಕಣ್ಣೀರಿನ ವಿದಾಯ

ಅನಂತದಲ್ಲಿ ಕೃಷ್ಣ ಲೀನ

ಮದ್ದೂರು: ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರದ ಮಾಜಿ ವಿದೇಶಾಂಗ ಸಚಿವ ಪದ್ಮವಿಭೂಷಣ ಎಸ್.ಎಂ.ಕೃಷ್ಣ (92) ಹುಟ್ಟೂರು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಸೋಮನಹಳ್ಳಿಯಲ್ಲಿ ಬುಧವಾರ ಪಂಚಭೂತಗಳಲ್ಲಿ ಲೀನವಾದರು. ಮೊಮ್ಮಗ ಅಮರ್ತ್ಯ ಹೆಗಡೆ ಬುಧವಾರ ಸಂಜೆ 5.23ರ ಶುಭಲಗ್ನದಲ್ಲಿ ತಾತ ಎಸ್.ಎಂ.ಕೃಷ್ಣ ಅವರ ಪಾರ್ಥೀವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಿದರು. ಈ ದೃಶ್ಯಕ್ಕೆ ಎಸ್‌ಎಂಕೆ ಇಡೀ ಕುಟುಂಬ ಹಾಗೂ ರಾಜ್ಯದ ಘಟಾನುಘಟಿ ರಾಜಕೀಯ ನೇತಾರರು ಹಾಗೂ ಕೃಷ್ಣ ಅವರ ಸಾವಿರಾರು ಅಭಿಮಾನಿಗಳು ಸಾಕ್ಷಿಯಾದರು.

ಎರಡು ಗಂಟೆಗೆ ಸೋಮನಹಳ್ಳಿಗೆ ಆಗಮಿಸಿದ ಪಾರ್ಥೀವ ಶರೀರ: ಬುಧವಾರ ಬೆಳಗ್ಗೆ ಬೆಂಗಳೂರಿನ ನಿವಾಸದಿಂದ ಹೊರಟ ಎಸ್.ಎಂ.ಕೃಷ್ಣ ಪಾರ್ಥೀವ ಶರೀರ ತೆರೆದ ವಾಹನದಲ್ಲಿ ಕೆಂಗೇರಿ, ಕುಂಬಳಗೂಡು, ಬಿಡದಿ, ರಾಮನಗರ, ಚನ್ನಪಟ್ಟಣ ಮಾರ್ಗವಾಗಿ ಮಧ್ಯಾಹ್ನ 2ಕ್ಕೆ ಮದ್ದೂರಿನ ಸೋಮನಹಳ್ಳಿ ತಲುಪಿತು. ಕೆಂಗೇರಿ, ಬಿಡದಿ, ರಾಮನಗರ ಮತ್ತು ಚನ್ನಪಟ್ಟಣದಲ್ಲಿ ಕೆಲಹೊತ್ತು ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ತೆರೆದ ವಾಹನದ ಜತೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪುತ್ರಿ ಐಶ್ವರ್ಯ, ಅಳಿಯ ಅಮರ್ತ್ಯ ಹೆಗಡೆ ಆಗಮಿಸಿದರೆ, ತೆರೆದ ವಾಹನವನ್ನು ಕೃಷ್ಣ ಪತ್ನಿ ಪ್ರೇಮಾ, ಪುತ್ರಿಯರಾದ ಮಾಳವಿಕಾ ಮತ್ತು ಶಾಂಭವಿ ಹಿಂಬಾಲಿಸಿದರು.

ಮಂಡ್ಯ ಜಿಲ್ಲೆಯ ಗಡಿ ನಿಡಘಟ್ಟಕ್ಕೆ ಆಗಮಿಸುತ್ತಿದ್ದಂತೆಯೇ ತವರಿನ ಸುಪುತ್ರನ ಪಾರ್ಥೀವ ಶರೀರವನ್ನು ಕಂಡು ಗ್ರಾಮಸ್ಥರು ಭಾವುಕರಾದರು. ನಿಡಘಟ್ಟ ಮಾರ್ಗವಾಗಿ, ಮದ್ದೂರು ತಾಲೂಕಿನ ಕೆಸ್ತೂರು, ಸೋಮನಹಳ್ಳಿ ಸೇರಿದಂತೆ ಹಲವೆಡೆ ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಗ್ರಾಮಸ್ಥರು ಕೃಷ್ಣ ಅವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದರು. ಬಳಿಕ ಸೋಮನಹಳ್ಳಿಯ ಎಸ್.ಎಂ.ಕೃಷ್ಣ ಅವರ ಕಾಫಿಡೇ ಬಳಿ ಇರುವ ಮೈದಾನಕ್ಕೆ ಮಧ್ಯಾಹ್ನ 2.15ಕ್ಕೆ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ಇಡಲಾಯಿತು.

ಬಳಿಕ 3.30ಕ್ಕೆ ಚಿತೆಯ ಜಾಗಕ್ಕೆ ಕೃಷ್ಣ ಅವರ ಪಾರ್ಥೀವ ಶರೀರವನ್ನು ತರಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸರು ಬ್ಯಾಂಡ್ ಮೂಲಕ ರಾಷ್ಟ್ರಗೀತೆ ನುಡಿಸಿ ಗೌರವ ನಮನ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಅನುಮತಿ ಪಡೆದು ಮೂರು ಸುತ್ತು ಕುಶಾಲು ತೋಪು ಹಾರಿಸುವ ಮೂಲಕ ಪೊಲೀಸ್ ಗೌರವ ವಂದನೆ ಸಲ್ಲಿಸಲಾಯಿತು. ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೂಗುಚ್ಛ ಅರ್ಪಿಸಿ ಕಣ್ಣೀರಿಟ್ಟರು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ಮಂಡ್ಯ ಸಂಸದರೂ ಆದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್, ಮಾಜಿ ಸಿಎಂಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಪ್ರತಿಪಕ್ಷ ನಾಯಕ ಆರ್. ಅಶೋಕ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಆದಿಚುಂಚನಗಿರಿ ಮಠಾಧೀಶ ನಿರ್ಮಲಾನಂದಶ್ರೀ ಸೇರಿದಂತೆ 50ಕ್ಕೂ ಹೆಚ್ಚು ಗಣ್ಯರು ಹೂಗುಚ್ಛ ಅರ್ಪಿಸಿ ನಮನ ಸಲ್ಲಿಸಿದರು.

ಸಂಜೆ 4.40ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರದ ಮೇಲೆ ಹೊದಿಸಿದ್ದ ರಾಷ್ಟ್ರಧ್ವಜವನ್ನು ಎಸ್.ಎಂ.ಕೃಷ್ಣ ಅವರ ಪತ್ನಿ ಪ್ರೇಮಾ, ಪುತ್ರಿ ಶಾಂಭವಿ ಅವರಿಗೆ ಹಸ್ತಾಂತರಿಸಿದರು.

4:45ಕ್ಕೆ ಮೊಮ್ಮಗ ಅಮರ್ತ್ಯ ಹೆಗಡೆ ನೇತೃತ್ವದಲ್ಲಿ ಸಂಬಂಧಿಗಳಾದ ಗುರುಚರಣ್, ಆಕಾಶ್ ಸೇರಿದಂತೆ ಕುಟುಂಬಸ್ಥರು ಪಾರ್ಥಿವ ಶರೀರವನ್ನು ಶವಪೆಟ್ಟಿಗೆಯಿಂದ ತೆಗೆದು ಹೂವಿನಿಂದ ಅಲಂಕೃತ ಗೊಂಡಿದ್ದ ಚಟ್ಟಕ್ಕೆ ಕೂರಿಸಿದರು. ತದನಂತರ ಪಾರ್ಥೀವ ಶರೀರವನ್ನು ಅಂತ್ಯಸಂಸ್ಕಾರಕ್ಕೆ ಏರ್ಪಾಡು ಮಾಡಿದ್ದ ಸ್ಥಳಕ್ಕೆ ತಂದು ಶ್ರೀಗಂಧದಿಂದ ಸಜ್ಜುಗೊಂಡಿದ್ದ ಚಿತೆ ಮೇಲೆ ಮಲಗಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಚಟ್ಟಕ್ಕೆ ಹೆಗಲು ಕೊಟ್ಟು ರಾಜಕೀಯ ಗುರುವಿಗೆ ಕಣ್ಣೀರಿಡುತ್ತಲೇ ಅಂತಿಮ ನಮನ ಸಲ್ಲಿಸಿದರು.

ಶ್ರೀಗಂಧದ ತುಂಡುಗಳ ಮೇಲೆ ಬಾಳೆ ಎಲೆ ಹರಡಿ, ಚಿತೆಯ ಸುತ್ತ ಪುರೋಹಿತರು, ಕುಟುಂಬಸ್ಥರು ಗೋವಿನ ತುಪ್ಪ ಹಾಕಿದರು. ತಮಟೆಯ ವಾದನ, ವೇದಘೋಷಗಳೊಂದಿಗೆ ಪಾರ್ಥಿವ ಶರೀರವನ್ನು ಸಂಜೆ 4.55ಕ್ಕೆ ಚಿತೆಯ ಮೇಲೆ ಮಲಗಿಸಲಾಯಿತು. ಮೊಮ್ಮಗ ಅಮರ್ತ್ಯ ಹೆಗಡೆಯವರು ಮತ್ತು ಕುಟುಂಬಸ್ಥರು ಅಕ್ಕಿ ಹಾಕಿ, ಗಂಧದ ಚಕ್ಕೆಯನ್ನು ಇಟ್ಟರು. ನಂತರ ಎಸ್.ಎಂ.ಕೃಷ್ಣ ಮೊಮ್ಮಗ ಅಮರ್ತ್ಯ ಹೆಗಡೆ ಎಡ ಭುಜದ ಮೇಲೆ ಮೇಲೆ ಕೂಳು ಮಡಿಕೆ ಹೊತ್ತು ಬಲಗೈಯಲ್ಲಿ ಅಗ್ನಿ ಕಟ್ಟಿಗೆ ಹಿಡಿದು ಪಾರ್ಥೀವ ಶರೀರದ ಸುತ್ತ ಮೂರು ಸುತ್ತು ಪ್ರದಕ್ಷಣೆ ಹಾಕಿದರು. ಮಡಿಕೆಯಲ್ಲಿದ್ದ ಬೂದಿಯನ್ನು ಚಿತೆಯ ಮೇಲೆ ಸುರಿಸಿ 5.23ಕ್ಕೆ ಅಗ್ನಿ ಸ್ಪರ್ಶ ಮಾಡಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಪಾರ್ಥೀವ ಶರೀರಕ್ಕೆ ಹೂಗುಚ್ಛ ಇರಿಸಿ ಅಂತಿಮ ನಮನ ಸಲ್ಲಿಸಿದರು.

ಅಂತಿಮ ವಿಧಿ ನೆರವೇರಿಸಿದ ಮೊಮ್ಮಗ ಅಮರ್ತ್ಯ ಹೆಗಡೆ

ರಾಷ್ಟ್ರಧ್ವಜ ಹೊದಿಸಿ ಎಸ್‌ಎಂಕೆಗೆ ಸರಕಾರಿ ಗೌರವ

- ವೇದಬ್ರಹ್ಮ ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ 15 ವೈದಿಕರ ತಂಡದಿಂದ ವಿಧಿ-ವಿಧಾನ ಕಾರ್ಯ
- ಹಲವು ಯತಿಗಳು, ವಿವಿಧ ಮಠಗಳ ಸ್ವಾಮೀಜಿಗಳ ಸಮ್ಮುಖದಲ್ಲಿ ಕೃಷ್ಣ ಅವರ ಅಂತ್ಯಕ್ರಿಯೆ ಜರುಗಿತು
- ಮೊಮ್ಮಗ ಅಮರ್ತ್ಯ ಹೆಗಡೆ ಅವರಿಂದ ಬುಧವಾರ ಸಂಜೆ 5.23ಕ್ಕೆ ಕೃಷ್ಣ ಅವರ ಪಾರ್ಥೀವ ಶರೀರಕ್ಕೆ ಅಗ್ನಿಸ್ಪರ್ಶ

ಪಾರ್ಥೀವ ಶರೀರಕ್ಕೆ ಹೆಗಲು ಕೊಟ್ಟ ಡಿಕೆಶಿ

ಅಂತ್ಯಸಂಸ್ಕಾರದ ಕಾರ್ಯ ವಿಧಿವಿಧಾನ ಆರಂಭದಿಂದ ಹಿಡಿದು ಅಂತ್ಯದವರೆಗೂ ಮೈಕ್ ಹಿಡಿದು ಕಾರ್ಯನಿರ್ವಹಣೆ ಮಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಚ್ಚುಕಟ್ಟಾಗಿ ಅಂತ್ಯಸಂಸ್ಕಾರ ನೆರವೇರಿಸಲು ರಾಜ್ಯ ಸರಕಾರದ ಪ್ರತಿನಿಧಿಯಾಗಿ ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬದ ಸದಸ್ಯನಾಗಿ ಕಾರಣೀಭೂತರಾದರು. ಬಳಿಕ ಪಾರ್ಥೀವ ಶರೀರಕ್ಕೆ ಹೆಗಲು ಕೊಟ್ಟ ಡಿಕೆಶಿ, ಪುಷ್ಪ ನಮನ ಸಲ್ಲಿಸುವಾಗ ಕೃಷ್ಣ ಅವರ ಪಾದದ ಬಳಿಗೆ ಹಣೆ ಕೊಟ್ಟು ಬಿಕ್ಕಿ ಬಿಕ್ಕಿ ಅತ್ತರು. ಬಳಿಕ ತಾವೇ ಸಮಾಧಾನಪಡಿಸಿಕೊಂಡು ಅಂತ್ಯ ಸಂಸ್ಕಾರದ ಕಾರ್ಯವನ್ನು ನೆರವೇರಿಸಿದರು.

ಗಣ್ಯಾತಿಗಣ್ಯರಿಂದ ಅಂತಿಮ ದರ್ಶನ

ಎಸ್.ಎಂ.ಕೃಷ್ಣ ಅವರ ಅಂತ್ಯ ಸಂಸ್ಕಾರಕ್ಕೆ ಘಟನಾನು ಘಟಿ ನಾಯಕರು ಸಾಕ್ಷಿಯಾದರು. ಆದಿಚುಂಚನಗಿರಿ ಮಠದ ನಿರ್ಮಲಾನಂದ ಸ್ವಾಮೀಜಿ, ನಿಡುಮಾಮಿಡಿ ಮಠದ ವೀರಚನ್ನಮಲ್ಲ ಸ್ವಾಮೀಜಿ, ದುರ್ದುಂಡೇಶ್ವರ ಮಠದ ಶಿವಯೋಗಿ ಸ್ವಾಮೀಜಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವ ಎಚ್.ಡಿ. ಕುಮಾರ ಸ್ವಾಮಿ, ಪ್ರಹ್ಲಾದ್ ಜೋಶಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ, ಸಚಿವರಾದ ಡಾ.ಜಿ.ಪರಮೇಶ್ವರ್, ಎಚ್.ಕೆ.ಪಾಟೀಲ್, ಡಾ.ಎಂ.ಸಿ.ಸುಧಾಕರ್, ಎನ್. ಚಲುವರಾಯಸ್ವಾಮಿ, ಎಚ್.ಸಿ.ಮಹದೇವಪ್ಪ, ಕೆ. ವೆಂಕಟೇಶ್, ಆರ್.ಬಿ.ತಿಮ್ಮಾಪುರ, ಡಿ.ಸುಧಾಕರ್, ಲಕ್ಷ್ಮಿ ಹೆಬ್ಬಾಳ್ಕರ್, ಬಿ.ವೈ.ವಿಜಯೇಂದ್ರ, ಸಂಸದ ಡಾ.ಸುಧಾಕರ್, ನಿಖಿಲ್ ಕುಮಾರಸ್ವಾಮಿ, ಸುರೇಶ್ ಬಾಬು, ಪಿ.ರವಿಕುಮಾರ್ ಗಣಿಗ, ಕೆ.ಎಂ. ಉದಯ್, ಪಿ.ಎಂ.ನರೇಂದ್ರಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ, ರಮೇಶ ಬಂಡಿಸಿದ್ದೇಗೌಡ, ಟಿ.ಬಿ. ಜಯಚಂದ್ರ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಕೆ. ಶಿವಲಿಂಗೇಗೌಡ, ಕುಣಿಗಲ್ ರಂಗನಾಥ್, ಮುನಿರತ್ನ ಸೇರಿ ಹಲವು ಗಣ್ಯರು ಭಾಗವಹಿಸಿದ್ದರು.

ರಾಜ್ಯವ್ಯಾಪಿ ಚಳವಳಿಗೆ ಕರೆ | ಪೊಲೀಸ್ ಅಧಿಕಾರಿಗಳ ಅಮಾನತಿಗೆ ಪಟ್ಟು | ವಿಧಾನಸಭೆಯಲ್ಲಿಂದು ಪ್ರತಿಧ್ವನಿ ಸಂಭವ | ದೋಸ್ತಿ ಹೋರಾಟಕ್ಕೆ ಯತ್ನಾಳ ನಾಯಕತ್ವ

ಪಂಚಮಸಾಲಿ ಮೀಸಲು ಹೋರಾಟಕ್ಕೆ ಬಿಜೆಪಿ ಸಾಥ್

ಬೆಳಗಾವಿ: ಸರಕಾರದ ವಿರುದ್ಧ ವಕ್ಫ್ ವಿಷಯವಾಗಿ ಹೋರಾಟ ನಡೆಸಬೇಕು ಎನ್ನುವ ಲೆಕ್ಕಾಚಾರದಲ್ಲಿದ್ದ ಬಿಜೆಪಿಗೆ ಇದೀಗ ಹೊಸ ಅಸ್ತ್ರ ಸಿಕ್ಕಿದ್ದು, ಗುರುವಾರದಿಂದ ಪಂಚಮಸಾಲಿ ಹೋರಾಟಗಾರರ ಮೇಲಿನ ಲಾಠಿ ಚಾರ್ಜ್ ಮಾಡಿರುವುದನ್ನು ಮುಂದಿಟ್ಟುಕೊಂಡು ಸರಕಾರದ ವಿರುದ್ಧ ಸದನದೊಳಗೆ ಹೋರಾಟ ನಡೆಸುವುದು ಬಹುತೇಕ ನಿಶ್ಚಿತವಾಗಿದೆ.

ಬುಧವಾರ ಮಧ್ಯಾಹ್ನ ಪೊಲೀಸರು ಹಾಗೂ ಹೋರಾಟಗಾರರ ನಡುವಿನ ಗದ್ದಲದಲ್ಲಿ 10ಕ್ಕೂ ಹೆಚ್ಚು ಹೋರಾಟಗಾರರಿಗೆ ತೀವ್ರ ಪೆಟ್ಟಾಗಿದೆ. ಅದರಲ್ಲಿ ಕೆಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನ್ಯಾಯಯುತ ಬೇಡಿಕೆಯನ್ನು ಮುಂದಿಟ್ಟುಕೊಂಡು ಶಾಂತಿಯುತ ಹೋರಾಟಕ್ಕೆ ಮುಂದಾಗಿದ್ದರೂ, ಪೊಲೀಸರೇ ಪ್ರಚೋದನೆ ಮಾಡುವ ಮೂಲಕ ಈ ರೀತಿ ಮಾಡಿದ್ದಾರೆ. ಆದ್ದರಿಂದ ಇಡೀ ಪ್ರಕರಣದ ಹೊಣೆ ಸರಕಾರ ಹೊರಬೇಕು. ಕೂಡಲೇ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಬೇಕು ಎನ್ನುವ ಬೇಡಿಕೆಯನ್ನು ಮುಂದಿಟ್ಟುಕೊಂಡು ಸದನದೊಳಗೆ ಪ್ರತಿಭಟನೆ ನಡೆಸಲು ಬಿಜೆಪಿ-ಜೆಡಿಎಸ್ ಸಜ್ಜಾಗಿದೆ.

ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ ಬೆಲ್ಲದ್ ಸೇರಿದಂತೆ ಹಲವು ಶಾಸಕರೂ ಬಸವಜಯ ಮೃತ್ಯುಂಜಯ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಹೋರಾಟಗಾರರ ಸಭೆಗಳಲ್ಲಿಯೂ ಭಾಗವಹಿಸಿ, ಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದ್ದಾರೆ. → 4

- ಬಿಜೆಪಿ ಸರಕಾರದಲ್ಲಿ ನೇತೃತ್ವದ ವಹಿಸಿದ್ದ ಸಚಿವ ಲಕ್ಷ್ಮೀ ಹೆಬ್ಬಾಳ್ಕರ್, ವಿಜಯಾನಂದ ಕಾಶೆಪ್ಪನವರ್ ಇಕ್ಕಟ್ಟಿಗೆ
- ಕಾನೂನು ಸುವ್ಯವಸ್ಥೆಗೆ ಲಾಠಿ ಚಾರ್ಜ್ ಮಾಡಿರುವುದು ಈಗ ಸರಕಾರಕ್ಕೆ ನುಂಗಲಾರದ ತುತ್ತು
- ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಹೊರಗಿಟ್ಟು ಹೋರಾಟಕ್ಕೆ ಪಂಚಮಸಾಲಿ ಶ್ರೀಗಳ ಚಿಂತನೆ
- ಬಸನಗೌಡ ಪಾಟೀಲ ಯತ್ನಾಳ್ ನೇತೃತ್ವದಲ್ಲಿ ಹೋರಾಟ ಮುಂದುವರಿಸಲು ತೀರ್ಮಾನ

ದೌರ್ಜನ್ಯ ಖಂಡನೀಯ

12ನೇ ಶತಮಾನದಿಂದ ಲಿಂಗಾಯತರ ಮೇಲೆ ಯಾರೊಬ್ಬರೂ ದಾಳಿ ನಡೆಸಿ ರಲಿಲ್ಲ. ಆದರೆ ಸಿದ್ದರಾಮಯ್ಯ ಸರಕಾರದಲ್ಲಿ ಲಿಂಗಾಯತರ ಮೇಲೆ ದೌರ್ಜನ್ಯ ನಡೆದಿದ್ದು ಖಂಡನೀಯ. ಸಿಎಂ ಆದೇಶದ ಮೇರೆಗೆ ಹೋರಾಟಗಾರರ ಮೇಲೆ ಲಾಠಿ ಪ್ರಹಾರ ನಡೆಸಿರಬೇಕು. ಒಂದು ವೇಳೆ ಸಿಎಂ ಸೂಚನೆ ನೀಡಿಲ್ಲ ಎಂದಾದರೆ ಹಿರಿಯ ಪೊಲೀಸ್ ಅಧಿಕಾರಿಯನ್ನು ಕೂಡಲೇ ಅಮಾನತು ಮಾಡಲಿ. ಆ ಮೂಲಕ ಸಿಎಂ ಲಿಂಗಾಯತರ ಪರ ಎಂದು ಸಾಬೀತುಪಡಿಸಲಿ.

– ಬಸವ ಜಯಮೃತ್ಯುಂಜಯ ಸ್ವಾಮೀಜಿ
ಕೂಡಲಸಂಗಮ ಪೀಠ

ಸದನದ ಹೊರಗೆ ಇಂದೂ ಹೋರಾಟ

ಪಂಚಮಸಾಲಿ ಹೋರಾಟಗಾರರ ಟ್ರಾಕ್ಟರ್‌ಗಳನ್ನು ಬೆಳಗಾವಿ ಪ್ರವೇಶಿಸಲು ನಿರ್ಬಂಧ ಹೇರಿದ್ದಕ್ಕೆ ಬಿಜೆಪಿ ಶಾಸಕರು ಸೋಮವಾರ ಸದನದಲ್ಲಿ ಹೋರಾಟ ನಡೆಸಿದ್ದರು. ಬಿಜೆಪಿ ನಾಯಕರ ಒತ್ತಡಕ್ಕೆ ಮಣಿದು ಟೆಂಪೊ ಟ್ರ್ಯಾಕ್ಸ್‌ಗಳಿಗೆ ಅವಕಾಶ ನೀಡಲಾಗಿತ್ತು. ಆದರೆ ಈ ಅವಕಾಶವನ್ನೇ ಬಳಸಿಕೊಂಡು ಪಂಚಮಸಾಲಿ ಹೋರಾಟಗಾರರು ಸುವರ್ಣಸೌಧ ಪ್ರವೇಶಿಸಲು ಪ್ರಯತ್ನಿಸಿದಾಗ, ಲಾಠಿ ಚಾರ್ಜ್ ಮಾಡುವ ಅನಿವಾರ್ಯತೆ ಸೃಷ್ಟಿಯಾಗಿತ್ತು. ಇದೀಗ ಮಂಗಳವಾರ ಸದನದ ಹೊರಗೆ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಹೋರಾಟ ನಡೆಯಲಿದೆ.

ಹಿಂದುಳಿದ ವರ್ಗ ವಿರೋಧ

ಪಂಚಮಸಾಲಿಗೆ ಮೀಸಲು ನೀಡುವುದನ್ನು ಇದೀಗ ಹಿಂದುಳಿದ ವರ್ಗಗಳ ಸಮುದಾಯಗಳು ವಿರೋಧಿಸುತ್ತಿದ್ದು, ಒಂದು ವೇಳೆ ಮೀಸಲು ನೀಡಿದರೆ ರಾಜ್ಯಾದ್ಯಂತ ಹೋರಾಟದ ಎಚ್ಚರಿಕೆ ನೀಡಿದ್ದಾರೆ. ಪಂಚಮಸಾಲಿ ಲಿಂಗಾಯತ ಸಮುದಾಯವನ್ನು ಹಿಂದುಳಿದ ಪ್ರವರ್ಗ-2ಎಗೆ ಸೇರಿಸಬಾರದು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಮುಖಂಡರು ಹಾಗೂ ಕಾರ್ಯಕರ್ತರು ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದರು. ಪಂಚಮಸಾಲಿ ಸಮುದಾಯದ ಬೇಡಿಕೆಯನ್ನು ಯಾವುದೇ ಕಾರಣಕ್ಕೂ ಪರಿಗಣಿಸಬಾರದು. ಇಲ್ಲದಿದ್ದಲ್ಲಿ ರಾಜ್ಯಾದ್ಯಂತ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮುಖಂಡರು ಎಚ್ಚರಿಸಿದ್ದಾರೆ.

ಸುಮ್ಮನೆ ಬಿಡುವ ಪ್ರಶ್ನೆಯೇ ಇಲ್ಲ

ಪಂಚಮಸಾಲಿ ಮೀಸಲಾತಿ ಹೋರಾಟವನ್ನು ವ್ಯವಸ್ಥಿತವಾಗಿ ದಮನ ಮಾಡಲು ಸರಕಾರ ಉದ್ದೇಶಿಸಿದ್ದು, ಇದಕ್ಕಾಗಿ ಮೊದಲಿಗೆ ಅನುಮತಿ ನೀಡಲಿಲ್ಲ. ಬಳಿಕ ಶಾಂತಿಯುತ ಹೋರಾಟಗಾರರ ಮೇಲೆ ಪೊಲೀಸರು ಅಮಾನುಷವಾಗಿ ಹಲ್ಲೆ ನಡೆಸಿದ್ದಾರೆ. ಇದನ್ನು ಸುಮ್ಮನೆ ಬಿಡುವ ಪ್ರಶ್ನೆಯೇ ಇಲ್ಲ. ಹೋರಾಟದ ಸ್ವರೂಪ ಹೇಗಿರಬೇಕೆಂಬ ಬಗ್ಗೆ ಗುರುವಾರ ಬೆಳಗ್ಗೆ ಎಲ್ಲ ನಾಯಕರೂ ಸೇರಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಸೌದಿಗೆ 2034ರ ಫಿಫಾ ವಿಶ್ವಕಪ್ ಆತಿಥ್ಯ

ಪ್ಯಾರಿಸ್: 2034ರ ಫಿಫಾ ವಿಶ್ವಕಪ್ ಆತಿಥ್ಯವನ್ನು ಸೌದಿ ಅರೇಬಿಯಾ ವಹಿಸಲಿದೆ ಎಂದು ಫಿಫಾ ಬುಧವಾರ ಖಚಿತಪಡಿಸಿದೆ. ಕತಾರ್ ಬಳಿಕ ಫಿಫಾ ವಿಶ್ವಕಪ್ ಪಂದ್ಯಾವಳಿ ಆತಿಥ್ಯ ವಹಿಸಿದ ಮಧ್ಯಪ್ರಾಚ್ಯದ 2ನೇ ದೇಶ ಸೌದಿ ಅರೇಬಿಯಾವಾಗಿದೆ. 2034ರ ಆವೃತ್ತಿಯು ಒಂದೇ ಆತಿಥೇಯ ರಾಷ್ಟ್ರದಲ್ಲಿ ಮೊದಲ ಬಾರಿಗೆ 48 ತಂಡಗಳ ಪಂದ್ಯಾವಳಿಯನ್ನು ಆಯೋಜಿಸಿದ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಸೌದಿ ಅರೇಬಿಯಾದ ಐದು ನಗರಗಳಾದ ರಿಯಾದ್, ಜೆಡ್ಡಾ, ಅಲ್ ಖೋಬರ್, ಅಭಾ ಮತ್ತು ನಿಯೋಮ್‌ನ 15 ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿವೆ.

ರಾಜ್ಯಸಭೆಯ ಕಲಾಪ ಮುಂದಕ್ಕೆ

ದೆಹಲಿ: ಸಭಾಪತಿ ಜಗದೀಪ್ ಧನಕರ್ ಅವರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲು ನೀಡಿರುವ ನೋಟಿಸ್ ಹಾಗೂ ಜಾರ್ಜ್ ಸೋರೋಸ್ ವಿಚಾರವಾಗಿ ಸದನದಲ್ಲಿ ಕೋಲಾಹಲ ಉಂಟಾದ ಕಾರಣಕ್ಕೆ ರಾಜ್ಯಸಭೆಯ ಕಲಾಪವನ್ನು ಗುರುವಾರ ಮುಂದೂಡಲಾಯಿತು. ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ಪಕ್ಷಪಾತಿಯಾಗಿ ವರ್ತಿಸುತ್ತಿರುವ ಕಾರಣದಿಂದ, ಉಪರಾಷ್ಟ್ರಪತಿ ಹುದ್ದೆಯಿಂದ ಅವರನ್ನು ಪದಚ್ಯುತಗೊಳಿಸಬೇಕು ಎಂದು ಒತ್ತಾಯಿಸಿ ಇಂಡಿಯ ಒಕ್ಕೂಟದ ಸದಸ್ಯರು ಸಂಸತ್ ಹೊರಗೆ ಪ್ರತಿಭಟನೆ ನಡೆಸಿದರು.

ಫನ್‌ತರಂಗ
– ರಘುಪತಿ ಶೃಂಗೇರಿ –

ಮಹಿಳೆಯರಿಗೆ ಗುಡ್ ನ್ಯೂಸ್: ಸಿಗುತ್ತಿದೆ ಕೇವಲ 30 ಸೆಕೆಂಡ್‌ಗಳಲ್ಲಿ ಧರಿಸುವ ಜಿಪ್ಪಿಂಗ್ ಸೀರೆ
ಸುದ್ದಿ



ಸೆಕ್ಷನ್ 498(ಎ) ದುರ್ಬಳಕೆ: ಕಳವಳ

ದೆಹಲಿ: ವಿವಾಹಿತ ಮಹಿಳೆಯರ ವಿರುದ್ಧ ಪತಿ ಹಾಗೂ ಅವರ ಸಂಬಂಧಿಕರು ಎಸಗುವ ಕ್ರೌರ್ಯ ತಡೆಯಲು ಇರುವ ಸೆಕ್ಷನ್ 498 ಎ ಕಾನೂನು ದುರಪಯೋಗವಾಗುತ್ತಿರುವ ಬಗ್ಗೆ ಸುಪ್ರೀಂಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಪತಿ, ಆತನ ಕುಟುಂಬದ ವಿರುದ್ಧ ವೈಯಕ್ತಿಕ ದ್ವೇಷ ಸಾಧಿಸಲು ಕೆಲ ಮಹಿಳೆಯರು ಸೆಕ್ಷನ್ 498 ಎ ಕಾನೂನು ಅಸ್ತ್ರವನ್ನಾಗಿ ಬಳಸುತ್ತಿರುವ ಪ್ರವೃತ್ತಿ ಹೆಚ್ಚುತ್ತಿದೆ ಅಭಿಪ್ರಾಯಪಟ್ಟಿದೆ.

ಸಂವಿಧಾನ ಪ್ರತಿಕೃತಿ ಧ್ವಂಸ: ಹಿಂಸಾಚಾರ

ಛತ್ರಪತಿ ಸಂಭಾಜಿನಗರ: ಪರ್ಭಣಿ ರೈಲು ನಿಲ್ದಾಣದ ಆವರಣದಲ್ಲಿನ ಅಂಬೇಡ್ಕರ್ ಮೂರ್ತಿಯ ಬಳಿ ಇರಿಸಲಾಗಿದ್ದ ಸಂವಿಧಾನದ ಪ್ರತಿಕೃತಿಯನ್ನು ದುಷ್ಕರ್ಮಿಗಳು ಮಂಗಳವಾರ ಧ್ವಂಸಗೊಳಿಸಿದ್ದನ್ನು ಖಂಡಿಸಿ ಆರಂಭಗೊಂಡಿದ್ದ ಪ್ರತಿಭಟನೆಗಳು ಬುಧವಾರ ಹಿಂಸಾಚಾರಕ್ಕೆ ತಿರುಗಿವೆ. ಪೊಲೀಸರು ಅಶ್ರುವಾಯು ಶೆಲ್ ಪ್ರಯೋಗ ಮಾಡಿ ಪ್ರತಿಭಟನಾಕಾರರನ್ನು ಚದುರಿಸಿದ್ದಾರೆ.

ರೈಲ್ವೆ ತಿದ್ದುಪಡಿ ಮಸೂದೆ ಅಂಗೀಕಾರ

ದೆಹಲಿ: ರೈಲ್ವೆಯ ಖಾಸಗೀಕರಣಕ್ಕೆ ಅವಕಾಶ ನೀಡಬಾರದು ಎಂದು ಸರಕಾರವನ್ನು ಒತ್ತಾಯಿಸಿದ ಬಳಿಕ ಲೋಕಸಭೆಯು ರೈಲ್ವೆ ಕಾನೂನುಗಳ ತಿದ್ದುಪಡಿ ಮಸೂದೆಗೆ ಬುಧವಾರ ಧ್ವನಿ ಮತದ ಮೂಲಕ ಅಂಗೀಕಾರ ನೀಡಿತು. ರೈಲ್ವೆ (ತಿದ್ದುಪಡಿ) ಮಸೂದೆ-2024, ರೈಲ್ವೆ ಮಂಡಳಿಯ ಕಾರ್ಯ ನಿರ್ವಹಣೆ, ಸ್ವಾತಂತ್ರ್ಯ ಹೆಚ್ಚಿಸುತ್ತದೆ. ಕಳೆದ ಅಧಿವೇಶನದಲ್ಲಿ ಈ ಮಸೂದೆ ಮಂಡಿಸಲಾಗಿತ್ತು.

ಇವಿಎಂ: ಇಂಡಿಯ ಕೂಟ ಸುಪ್ರೀಂ ಮೊರೆ

ಮುಂಬೈ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಇವಿಎಂ ದುರ್ಬಳಕೆ ಕುರಿತ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿರುವ ಇಂಡಿಯ ಮೈತ್ರಿಕೂಟ, ಚುನಾವಣಾ ಆಯೋಗದ ವಿರುದ್ಧ ಸುಪ್ರೀಂಕೋರ್ಟ್ ಮೆಟ್ಟಿಲೇರಲು ನಿರ್ಧರಿಸಿದೆ. ಪುಣೆ ಹಡಪ್ಸರ್ ಕ್ಷೇತ್ರದಿಂದ ಪರಾಭವಗೊಂಡ ಎನ್‌ಸಿಪಿ ಶರದ್ ಪವಾರ್ ಬಣದ ನಾಯಕ ಪ್ರಶಾಂತ್ ಜಗತಾಪ್, ಈ ಕುರಿತ ನಿರ್ಧಾರ ಪ್ರಕಟಿಸಿದ್ದಾರೆ.

ಟೆಕ್ಕಿ ಆತ್ಮಹತ್ಯೆ: ನಾಲ್ವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಮಾರತಹಳ್ಳಿಯಲ್ಲಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ. ಸಹೋದರ ಬಿಕಾಸ್ ಕುಮಾರ್ ನೀಡಿದ ದೂರಿನಡಿ ಅತುಲ್ ಮಡದಿ ನಿಕಿತಾ ಸಿಂಘಾನಿಯ, ನಿಶಾ ಸಿಂಘಾನಿಯಾ, ಅನುರಾಗ್ ಸಿಂಘಾನಿಯಾ ಹಾಗೂ ಸುಶೀಲ್ ಸಿಂಘಾನಿಯಾ ವಿರುದ್ಧ ಮಾರತಹಳ್ಳಿಯಲ್ಲಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಜಯ್ ಮಲ್ಹೋತ್ರಾ ಅಧಿಕಾರ ಸ್ವೀಕಾರ

ಮುಂಬೈ: ಭಾರತೀಯ ರಿಸರ್ವ್ ಬ್ಯಾಂಕ್‌ನ 26ನೇ ಗವರ್ನರ್ ಆಗಿ ಸಂಜಯ್ ಮಲ್ಹೋತ್ರಾ, ಬುಧವಾರ ಅಧಿಕಾರ ಸ್ವೀಕರಿಸಿದರು. ಆರ್‌ಬಿಐನ ಪ್ರಧಾನ ಕಚೇರಿಗೆ ಬೆಳಗ್ಗೆ ಆಗಮಿಸಿದ ಅವರು ದಾಖಲೆಗಳಿಗೆ ಸಹಿ ಹಾಕುವ ಮೂಲಕ ಅಧಿಕಾರ ಸ್ವೀಕಾರ ಮಾಡಿದರು. ಈ ವೇಳೆ ಆರ್‌ಬಿಐನ ಡೆಪ್ಯೂಟಿ ಗವರ್ನರ್‌ಗಳಾದ ಸ್ವಾಮಿನಾಥನ್ ಜೆ., ಎಂ.ರಾಮೇಶ್ವರ ರಾವ್ ಹಾಗೂ ಟಿ.ರಬಿ ಶಂಕರ್ ಹಾಜರಿದ್ದರು.

ಬಂಗಾಳಕೊಲ್ಲಿಯಲ್ಲಿ ಮತ್ತೆ ಚಂಡಮಾರುತ | ಹತ್ತು ಜಿಲ್ಲೆಗಳಲ್ಲಿ ಯಲ್ಲೋ ಅಲರ್ಟ್

ರಾಜ್ಯದಲ್ಲಿ ಮುಗಿಯದ ಮಳೆ ಆಟ

ಬೆಂಗಳೂರು: ಬಂಗಾಳ ಕೊಲ್ಲಿಯಲ್ಲಿ ಮತ್ತೆ ಉಂಟಾಗಿರುವ ಚಂಡಮಾರುತದ ಪರಿಣಾಮ ದಿಂದ ರಾಜ್ಯದಲ್ಲಿ ಗುರುವಾರ ಮಳೆಯಾಗುವ ಸಂಭವವಿದ್ದು, ದಕ್ಷಿಣ ಒಳನಾಡಿನ 10 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿತ್ರದುರ್ಗ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಜಿಲ್ಲೆಗಳಲ್ಲಿ ಡಿ.12ರಂದು ಭಾರೀ ಮಳೆಯಾಗ ಲಿದ್ದು, ಯೆಲ್ಲೋ ಅಲರ್ಟ್ ನೀಡಲಾಗಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆ ಮಳೆಯಾಗುವ ಸಂಭವವಿದೆ. ಕರಾವಳಿ ಭಾಗದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಹಗುರ ಮಳೆಯಾ ಗಲಿದೆ. ಉತ್ತರ ಒಳನಾಡಿನಲ್ಲಿ ಒಣ ಹವೆ ಇರಲಿದೆ. ಉತ್ತರ ಒಳನಾಡಿನ ಒಂದೆರಡು ಕಡೆ ಗಳಲ್ಲಿ ಹಗುರದಿಂದ ಸಾಧಾರಣ ಮಂಜು ಬೀಳುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ನಗರದಲ್ಲಿ ಮಳೆ

ಬೆಂಗಳೂರು ನಗರ ಮತ್ತು ಸುತ್ತಲಿನ ಸ್ಥಳಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ವಾತಾವರಣವಿರಲಿದೆ. ಕೆಲವು ಕಡೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 26 ಮತ್ತು 18 ಡಿಗ್ರಿ ತಾಪಮಾನ ದಾಖಲಾಗಲಿದೆ ಎಂದು ಮಾಹಿತಿ ನೀಡಿದೆ.

ಸುಳ್ಯದಲ್ಲಿ ಅತಿ ಹೆಚ್ಚು ಮಳೆ

ನೈಋತ್ಯ ಬಂಗಾಳ ಕೊಲ್ಲಿಯಲ್ಲಿ ಕಡಿಮೆ ಒತ್ತಡದ ಪ್ರದೇಶ ನಿರ್ಮಾಣವಾಗಿದೆ. ಶ್ರೀಲಂಕಾ ಕರಾವಳಿಯ ಮೇಲ್ಭಾಗದಲ್ಲಿ ವಾಯು ಚಂಡಮಾರುತದ ಪರಿಚಲನೆ ಇದೆ. ಮುಂದಿನ 24 ಗಂಟೆಗಳಲ್ಲಿ ಪಶ್ಚಿಮ-ವಾಯುವ್ಯ ದಿಕ್ಕಿನಲ್ಲಿ ಶ್ರೀಲಂಕಾದಿಂದ ತಮಿಳುನಾಡು ಕರಾವಳಿಯ ಕಡೆಗೆ ಚಲಿಸುವ ಸಾಧ್ಯತೆ ಹೆಚ್ಚಾಗಿದೆ. ಈ ಹಿನ್ನಲೆಯಲ್ಲಿ ಡಿ.12ರಂದು ರಾಜ್ಯದಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಕೇಂದ್ರದ ಪ್ರಾದೇಶಿಕ ನಿರ್ದೇಶಕ ಸಿ.ಎಸ್.ಪಾಟೀಲ್ ಹೇಳಿದ್ದಾರೆ. ಮುಖ್ಯವಾಗಿ ದಕ್ಷಿಣ ಒಳನಾಡಿನಲ್ಲಿ ವಾಯುಭಾರ ಕುಸಿತ ಉಂಟಾಗಲಿದೆ. ಮಂಗಳವಾರದಿಂದ ಕರಾವಳಿ ಕರ್ನಾಟಕ, ದಕ್ಷಿಣ ಆಂತರಿಕ ಕರ್ನಾಟಕದ ಒಂದೆರಡು ಕಡೆಗಳಲ್ಲಿ ಮಳೆಯಾಗಿದೆ. ಉತ್ತರ ಒಳನಾಡಿನಲ್ಲಿ ಒಣ ಹವೆ ಮುಂದುವರಿದಿದೆ. ಅತಿ ಹೆಚ್ಚು ಮಳೆ 1 ಸೆ.ಮೀ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ ದಾಖಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಾಂಶುಪಾಲೆ ಅಮಾನತು, ಐವರು ಅತಿಥಿ ಶಿಕ್ಷಕರ ವಜಾ | ಸಿಬ್ಬಂದಿ ಸೇವೆಯಿಂದ ಬಿಡುಗಡೆ

ಸಮುದ್ರ ಪಾಲಾಗಿದ್ದ ವಿದ್ಯಾರ್ಥಿಗಳ ಶವ ಪತ್ತೆ

ದೀಕ್ಷಾ

ಶ್ರಾವಂತಿ

ಲಾವಣ್ಯ

ವಂದನಾ

ಕೋಲಾರ: ಮುಳಬಾಗಲು ತಾಲೂಕಿನ ಕೊತ್ತೂರು ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಶೈಕ್ಷಣಿಕ ಪ್ರವಾಸದಲ್ಲಿ ನಾಲ್ವರು ವಿದ್ಯಾರ್ಥಿನಿಯರು ಮುರುಡೇಶ್ವರದ ಸಮುದ್ರದಲ್ಲಿ ಮುಳುಗಿ ಮೃತಪಟ್ಟಿದ್ದು, ಘಟನೆಗೆ ಸಂಬಂಧಿಸಿದಂತೆ ಶಾಲೆಯ ಪ್ರಾಂಶುಪಾಲೆ ಮಹರ್ ಶಶಿಕಲಾ ಅವರನ್ನು ಅಮಾನತು ಮಾಡಲಾಗಿದೆ. ಅತಿಥಿ ಶಿಕ್ಷಕರಾದ ಶಾರದಮ್ಮ, ಚೌಡಪ್ಪ, ನರೇಶ್, ವಿಶ್ವನಾಥ್, ಸುನೀಲ್ ಹಾಗೂ ಡಿ ಗ್ರೂಪ್ ಸಿಬ್ಬಂದಿ ಲಕ್ಷ್ಮಮ್ಮ ಅವರನ್ನು ಸೇವೆಯಿಂದ ಬಿಡುಗಡೆ ಮಾಡಲಾಗಿದೆ.

ಮುಳಬಾಗಲು ತಾಲೂಕಿನ ಪೂಜಾರಹಳ್ಳಿ ಶ್ರಾವಂತಿ(15) ಮಂಗಳವಾರ ಸಂಜೆಯೇ ಮೃತಪಟ್ಟಿದ್ದರು. ದೀಕ್ಷಾ (15), ವಂದನಾ(15) ಮತ್ತು ಲಾವಣ್ಯ (15) ಅವರ ಶವಗಳನ್ನು ಕಾವಲುಪಡೆ ತಂಡದವರು ಬುಧವಾರ ಪತ್ತೆ ಮಾಡಿ ತೀರಕ್ಕೆ ತಂದಿದ್ದಾರೆ. ಅಲೆಯ ರಭಸಕ್ಕೆ ಕೊಚ್ಚಿ ಹೋಗಿದ್ದ ಬಾಳಸಂದ್ರ ವೀಕ್ಷಣಾ(15), ತಾತಿಘಟ್ಟ ಯಶೋಧಾ(15) ಹಾಗೂ ಕಲಿಕೇರಿ ಲಿಪಿತಾ(15) ಅವರನ್ನು ಮುರುಡೇಶ್ವರದ ಆಸ್ಪತ್ರೆಗೆ ಸೇರಿಸಲಾಗಿದ್ದು ಎಲ್ಲರೂ ಚೇತರಿಸಿ ಕೊಂಡಿದ್ದಾರೆಂದು ವೈದ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೃತರ ಪೋಷಕರಿಗೆ 5 ಲಕ್ಷ ರು. ಪರಿಹಾರ

ವಸತಿ ಶಾಲೆಯ 46 ಮಕ್ಕಳು 2 ದಿನದ ಶೈಕ್ಷಣಿಕ ಪ್ರವಾಸಕ್ಕಾಗಿ ಡಿ.8ರಂದು ಭಾನುವಾರ ರಾತ್ರಿ 9 ಗಂಟೆಗೆ ಕೊತ್ತೂರಿನಿಂದ ನಿರ್ಗಮಿಸಿದ್ದು, 9ರಂದು ಬೆಳಗ್ಗೆ ಬನವಾಸಿ, ಶಿರಸಿ ನೋಡಿಕೊಂಡು ರಾತ್ರಿ ಗೋಕರ್ಣದಲ್ಲಿ ತಂಗಿದ್ದರು. 10ರಂದು ಮಂಗಳವಾರ ಮಧ್ಯಾಹ್ನ 1.30ಕ್ಕೆ ಮುರುಡೇಶ್ವರ ತಲುಪಿದ್ದು, ಸಂಜೆ 5 ಗಂಟೆಗೆ ದುರ್ಘಟನೆ ಸಂಭವಿಸಿದೆ. ಮೃತ ನಾಲ್ವರು ಬಾಲಕಿಯರೂ 15 ವರ್ಷದವರಾಗಿದ್ದು 9ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದರು. ಮೃತಪಟ್ಟ ಬಾಲಕಿಯರ ಪೋಷಕರಿಗೆ ತಲಾ 5 ಲಕ್ಷ ರು. ಪರಿಹಾರ ಬಿಡುಗಡೆ ಮಾಡಲಾಗಿದೆ ಎಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕ ಪಿ.ಎಸ್. ಕಾಂತರಾಜು ವಿಶ್ವವಾಣಿಗೆ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸರಕಾರದ ವಿರುದ್ಧ ಸಿ.ಟಿ.ರವಿ ಕಿಡಿ



ಬೆಂಗಳೂರು: ಪಂಚಮಸಾಲಿ ಸಮಾಜದ ಶಾಂತಿಯುತ ಪ್ರತಿಭಟನೆ, ಹೋರಾಟಗಾರರ ಮೇಲೆ ಸರಕಾರವು ಲಾಠಿಚಾರ್ಜ್ ನಡೆಸಿ ಅಮಾನವೀಯವಾಗಿ ವರ್ತಿಸಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರು ಆರೋಪಿಸಿದ್ದಾರೆ. ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಾಮಾಜಿಕ ನ್ಯಾಯದಡಿ ಪಂಚಮಸಾಲಿಗಳಿಗೆ ನ್ಯಾಯ ಕೊಡುವ ಕೆಲಸ ಮಾಡಿ ಎಂದು ಆಗ್ರಹಿಸಿದರು. ಮಂಗಳವಾರ ನಡೆದ ಲಾಠಿಚಾರ್ಜ್ ಸಂಬಂಧ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ಮಾಡಿಸುವಂತೆ ಒತ್ತಾಯಿಸಿದರು. ಲಾಠಿಚಾರ್ಜ್‌ನಿಂದ ಹೋರಾಟದಲ್ಲಿ ಪಾಲ್ಗೊಂಡಿದ್ದ ನೂರಾರು ಜನ ಲಿಂಗಾಯತ ಸಮುದಾಯಕ್ಕೆ ಸೇರಿದ ಪಂಚಮಸಾಲಿ ರೈತರು ಗಾಯಗೊಂಡಿದ್ದಾರೆ. ಸರಕಾರದ್ದು ಸರ್ವಾಧಿಕಾರಿ ನಡೆ, ಪ್ರಜಾಪ್ರಭುತ್ವ ವಿರೋಧಿ ನಡೆ ಎಂದು ಖಂಡಿಸಿದರು. ಪಂಚಮಸಾಲಿ ಸಮುದಾಯದ ಬೇಡಿಕೆ ಇವತ್ತು ನಿನ್ನೆಯದಲ್ಲ, 2 ಎ ಮೀಸಲಾತಿ ಸಂಬಂಧ ಈ ಸರಕಾರ ಬಂದ ಆರಂಭದಿಂದ ಅವರ ಬೇಡಿಕೆಗಳನ್ನು ಪುನರುಚ್ಚಾರ ಮಾಡುತ್ತಿದ್ದಾರೆ. ಬಿಜೆಪಿ ಸರಕಾರ ಇದ್ದಾಗ 2 ಸಿ, 2 ಡಿ ಅಡಿ ಎರಡು ರೀತಿ ಮೀಸಲಾತಿ ಕೊಟ್ಟು, ಅದರಡಿಯಲ್ಲಿ ವಿವಿಧ ಸಮುದಾಯಗಳನ್ನು ಒಟ್ಟು ಸೇರಿಸಿ ಮೀಸಲಾತಿ ಹೆಚ್ಚಿಸುವ ಕೆಲಸ ಮಾಡಿತ್ತು ಎಂದು ವಿವರಿಸಿದರು.

ರಸ್ತೆ ಸಂಚಾರ ದಟ್ಟಣೆ, ಅಪಘಾತಗಳ ತಡೆಗೆ ಕ್ರಮ: ಪ್ರಧಾನ ಅಭಿಯಂತರ ಡಾ. ಬಿ.ಎಸ್.ಪ್ರಹ್ಲಾದ್ ಹೇಳಿಕೆ

ರಸ್ತೆ ಗುಂಡಿಗೆ ಇಕೋಫಿಕ್ಸ್ ಮಿಶ್ರಣ ಬಳಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆಗಾಲದ ವೇಳೆ ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚುವ ಸಲುವಾಗಿ ಪ್ರಾಯೋಗಿಕವಾಗಿ ಇಕೋಫಿಕ್ಸ್ ಮಿಶ್ರಣ ಬಳಕೆ ಮಾಡಲಾಗಿದೆ ಎಂದು ಬಿಬಿಎಂಪಿಯ ಪ್ರಧಾನ ಅಭಿಯಂತರ ಡಾ. ಬಿ.ಎಸ್.ಪ್ರಹ್ಲಾದ್ ಹೇಳಿದರು.

ನಗರದಲ್ಲಿ ರಸ್ತೆ ಗುಂಡಿಗಳ ಸಮಸ್ಯೆಯಿಂದಾಗಿ ಸಂಚಾರ ದಟ್ಟಣೆ ಉಂಟು ಮಾಡುವುದರ ಜತೆಗೆ ರಸ್ತೆ ಅಪಘಾತಗಳಿಗೆ ಕೂಡಾ ಕಾರಣವಾಗುತ್ತದೆ. ಈ ಸವಾಲನ್ನು ಎದುರಿಸಲು ಭಾರತದ ಪ್ರಮುಖ ರಸ್ತೆ ಸಂಶೋಧನಾ ಸಂಸ್ಥೆ ಸಿಎಸ್‌ಆರ್ -ಸಿಆರ್‌ಆರ್‌ಐ , ರಮುಕ ಗ್ಲೋಬಲ್ ಸರ್ವೀಸ್ ಹಾಗೂ ಪಾಲಿಕೆಯ ಸಹಯೋಗದೊಂದಿಗೆ ಬುಧವಾರ ಬೆಂಗಳೂರಿನ ಅಂಜನಿ ದೇವಸ್ಥಾನದ ಬಳಿಯ ಅವೆನ್ಯೂ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚುವ ಮೂಲಕ ಸ್ಟೀಲ್ ಸ್ಲ್ಯಾಗ್ ಆಧಾರಿತ ಇಕೋಫಿಕ್ಸ್ ತಂತ್ರಜ್ಞಾನದ ಪ್ರಾಯೋಗಿಕ ಯೋಜನೆಗೆ ಚಾಲನೆ ನೀಡಲಾಗಿದೆ ಎಂದರು.

ಭಾರತದ ಪ್ರಮುಖ ರಸ್ತೆ ಸಂಶೋಧನಾ ಸಂಸ್ಥೆ ಸಿಎಸ್‌ಐಆರ್ – ಸೆಂಟ್ರಲ್ ರೋಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಪಾಲಿಕೆ ಸಹಯೋಗದೊಂದಿಗೆ ಬೆಂಗಳೂರು ನಗರದ ರಸ್ತೆಯ ಗುಂಡಿಗಳನ್ನು ಸರಿಪಡಿಸಲು ಕೈಜೋಡಿಸಿದ್ದು, ನಗರದ ರಸ್ತೆಗಳು ಮಳೆಗಾಲದಲ್ಲಿ ಹಾಟ್ ಮಿಕ್ಸ್ ಪ್ಲಾಂಟ್ ಕಾರ್ಯನಿರ್ವಹಿಸಲು ಸಾಧ್ಯವಾಗದ ಸಂದರ್ಭದಲ್ಲಿ ಪರಿಸರ ಸ್ನೇಹಿ ರೀತಿಯಲ್ಲಿ ಬಾಳಿಕೆ ಬರುವ ರಸ್ತೆ ದುರಸ್ತಿ ಮಾಡಲು ಇಕೋಫಿಕ್ಸ್ ತಂತ್ರಜ್ಞಾನವು ನಗರದ ರಸ್ತೆಗಳಿಗೆ ವರದಾನವಾಗಲಿದೆ ಎಂದು ಹೇಳಿದರು.

ಇಕೋಫಿಕ್ಸ್ ತಯಾರಿ ಹೇಗೆ : ಇಕೋಫಿಕ್ಸ್‌ನ್ನು ಉಕ್ಕಿನ ಕೈಗಾರಿಕೆಗಳ ಕೈಗಾರಿಕಾ ತ್ಯಾಜ್ಯ ಅಂದರೆ ಕಬ್ಬಿಣ ಮತ್ತು ಉಕ್ಕಿನ ಸ್ಲ್ಯಾಗ್ ಬಳಸಿ ಅಭಿವೃದ್ಧಿಪಡಿಸಲಾಗಿದೆ ಮತ್ತು ಯಾವುದೇ ನಿರ್ಜಲೀಕರಣದ ಅಗತ್ಯವಿಲ್ಲದೇ ನೀರು ತುಂಬಿದ ಗುಂಡಿ ಸರಿಪಡಿಸಬಹುದಾಗಿದೆ. ರಸ್ತೆ ಗುಂಡಿಗಳನ್ನು ಮುಚ್ಚಬೇಕಾದರೆ ಗುಂಡಿಗಳನ್ನು ನೀರು ತೆರವು ಮಾಡುವ ಹಾಗು ಸ್ವಚ್ಛ ಮಾಡುವ ಮತ್ತು ಟ್ಯಾಕ್ ಕೋಟ್ ನ್ನು ಅನ್ವಯಿಸುವ ಅಗತ್ಯವಿರುತ್ತದೆ. ಆದರೆ ಇಕೋಫಿಕ್ಸ್ ಮಿಶ್ರಣಕ್ಕೆ ಯಾವುದೇ ಟ್ಯಾಕ್ ಕೋಟ್ ಅಗತ್ಯವಿಲ್ಲದೇ ನೀರು ತುಂಬಿದ ಸ್ಥಿತಿಯಲ್ಲಿಯೂ ಗುಂಡಿ ದುರಸ್ತಿಪಡಿಸಬಹುದಾಗಿದೆ. ದುರಸ್ತಿಯಾದ ಕೂಡಾ ರಸ್ತೆ ಸಂಚಾರಕ್ಕೆ ಅವಕಾಶ ನೀಡಬಹುದಾಗಿದೆ. ಸಂಸ್ಕರಿತ ಕಬ್ಬಿಣ ಮತ್ತು ಉಕ್ಕಿನ ಸ್ಲ್ಯಾಗ್ ಮತ್ತು ವಿಶೇಷವಾಗಿ ಕಸ್ಟಮೈಸ್ ಮಾಡಿದ ಬೈಂಡರ್‌ನ್ನು ಬಳಸಿಕೊಂಡು ಇಕೋಫಿಕ್ಸ್ ಮಿಶ್ರಣವನ್ನು ತಯಾರಿಸಲಾಗಿರುವುದರಿಂದ ಬಾಳಿಕೆ ಮತ್ತು ದೀರ್ಘಾಯುಷ್ಯದ ವಿಷಯದಲ್ಲಿ ದುರಸ್ತಿ ಮಾಡಿದ ಮೇಲ್ಮೈ ಸಾಮಾನ್ಯ ರಸ್ತೆಗಿಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಮಾಹಿತಿ ನೀಡಿದರು. ಈ ವೇಳೆ ಸಿಎಸ್‌ಐಆರ್‌ನ ಪ್ರಮುಖ ವಿಜ್ಞಾನಿ ಸತೀಶ್ ಪಾಂಡೆ, ಟಿಇಸಿ ವಿಭಾಗದ ಕಾರ್ಯಪಾಲಕ ಅಭಿಯಂತರ ಆರಿಫ್ ಸೇರಿದಂತೆ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಇದ್ದರು.

ಬೇರೆ ರಾಜ್ಯಗಳಲ್ಲೂ ಇದರ ಬಳಕೆ

ಇಕೊಫಿಕ್ಸ್ ಮಿಶ್ರಣದ ತಂತ್ರಜ್ಞಾನವು ಗುಜರಾತ್, ಜಾರ್ಖಂಡ್, ಮಹಾರಾಷ್ಟ್ರ ಮತ್ತು ಅರುಣಾಚಲ ಪ್ರದೇಶ ಹಾಗೂ ದೇಶದ ವಿವಿಧ ರಾಜ್ಯಗಳಲ್ಲಿ ಗಳಲ್ಲಿಯೂ ಜಾರಿಗೊಳಿಸಲಾಗಿದ್ದು, ಬಾಳಿಕೆ ಮತ್ತು ಕಾರ್ಯಕ್ಷಮತೆಯ ವಿಷಯದಲ್ಲಿ ಈಗಾಗಲೇ ಉತ್ತಮವಾಗಿ ಪರೀಕ್ಷಿಸಲ್ಪಟ್ಟಿದೆ.

ಪ್ರಾಯೋಗಿಕವಾಗಿ ಅಳವಡಿಸಲು ಒಪ್ಪಿಗೆ

ಇಕೊಫಿಕ್ಸ್ ತಂತ್ರಜ್ಞಾನವನ್ನು ನಗರದಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಸಿಎಸ್‌ಐಆರ್‌ನ ಪ್ರಮುಖ ವಿಜ್ಞಾನಿ ಸತೀಶ್ ಪಾಂಡೆ ರವರು ಮುಖ್ಯ ಕಾರ್ಯದರ್ಶಿಯ ಶಾಲಿನಿ ರಜನೀಶ್ ರನ್ನುಭೇಟಿ ಮಾಡಿ ಇಕೋಫಿಕ್ಸ್ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಿದ ಬಳಿಕ, ಅವರು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ರವರು ಇಕೋಫಿಕ್ಸ್ ತಂತ್ರಜ್ಞಾನದ ಸಾಧಕ-ಬಾಧಕಗಳನ್ನು ಪರಿಶೀಲಿಸಿ ಪ್ರಾಯೋಗಿಕವಾಗಿ ಅಳವಡಿಸಲು ಒಪ್ಪಿಗೆ ನೀಡಿರುತ್ತಾರೆ. ಅದಂತೆ ರಸ್ತೆ ಗುಂಡಿಗೆ ಇಕೋಫಿಕ್ಸ್ ತಂತ್ರಜ್ಞಾನ ಬಳಸಿಕೊಳ್ಳಲಾಗಿದೆ ಎಂದರು.

ರಂಜಿತ್ ವಿರುದ್ಧದ ತನಿಖೆಗೆ ಹೈ ತಡೆ



ಬೆಂಗಳೂರು: ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಲ್ಲಿ ಮಲೆಯಾಳಂ ಸಿನಿಮಾ ನಿರ್ದೇಶಕ ರಂಜಿತ್ ವಿರುದ್ಧ ನಡೆಯುತ್ತಿದ್ದ ತನಿಖೆಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ತನ್ನ ವಿರುದ್ಧದ ತನಿಖೆಗೆ ತಡೆ ನೀಡಬೇಕೆಂದು ಕೋರಿ ರಂಜಿತ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯ ಮೂರ್ತಿ ಎಂ.ನಾಗಪ್ರಸನ್ನ ಅವರು ನಡೆಸಿದರು.

ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ತಾಜ್ ಹೋಟೆಲ್‌ನಲ್ಲಿ 2012ರಲ್ಲಿ ಈ ಘಟನೆ ನಡೆದಿದೆ ಎಂದು ಅಸ್ವಾಭಾವಿಕ ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವ ಅರ್ಜಿದಾರರು ರಂಜಿತ್ ವಿರುದ್ಧ ದೂರು ನೀಡಿದ್ದರು. ಆದರೆ, ಈ ಹೋಟೆಲ್ 2016ರಿಂದಷ್ಟೇ ಕಾರ್ಯನಿರ್ವಹಿಸಿದೆ. ಈ ಅಂಶ ಸಾರ್ವಜನಿಕವಾಗಿ ಗೊತ್ತಿರುವ ವಿಷಯ ಎಂದು ಪೀಠ ಹೇಳಿತು. ಅಲ್ಲದೇ, ಘಟನೆ 2012ರಲ್ಲಿ ನಡೆದಿದೆ ಎಂಬುದಾಗಿ ದೂರಿದ್ದಾರೆ. ಇದು ನಡೆದು 12 ವರ್ಷಗಳು ಕಳೆದಿವೆ. 2024ರಲ್ಲಿ ದೂರು ದಾಖಲಿಸಿದ್ದು, ದೂರು ನೀಡಲು ಸಂತ್ರಸ್ತರು ಹನ್ನೆರಡು ವರ್ಷ ತೆಗೆದುಕೊಂಡಿದ್ದಾರೆ, ಇದೊಂದು ಅಂಶವೇ ಸುಳ್ಳು ಆರೋಪ ಎಂಬುದನ್ನು ಸಾಬೀತುಪಡಿಸುತ್ತದೆ. ಆದ್ದರಿಂದ ಅರ್ಜಿದಾರರ ವಿರುದ್ಧದ ಐಪಿಸಿ 377 (ಅಸ್ವಾಭಾವಿಕ ಲೈಂಗಿಕ ಕ್ರಿಯೆ) ಮತ್ತು ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್ 66ಇ ಅಡಿಯಲ್ಲಿ ದಾಖಲಿಸಿರುವ ಪ್ರಕರಣದ ತನಿಖೆಗೆ ತಡೆ ನೀಡಲಾಗುತ್ತಿದೆ ಎಂದು ಪೀಠ ತನ್ನ ಆದೇಶದಲ್ಲಿ ಹೇಳಿದೆ.

PUBLIC NOTICE

I, **Subhash Siyal,** son of Bhawarlal Siyal, residing at #153, Narayana Pillai Street, Near Coles Park, Bharti Nagar, Bangalore 560001. I state that I have lost few of the original mother deed title documents pertaining to Site # 153, Narayana Pillai Street, Near Coles Park, Bharti Nagar, Bangalore 560001 while I was shifting my residence, the details of which are as follows:

1. Original Sale Deed Dated 27.10.1910 bearing Document No 599
2. Original Sale Deed dated 27.08.1928 and bearing Document No.733/1928-29 executed in favour of P.M.Narayanswamy
3. Registered WILL dated 04.09.1937 and bearing Document No.9/1937-38, executed by P.M.Narayanswamy
4. Death Certificate of P.M.Narayanswamy.
5. Original Sale Deed dated 30.09.1953 and bearing Document No.1436, executed by Lokanayaki Ammal in favour of Kousalya
6. Original plan annexed to Settlement Deed dated 20.08.1976 and bearing Document No.816/1976-77

I have filed a lost report with the jurisdictional police bearing Lost Report No.1377926/2024

Any person having any knowledge of the whereabouts of the said document may contact me immediately.

Subhash Siyal
Mob: 9886004647

ಡಿಆರ್‌ಡಿಒ ಕ್ರೀಡಾ ಸಂಕೀರ್ಣ ಮೆಟ್ರೋ ನಿಲ್ದಾಣಕ್ಕೆ ಬಾಗ್ಮನೆ ಹೆಸರು

ಬೆಂಗಳೂರು: ನಮ್ಮ ಮೆಟ್ರೋದ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರ ಮಾರ್ಗದಲ್ಲಿರುವ ಡಿಆರ್‌ಡಿಒ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮೆಟ್ರೋ ನಿಲ್ದಾಣಕ್ಕೆ ಬಾಗ್ಮನೆ ಹೆಸರು ನಾಮಕರಣ ಮಾಡಲು ಒಪ್ಪಂದ ಮಾಡಿಕೊಳ್ಳಲಾಗಿದೆ.

20 ವರ್ಷಗಳ ಅವಧಿಗೆ ಮಾನ್ಯವಾಗುವಂತೆ 40 ಕೋಟಿ ರು.ಗಳ ಒಪ್ಪಂದವನ್ನು ಮೆಟ್ರೋ ಹಾಗೂ ಬಾಗ್ಮನೆ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಮಾಡಿಕೊಂಡಿದೆ. ಸೀತಾರಾಮಪಾಳ್ಯ, ಬೆಳ್ಳಂದೂರು, ಮತ್ತು ಇಸ್ರೋ ಮೆಟ್ರೋ ನಿಲ್ದಾಣಗಳಲ್ಲಿನ ಕಾನ್ಕೋರ್ಸ್ ಮಟ್ಟದಿಂದ ತಮ್ಮ ಕ್ಯಾಂಪಸ್‌ಗೆ ಸಂಪರ್ಕ ಒದಗಿಸಲು 30 ವರ್ಷಗಳ ಅವಧಿಗೆ ಪ್ರತಿನಿಲ್ದಾಣಕ್ಕೆ 10 ಕೋಟಿ ರು. ನಮ್ಮ ಮೆಟ್ರೋಗೆ ನೀಡಲಿದ್ದು, ಅದರಲ್ಲಿ 10 ಕೋಟಿ ರು. ನಮ್ಮ ಮೆಟ್ರೋಗೆ ಮುಂಗಡವಾಗಿ ಪಾವತಿಸಿದೆ ಎಂದು ಮಾಹಿತಿ ನೀಡಿದೆ. ಕರ್ನಾಟಕ ಸರಕಾರದಿಂದ ಈ ಒಪ್ಪಂದಕ್ಕೆ ಅನುಮೋದನೆ ಪಡೆದ ನಂತರ ನಿಲ್ದಾಣದ ನಾಮಕರಣ ಹಾಗೂ ಸಂಪರ್ಕ ಕಲ್ಪಿಸಲಾಗುವುದು. ಬಾಗ್ಮನೆ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ನಮ್ಮ ಮೆಟ್ರೋ ಯೋಜನೆಗೆ ನವೀನ ಹಣಕಾಸು ಕಾರ್ಯವಿಧಾನದ ಮೂಲಕ ಹಣಕಾಸು ಒದಗಿಸುತ್ತದೆ. ಈ ಹೊಸ ನೀಲಿ ಮಾರ್ಗ 17 ಕಿ.ಮೀ (ಒಆರ್‌ಆರ್ ಮಾರ್ಗ) ಉದ್ದವಿದ್ದು 13 ನಿಲ್ದಾಣ ಹೊಂದಿದೆ. ಇದು ಬೆಂಗಳೂರಿನ ಎಲ್ಲಾ ಭಾಗಗಳ ನಿವಾಸಿಗಳು, ಐಟಿ ಉದ್ಯೋಗಿಗಳು ಮತ್ತು ಪ್ರಯಾಣಿಕರಿಗೆ ಪ್ರಯಾಣಿಸಲು ಉತ್ತಮ ಮಾರ್ಗವಾಗಲಿದೆ.

ವಿದ್ಯಾಕರ್‌ಗೆ ಅತ್ಯುತ್ತಮ ಸಮಾಜ ಸೇವಕ ಪ್ರಶಸ್ತಿ

ಬೆಂಗಳೂರು: ತಮಿಳುನಾಡು ಸರಕಾರ ಸಮಾಜ ಸೇವಕ ಹಾಗೂ ಉಡವುಂ ಕಾರಂಗಲ್ ಸಂಸ್ಥೆ ಸಂಸ್ಥಾಪಕ ಎಸ್.ವಿದ್ಯಾಕರ್ ಅವರಿಗೆ ಅತ್ಯುತ್ತಮ ಸಮಾಜಸೇವಕ ಪ್ರಶಸ್ತಿ ನೀಡಿ ಗೌರವಿಸಿದೆ.

71 ವರ್ಷ ವಯಸ್ಸಿನ ಎಸ್.ವಿದ್ಯಾಕರ್ ಅವರು ತರಬೇತಿ ಪಡೆದ ಸಮಾಜ ಸೇವಕರಾಗಿದ್ದು, ಅವರು 1983 ರಲ್ಲಿ ಉದವುಂ ಕರಂಗಲ್ ಎಂಬ ಸ್ವಯಂ ಸೇವಾ ಸಂಸ್ಥೆ ಸ್ಥಾಪಿಸಿದ್ದಾರೆ. ಅವರ ಪ್ರಮುಖ ಚಟುವಟಿಕೆಯು ನಿರ್ಗತಿಕ ಮಾನಸಿಕ ಅಸ್ವಸ್ಥ ರೋಗಿಗಳು ಮತ್ತು ವಿಕಲಾಂಗ ಮಕ್ಕಳ ಆರೈಕೆಯಾಗಿದೆ. ಮಾನವೀಯತೆಗೆ ಅವರ ಸೇವೆಯ ಕಳೆದ 41 ವರ್ಷಗಳಲ್ಲಿ ಸುಮಾರು 5600 ನಿರ್ಗತಿಕ ಮಾನಸಿಕ ಅಸ್ವಸ್ಥ ವಿಕಲಚೇತನ ರೋಗಿಗಳನ್ನು ರಕ್ಷಿಸಲಾಗಿದೆ, ಪುನರ್ವಸತಿ ಮಾಡಲಾಗಿದೆ ಮತ್ತು ಅವರ ಕುಟುಂಬಗಳೊಂದಿಗೆ ಮರುಸೇರ್ಪಡೆ ಮಾಡಲಾಗಿದೆ. ಸ್ಪಾಸ್ಟಿಕ್ ಮತ್ತು ಬೌದ್ಧಿಕವಾಗಿ ಅಶಕ್ತರಾಗಿರುವ ಮಕ್ಕಳನ್ನು ತಿರುವೇರ್ಕಾಡುವಿನ ಹೋಮ್ ಶಾಂತಿವನದಲ್ಲಿ ಪೋಷಿಸಲಾಗುತ್ತದೆ. ವಿದ್ಯಾಕರ್ ಅವರು ತಿರುವೇರ್ಕಾಡುವಿನಲ್ಲಿ ಅತ್ಯಾಧುನಿಕ ಚಟುವಟಿಕೆಯ ಕೊಠಡಿ ಆರಂಭಮ್ ಜತೆಗೆ ವಿಶೇಷ ಮಕ್ಕಳಿಗಾಗಿ ಜೀವನ್ ಶಾಲೆ ಸ್ಥಾಪಿಸಿದ್ದಾರೆ. ತಮ್ಮ ಯೋಜನೆಯಾದ ಪರಿವರ್ತನ್ ಮೂಲಕ ಅವರು ಚಿಕಿತ್ಸೆ ನೀಡುವ ಮೂಲಕ ಕೂನೂರು ಮತ್ತು ಕೊಯಮತ್ತೂರಿನ ಬುಡಕಟ್ಟು ಪ್ರದೇಶದಲ್ಲಿರುವ ಮಾನಸಿಕ ಅಸ್ವಸ್ಥರನ್ನು ತಲುಪಿದ್ದಾರೆ. ಮತ್ತು ಬೆನ್ನುಹುರಿ ಗಾಯಗೊಂಡ ವ್ಯಕ್ತಿಗಳಿಗೆ ಉಚಿತ ಔಷಧಿ, ಹಾಸಿಗೆ, ಗಾಲಿಕುರ್ಚಿಯಂತಹ ಅಗತ್ಯ ವಸ್ತು ಒದಗಿಸುವ ಮೂಲಕ ಸಹಾಯ ಮಾಡಿದ್ದಾರೆ ಮತ್ತು 62 ಮನೆಗಳನ್ನು ನಿರ್ಮಿಸಲು ಪ್ರಸ್ತಾಪಿಸಿದ್ದಾರೆ. ತಿರುವಳ್ಳೂರು ಜಿಲ್ಲೆಯ ಅಣ್ಣಾನಗರ, ಒಟ್ಟೇರಿ ಮತ್ತು ಚೇತುಪಟ್ಟು, ತಿರುವಣ್ಣಾಮಲೈನಲ್ಲಿ ಮೂರು ಸ್ಮಶಾನಗಳನ್ನು ನಿರ್ಮಿಸುವ ಮೂಲಕ ಅವರು ತಮಿಳುನಾಡು ಸರಕಾರವನ್ನು ಬೆಂಬಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಅತುಲ್ ತಮ್ಮನಿಂದ ದೂರು | ಮಾರತಹಳ್ಳಿ ಪೊಲೀಸರಿಂದ ತನಿಖೆ

ಅತುಲ್ ಪತ್ನಿ ಸೇರಿದಂತೆ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲು

ಬೆಂಗಳೂರು: ಮಾರತಹಳ್ಳಿಯಲ್ಲಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ನಿ ನಿಕಿತಾ ಸಿಂಘಾನಿಯಾ ಸೇರಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ. ಸಹೋದರ ಬಿಕಾಸ್ ಕುಮಾರ್ ನೀಡಿದ ದೂರಿನಡಿ ತುಲ್ ಮಡದಿ ನಿಕಿತಾ ಸಿಂಘಾನಿಯ, ನಿಶಾ ಸಿಂಘಾನಿಯಾ, ಅನುರಾಗ್ ಸಿಂಘಾನಿಯಾ ಹಾಗೂ ಸುಶೀಲ್ ಸಿಂಘಾನಿಯಾ ವಿರುದ್ಧ ಮಾರತಹಳ್ಳಿಯಲ್ಲಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಮ್ಮ ನೀಡಿದ ದೂರಿನಲ್ಲಿ ಏನಿದೆ?: ಅತುಲ್ ಸುಭಾಷ್ ಮತ್ತು ನಿಕಿತಾ ಸಿಂಘಾನಿಯ 2019ರಲ್ಲಿ ಮದುವೆಯಾಗಿದ್ದು ಗಂಡು ಮಗು ಇದೆ. ನಿಕಿತಾ ಸಿಂಘಾನಿಯಾ, ತಾಯಿ ನಿಶಾ ಸಿಂಘಾನಿಯಾ, ಸಹೋದರ ಅನುರಾಗ್ ಸಿಂಘಾನಿಯಾ ಸಂಬಂಧಿ ಸುಶೀಲ್ ಸಿಂಘಾನಿಯಾ ಸೇರಿ ಅತುಲ್ ಮೇಲೆ ಸುಳ್ಳು ಪ್ರಕರಣ ಹಾಕಿದ್ದಾರೆ. ಪ್ರಕರಣದ ಇತ್ಯರ್ಥಕ್ಕಾಗಿ 3 ಕೋಟಿ ರು. ನೀಡಬೇಕೆಂದು ಒತ್ತಾಯ ಮಾಡಿದ್ದರು. ಅಷ್ಟೇ ಅಲ್ಲದೆ, ಮಗನ ಭೇಟಿಗೆ ಅವಕಾಶ ನೀಡಲು 30 ಲಕ್ಷ ರು. ಹಣಕ್ಕೆ ಬೇಡಿಕೆ ಇಟ್ಟಿದ್ದರು. 3 ಕೋಟಿ ಹಣ ನೀಡದಿದ್ದರೆ ನೀನು ಬದುಕಬೇಡ. ಆತ್ಮಹತ್ಯೆ ಮಾಡಿಕೋ ಎಂದು ಅಣಕಿಸುತ್ತಿದ್ದರು, ಇದರಿಂದ ಮಾನಸಿಕವಾಗಿ ಮತ್ತು ದೈಹಿಕವಾಗಿ ನೊಂದು ನನ್ನ ಅಣ್ಣ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬಿಕಾಸ್ ಕುಮಾರ್ ದೂರು ನೀಡಿದ್ದಾರೆ. ಮಾರತಹಳ್ಳಿ ಠಾಣೆ ಪಿಎಸ್‌ಐ ನೇತೃತ್ವದಲ್ಲಿ ತಂಡ ರಚನೆಯಾಗಿದ್ದು ಶೀಘ್ರವೇ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಿದ್ದಾರೆ.

ಉತ್ತರಪ್ರದೇಶದ ಜೌನ್ಪುರದಲ್ಲಿ ಸುಭಾಷ್ ಪರವಾಗಿ ವಾದಿಸಿದ್ದ ವಕೀಲ ಅವಧೇಶ್ ತಿವಾರಿ ಪ್ರತಿಕ್ರಿಯಿಸಿ, ವರದಕ್ಷಿಣೆ, ಹಲ್ಲೆ ಮತ್ತು ಜೀವನಾಂಶದ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿದೆ. ಜುಲೈ 2024 ರಲ್ಲಿ ನ್ಯಾಯಾಲಯದ ಮಗನ ಪೋಷಣೆಗಾಗಿ ಮಾಸಿಕ 40,000 ರು. ಪಾವತಿಸುವಂತೆ ಆದೇಶಿಸಿತ್ತು. ಆದರೆ ಪತ್ನಿ ಮಾಡಿದ ಹೆಚ್ಚುವರಿ ಬೇಡಿಕೆ ತಿರಸ್ಕರಿಸಿತ್ತು.

ಏನಿದು ಪ್ರಕರಣ?

ಉತ್ತರ ಪ್ರದೇಶ ಮೂಲದ ಅತುಲ್ ಸುಭಾಷ್ ಖಿನ್ನತೆಗೆ ಒಳಗಾಗಿ 40ಕ್ಕೂ ಹೆಚ್ಚು ಪುಟಗಳ ಡೆತ್ ನೋಟ್ ಬರೆದಿಟ್ಟು ಡಿ.9 ರಂದು ಮಂಜುನಾಥ ಲೇಔಟ್‌ನಲ್ಲಿರುವ ತಮ್ಮ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದರು. ಖಾಸಗಿ ಕಂಪನಿಯೊಂದರಲ್ಲಿ ಡೆಪ್ಯೂಟಿ ಮ್ಯಾನೇಜರ್ ಆಗಿದ್ದ ಇವರು ಸುಮಾರು 40 ಪುಟಗಳ ಡೆತ್ ನೋಟ್ ಬರೆದಿದ್ದ ಇವರು ಆತ್ಮಹತ್ಯೆಗೂ ಮುನ್ನ ವಿಡಿಯೋ ಮಾಡಿ ಸ್ನೇಹಿತರಿಗೆ ಅನ್ನು ಕಳುಹಿಸಿ ತಾನು ಅನುಭವಿಸಿದ್ದ ಸಂಕಷ್ಟಗಳನ್ನು ವಿವರಿಸಿದ್ದರು.

ಹೊಸ ವರ್ಷಕ್ಕೆ ಹೈ ಅಲರ್ಟ್: ಬೌನ್ಸರ್‌ಗಳ ಜತೆ ಪೊಲೀಸ್ ಸಭೆ

ಬೆಂಗಳೂರು: ಹೊಸ ವರ್ಷಾಚರಣೆಗೆ ಇನ್ನೇನು ಕೆಲವೇ ದಿನಗಳು ಬಾಕಿ ಉಳಿದಿದೆ. ಬಹುತೇಕ ಜನ 2025 ನ್ನು ಬರ ಮಾಡಿಕೊಳ್ಳಲು ಭರ್ಜರಿ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈ ವರ್ಷ ವಿಶೇಷ ಭದ್ರತೆ ನಿಯೋಜನೆ ಮಾಡಲು ಪೊಲೀಸ್ ಇಲಾಖೆ ಸಿದ್ಧವಾಗಿದ್ದು, ಬೆಂಗಳೂರಿನ ಬೌನ್ಸರ್‌ಗಳ ಜತೆ ಸಭೆ ನಡೆಸಿದ್ದಾರೆ.

ಬೆಂಗಳೂರಿನಲ್ಲಿ ಪ್ರತೀ ವರ್ಷವೂ ಹೊಸ ವರ್ಷದ ಸಂಭ್ರಮಾಚರಣೆ ಜೋರಾಗಿರುತ್ತದೆ. ಮದ್ಯರಾತ್ರಿಯಾದರೂ ಸಂಭ್ರಮ ಮುಗಿದಿರುವುದಿಲ್ಲ. ಮಾತ್ರವಲ್ಲ ಕುಡಿದು ನಶೆಯಲ್ಲಿ ಮೈಮರೆತಿರುತ್ತಾರೆ. ಈ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ಎಚ್ಚರಿಕೆ ವಹಿಸಿದೆ. ಹೊಸ ವರ್ಷಕ್ಕೆ ಪ್ರತೀ ಭಾರಿ ಕೇಂದ್ರ ವಿಭಾಗವೇ ಫೇವರೇಟ್. ಈ ಬಾರಿಯೂ ಈಗಿನಿಂದಲೇ ಕೇಂದ್ರ ಪೊಲೀಸರು ಅಲರ್ಟ್ ಆಗಿದ್ದಾರೆ. ಹೊಸ ವರ್ಷಕ್ಕೆ ಬ್ರಿಗೇಡ್ ರೋಡ್, ಎಂಜಿ ರೋಡ್, ಚರ್ಚ್ ಸ್ಟ್ರೀಟ್ ಸಜ್ಜಾಗಿದೆ.

ಬೌನ್ಸರ್ ಜೊತೆ ಪೊಲೀಸ್ ಇಲಾಖೆ ಸಭೆ

ಈ ಬಾರಿ ಇನ್ನಷ್ಟು ಬಿಗಿ ಭದ್ರತೆಗೆ ಕೇಂದ್ರ ವಿಭಾಗ ಡಿಸಿಪಿ ಶೇಖರ್ ತಯಾರಿ ಆರಂಭಿಸಿದ್ದಾರೆ. ಇದೇ ಮೊದಲ ಭಾರಿಗೆ ಪಬ್ ಬಾರ್ ರೆಸ್ಟೋರೆಂಟ್ ಪಾರ್ಟಿಗಳ ಸ್ಥಳದಲ್ಲಿ ನಿಯೋಜನೆಗೊಳ್ಳುವ ಬೌನ್ಸರ್‌ಗಳ ಜತೆಗೆ ಸಭೆ ನಡೆಸಿದ್ದಾರೆ. ಈ ವೇಳೆ ಮಹಿಳೆಯರು ಹಾಗೂ ಯುವತಿಯರ ಜತೆ ಹೇಗೆ ವರ್ತನೆ ಮಾಡಬೇಕು, ಪಾರ್ಟಿ ಪ್ರಿಯರ ಜತೆ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತಿಳಿಸಿದ್ದಾರೆ. ಕುಡಿದ ಮತ್ತಲ್ಲಿ ಯಾರಾದರೂ ಅಸಭ್ಯ ವರ್ತನೆ ತೋರಿದ್ದಲ್ಲಿ ಅಂತವರನ್ನು ಪೊಲೀಸರಿಗೆ ಹೇಗೆ ಒಪ್ಪಿಸಬೇಕು ಎಂಬುದರ ಕುರಿತು ಸಭೆಯಲ್ಲಿ ಮಾಹಿತಿ ನೀಡಿದ್ದಾರೆ.

ಪಬ್ ,ಬಾರ್ ಮಾಲೀಕರಿಂದ ಮಾಹಿತಿ

ಪೊಲೀಸರ ಜತೆ ಸಂಪರ್ಕ ಹಾಗೂ ಕಾರ್ಯ ವಿಧಾನದ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಸಿದ್ದಾರೆ. ಇದಲ್ಲದೆ ಕೇಂದ್ರ ವಿಭಾಗದ ಪಬ್ ಬಾರ್ ರೆಸ್ಟೋರೆಂಟ್ ಮಾಲೀಕರು, ಪಾರ್ಟಿ ಹಾಲ್ ಹಾಗೂ ಖಾಸಗಿ ಹೋಟೆಲ್‌ಗಳ ಮ್ಯಾನೇಜರ್‌ಗಳ ಜತೆಗೂ ಸಭೆ ನಡೆಸಿದ್ದಾರೆ. ಹೊಸ ವರ್ಷಕ್ಕೆ ಮಾರ್ಗ ಸೂಚಿಗಳ ಪಾಲನೆ ಜತೆಗೆ ಹೇಗೆ ಪಾರ್ಟಿ ಆಯೋಜನೆ ಮಾಡಬೇಕೆಂಬುದರ ಕುರಿತು ಚರ್ಚಿಸಿದ್ದಾರೆ. ಡಿಸಿಪಿ ಶೇಖರ್ ಅವರು, ಮಾಲೀಕರಿಂದಲೂ ಅಭಿಪ್ರಾಯಗಳನ್ನು ಪಡೆದುಕೊಂಡಿದ್ದಾರೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **22.07.2024** ರಂದು ಕರೆದು ಸಾಲಗಾರ **ಆರೋಕಿಯಮರಿ ಚಿನ್ನಪ್ಪ ಅಲಿಯಾಸ್ ಆರೋಕಿಯಮರಿ ಸುದೀಪ್ ಕುಮಾರ್ (ಸಹ-ಸಾಲಗಾರರು, ಪತ್ನಿ ಹಾಗೂ ದಿವಂಗತ ಸುದೀಪ್ ಕುಮಾರ್ ಯು ಅಲಿಯಾಸ್ ಸುದೀಪ್ ಕುಮಾರ್ ಅವರ ಕಾನೂನು ವಾರಸುದಾರರು), ಶಿರ್ಲಿ ಉದಯ ಕುಮಾರ್ (ಸಹ-ಸಾಲಗಾರರು, ತಾಯಿ ಹಾಗೂ ದಿವಂಗತ ಸುದೀಪ್ ಕುಮಾರ್ ಯು ಅಲಿಯಾಸ್ ಸುದೀಪ್ ಕುಮಾರ್ ಅವರ ಕಾನೂನು ವಾರಸುದಾರರು), ಉದಯ ಕುಮಾರ್ ಅಲಿಯಾಸ್ ಉದಯ್ ಕುಮಾರ್ (ತಂದೆ ಹಾಗೂ ದಿವಂಗತ ಸುದೀಪ್ ಕುಮಾರ್ ಮತ್ತು ಅಲಿಯಾಸ್ ಸುದೀಪ್ ಕುಮಾರ್ ಅವರ ಕಾನೂನು ವಾರಸುದಾರರು), ಬೆಲ್ಲಾ (ಅಪ್ರಾಪ್ತ ಮಗಳು ಹಾಗೂ ಸಹಜ ಪೋಷಣೆಯ ಮೂಲಕ ದಿವಂಗತ ಸುದೀಪ್ ಕುಮಾರ್ ಯು ಅಲಿಯಾಸ್ ಸುದೀಪ್ ಕುಮಾರ್ ಅವರ ಕಾನೂನು ವಾರಸುದಾರರು) ಮತ್ತು ಗೇಬ್ರಿಯೆಲ್ಲಾ (ಅಪ್ರಾಪ್ತ ಮಗಳು ಹಾಗೂ ಸಹಜ ಪೋಷಣೆಯ ಮೂಲಕ ದಿವಂಗತ ಸುದೀಪ್ ಕುಮಾರ್ ಯು ಅಲಿಯಾಸ್ ಸುದೀಪ್ ಕುಮಾರ್ ಅವರ ಕಾನೂನು ವಾರಸುದಾರರು)** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 38,78,965.26 (ರೂಪಾಯಿಗಳು ಮೂವತ್ತೆಂಟು ಲಕ್ಷದ ಎಪ್ಪತ್ತೆಂಟು ಸಾವಿರದ ಒಂಬೈನೂರ ಅರವತ್ತೈದು ಮತ್ತು ಇಪ್ಪತ್ತಾರು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBGM00505840** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **18.07.2024** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **09.12.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಆಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 38,78,965.26 (ರೂಪಾಯಿಗಳು ಮೂವತ್ತೆಂಟು ಲಕ್ಷದ ಎಪ್ಪತ್ತೆಂಟು ಸಾವಿರದ ಒಂಬೈನೂರ ಅರವತ್ತೈದು ಮತ್ತು ಇಪ್ಪತ್ತಾರು ಪೈಸೆ ಮಾತ್ರ) 18.07.2024** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆ ಎಲ್ಲಾ ತುಂಡು ಮತ್ತು ವಸತಿ ಸ್ಥಿರ ಆಸ್ತಿಯ ಪಾರ್ಸೆಲ್ ಬೇರಿಂಗ್ ಸೈಟ್ ನಂ. 42 ಮತ್ತು 43 ಆಸ್ತಿ ನಂ. 84 ಇನ್ ಹೌಸ್ ಲಿಸ್ಟ್ ಖಾತಾ ನಂ. 317, ಬೈರತಿ ವಿಲೇಜ್ ಬಿದರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಬೆಂಗಳೂರು -560077-ಕರ್ನಾಟಕದಲ್ಲಿ ನೆಲೆಗೊಂಡಿದೆ

ಸೈಟ್ ನಂ. 42, ಮೇಲೆ ಸುತ್ತುವರಿದಿದೆ

ಪೂರ್ವದಲ್ಲಿ ಇದರಿಂದ : ಖಾಸಗಿ ಆಸ್ತಿ
ಪಶ್ಚಿಮದಲ್ಲಿ ಇದರಿಂದ : 35 ಅಡಿ ರಸ್ತೆ
ಉತ್ತರದಲ್ಲಿ ಇದರಿಂದ : ಸೈಟ್ ನಂ. 43
ದಕ್ಷಿಣದಲ್ಲಿ ಇದರಿಂದ : 25 ಅಡಿ ರಸ್ತೆ

ಅಳತೆ ಮಾಡುವ ಸೈಟ್ ನಂ. 42

ಪೂರ್ವದಿಂದ ಪಶ್ಚಿಮಕ್ಕೆ : ಉತ್ತರ ಭಾಗ 50 ಅಡಿ ದಕ್ಷಿಣ ಭಾಗ 40 ಅಡಿ
ಉತ್ತರದಿಂದ ದಕ್ಷಿಣಕ್ಕೆ : 30 ಅಡಿ

ಒಟ್ಟು 1350 ಚದರ ಅಡಿ.

ಸೈಟ್ ನಂ 43, ಮೇಲೆ ಸುತ್ತುವರಿದಿದೆ

ಪೂರ್ವದಲ್ಲಿ ಇದರಿಂದ : ಖಾಸಗಿ ಆಸ್ತಿ
ಪಶ್ಚಿಮದಲ್ಲಿ ಇದರಿಂದ : 35 ಅಡಿ ರಸ್ತೆ
ಉತ್ತರದಲ್ಲಿ ಇದರಿಂದ : ಸೈಟ್ ನಂ. 44
ದಕ್ಷಿಣದಲ್ಲಿ ಇದರಿಂದ : ಸೈಟ್ ಬಿಎನ್‌ಒ. 42

ಅಳತೆ ಮಾಡುವ ಸೈಟ್ ನಂ. 43

ಪೂರ್ವದಿಂದ ಪಶ್ಚಿಮಕ್ಕೆ : ಉತ್ತರ ಭಾಗ 60 ಅಡಿ
ದಕ್ಷಿಣ ಭಾಗ 50 ಅಡಿ
ಉತ್ತರದಿಂದ ದಕ್ಷಿಣಕ್ಕೆ : 30 ಅಡಿ

ಒಟ್ಟು 1650 ಚದರ ಅಡಿ.

ಅಧಿಕಾರವಿರುವ ಅಧಿಕಾರಿ
ದಿನಾಂಕ : 09.12.2024 **ಸಮ್ಮಾನ್ ಕ್ಯಾಪಿಟಲ್ ಲಿ.**
ಸ್ಥಳ : ಬೆಂಗಳೂರು **(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)**

PUBLIC NOTICE

General Public are hereby informed that my clients **Mr. D.S. DEVARAJU,** S/o Mr. D.C. Shankaranarayanappa, aged about 70 years and **Mr. D.S. VARADARAJU,** S/o Mr. D.C. Shankaranayanappa, Aged about 68 years, both residing at No.48, Basappa Road, Shanthinagar, Bengaluru-560 027, have laminated the Original Sale Deed dated 05.12.2003, Registered as Document **No. BUG (U) KRP/17661/2003-04,** Book-1, stored in CD No.120, registered in the Office of the Senior Sub-Registrar Krishnarajapura, Bengaluru, in respect of the land bearing Survey No.59/1 measuring 02 Acres 12 Guntas, and Survey No. 59/2 measuring 04 Acres 12 Guntas, being one contiguous land totally measuring 06 Acres 24 Guntas, (Survey Nos and extent mentioned are as mentioned under the Sale Deed dated 05.12.2003) situated at Nimbekaipura Village, Bidarahalli Hobli, Bangalore East Taluk. And my clients declare that the said Lamination is done to the Original Sale Deed to protect and to secure it from being damaged in the course of time and the said laminated Sale Deed is original only and is not on the duplicate copy or color photo copy.

My clients further inform the General Public that anybody having any objections towards the same, kindly reach out to the below mentioned Address or to the aforementioned address ***within 15 days*** from this Notice.

Sd/-
L.S.Kiran Mayee Reddy, Advocate
KIRAN MAYEE LAW FIRM,
No.10,G-1, Naveen Apartments, 13th Main, Palace Road, Vasanthnagar, Bangalore 560052.

ನಮೂನೆ ಸಂಖ್ಯೆ. ಐಎನ್‌ಸಿ-26
[ನಿಯಮ 30ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ಕ್ಕೆ ಸಂಬಂಧಪಟ್ಟಂತೆ]
ಕೇಂದ್ರ ಸರ್ಕಾರದ ಎದುರು, ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, ಹೈದರಾಬಾದ್ ಇವರ ಎದುರು ಉಪ ಸೆಕ್ಷನ್(4) ಸೆಕ್ಷನ್ 13ರ ಕಂಪನಿಗಳ ಕಾಯಿದೆ 2013 ಮತ್ತು ಕಂಪನಿಗಳ (ಸಂಯೋಜನೆ) ನಿಯಮಗಳು 2014 ರ ಷರತ್ತು (ಎ)ಯ ಉಪ-ನಿಯಮ(5) ಇವುಗಳ ವಿಷಯವಾಗಿ
ಮತ್ತು
ಎಸ್‌ಆರ್‌ಎಫ್‌ಎಂ ಕ್ಯಾಲುಕುಲಸ್ ಇಂಡಿಯ ಪ್ರೈವೇಟ್ ಲಿಮಿಟೆಡ್
(ಸಿಐಎನ್: ಯು72200ಕೆಎ2022ಎಫ್‌ಟಿಸಿ165153)
ನೋಂದಾಯಿತ ಕಚೇರಿ: ಲೆವೆಲ್ 9, ರಹೇಜ ಟವರ್ಸ್, 26-27, ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು ಕರ್ನಾಟಕ, ಭಾರತ...ಅರ್ಜಿದಾರ ಕಂಪನಿ/ಅರ್ಜಿದಾರ

ಸಾರ್ವಜನಿಕರಿಗೆ ಈ ಸೂಚನೆಯ ಮೂಲಕ ತಿಳಿಯಪಡಿಸುವುದೇನೆಂದರೆ, ಸೆಕ್ಷನ್ 13(4)ರ ಕಂಪನಿ ಕಾಯಿದೆ, 2013ನ್ನು ಓದಿಕೊಂಡಂತೆ ಮೇಲಿನ ನಿಯಮಗಳಂತೆ ಕೇಂದ್ರ ಸರ್ಕಾರದ ಮುಂದೆ ಕಂಪನಿಯನ್ನು "ಕರ್ನಾಟಕ ರಾಜ್ಯ"ದಿಂದ "ತಮಿಳುನಾಡು" ರಾಜ್ಯಕ್ಕೆ ವರ್ಗಾಯಿಸಲು ಅರ್ಜಿ ಸಲ್ಲಿಸಲು ಉದ್ದೇಶಿಸಲಾಗುವುದು ಎಂದು ಸೆಪ್ಟಂಬರ್ 30, 2024ರಂದು ನಡೆದ ಕಂಪನಿಯ ವಿಶೇಷ ಸಾಮಾನ್ಯ ಸಭೆಯಲ್ಲಿ ವಿಶೇಷ ನಿರ್ಣಯವನ್ನು ಅಂಗೀಕರಿಸಲಾಯಿತು.

ಯಾವುದೇ ವ್ಯಕ್ತಿಗೆ ಈ ಕಂಪನಿಯ ನೋಂದಾಯಿತ ಕಛೇರಿಯು ಪ್ರಸ್ತಾವಿತ ಬದಲಾವಣೆಯಿಂದ ತೊಂದರೆಯಾಗುತ್ತಿದೆ ಎಂದಾದರೆ, ಹೂಡಿಕೆದಾರರ ಕಂಪ್ಲೈಂಟ್ ಫಾರ್ಮ್‌ನ್ನು, ಎಂಸಿಎ-21 ಪೋರ್ಟಲ್ (www.mca.gov.in) ಮೂಲಕ ಸಲ್ಲಿಸಿ, ತಮ್ಮ ಯಾವ ಹಿತಾಸಕ್ತಿಗೆ ಇದರಿಂದ ಧಕ್ಕೆಯುಂಟಾಗುತ್ತಿದೆ ಎಂಬುದನ್ನು ಅಫಿಡವಿಟ್ ಮೂಲಕ ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂದಲಗುಡ, ನಾಗೋಲೆ, ತಟ್ಟಿಯನ್‌ನರಮ್ ಗ್ರಾಮ, ಹಯಾತ್ ನಗರ ಮಂಡಲ, ರಂಗ ರೆಡ್ಡಿ ಜಿಲ್ಲೆ, ಹೈದರಾಬಾದ್ -500 068, ತೆಲಂಗಾಣ, ಇಲ್ಲಿಗೆ ಈ ನೋಟೀಸ್ ಪ್ರಕಟವಾದ ಹದಿನಾಲ್ಕು ದಿನಗಳ (14) ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಹಾಗೂ ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಯ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ.

ಲೆವೆಲ್ 9, ರಹೇಜ ಟವರ್ಸ್, 26-27, ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು ಕರ್ನಾಟಕ, ಭಾರತ-560001.

ಎಸ್‌ಆರ್‌ಎಫ್‌ಎಂ ಕ್ಯಾಲುಕುಲಸ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಪರವಾಗಿ,
ಸಹಿ/-
ಪವನ್ ಗುರುರಾಜ್ ರಾಯ್ಕರ್
ದಿನಾಂಕ: 12.12.2024 (ನಿರ್ದೇಶಕರು)
ಸ್ಥಳ: ಬೆಂಗಳೂರು ಡಿಐಎನ್: 08035729

ಅತ್ಯಾಧುನಿಕ ತಯಾರಿಕಾ ಘಟಕ ಸ್ಥಾಪನೆ

ಬೆಂಗಳೂರು: ಬಾಟ್ಲಿಂಗ್ ಮತ್ತು ಪ್ಯಾಕೇಜಿಂಗ್ ಉಪಕರಣಗಳ ತಯಾರಿಕೆಯಲ್ಲಿ ಜಾಗತಿಕ ಪ್ರಮುಖ ಕಂಪನಿಯಾಗಿರುವ ಜರ್ಮನಿಯ ಕ್ರೋನ್ಸ್ ಜೊತೆಗೆ ಕರ್ನಾಟಕ ರಾಜ್ಯ ಸರಕಾರ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ವೇಮಗಲ್ ಕೈಗಾರಿಕಾ ಪಾರ್ಕ್‌ನ 2ನೇ ಹಂತದಲ್ಲಿ ಅತ್ಯಾಧುನಿಕ ತಯಾರಿಕಾ ಘಟಕ ಸ್ಥಾಪಿಸುವ ಸಂಬಂಧ ಕ್ರೋನ್ಸ್, ರಾಜ್ಯ ಸರಕಾರದ ಜೊತೆ ಈ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಒಪ್ಪಂದವು ಮತ್ತಷ್ಟು ಗಟ್ಟಿಗೊಳಿಸಿದೆ, ಜಾಗತಿಕ ಹೂಡಿಕೆದಾರರನ್ನು ಆಕರ್ಷಿಸುವಲ್ಲಿನ ಕರ್ನಾಟಕದ ಯಶಸ್ಸಿಗೂ ಈ ಒಪ್ಪಂದವು ಸಾಕ್ಷಿಯಾಗಿದೆ ಎಂದಿದ್ದಾರೆ.

ಇನ್ವೆಸ್ಟ್ ಕರ್ನಾಟಕಕ್ಕೆ ಜಾಗತಿಕ ಹೂಡಿಕೆದಾರರನ್ನು ಆಹ್ವಾನಿಸಲು ಯುರೋಪ್ ಪ್ರವಾಸದಲ್ಲಿ ಇರುವ ಸಚಿವ ಪಾಟೀಲ ನೇತೃತ್ವದಲ್ಲಿನ ರಾಜ್ಯದ ನಿಯೋಗದ ಪ್ರಯತ್ನದ ಫಲವಾಗಿ ಈ ಒಪ್ಪಂದ ಕಾರ್ಯಗತಗೊಂಡಿದೆ. ನೈಟ್ ಹಬ್ಲಿಂಗ್‌ನಲ್ಲಿ ಇರುವ ಕ್ರೋನ್ಸ್ ನ ಪ್ರಧಾನ ಕಚೇರಿಯಲ್ಲಿ ಮುಖ್ಯಸ್ಥರು ಹಾಗೂ ಸಚಿವ ಎಂ. ಬಿ. ಪಾಟೀಲರ ಸಮ್ಮುಖದಲ್ಲಿ ಒಪ್ಪಂದಕ್ಕೆ ಅಂಕಿತ ಹಾಕಲಾಯಿತು.



ಕ್ರೋನ್ಸ್‌ಸಂಸ್ಥೆಯು ರಾಜ್ಯ ಸರಕಾರದೊಂದಿಗೆ ನಡೆಸಿದ ಕೈಗಾರಿಕಾ ಒಪ್ಪಂದ

ಮದರಸಾದಲ್ಲಿ ಶಿಕ್ಷಕರಿಂದ ಬಾಲಕನ ಮೇಲೆ ಅಸ್ವಾಭಾವಿಕ ಲೈಂಗಿಕ ಕ್ರಿಯೆ | ಏಕ ನ್ಯಾಯಪೀಠದ ತೀರ್ಪು

ಪ್ರಕರಣ ರದ್ಧತಿಗೆ ಹೈಕೋರ್ಟ್ ನಿರಾಕರಣೆ

ಬೆಂಗಳೂರು: ಅಪ್ರಾಪ್ತ ಬಾಲಕನೊಂದಿಗೆ ಅಸ್ವಾಭಾವಿಕ ಲೈಂಗಿಕ ಕ್ರಿಯೆ ನಡೆಸಿದ್ದ ಮದರಸಾವೊಂದರ ಇಬ್ಬರು ಶಿಕ್ಷಕರ ವಿರುದ್ಧ ಪೊಲೀಸರಿಗೆ ದೂರು ನೀಡದ ಹಿನ್ನೆಲೆಯಲ್ಲಿ ಮದರಸಾ ಸ್ಥಾಪಕ ಟ್ರಸ್ಟಿ ವಿರುದ್ಧ ದಾಖಲಾದ ಪ್ರಕರಣವನ್ನು ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಮಾಣಿಕ್ ಮಸ್ತಾನ್ ಮದರಸಾದ ಟ್ರಸ್ಟಿ ಮೊಹಮ್ಮದ್ ಅಮೀರ್ ರಾಜಾ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದು ಕೋರಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶವನ್ನು ನೀಡಿದೆ. ಅಲ್ಲದೆ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೋಕ್ಸೋ) ಸೆಕ್ಷನ್ 21(ಪ್ರಕರಣ ದಾಖಲಿಸಿದ್ದಕ್ಕೆ ಶಿಕ್ಷೆ) ಪ್ರಕಾರ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಡೆಸಿದ ಕುರಿತ ಮಾಹಿತಿ ಗಮನಕ್ಕೆ ಬಂದ ತಕ್ಷಣ ದೂರು ದಾಖಲಿಸಬೇಕು ಎಂದು ತಿಳಿಸಲಾಗಿದೆ. ಆದರೆ ಅರ್ಜಿದಾರರು ಮಾಹಿತಿಯಿದ್ದರೂ ದೂರು ದಾಖಲಿಸಲು ವಿಫಲರಾಗಿದ್ದಾರೆ ಎಂದೂ ಪೀಠ ತಿಳಿಸಿದೆ.

ಪೋಕ್ಸೋ ಕಾಯ್ದೆಯು ಮಕ್ಕಳನ್ನು ಲೈಂಗಿಕ ದೌರ್ಜನ್ಯದಿಂದ ತಪ್ಪಿಸುವುದಕ್ಕಾಗಿ ಜಾರಿ ಮಾಡಲಾಗಿದೆ. ಕಾಯ್ದೆಯ ನಿಯಮಗಳನ್ನು ಸರಿಯಾದ ರೀತಿಯಲ್ಲಿ ಜಾರಿ ಮಾಡುವ ಅಗತ್ಯವಿದೆ, ಇಲ್ಲವಾದಲ್ಲಿ ಮಕ್ಕಳ ಮೇಲೆ ದೌರ್ಜನ್ಯ ನಡೆಸಿದ ಅಪರಾಧಿಯು ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳುವುದಕ್ಕೆ ಕಾರಣವಾಗಲಿದ್ದು, ಇದು ಕಾಯ್ದೆಯ ಉದ್ದೇಶವನ್ನೇ ವಿಫಲಗೊಳಿಸಲಿದೆ. ಪ್ರಕರಣ ಸಂಬಂಧದ ದೂರು ಮತ್ತು ಆರೋಪ ಪಟ್ಟಿಯನ್ನು ಪರಿಶೀಲಿಸಿದ ನ್ಯಾಯಪೀಠ, ಪ್ರಕರಣದಲ್ಲಿ ಆರೋಪಿಗಳ (ಇಬ್ಬರು ಶಿಕ್ಷಕರು) ಕೃತ್ಯ ಅತ್ಯಂತ ಭಯಾನಕವಾಗಿದೆ. ಈ ರೀತಿಯ ಘೋರ ಅಪರಾಧ ಕೃತ್ಯಗಳು ಮಾಹಿತಿಯ ಕೊರತೆ ಮತ್ತು ಅಂತಹ ಕೃತ್ಯಗಳ ನಿಯಂತ್ರಣ ಮಾಡುವುದರಿಂದ ಹಲವಾರ ಕೃತ್ಯಗಳು ಬೆಳಕಿಗೆ ಬರುವುದಿಲ್ಲ. ಜತೆಗೆ, ಕಿರುಕುಳಕ್ಕೊಳಗಾದ ಸಂತ್ರಸ್ತರು ದೂರು ದಾಖಲಿಸುವುದಕ್ಕೆ ಮುಂದಾಗುವುದಿಲ್ಲ, ಹೀಗಾಗಿ ಅರ್ಜಿದಾರರು ಮಾಹಿತಿ ತಿಳಿದ ತಕ್ಷಣ ದೂರು ದಾಖಲಿಸದೆ ಇರುವುದು ಗಂಭೀರ ಆರೋಪವಾಗಲಿದೆ ಎಂದು ಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ

ಪ್ರಕರಣದ ದೂರುದಾರ (ಸಂತ್ರಸ್ತರ ತಂದೆ)ನ ಸುಮಾರು 11 ವರ್ಷದ ಅಪ್ರಾಪ್ತ ಬಾಲಕ ಮದರಸಾದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಇದ್ದಕ್ಕಿದ್ದಂತೆ ಬಾಲಕ ಮದರಸಾಗೆ ಹೋಗುವುದಕ್ಕೆ ನಿರಾಕರಿಸಿದ್ದ. ಈ ಬಗ್ಗೆ ವಿಚಾರಣೆ ನಡೆಸಿದಾಗ, ಮದರಸಾದಲ್ಲಿ ಸೇವೆ ಸಲ್ಲಿಸುತ್ತಿದ್ದ ಇಬ್ಬರು ಶಿಕ್ಷಕರು ಅಪ್ರಾಪ್ತನ ಮೇಲೆ 2023ರ ಜೂನ್‌ರಿಂದ 2023ರ ಸೆಪ್ಟಂಬರ್ ತಿಂಗಳ ನಡುವೆ ಅಪ್ರಾಪ್ತ ಬಾಲಕನ ಮೇಲೆ ಅಸ್ವಾಭಾವಿಕ ಲೈಂಗಿಕ ಕ್ರಿಯೆ ನಡೆಸಿದ್ದರು ಎಂಬ ಅಂಶ ಬೆಳಕಿಗೆ ಬಂದಿತ್ತು. ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿ ಪೋಕ್ಸೋ ಕಾಯ್ದೆ ಸೆಕ್ಷನ್ 17 (ಕೃತ್ಯಕ್ಕೆ ಪ್ರಚೋದನೆ) ಮತ್ತು 21 (ಪ್ರಕರಣ ಸಂಬಂಧ ದೂರು ದಾಖಲಿಸುವಲ್ಲಿ ವಿಫಲಕ್ಕೆ ಶಿಕ್ಷೆ) ಮತ್ತು ಐಪಿಸಿ ಸೆಕ್ಷನ್ 506 (ಕ್ರಿಮಿನಲ್ ಬೆದರಿಕೆ) ಅಡಿಯಲ್ಲಿ ಪೊಲೀಸರು ಅರ್ಜಿದಾರರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದರು, ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಕಲ್ಯಾಣ ವಿಭಾಗದ ವಿಶೇಷ ಆಯುಕ್ತರಾದ ಸುರಳ್ಕರ್ ವಿಕಾಸ್ ಕಿಶೋರ್ ಹೇಳಿಕೆ

ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ಡಿ.20ಕ್ಕೆ ಮುಕ್ತಾಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯ ಎಲ್ಲಾ ವಲಯಗಳಲ್ಲಿ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯು ಡಿ.20ಕ್ಕೆ ಮುಕ್ತಾಯವಾಗಲಿದೆ ಎಂದು ಕಲ್ಯಾಣ ವಿಭಾಗದ ವಿಶೇಷ ಆಯುಕ್ತರಾದ ಸುರಳ್ಕರ್ ವಿಕಾಸ್ ಕಿಶೋರ್ ಹೇಳಿದರು.

ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ಅಧಿನಿಯಮ- 2014 ಮತ್ತು ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ, ಬೀದಿ ಬದಿ ವ್ಯಾಪಾರದ ನಿಯಂತ್ರಣ ಮತ್ತು ಪರವಾನಗಿ) ಯೋಜನೆ-2020 ರಂತೆ ಪಾಲಿಕೆಯಲ್ಲಿ ನಗರ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ನಡೆಸಲಾಗುತ್ತಿದೆ. ಪಾಲಿಕೆಯ ಎಲ್ಲಾ 8 ವಲಯಗಳಲ್ಲಿ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ಕೈಗೊಂಡಿದ್ದು, ಗಣತಿದಾರರಿಂದ ಸಮೀಕ್ಷಾ ಕಾರ್ಯ ನಡೆಸಲಾಗುತ್ತಿದೆ. ಮೊಬೈಲ್ ತಂತ್ರಾಂಶದ ಮೂಲಕ ಸಮೀಕ್ಷೆ ನಡೆಸಲಾಗುತ್ತಿದ್ದು, ಇದುವರೆಗೆ ವಲಯವಾರು ಸುಮಾರು 23,407 ಬೀದಿ ಬದಿ ವ್ಯಾಪಾರಿಗಳನ್ನು ಸಮೀಕ್ಷೆ ಮೂಲಕ ಗುರುತಿಸಲಾಗಿದೆ ಎಂದರು.

ಸಮೀಕ್ಷೆಯ ಅನುಸಾರ ಅರ್ಹ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಅಲ್ಲದೇ ವಲಯ ಮಟ್ಟದಲ್ಲಿ ಪಟ್ಟಣ ಮಾರಾಟ ಸಮಿತಿಗಳನ್ನು ರಚಿಸಿ, ಬೀದಿ ಬದಿ ವ್ಯಾಪಾರಿಗಳ(ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ಅಧಿನಿಯಮ-2014 ಮತ್ತು ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ(ಜೀವನೋಪಾಯ ಸಂರಕ್ಷಣೆ, ಬೀದಿ ಬದಿ ವ್ಯಾಪಾರದ ನಿಯಂತ್ರಣ ಮತ್ತು ಪರವಾನಗಿ) ಯೋಜನೆ-2020 ರಂತೆ ಬೀದಿ ವ್ಯಾಪಾರಿಗಳ ಯೋಜನೆ ಅನುಷ್ಠಾನಗೊಳಿಸಲಾಗುತ್ತದೆ ಎಂದು ಹೇಳಿದರು.

ಪಾಲಿಕೆಯಿಂದ ವಿವಿಧ ಸೌಲಭ್ಯಗಳು ಲಭ್ಯ: ಬೀದಿ ಬದಿ ವ್ಯಾಪಾರಿಗಳ ಸಬಲೀಕರಣಕ್ಕಾಗಿ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರದಿಂದ ಸಾಕಷ್ಟು ಯೋಜನೆಗಳಿದ್ದು, ಅದನ್ನು ಬೀದಿ ಬದಿ ವ್ಯಾಪಾರಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಪರಿಣಾಮಕಾರಿಯಾಗಿ ಸಮೀಕ್ಷಾ ಕಾರ್ಯ ನಡೆಸಲಾಗುತ್ತಿದೆ.

ಪಿಎಂ ಸ್ವನಿಧಿ ಮಾತ್ರವಲ್ಲದೆ, ಪಾಲಿಕೆಯ ಕಲ್ಯಾಣ ವಿಭಾಗದಿಂದ ಇ-ಮಾರಾಟ ವಾಹನ ಖರೀದಿಗೆ ಸಹಾಯಧನ, ಒಂಟಿ ಮನೆ/ಅಮೃತ ಮಹೋತ್ಸವ ಮನೆ ಯೋಜನೆಗೆ ಸಹಾಯಧನ, ಗಂಭೀರ ಸ್ವರೂಪ ಖಾಯಿಲೆಗಳಿಂದ ಬಳಲುತ್ತಿರುವವರಿಗೆ ವೈದ್ಯಕೀಯ ವೆಚ್ಚ ಮರು ಪಾವತಿ, ಕೌಶಲ್ಯ ತರಬೇತಿ ಕಾರ್ಯಕ್ರಮ, ಬೀದಿ ಬದಿ ವ್ಯಾಪಾರಿಗಳ ಮಕ್ಕಳ ಶಿಕ್ಷಣಕ್ಕೆ ಶುಲ್ಕ ಮರುಪಾವತಿ ಸೇರಿದಂತೆ ಇನ್ನಿತರೆ ಸೌಲಭ್ಯಗಳಿದ್ದು, ಅದರ ಸದುಪಯೋಗ ಪಡೆದುಕೊಳ್ಳಬಹುದು ಎಂದರು.

ಪಿಎಂ ಸ್ವ-ನಿಧಿ ಯೋಜನೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಪಿಎಂ ಸ್ವನಿಧಿ ಯೋಜನೆಯಿಂದ ಅನುಕೂಲ ಪಡೆದಿರುವ ವಿವರವನ್ನು ಪಿಎಂಎಸ್ ಡ್ಯಾಶ್‌ಬೋರ್ಡ್ ಲಿಂಕ್ https://pmsvanidhi.mohua.gov.in/Home/PMSDashboardಗೆ ಭೇಟಿ ನೀಡಿ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಡಿ.20ರೊಳಗಾಗಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳಿ: ಪಾಲಿಕೆ 8 ವಲಯಗಳಲ್ಲಿ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ನಡೆಯುತ್ತಿದ್ದು, ಸಮೀಕ್ಷಾ ಕಾರ್ಯವನ್ನು ಡಿ.20ರವರೆಗೆ ನಡೆಸಲಿದ್ದು, ನಗರದ ಎಲ್ಲಾ ಬೀದಿ ಬದಿ ವ್ಯಾಪಾರಿಗಳು ಕೂಡಲೆ ಸಮೀಕ್ಷಾ ಕಾರ್ಯದಲ್ಲಿ ಪಾಲ್ಗೊಳ್ಳಬೇಕು ಎಂದು ಬಿಬಿಎಂಪಿ ಹೇಳಿದೆ.

ವಲಯವಾರು ಸಮೀಕ್ಷೆ

ವಲಯ	ಸರ್ವೇ ಮಾಡಿರುವ ಸಂಖ್ಯೆ
ಪಶ್ಚಿಮ	5727
ದಕ್ಷಿಣ	4417
ಆರ್.ಆರ್ ನಗರ	3448
ಪೂರ್ವ	3067
ಬೊಮ್ಮನಹಳ್ಳಿ	2156
ಮಹದೇವಪುರ	1669
ಯಲಹಂಕ	1572
ದಾಸರಹಳ್ಳಿ	1351
ಒಟ್ಟು	23407

ಸೌಲಭ್ಯಗಳಿಂದ ವಂಚಿತರಾಗದಿರಿ

ಇದುವರೆಗೆ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷಾ ಕಾರ್ಯದಲ್ಲಿ ಪಾಲ್ಗೊಳ್ಳದವರು ಆಯಾ ವಲಯ ಜಂಟಿ ಆಯುಕ್ತರ ಕಚೇರಿಗಳಿಗೆ ಭೇಟಿ ನೀಡಿ ಡಿ.20ರೊಳಗಾಗಿ ಸಮೀಕ್ಷೆಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಡಿ.20ರ ನಂತರ ಸಮೀಕ್ಷೆಯನ್ನು ನಿಲ್ಲಿಸಲಾಗುವುದು. ಅನಂತರ ಬೀದಿ ಬದಿ ವ್ಯಾಪಾರಿಗಳು ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಹಾಗು ಯಾವುದೇ ಸರಕಾರಿ ಸೌಲಭ್ಯಗಳನ್ನು ಪಡೆಯಲು ಅರ್ಹರಿರುವುದಿಲ್ಲ.

ಸಮೀಕ್ಷೆಗೆ ಅಗತ್ಯವಿರುವ ದಾಖಲೆಗಳು

- ಆಧಾರ್ ಕಾರ್ಡ್
- ಮತದಾರರ ಗುರುತಿನ ಚೀಟಿ
- ಬ್ಯಾಂಕ್ ಪಾಸ್ ಬುಕ್
- ಕುಟುಂಬ ಪಡಿತರ ಚೀಟಿ
- ಕುಟುಂಬ ಸದಸ್ಯರ ಮಾಹಿತಿ
- ಸ್ವಯಂ ಘೋಷಣೆ ಪ್ರಮಾಣ ಪತ್ರ

ಎಸ್.ಎಂ.ಕೃಷ್ಣ ಅಗಲಿಕೆಗೆ ನಾಡೋಜ ಡಾ.ಮಹೇಶ ಜೋಶಿ ತೀವ್ರ ಸಂತಾಪ

ಎಸ್‌ಎಂಕೆ ಅಗಲಿಕೆ ಸಾಹಿತ್ಯ ಲೋಕಕ್ಕೆ ನಷ್ಟ: ಜೋಶಿ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಭಾವಚಿತ್ರಕ್ಕೆ ಡಾ. ಮಹೇಶ ಜೋಶಿ ನಮಿಸಿದರು.

ಬೆಂಗಳೂರು: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಭ್ರಮವಾಗಿ ಬರಬೇಕಾದವರು ನೆನಪಾಗಿ ಉಳಿದರು ಎಂದು ಎಸ್.ಎಂ.ಕೃಷ್ಣ ಅಗಲಿಕೆಗೆ ನಾಡೋಜ ಡಾ.ಮಹೇಶ ಜೋಶಿ ತೀವ್ರ ಸಂತಾಪ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏರ್ಪಾಟಾಗಿದ್ದ ರಾಜಕೀಯ ಮುತ್ಸದ್ದಿ ಮತ್ತು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿ, ಮಂಡ್ಯದಲ್ಲಿ ಅಯೋಜನೆ ಗೊಂಡಿರುವ 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೆಲವು ನಿಮಿಷಗಳಾ ದರೂ ಆ ನೆಲದಿಂದ ಬಂದ ದಿಗ್ಗಜ ಎಸ್.ಎಂ.ಕೃಷ್ಣ ಅವರು ಭಾಗವಹಿಸಬೇಕು ಎಂದು ಸಾಕಷ್ಟು ಪ್ರಯತ್ನಿಸಿದ್ದೆ. ಇದನ್ನು ಗೋಪ್ಯತೆ ಕಾರಣದಿಂದ ಯಾರೊಂದಿಗೆ ಹಂಚಿಕೊಳ್ಳದೆ ಸಂಬಂಧ ಪಟ್ಟವರಿಗೆ ಮಾತ್ರ ತಿಳಿಸಿದ್ದೆ. ಇದಕ್ಕೆ ಸಕಾರಾತ್ಮಕ ಸ್ಪಂದನವೂ ದೊರಕಿತ್ತು. ಅವರ ಕೆಲವು ಕ್ಷಣಗಳ ಉಪಸ್ಥಿತಿ ಸಮ್ಮೇಳನಕ್ಕೆ ಮೆರುಗನ್ನು ನೀಡುತ್ತಿತ್ತು, ಆದರೆ ಈಗ ಅವರು ಬರೀ ನೆನಪಾಗಿ ಉಳಿದು ಅವರ ಹೆಸರನ್ನು ವೇದಿಕೆಗೆ ಇಡುವಂತಹ ಸಂದರ್ಭ ಬಂದಿರುವುದು ನಿಜಕ್ಕೂ ವಿಷಾದಕರ ಎಂದು ಜೋಶಿ ಹೇಳಿದರು.

ಸು ಸಂಸ್ಕೃತ ರಾಜಕಾರಣಿಯಾಗಿದ್ದ ಅವರು ಕಲೆ, ಸಾಹಿತ್ಯದ ಕುರಿತು ಅಪಾರ ಪ್ರೇಮವನ್ನು ಇಟ್ಟುಕೊಂಡಿದ್ದರು. ಹಲವು ಕ್ಷೇತ್ರಗಳಲ್ಲಿ ಆಳವಾದ ಅಧ್ಯಯನ ನಡೆಸಿದ್ದು, ಕಸಾಪದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಮಂಡ್ಯದಲ್ಲಿ 87ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೆಳನ ಘೋಷಣೆಯಾದ ದಿನದಿಂದಲೂ ಉತ್ಸಾಹ ತೋರಿದ್ದ ಅವರು ಹಲವು ಉಪಯುಕ್ತ ಸಲಹೆಗಳನ್ನು ನೀಡಿ ಎಲ್ಲಾ ರೀತಿಯ ಸಹಕಾರ ನೀಡುವ ಭರವಸೆ ನೀಡಿದ್ದರು. ಈಗ ಅವರ ಅಗಲುವಿಕೆ ದೊಡ್ಡ ಶೂನ್ಯವನ್ನು ಸೃಷ್ಟಿಸಿದೆ ಎಂದು ವಿಷಾದಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ, ಡಾ.ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು ಹಾಗೂ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರ ಮೂರ್ತಿ ಇದ್ದರು.

ಹವ್ಯಾಸಿ ರಂಗಭೂಮಿ ನಟರು

ಹಿರಿಯ ಸಂಶೋಧಕ ಡಾ.ತಲಕಾಡು ಚಿಕ್ಕರಂಗೇಗೌಡರು ಮಾತನಾಡಿ, ಗಮಕ ವಾಚನದಲ್ಲಿ ಕೃಷ್ಣ ಅವರಿಗೆ ಭಾರೀ ಆಸಕ್ತಿಯಿತ್ತು. ಅವರು ಉತ್ತಮ ತಬಲಾ ವಾದಕರೂ, ಹವ್ಯಾಸಿ ರಂಗಭೂಮಿನಟರೂ ಆಗಿದ್ದರು. ಜೀವನದ ಶೈಲಿ ಉಡುಗೆ ತೊಡುಗೆಗಳಲ್ಲಿ ಅವರಿಗೆ ಉತ್ತಮ ಅಭಿರುಚಿಯಿತ್ತು. ಸುರಸುಂದರಾಂಗರೆನ್ನಿಸಿಕೊಂಡಿದ್ದ ಅವರನ್ನು ಪರಂಪರೆಯಲ್ಲಿ ಬರುವ ಕಂದರ್ಪನ ಪರಿಕಲ್ಪನೆ ಎಂದರು.

- ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶ್ರದ್ಧಾಂಜಲಿ ಸಭೆ
- ಎಸ್.ಎಂ.ಕೃಷ್ಣ ಅಗಲಿಕೆಗೆ ನಾಡೋಜ ಡಾ.ಮಹೇಶ ಜೋಶಿ ತೀವ್ರ ಸಂತಾಪ
- ಕಸಾಪದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಎಸ್‌ಎಂಕೆ.

ಸಮಾಚಾರ ಸಣ್ಣದಲ್ಲ

ರೇಣುಕಾ ಯಲ್ಲಮ್ಮ ಪೂಜಾ ಕಾರ್ಯಕ್ರಮ

ಬೆಂಗಳೂರು: ಯಶಸ್ಸಿನ ಮಾರ್ಗ ಅರಿಯಲು ರೇಣುಕಾ ಯಲ್ಲಮ್ಮ ಪೂಜಾ ಕಾರ್ಯಕ್ರಮ ಡಿ.22ರಂದು ಆಯೋಜಿಸಲಾಗಿದೆ. ಈ ಕುರಿತಂತೆ ಮಾಹಿತಿ ನೀಡಿದ ಕಾರ್ಯಕ್ರಮದ ಮಾರ್ಗದರ್ಶಕರಾದ ಕುಮಾರ್, ಯಾವುದೇ ವಿದ್ಯೆಯನ್ನು ಗುರು ಮುಖೇನ ಕಲಿತಾಗ ಮಾತ್ರ ಅದರ ಸಿದ್ಧಿ ಸುಲಭ ಎಂಬುದು ಅನಾದಿ ಕಾಲದಿಂದಲೂ ಹೇಳುತ್ತಾ ಬಂದಿರುವ ವಿಷಯ. ಹಾಗೇ ಕ್ರಮಬದ್ಧ ಹಾಗೂ ಪ್ರಮಾಣಿತ ವಿಧಾನದ ಮೂಲಕ ದೈವ ಕೈಂಕರ್ಯ ನಡೆಸಿದಾಗ ಅದರ ಫಲ ಅಧಿಕವಾಗಿರುತ್ತದೆ. ವ್ರತಾಚರಣೆಗಳು ಅನುಭವಿಗಳು ಹಾಗೂ ಸಿದ್ಧಪುರುಷರು ಹೇಳಿಕೊಟ್ಟಾಗ ಅದನ್ನ ಯಥಾವತ್ತಾಗಿ ಅನುಸರಿಸುವುದರಿಂದ ಬದುಕಿನಲ್ಲಿ ಸಾಕಷ್ಟು ಯಶಸ್ಸು ಕಂಡವರಿದ್ದಾರೆ. ಹಾಗೇ ನಿರ್ದಿಷ್ಟ ಮಾರ್ಗದಲ್ಲಿಯೇ ದೇವಿಯ ಆರಾಧನಾ ಕ್ರಮವನ್ನ ಕಳೆದ 20 ವರ್ಷಗಳಿಂದಲೂ ನಮ್ಮ ವೇದಿಕೆಯ ಮೂಲಕ ತಿಳಿಸಿಕೊಡುತ್ತಿದ್ದು, ಅಂತಹ ಅಪರೂಪದ ಕಾರ್ಯಕ್ರಮವೇ ರೇಣುಕಾ ಯಲ್ಲಮ್ಮ ದೇವಿ ಮಹೋತ್ಸವ ಎಂದರು. ರೇಣುಕಾ ತಾಯಿಯನ್ನು ಎಲ್ಲಾ ರೀತಿಯ ಜನರು ಉಪಾಸನೆ ಮಾಡುತ್ತಾರೆ. ಅವರು ವಿಧಿ ವಿಧಾನದಿಂದ ತಾಯಿಯ ಪೂಜೆ ಪುನಸ್ಕಾರಗಳನ್ನು ಮಾಡಲಿ ಎಂದು ಈ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಹಾಗೂ ಹೆಸರು ನೊಂದಾಯಿಸಿಕೊಳ್ಳಲು 9844006406 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಿಡಿಎನಿಂದ ಡಿ.14ರಂದು ಫ್ಲ್ಯಾಟ್‌ಮೇಳ

ಬೆಂಗಳೂರು: ಬಿಡಿಎ ನಿರ್ಮಿಸಿರುವ ಫ್ಲ್ಯಾಟ್ ಗಳ ಹಂಚಿಕೆಗೆ ಸಂಬಂಧಿಸಿದಂತೆ ಡಿ.14 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಕಣಿಮಿಣಿಕೆ ವಸತಿ ಸಮುಚ್ಚಯದ ಬಳಿ ಫ್ಲ್ಯಾಟ್ ಮೇಳ ಆಯೋಜಿಸಲಾಗಿದೆ. ಕಣಿಮಿಣಿಕೆ ವಸತಿ ಯೋಜನೆ ಬೆಂಗಳೂರು- ಮೈಸೂರು ರಸ್ತೆಗೆ ಸಮೀಪವಿದ್ದು, ಅತ್ಯಾಧುನಿಕ ತಂತ್ರಜ್ಞಾನ ಬಳಸಿ ನಿರ್ಮಿಸಲಾಗಿದೆ. ಕಣಿಮಿಣಿಕೆ 2 ಬಿಎಚ್‌ಕೆ. ಫ್ಲ್ಯಾಟ್ ದರ 25 ಲಕ್ಷದಿಂದ 30 ಲಕ್ಷವಿದ್ದು, 3 ಬಿಎಚ್‌ಕೆ ಫ್ಲ್ಯಾಟ್ ದರ 40 ಲಕ್ಷದಿಂದ 64 ಲಕ್ಷದವರೆಗೆ ನಿಗದಿಪಡಿಸಲಾಗಿದೆ. ತಿಪ್ಪಸಂದ್ರ ವಸತಿ ಯೋಜನೆ ಬೆಂಗಳೂರಿನ ದಕ್ಷಿಣ ಭಾಗದ ಜೆ.ಪಿ.ನಗರ 9ನೇ ಹಂತದಲ್ಲಿದ್ದು, ಕನಕಪುರ ರಸ್ತೆಯ ಫೋರಂ ಮಾಲ್ ಮತ್ತು ದೊಡ್ಡಕಲ್ಲಸಂದ್ರ ಮೆಟ್ರೋ ನಿಲ್ದಾಣದ ಸಮೀಪದಲ್ಲಿದೆ. ತಿಪ್ಪಸಂದ್ರ 1 ಬಿಎಚ್‌ಕೆ ಫ್ಲ್ಯಾಟ್ ದರ 14.50 ಲಕ್ಷ ದರದಲ್ಲಿ ಲಭ್ಯವಿದೆ. ಫ್ಲಾಟ್ ಗಳನ್ನು ಖರೀದಿಸಲು ಆಸಕ್ತ ಸಾರ್ವಜನಿಕರು ಈ ಮೇಳದಲ್ಲಿ ಪಾಲ್ಗೊಂಡು ಫ್ಲ್ಯಾಟ್ ಗಳ ಪ್ರಾರಂಭಿಕ ಠೇವಣಿ ಮೊತ್ತವನ್ನು ಡಿಡಿ/ಆನ್ ಲೈನ್ ಮೂಲಕ ಪಾವತಿಸಿದಲ್ಲಿ ಸ್ಥಳದಲ್ಲಿಯೇ ತಾತ್ಕಾಲಿಕ ಹಂಚಿಕೆ ಪತ್ರ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ 6362512234 /8747877469 /7795869883 ಸಂಖ್ಯೆಗಳಿಗೆ ಸಂಪರ್ಕಿಸಿ.

10 ಮಿಲಿಯನ್ ಡಾಲರ್ ನಿಧಿ ಸಂಗ್ರಹ

ಬೆಂಗಳೂರು: ಇಂಡಿಯನ್ ಡೀಪ್ಟೆಕ್ ರೊಬೊಟಿಕ್ಸ್ ಸ್ಟಾರ್ಟ್ ಅಪ್, ಸಿಎನ್‌ಎಲ್ ಆರ್ ಪೇವ್ ಸ್ಟೋನ್ ಮತ್ತು ಅಥೆರಾ ವೆಂಚರ್ ಪಾರ್ಟನರ್ಸ್ (ಈ ಹಿಂದೆ ಇನ್ವೆಂಟಸ್ ಇಂಡಿಯಾ) ನೇತೃತ್ವದ ಸರಣಿ ಎ ನಿಧಿಯ ಹೊಸ ಸುತ್ತಿನಲ್ಲಿ 10 ಮಿಲಿಯನ್ ಡಾಲರ್ ಸಂಗ್ರಹಿಸಿದೆ. ಕಳೆದ ವರ್ಷ ಸಿಎನ್‌ಎಲ್‌ಆರ್ ಕೋರ್ ಎಂಜಿನಿಯರಿಂಗ್ ಪ್ರತಿಭೆಯಿಂದ ಸಂಶೋಧನೆ ಮತ್ತು ಸಾಫ್ಟ್‌ವೇರ್ ಅಭಿವೃದ್ಧಿಯವರೆಗೆ ದೇಶಾದ್ಯಂತ ಸುಮಾರು 15,000 ಉದ್ಯೋಗ ಅರ್ಜಿದಾರರನ್ನು ಆಕರ್ಷಿಸಿದೆ. ಸಿಎನ್‌ಎಲ್‌ಆರ್ ಈಗ ತನ್ನ 60 ಸದಸ್ಯರ ಕೋರ್ ತಂಡವನ್ನು 120 ಸದಸ್ಯರ ಜಾಗತಿಕ ತಂಡವಾಗಿ ವಿಸ್ತರಿಸಲಿದೆ. ಇದು ಭಾರತದ 2ನೇ ಶ್ರೇಣಿಯ ನಗರಗಳಿಂದ ಪ್ರತಿಭೆ ಬಳಸಿಕೊಳ್ಳುವ ಗುರಿ ಹೊಂದಿದೆ. ಜಾಗತಿಕ ಸಾಮರ್ಥ್ಯ ಹೊಂದಿರುವ ವ್ಯಕ್ತಿಗಳು ಮತ್ತು ಅವರನ್ನು ಅಂತರರಾಷ್ಟ್ರೀಯ ವೇದಿಕೆಗೆ ತರುವುದು. ಸಿಎನ್‌ಎಲ್‌ಆರ್ ತನ್ನ ರಿಸರ್ಚ್ ಮತ್ತು ಎಸ್‌ಡಬ್ಲ್ಯೂ ಡೆವ್ ತಂಡ ವಿಸ್ತರಿಸುವುದರ ಜತೆಗೆ, ಭಾರತ, ಯುಎಸ್ ಮತ್ತು ಸ್ವಿಟ್ಜರ್ಲ್ಯಾಂಡ್‌ನಲ್ಲಿ ಮಾರ್ಕೆಟಿಂಗ್, ಸೇಲ್ಸ್, ಬಿಸಿನೆಸ್ ಮತ್ತು ಆಪರೇಶನಲ್ ಲೀಡರ್ ಗಳನ್ನು ನೇಮಿಸಿಕೊಳ್ಳಲಿದೆ.

ಕೇಕ್ ಪ್ರದರ್ಶನದಲ್ಲಿ ರಾಮ ಮಂದಿರ ವಿಶೇಷ

ಬೆಂಗಳೂರು: ನಗರದಲ್ಲಿ ಕ್ರಿಸ್ ಮಸ್ ಹಿನ್ನೆಲೆಯಲ್ಲಿ ಪ್ರತಿ ವರ್ಷ ಆಯೋಜಿಸಲಾಗುವ ವಾರ್ಷಿಕ ಕೇಕ್ ಪ್ರದರ್ಶನಕ್ಕೆ 50 ವರ್ಷ ಆಗಿರುವ ಹಿನ್ನೆಲೆ ಈ ಭಾರಿ ಅರಮನೆ ಮೈದಾನದಲ್ಲಿ ಅದ್ದೂರಿ ಕೇಕ್ ಪ್ರದರ್ಶನ ನಡೆಯಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಈ ಸಲ ಅರಮನೆ ಆವರಣದ ತ್ರಿಪುರಾ ವಾಸಿನಿಯಲ್ಲಿ ಆಯೋಜಿಸಲಾಗಿದೆ. ಇನ್ಸಿಟ್ಯೂಟ್ ಆಫ್ ಬೇಕಿಂಗ್ ಮತ್ತು ಕೇಕ್ ಆರ್ಟ್ ಮತ್ತು ಮೈಬೇಕರ್ಸ್ ಮಾರ್ಟ್ ಈ ಪ್ರದರ್ಶನ ಆಯೋಜಿಸಿದೆ. 20 ಅಡಿ ಎತ್ತರದ ಕ್ರಿಸ್ ಮಸ್ ಟ್ರೀ, ಒಟ್ಟು 850 ಕೆ.ಜಿ. ತೂಕದ ರಾಮ ಮಂದಿರ ಸೇರಿದಂತೆ 20 ಮಾದರಿಯ ಕೇಕ್ ಪ್ರದರ್ಶನ ಇರಲಿದೆ. ಕಲಾವಿದರು ತುಂಬಾ ಶ್ರಮಪಟ್ಟು ಈ ಕೇಕ್ ಗಳನ್ನು ತಯಾರಿಸಿದ್ದಾರೆ ಎಂದು ತಿಳಿಸಿದ್ದಾರೆ.

{ ಎಚ್.ವಿಶ್ವನಾಥ್ } ಪರಿಷತ್ ಸದಸ್ಯ

ಸಂಪುಟ ಸಹೋದ್ಯೋಗಿಗಳನ್ನು ಎಸ್.ಎಂ.ಕೃಷ್ಣ ಮುಕ್ತವಾಗಿ ಕೆಲಸ ಮಾಡಲು ಬಿಡುತ್ತಿದ್ದರು. ನಾನೂ ಕೂಡ ಅವರ ಸಂಪುಟದಲ್ಲಿ ಸಚಿವನಾಗಿ ಕೆಲಸ ಮಾಡಿದ್ದೆ. ಚೆನ್ನಾಗಿ ಕೆಲಸ ಮಾಡುವಂತೆ ಹೇಳುತ್ತಿದ್ದರು. ಅಧಿಕಾರ ಎಂಬುದು ಒಂದು ಜವಾಬ್ದಾರಿ. ಅದು ಅಧಿಕಾರವಲ್ಲ. ಆ ಜವಾಬ್ದಾರಿಯನ್ನು ಜತನದಿಂದ ಪಾಲಿಸಬೇಕು ಎನ್ನುತ್ತಿದ್ದರು.



ಎಸ್.ಎಂ.ಕೃಷ್ಣ ಅವರಿಗೆ ಕರ್ನಾಟಕ ರತ್ನ ನೀಡಿ

ಬೆಂಗಳೂರು: ಎಸ್.ಎಂ.ಕೃಷ್ಣ ಅವರು ನಾಡಿನ ಪ್ರಗತಿಗೆ ನೀಡಿದ ಕೊಡುಗೆ ಗುರುತಿಸಿ ಸರಕಾರದ ವತಿಯಿಂದ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಕರ್ನಾಟಕ ರತ್ನ (ಮರಣೋತ್ತರ) ನೀಡಬೇಕೆಂದು ಸರಕಾರಕ್ಕೆ ಪ್ರತಿಪಕ್ಷ ನಾಯಕ ಮನವಿ ಮಾಡಿದ್ದಾರೆ.

ರಾಷ್ಟ್ರ ಹಾಗೂ ರಾಜ್ಯ ರಾಜಕಾರಣದ ಧೀಮಂತ ನಾಯಕರಾಗಿದ್ದ ಮಾಜಿ ಮುಖ್ಯ ಮಂತ್ರಿ ಎಸ್.ಎಂ.ಕೃಷ್ಣ ಅವರ ನಿಧನದಿಂದ ಇಡೀ ಕರ್ನಾಟಕ ಶೋಕತಪ್ತವಾಗಿದ್ದು, ನಾಡಿನುದ್ದಕ್ಕೂ ಜನಸಾಮಾನ್ಯರು ಕಂಬನಿ ಮಿಡಿಯುತ್ತಿದ್ದಾರೆ. ಶಾಸಕ, ಸಚಿವ, ಸ್ಪೀಕರ್, ಉಪಮುಖ್ಯಮಂತ್ರಿ, ಮುಖ್ಯಮಂತ್ರಿ ಹೀಗೆ ನಾನಾ ಹುದ್ದೆಗಳಲ್ಲಿ ಸೇವೆ ಸಲ್ಲಿಸುವ ಜೊತೆಗೆ, ಜನರ ಬದುಕಿನ ಸುಧಾರಣೆಗಾಗಿ, ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಅವರು ಅಪಾರವಾಗಿ ಶ್ರಮಿಸಿದ್ದರು. ರಾಜಧಾನಿ ಬೆಂಗಳೂರಿಗೆ ಸಿಲಿಕಾನ್ ವ್ಯಾಲಿ ಹಾಗೂ ಐಟಿ ಕೇಂದ್ರದ ಸ್ಥಾನಮಾನ ನೀಡುವಲ್ಲಿ ಅವರ ಪಾತ್ರ ಗಣನೀಯ. ವಿದೇಶಾಂಗ ಸಚಿವರಾಗಿ ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಸೇವೆ ಸಲ್ಲಿಸಿ ಕರ್ನಾಟಕದ ಕೀರ್ತಿ ಪತಾಕೆ ಹಾರಿಸಿದ್ದಾರೆ. ಹೀಗಾಗಿ ತಾವು ನೀಡಿರುವ ಸಲಹೆಯನ್ನು ಪರಿಗಣಿಸಿ ಎಸ್.ಎಂ.ಕೃಷ್ಣ ಅವರಿಗೆ ಕರ್ನಾಟಕ ರತ್ನ ನೀಡಿ ಗೌರವ ಸಲ್ಲಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡುತ್ತಿದ್ದೇನೆ ಎಂದು ತಿಳಿಸಿದ್ದಾರೆ.

ಡಿಸೆಂಬರ್ 14,15ರಂದು ಬೆಂಗಳೂರು ಸಾಹಿತ್ಯೋತ್ಸವ

ಬೆಂಗಳೂರು: ಬೆಂಗಳೂರು ಸಾಹಿತ್ಯೋತ್ಸವ ಡಿ.14 ಮತ್ತು 15ರಂದು ಲಲಿತ್ ಅಶೋಕ್‌ನಲ್ಲಿ ನಡೆಯಲಿದ್ದು ಕನ್ನಡ ಸೇರಿದಂತೆ ವಿವಿಧ ಭಾಷೆಯ ಲೇಖಕರು, ಸಾಹಿತ್ಯಾಸಕ್ತರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಈ ಸಾಹಿತ್ಯೋತ್ಸವದಲ್ಲಿ ವಿಜ್ಞಾನ ಮತ್ತು ಕಥೆ, ಕವನ ಮತ್ತು ಹಾಡು, ಬರಹಗಾರರು ದೇಶ ಮತ್ತು ಪ್ರಪಂಚದಾದ್ಯಂತದ ಸಾಹಿತ್ಯ ಮತ್ತು ಸಂಸ್ಕೃತಿಯ ಕುರಿತು ಬೆಳಕು ಚೆಲ್ಲುವ ಪ್ರಯತ್ನ ನಡೆಯಲಿದ್ದು, ಸಾಹಿತ್ಯ, ಕಲೆ, ಸಂಗೀತ, ಸ್ತ್ರೀವಾದ, ಸಿನಿಮಾ, ತಂತ್ರಜ್ಞಾನ,ಕಥೆ, ಕವಿತೆ, ವಿಚಾರ ಮಂಡನೆ, ಚರ್ಚೆ, ಸಂವಾದ, ಗೋಷ್ಠಿಗಳು ನಡೆಯಲಿವೆ.

ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ವೆಂಕಿ ರಾಮಕೃಷ್ಣನ್ ಮತ್ತು ಅಭಿಜಿತ್ ಬ್ಯಾನರ್ಜಿ ಈ ವರ್ಷದ ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಭಾಗವಹಿಸುತ್ತಿದ್ದು, ಬೂಕರ್ ಪ್ರಶಸ್ತಿ ವಿಜೇತ ಕಿರಣ್ ದೇಸಾಯಿ ಕೂಡ ಮೊದಲ ಬಾರಿಗೆ ಬೆಂಗಳೂರು ಸಾಹಿತ್ಯೋತ್ಸವಕ್ಕೆ ಆಗಮಿಸಲಿದ್ದಾರೆ. ಮಲಯಾಳಂ ನಟಿ ಪಾರ್ವತಿ ತಿರುವೋತು ಕಲೆಯ ಬಗ್ಗೆ ಮಾತನಾಡಲಿದ್ದಾರೆ. ಇಳಾ ಅರುಣ್ ಮತ್ತು ಎಲ್.ಸುಬ್ರಮಣ್ಯಂ ತಮ್ಮ ಕಥೆಗಳ ಕುರಿತು ಮಾತನಾಡಲಿದ್ದಾರೆ. ಆಸ್ಟ್ರೇಲಿಯ, ಸ್ಪೇನ್ ಮತ್ತು ಡೊಮಿನಿಕನ್ ರಿಪಬ್ಲಿಕ್‌ನ ರಾಯಭಾರಿಗಳು ಸಹ ಉತ್ಸವಕ್ಕೆ ಆಗಮಿಸಲಿದ್ದಾರೆ. ಕನ್ನಡ ಸಾಹಿತ್ಯದ ವನಮಾಲ ವಿಶ್ವನಾಥ್, ಸುಮಾ ಅಯ್ಯರಹಳ್ಳಿ, ಮಧು ವೈ.ಎನ್., ಶಾಂತಿ ಕೆ ಅಪ್ಪಣ್ಣ, ಪ್ರಶಾಂತ್ ಪಂಡಿತ್, ಅಬ್ದುಲ್ ರಶೀದ್, ಮಲ್ಲಮ್ಮ ಸರಸ್ವತಿ ಜುಲೇಖಾ ಬೇಗಂ, ದೀಪಾ ಬಸ್ತಿ , ಬಾನು ಮುಸ್ತಾಕ್, ಟಿ.ಎನ್.ಸೀತಾರಾಮ್ ಮತ್ತು ಜೋಗಿ ಮುಂತಾದ ಬರಹಗಾರರು ಆಗಮಿಸಲಿದ್ದಾರೆ.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಟೊಯೋಟಾ ಕಂಪನಿಯ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ವೆಹಿಕಲ್‌ನ್ನು ಅನಾವರಣಗೊಳಿಸಲಾಯಿತು. ಟೊಯೋಟಾದ ಮಸಕಾಜು ಯೋಶಿಮುರಾ, ಶಬರಿ ಮನೋಹರ್, ಅಸಾಜುಮಾ ಇದ್ದರು.

ಡಿ.27ರಿಂದ ತೃತೀಯ ವಿಶ್ವ ಹವ್ಯಕ ಸಮ್ಮೇಳನ

ಅರಮನೆ ಮೈದಾನದ ರಾಯಲ್ ಸೆನೇಟ್, ಗ್ರ್ಯಾಂಡ್ ಕ್ಯಾಸಲ್ ಸಭಾಂಗಣದಲ್ಲಿ ಆಯೋಜನೆ | ನಾನಾ ಗಣ್ಯರು ಭಾಗಿ

ಬೆಂಗಳೂರು: ಅಖಿಲ ಹವ್ಯಕ ಮಹಾಸಭಾ ವತಿಯಿಂದ ತೃತೀಯ ವಿಶ್ವ ಹವ್ಯಕ ಸಮ್ಮೇಳನ ಡಿ.27 ರಿಂದ 29 ರವರೆಗೆ ಅರಮನೆ ಮೈದಾನದ ರಾಯಲ್ ಸೆನೇಟ್ ಹಾಗೂ ಗ್ರ್ಯಾಂಡ್ ಕ್ಯಾಸಲ್ ಸಭಾಂಗಣದಲ್ಲಿ ನಡೆಯಲಿದೆ.

ಡಿ.27 ರಂದು ಸಮ್ಮೇಳನಕ್ಕೆ ಚಾಲನೆ ನೀಡಲಿದ್ದು, ರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾಯ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ದಿವ್ಯ ಸಾನಿಧ್ಯವಹಿಸಲಿದ್ದಾರೆ. ಮಂತ್ರಾಲಯದ ಶ್ರೀರಾಘವೇಂದ್ರ ಮಠದ ಸುಬುಧೇಂದ್ರ ತೀರ್ಥ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಯದುಗಿರಿ ಯತಿರಾಜ ಮಠದ ಯತಿರಾಜ ಜೀಯರ್ ಸ್ವಾಮೀಜಿ, ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಭಾಗವಹಿಸಲಿದ್ದಾರೆ.

ಅತಿಥಿಗಳಾಗಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮಾಜಿ ಮುಖ್ಯಮಂತ್ರಿ ಸದಾನಂದಗೌಡ, ಸಚಿವ ಮಂಕಾಳು ವೈದ್ಯ, ಮಾಜಿ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ವಿಜಯೇಂದ್ರ, ಡಾ.ಅಶ್ವತ್ಥ ನಾರಾಯಣ, ಶಿವರಾಮ್ ಹೆಬ್ಬಾರ್, ಭೀಮಣ್ಣ ನಾಯ್ಕ, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಗೌರವಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಆಗಮಿಸಲಿದ್ದಾರೆ. ಮೂರು ದಿನಗಳ ಕಾಲ ವಿವಿಧ ಸಭೆ, ಸಮಾರಂಭಗಳು, ಗೋಷ್ಠಿಗಳು, ಗಾನ, ನರ್ತನ, ಭೋಜನಗಳು ಮೇಳೈಸಲಿವೆ. ಕರ್ನಾಟಕದ ಮಲೆನಾಡು, ಕರಾವಳಿಯಲ್ಲಿ ನೆಲೆನಿಂತ ಹವ್ಯಕರು ಮಾತ್ರವಲ್ಲದೆ, ದೇಶ ವಿದೇಶಗಳಿಂದ ಸಹಸ್ರಾರು ಮಂದಿ ಸಮುದಾಯ ಬಾಂಧವರು ಆಗಮಿಸಲಿದ್ದಾರೆ.

8 ಗೋಷ್ಠಿ, 18 ವಿಷಯ ಚಿಂತನ

ಹವ್ಯಕ ಸಮಾಜಕ್ಕೆ ಸಂಬಂಧಿತ ವಿಚಾರಗಳು, ಸಮುದಾಯದ ವಿವಿಧ ಸಮಸ್ಯೆಗಳ ಪರಾಮರ್ಶೆ, ಚಿಂತನ ಮಂಥನಕ್ಕೆ 8 ಗೋಷ್ಠಿಗಳನ್ನು ಆಯೋಜಿಸಲಾಗಿದ್ದು, 18 ವಿಚಾರಗಳ ಕುರಿತು ತತ್ಸಂಬಂಧಿ ವಿಷಯ ತಜ್ಞರು ವಿಚಾರ ವಿನಿಮಯ ಮಾಡಲಿದ್ದಾರೆ.

ಯಕ್ಷ, ಕಲಾ, ನಾಟ್ಯ ವೈಭವ

ತೆಂಕುತಿಟ್ಟು, ಬಡಗುತಿಟ್ಟುಗಳ ಯಕ್ಷಗಾನ ವೇಷಭೂಷಣಗಳ ಪ್ರದರ್ಶನ, ಅವುಗಳ ಸವಿಸ್ತಾರ ಮಾಹಿತಿ, ಸಮುದಾಯದ ಶ್ರೇಷ್ಠ ಯಕ್ಷಕಲಾ ಸಾಧಕರ ಕಲಾವೈವಿಧ್ಯ ಅನಾವರಣವಾಗಲಿದೆ. ಪ್ರಸಿದ್ಧ ಕಲಾವಿದರಿಂದ ನಗರ ಸಂಕೀರ್ತನೆ, ನೃತ್ಯ-ಗಾನದ ವಿಶಿಷ್ಟ ಸಮ್ಮಿಲನ ನರ್ತನ ಸಂಕೀರ್ತನ ನಡೆಯಲಿದೆ. ನಾಡಿನ ಹೆಸರಾಂತ ಹವ್ಯಕ ಕಲಾವಿದರು ಶಾಸ್ತ್ರೀಯ ಸಂಗೀತ, ಸುಗಮ ಸಂಗೀತದ ರಸಧಾರೆ ಹರಿಸಲಿದ್ದಾರೆ. ಅಲ್ಲದೆ, ವಿವಿಧ ಬಗೆಯ ನೃತ್ಯ ಪ್ರಾಕಾರಗಳ ಪ್ರದರ್ಶನ, ನಾಟ್ಯೋತ್ಸವ ಮನಸೂರೆಗೊಳ್ಳಲಿದೆ. ಜತೆಗೆ ತಬಲಾ, ಮೃದಂಗ, ವೀಣೆ, ಪಿಟೀಲು, ಹಾರ್ಮೋನಿಯಂ ವಾದ್ಯ ಪ್ರಕಾರಗಳ ನಾದಲೋಕ ಅನಾವರಣವಾಗಲಿದೆ.

ಹವ್ಯಕ ಪಾಕೋತ್ಸವ

ಹವ್ಯಕರ ಆಹಾರ ವೈವಿಧ್ಯವನ್ನು ಪರಿಚಯಿಸುವ ಹವ್ಯಕ ಪಾಕೋತ್ಸವ ಸಮ್ಮೇಳನದ ಇನ್ನೊಂದು ವಿಶೇಷತೆ. ಕನ್ನಡದ ಪ್ರಥಮ ನಾಟಕ ಎಂದೇ ಖ್ಯಾತವಾದ ಹವ್ಯಕ ನಾಟಕ ಇಗ್ಗಪ್ಪ ಹೆಗಡೆಯ 'ವಿವಾಹ ಪ್ರಹಸನ'ವನ್ನು ಪ್ರದರ್ಶಿಸಲಾಗುವುದು. ಸಮ್ಮೇಳನದಲ್ಲಿ ವಿಶೇಷವಾಗಿ 567 ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲು ತೀರ್ಮಾನಿಸಲಾಗಿದೆ.

ಸಮ್ಮೇಳನದಲ್ಲಿ ಏನೇನಿರುತ್ತದೆ

ಸಮ್ಮೇಳನದಲ್ಲಿ ಹಳ್ಳಿಕಾರ್, ಗಿರ್, ಕಾಂಕ್ರೇಜ್, ಮಲೆನಾಡು ಗಿಡ್ಡ ಇತ್ಯಾದಿ ಭಾರತೀಯ ಗೋತಳಿಗಳ ಪ್ರದರ್ಶನ, ಆಕಳಿಗೆ ಸ್ವಯಂ ಹುಲ್ಲು ತಿನ್ನಿಸುವ, ಮಕ್ಕಳಿಗೆ ಕರುಗಳೊಂದಿಗೆ ಬಾಲಲೀಲೆಗಳಿಗೆ ಅವಕಾಶ ಸಿಗಲಿದೆ. ಹವ್ಯಕರ ಅಡಕೆ ಕೃಷಿಯ ತರಾವರಿ ಉಪಕರಣಗಳು, ಯಂತ್ರಗಳನ್ನೊಳಗೊಂಡ ಸಮಗ್ರ ವಸ್ತು ಪ್ರದರ್ಶನ ಇರಲಿದೆ. ಗಾಯತ್ರಿ ಮಹಾಮಂತ್ರದ ಕುರಿತಾದ ಸಮಗ್ರ ದರ್ಶನ, ಪ್ರತಿನಿತ್ಯ ಲೋಕ ಕಲ್ಯಾಣಕ್ಕಾಗಿ ಹವ್ಯ ಯಜ್ಞ-ಗಣಪತಿ ಹವನ ಹಾಗೂ ಅರುಣ ಮಂತ್ರ ಹವನ, ಸೂಕ್ತ ಹವನ ಹಾಗೂ ರುದ್ರ ಹವನ, ಧನ್ವಂತರಿ ಹವನ ಆಯೋಜಿಸಲಾಗಿದೆ. ಸತ್ಯಗಣಪತಿ ಪೂಜೆ, ದುರ್ಗಾಪೂಜೆ, ಸತ್ಯನಾರಾಯಣ ಪೂಜೆ, ಶಿವಪೂಜೆ, ಧನ್ವಂತರಿ ಪೂಜೆಗಳು ನಡೆಯಲಿವೆ. ಭಕ್ತಿ ಭಜನೆ, ಸಾಮೂಹಿಕ ಭಗವದ್ಗೀತಾ ಪಠಣ, ಯಾಗ ಮಂಡಲ ಕಲಾ ಪ್ರದರ್ಶನ ಇರಲಿದೆ ಎಂದು ವಿವರಿಸಿದರು.

ವಿವಿಧ ಸ್ಪರ್ಧೆಗಳು

ಹವ್ಯಕ ಸಂಸ್ಕೃತಿಯ ಛಾಯಾಚಿತ್ರ ಪ್ರದರ್ಶನ ಹಾಗೂ ಸ್ಪರ್ಧೆ, ಹವ್ಯಕ ಸಂಪ್ರದಾಯದ ಚಿತ್ರಕಲಾ ಸ್ಪರ್ಧೆ, ರಂಗೋಲಿ ಕಲಾಸ್ಪರ್ಧೆ, ಹೂಕುಂಡ-ಇಕಬಾನ ಕಲಾಸ್ಪರ್ಧೆ, ವೈವಿಧ್ಯಮಯ ಕರಕುಶಲ ವಸ್ತು ಪ್ರದರ್ಶನ ಸ್ಪರ್ಧೆ ಹಾಗೂ ಅವುಗಳ ಮಾರಾಟ, ಹವ್ಯಕರ ಮನೆಗಳಲ್ಲಿ ಹಳೆ ಕಾಲದಲ್ಲಿ ಉಪಯೋಗಿಸುತ್ತಿದ್ದ ಕಡೆಗೋಲು, ಕೆರೆಮಣೆ, ಸೌಟುಗಳು, ಕತ್ತಿಗಳು, ಉಡುಚಾಪೆ, ಕಡಕಲಮಣೆ ಸೇರಿದಂತೆ ವಿವಿಧ ಪಾರಂಪರಿಕ ವಸ್ತುಗಳ ಪ್ರದರ್ಶನ ಮತ್ತು ಸ್ಪರ್ಧೆ, ಹವ್ಯಕ ಸಂಸ್ಕೃತಿಯನ್ನು ಬಿಂಬಿಸುವ ಸೆಲ್ಫಿ ಪಾಯಿಂಟ್ ಗಳು ಈ ಸಮ್ಮೇಳನದ ವಿಶೇಷತೆಗಳಾಗಿವೆ ಎಂದು ಡಾ.ಗಿರಿಧರ ಕಜೆ ತಿಳಿಸಿದರು.

1.5 ಲಕ್ಷ ಜನರ ಮಹಾಸಮಾಗಮ

ಸಮ್ಮೇಳನದ ವಿಶೇಷತೆಯಾಗಿ 6000 ಹವ್ಯಕ ಪುಸ್ತಕಗಳ ಪ್ರದರ್ಶನ, 300ಕ್ಕೂ ಅಧಿಕ ಸುಪ್ರಸಿದ್ಧ ಕಲಾವಿದರಿಂದ ಸಾಂಸ್ಕೃತಿಕ ವೈಭವ, 108 ಸಾಂಸ್ಕೃತಿಕ ಕಾರ್ಯಕ್ರಮಗಳು, 108 ವರ್ಷಗಳ ಪಂಚಾಂಗದ ಪ್ರದರ್ಶನ, 100ಕ್ಕೂ ಅಧಿಕ ಹವ್ಯಕ ಖಾದ್ಯಗಳ ಸ್ವಾದ, 81 ಕರಕುಶಲ ವಸ್ತುಗಳ ಮಳಿಗೆಗಳು, 81 ವಾಣಿಜ್ಯ ಮಳಿಗೆಗಳು, 8 ಗೋಷ್ಠಿಗಳಲ್ಲಿ 18 ವಿಚಾರಗಳ ಚಿಂತನೆ ಮಂಥನ, ಶತ ಕಂಠಗಳಿಂದ ಭಗವದ್ಗೀತೆ ಪಠಣ, ನೂರಾರು ಮಾತೆಯರಿಂದ ಭಕ್ತಿಭಜನೆ, 81 ಹವಿ ತಿನಿಸುಗಳ ಮಾರಾಟ, ಸಾವಿರದ ರಕ್ತದಾನ, 100ಕ್ಕೂ ಅಧಿಕ ಪಾರಂಪರಿಕ ವಸ್ತುಗಳ ಪ್ರದರ್ಶನ, 108 ಬೈಕ್‌ಗಳ ರ್‍ಯಾಲಿ, ಸಹಸ್ರಾರು ಹೆಜ್ಜೆಗಳ ವಾಕಥಾನ್, ಒಟ್ಟಾರೆಯಾಗಿ 1.5 ಲಕ್ಷಕ್ಕೂ ಅಧಿಕ ಜನರ ಮಹಾಸಮಾಗಮ ನಡೆಯಲಿದೆ.

ಟ್ವೀಟೂ-ಖಾರಾ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಪಂಚಮಸಾಲಿ ಸಮುದಾಯದ 2ಎ ಪ್ರವರ್ಗದ ಮೀಸಲಾತಿಗಾಗಿ ನಡೆಸುತ್ತಿರುವ ಹೋರಾಟದ ಸ್ವರೂಪದ ಕುರಿತು ಈ ಮುಂಚೆಯೇ ಸರಕಾರದ ಅರಿವಿಗೆ ಬಂದಿದ್ದರೂ ಯಾವುದೇ ಮುಂಜಾಗ್ರತಾ ಕ್ರಮ ವಹಿಸದ INCKarnataka ಸರಕಾರ ದುರುದ್ದೇಶಪೂರ್ವಕವಾಗಿ ಚಳುವಳಿಯನ್ನು ಹತ್ತಿಕ್ಕುವ ದುರಾಲೋಚನೆಯಿಂದ ಚಳುವಳಿ ನಿರತ ಅಮಾಯಕರ ಮೇಲೆ ಲಾಠಿಚಾರ್ಜ್ ಪ್ರಯೋಗಿಸಿ ಚಳುವಳಿಗಾರರು ಮಾರಣಾಂತಿಕ ಪೆಟ್ಟು ಅನುಭವಿಸಲು ಕಾರಣವಾಗಿರುವುದು ಅತ್ಯಂತ ಖಂಡನೀಯ ಘಟನೆಯಾಗಿದೆ.
ಕೂಡಲೇ ಸರಕಾರ ಈ ಸಂಬಂಧವಾಗಿ ಬೇಜವಾಬ್ದಾರಿಯಿಂದ ವರ್ತಿಸಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಿ,

ರಾಜು .ಪಿ

ವಿಜೇಂದ್ರ ರವರೇ ಯಡಿಯೂರಪ್ಪ,ಜಗದೀಶೆಟ್ಟರ್ ,ಬಸವರಾಜ ಬೋಮ್ಮಯಿ,ಇವರೆಲ್ಲ ಲಿಂಗಾಯತ ಸಮುದಾಯದ ಮುಖ್ಯಮಂತ್ರಿಗಳೇ ಅಲ್ಲವೇ ?. ಪಂಚಮಸಾಲಿಯವರಿಗೆ ಏಕೆ ಮೀಸಲಾತಿ ಸೌಲಭ್ಯ ಕಲ್ಪಿಸಲಿಲ್ಲ? . ಈಗ ಈ ಬೀದಿನಾಟಕ ಏಕೆ ? ಬಸವಣ್ಣ ಬ್ರಾಹ್ಮಣರಾದರೂ ಬ್ರಾಹ್ಮಣ್ಯದ ವಿರುದ್ಧ ಸಿಡಿದು ಲಿಂಗಾಯತಧರ್ಮ ಸ್ಥಾಪಿಸಿದರು . ಎಲ್ಲಾ ಒಂದೇ ಎಂದಕೊೞ್ಳಿ ಈ ಕುತಂತ್ರವೇಕೆ ?



ಇಂದು ಸರಕಾರದ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ

ಎಲ್ಲಾ ಗ್ರಾಮ ಮಟ್ಟದಲ್ಲಿ ರಸ್ತೆ ತಡೆ : ಬಸವ ಜಯಮೃತ್ಯುಂಜಯ ಸ್ವಾಮೀಜಿ

ಬೆಳಗಾವಿ: ಪಂಚಮಸಾಲಿ ಹೋರಾಟ ಹತ್ತಿಕ್ಕುವ ಉದ್ದೇಶದಿಂದ ಸರಕಾರ ಲಾಠಿ ಚಾರ್ಜ್ ನಡೆಸಿದೆ. ಆದರೆ ನಾವು ಯಾವುದೇ ಕಾರಣಕ್ಕೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ಸರಕಾರದ ವಿರುದ್ಧ ಗುರುವಾರದಿಂದ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಬುಧವಾರ ಬೆಳಗಾವಿ ನಗರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಇವರು. ನಾವು ಮೀಸಲಾತಿಗೆ ಆಗ್ರಹಿಸಿ ಶಾಂತಿಯುತ ಪ್ರತಿಭಟನೆ ಮಾಡುತ್ತಿದ್ದೇವು. ನಮ್ಮ ಸಮಸ್ಯೆ ಹೇಳಿಕೊಳ್ಳಲು ಮುಖ್ಯಮಂತ್ರಿಗಳ ಬಳಿ ಹೋಗುವುದು ತಪ್ಪಾ?. ಯಾವುದೋ ಹಳೆಯ ದ್ವೇಷದಿಂದ ನಮ್ಮ ಹೋರಾಟಗಾರರ ಮೇಲೆ ಹಲ್ಲೆ ನಡೆಸಲಾಗಿದೆ. ಇದನ್ನು ಖಂಡಿಸಿ ರಾಜ್ಯಾದ್ಯಂತ ಎಲ್ಲಾ ಗ್ರಾಮ ಮಟ್ಟದಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸುತ್ತೇವೆ ಎಂದರು.

ಹಲ್ಲೆ ನಡೆಸಿದ್ದು ಮನಸ್ಸಿಗೆ ನೋವಾಗಿದೆ:

ಕಳೆದ ಸರಕಾರದ ಅವಧಿಯಿಂದ ಮೀಸಲಿಗೆ ಆಗ್ರಹಿಸಿ ಪಂಚಮಸಾಲಿ ಸಮುದಾಯ ಹೋರಾಟ ಮಾಡುತ್ತಿದೆ. ಆದರೆ ಈವರೆಗೂ ಯಾರೂ ಲಿಂಗಾಯತರ ಮೇಲೆ ದೌರ್ಜನ್ಯ ನಡೆಸಿರಲಿಲ್ಲ. ಆದರೆ ಸಿಎಂ ಸಿದ್ದರಾಮಯ್ಯ ಅವರಿಂದ ನಮ್ಮ ಸಮುದಾಯದ ಮೇಲೆ ದೌರ್ಜನ್ಯ ನಡೆದಿದೆ. ನಾನು ಈವರೆಗೂ ಸಿಎಂ ಲಿಂಗಾಯತರ ಪರವಾಗಿದ್ದಾರೆ ಎಂದು ಹೊಗಳುತ್ತಿದ್ದೆ. ಆದರೆ ಮಂಗಳವಾರ ನಡೆದ ಹೋರಾಟದಲ್ಲಿ ನಮ್ಮ ಮೇಲೆ ಹಲ್ಲೆ ನಡೆಸಿದ್ದು ಮನಸ್ಸಿಗೆ ನೋವಾಗಿದೆ ಎಂದರು.

ಸರಕಾರ ನಿರ್ಲಕ್ಷ್ಯ ಮಾಡಿದೆ:

ಪ್ರತಿಭಟನೆ ಸಂದರ್ಭದಲ್ಲಿ ಸರಕಾರದ ಪರವಾಗಿ ಮೂವರು ಹಿರಿಯ ಸಚಿವರು ಬಂದಿದ್ದರು ಸಿಎಂ ಜೊತೆ ಮಾತುಕತೆ ಬಗ್ಗೆ ಯಾವುದೇ ಚರ್ಚೆ ನಡೆಸಿಲ್ಲ. ಮುಖಂಡರುಗಳ ಜೊತೆ ಸಿಎಂ ಸಭೆ ನಡೆಸುತ್ತಾರೆ ಎಂಬ ಮಾಹಿತಿಯನ್ನು ನಮಗೆ ಯಾರೂ ನೀಡಿಲ್ಲ. ಆದರೆ ಸಿಎಂ ಹೇಳುತ್ತಾರೆ. ನಾವು ಪಂಚಮಸಾಲಿ ಹೋರಾಟಗಾರ ಜೊತೆ ಮಾತುಕತೆ ನಡೆಸುವುದಾಗಿ ಹೇಳಿದ್ದೆ ಎಂದು. ಆದರೆ ಇದು ಸುಳ್ಳು, ನಮ್ಮ ಪ್ರತಿಭಟನೆಯನ್ನು ಸರಕಾರ ನಿರ್ಲಕ್ಷ್ಯ ಮಾಡಿದೆ ಎಂದು ಶ್ರೀಗಳು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮಾತನಾಡಿದರು.

ಸದನದಲ್ಲಿ ಹೋರಾಡುವಂತೆ ಶಾಸಕರಿಗೆ ಸ್ವಾಮೀಜಿ ಕರೆ

ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿಗೆ ಆಗ್ರಹಿಸಿ ನಡೆಸಿದ ಪ್ರತಿಭಟನೆಯಲ್ಲಿ ಪೊಲೀಸರು ಹಲ್ಲೆ ನಡೆಸಿದ್ದನ್ನು ಖಂಡಿಸಿ ಹಾಗೆಯೇ ಮೀಸಲಾತಿಗೆ ಆಗ್ರಹಿಸಿ ರಾಜ್ಯದ ಎಲ್ಲಾ ಶಾಸಕರು ಅಧಿವೇಶನದಲ್ಲಿ ಹೋರಾಟ ಮಾಡುವಂತೆ ಸ್ವಾಮೀಜಿ ಕರೆ ನೀಡಿದ್ದಾರೆ. ಸರಕಾರದಿಂದ ಮೀಸಲಾತಿ ನೀಡಲು ಸಾಧ್ಯವಿಲ್ಲ ಎಂದರೆ ನೇರವಾಗಿ ಹೇಳಲಿ. ಮುಂದೆ ನಮ್ಮ ಸಮುದಾಯದ ಜನ ಯಾರಿಗೆ ಬೆಂಬಲಿಸಬೇಕು ಎಂಬ ನಿರ್ಧಾರ ಕೈಗೊಳ್ಳುತ್ತೇವೆ. ಈಗ ನಮ್ಮ ಜೊತೆ ಪಕ್ಷಾತೀತವಾಗಿ ಜನ ಪ್ರತಿನಿಧಿಗಳು ನಿಂತುಕೊಂಡಿದ್ದು, ಹೋರಾಟದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ನಮ್ಮ ಬೆನ್ನಿಗೆ ನಿಲ್ಲುವ ವಿಶ್ವಾಸವಿದೆ ಎಂದರು.

ಪಂಚಮಸಾಲಿ ಹೋರಾಟದ ವಿರುದ್ಧ ನ್ಯಾಯಾಲಯಕ್ಕೆ ವರದಿ

ಪಂಚಮಸಾಲಿ ಸಮುದಾಯದ ಮೀಸಲಾತಿ ಹೋರಾಟದ ಸಂದರ್ಭದಲ್ಲಿ ನ್ಯಾಯಾಲಯ ಆದೇಶ ಉಲ್ಲಂಘಿಸಿದ್ದಾರೆ ಎಂದು ತಾಂತ್ರಿಕ ಅಂಶ ಮುಂದಿಟ್ಟುಕೊಂಡು ಸಮಗ್ರ ವರದಿ ಸಲ್ಲಿಸಲು ಸಜ್ಜಾಗಿದೆ. ಶಾಂತಿಯುತ ಪ್ರತಿಭಟನೆಗೆ ಹೈಕೋರ್ಟ್ ಆದೇಶ ನೀಡಿದ ನಂತರದಲ್ಲಿ ಪ್ರತಿಭಟನಾಕಾರರ ಗುಂಪು ರಾಷ್ಟ್ರೀಯ ಹೆದ್ದಾರಿ ತಡೆದು ಪೊಲೀಸರ ಮೇಲೆ ಕಲ್ಲು ಹಾಗೂ ಚಪ್ಪಲಿ ಎಸೆದಿದ್ದು ಮಾತ್ರವಲ್ಲದೆ ಬ್ಯಾರಿಕೆಡ್ ತಳ್ಳಿ ಸಾರ್ವಜನಿಕರಿಗೆ ತೊಂದರೆ ಮಾಡಿದ್ದಾರೆ ಎಂಬುದನ್ನು ಉಲ್ಲೇಖಿಸಿ ಜಿಲ್ಲಾಡಳಿತ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಿದೆ. ಜೊತೆಗೆ ಪಂಚಮಸಾಲಿ ಮುಖಂಡರ ಮೇಲೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಪಂಚಮಸಾಲಿ ಮೀಸಲಾತಿ ಹೋರಾಟಗಾರರಿಗೆ ಹಿಂಸೆ

ಸರಕಾರದ ವಿರುದ್ಧ ಜನಾರ್ದನ ರೆಡ್ಡಿ ತೀವ್ರ ಆಕ್ರೋಶ

ಬಳ್ಳಾರಿ: ಬೆಳಗಾವಿಯಲ್ಲಿ ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ಸರಕಾರ ಸೇಡಿನಿಂದ ಲಾಠಿ ಚಾರ್ಜ್ ಮಾಡಿಸಿ, ಹೋರಾಟಗಾರಿಗೆ ಹಿಂಸೆ ನೀಡಿದೆ ಎಂದು ರಾಜ್ಯ ಸರಕಾರದ ವಿರುದ್ಧ ಶಾಸಕ ಜನಾರ್ದನ ರೆಡ್ಡಿ ತೀವ್ರ ಆಕ್ರೋಶ ಹೊರಹಾಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಸರಕಾರ ಬ್ರಿಟಿಷರ ಮಾದರಿಯಲ್ಲಿ ಭಯಾನಕವಾಗಿ ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಮಾಡಿಸಿದೆ. ವಯಸ್ಸು, ಹಿರಿಯರು, ಕಿರಿಯರು ಎನ್ನುವುದನ್ನು ನೋಡದೇ ಹೊಡೆದಿದ್ದಾರೆ ಎಂದು ದೂರಿದರು.

ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನ ಬಂಧನದಲ್ಲಿಟ್ಟಿದ್ದಾರೆ. ಹೋರಾಟಕ್ಕೆ ಬೆಂಬಲ ನೀಡಿದ್ದ ಪ್ರತಿಪಕ್ಷದ ನಾಯಕರನ್ನೂ ಬಂಧನ ಮಾಡಿದ್ದಾರೆ. ಅಮಾಯಕ ಜನರನ್ನ ಅಟ್ಟಾಡಿಸಿ ಮನಬಂದಂತೆ ಹೊಡೆದಿದ್ದಾರೆ. ಎಡಿಜಿಪಿ ಅವರು ಓಡೋಡಿ ಬಂದು ಸದನದಲ್ಲಿ ಮುಖ್ಯಮಂತ್ರಿ ಭೇಟಿಯಾದ್ರು. ಐದು ನಿಮಿಷಗಳಲ್ಲಿ ಸಿಎಂ ಹೊರಗೆ ಹೋಗಿ ಎಡಿಜಿಪಿ ಜೊತೆ ಸಭೆ ಮಾಡಿದ್ರು. ಆಮೇಲೆ ಏನೆಲ್ಲಾ ಅನಾಹುತ ಆಗಬೇಕಿತ್ತೋ ಅದೆಲ್ಲಾ ಆಯ್ತು. ಬ್ರಿಟಿಷರಂತೆ ಕೆಟ್ಟ ಕೆಲಸಕ್ಕೆ ಸರಕಾರ ಕೈ ಹಾಕಿದೆ ಎಂದು ಸಿಟ್ಟು ಹೊರಹಾಕಿದರು.

ಇಡೀ ಸಮಾಜಕ್ಕೆ ಕ್ಷಮೆ ಕೇಳಲಿ

ಇನ್ನು ಮುಂದೆ ಹೋರಾಟಕ್ಕೆ ಮುಂದೆ ಬರಬಾರದು, ಹೋರಾಟ ಮಾಡಬಾರದು ಅನ್ನೋ ರೀತಿಯ ಭಯ ಹುಟ್ಟಿಸುವ ಕೆಲಸ ಮಾಡಿದ್ದಾರೆ. ಕೈ, ಕಾಲು ಮುರಿದು, ರಕ್ತ ಬರುವ ರೀತಿ ಹೊಡೆದಿದ್ದಾರೆ. ಇಡೀ ಪಂಚಮಸಾಲಿ ಸಮಾಜಕ್ಕೆ ಮಾತ್ರ ಅಲ್ಲ, ಇಡೀ ಸಮಾಜಕ್ಕೆ ಕ್ಷಮೆ ಕೇಳುವ ಕೆಲಸ ಮಾಡಬೇಕಿದೆ. ಇದಕ್ಕೆ ಸಿಎಂ ಫುಲ್ ಸ್ಟಾಪ್ ಇಡಬೇಕಿದೆ. ಕೂಡಲೇ ಕ್ಷಮೆ ಕೇಳಿ, ಸ್ವಾಮೀಜಿಯವರನ್ನ ಭೇಟಿ ಮಾಡಿ, ಸಾಂತ್ವನ ಹೇಳಬೇಕಿದೆ. ಈ ರೀತಿ ಆಗೋದಿಲ್ಲ ಎಂದು ಭರವಸೆ ಕೊಡಬೇಕಿದೆ ಎಂದು ಶಾಸಕ ಜನಾರ್ದನ ರೆಡ್ಡಿ ಹೇಳಿದರು.

ಲಾರಿ ಡಿಕ್ಕಿ: ದಂಪತಿ ಸ್ಥಳದಲ್ಲೇ ಸಾವು

ಗಂಗಾವತಿ: ಕೂಲಿ ಕೆಲಸದ ನಿಮಿತ್ತ ಗಂಗಾವತಿಗೆ ಹೊರಟಿದ್ದ ದಂಪತಿಯ ಬೈಕಿಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಪತಿ-ಪತ್ನಿ ಸ್ಥಳದಲ್ಲೇ ಮೃತಪಟ್ಟ ಘಟನೆ ತಾಲೂಕಿನ ಕೇಸರಹಟ್ಟಿ ಗ್ರಾಮದಲ್ಲಿ ನಡೆದಿದೆ. ಘಟನೆಯಲ್ಲಿ ಒಬ್ಬ ಬಾಲಕ ತೀವ್ರ ಗಾಯಗೊಂಡಿದ್ದು, ಆತನನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತರನ್ನು ಮರಕುಂಬಿ ಗ್ರಾಮದ ಮಂಜುನಾಥ ಪರಸಪ್ಪ ನಾಯಕ್ (38) ಹಾಗೂ ಆತನ ಪತ್ನಿ ನೇತ್ರಾವತಿ ಮಂಜುನಾಥ ನಾಯಕ್ (33) ಎಂದು ಗುರುತಿಸಲಾಗಿದೆ. ಗಾಯಾಳು ಬಾಲಕ ಮರಕುಂಬಿ ಗ್ರಾಮದ ಮಂಜುನಾಥ ನಾಯಕ್ ಎಂದು ತಿಳಿದುಬಂದಿದೆ. ತುರ್ತು ಕೆಲಸದ ನಿಮಿತ್ತ ಮೂವರು ಗ್ರಾಮದಿಂದ ಒಂದೇ ಬೈಕಿನಲ್ಲಿ ಗಂಗಾವತಿಗೆ ಹೊರಟಿದ್ದರು. ಮಾರ್ಗ ಮಧ್ಯೆ ಬೈಕಿಗೆ ಪೆಟ್ರೋಲ್ ಹಾಕಿಸುವ ಉದ್ದೇಶಕ್ಕೆ ಹೇರೂರು-ಕೇಸರಹಟ್ಟಿ ಮಧ್ಯೆ ಇರುವ ಪೆಟ್ರೋಲ್ ಬಂಕ್‌ನಲ್ಲಿ ಇಂಧನ ಹಾಕಿಸಿದ್ದಾರೆ. ಬಳಿಕ ಬಂಕ್‌ನಿಂದ ರಸ್ತೆಗೆ ಬರುವ ಸಂದರ್ಭದಲ್ಲಿ ಎದುರಿನಿಂದ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದ ಪರಿಣಾಮ ಇಬ್ಬರೂ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಈ ಬಗ್ಗೆ ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಎಸ್‌ಆರ್‌ಟಿಸಿ ನೌಕರರಿಂದ ಡಿ.31ರಿಂದ ಮುಷ್ಕರ

ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧಾರ

ಬೆಂಗಳೂರು: ವೇತನ ಭತ್ಯೆ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಡಿ.31ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿದೆ.

ಈ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮುಷ್ಕರದ ನೋಟಿಸ್ ಸಲ್ಲಿಸಲಾಗಿದೆ. ನೌಕರರ ನ್ಯಾಯಯುತ ಬೇಡಿಕೆ ಈಡೇರಿಸುವಂತೆ ಅನೇಕ ಪ್ರತಿಭಟನೆ, ಸಮಾವೇಶ, ಮನವಿ ಸರಕಾರಕ್ಕೆ ಸಲ್ಲಿಸಲಾಗಿದ್ದು, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ಈ ಬಗ್ಗೆ ಚರ್ಚಿಸಲು ನಡೆದ ಸಭೆಯಲ್ಲಿ ಟಿಕೆಟ್ ದರ ಪರಿಷ್ಕರಣೆ ಆಗದ ಹೊರತು ವೇತನ ಪರಿಷ್ಕರಣೆ ಕಷ್ಟ ಸಾಧ್ಯ ಎಂದು ಆಡಳಿತ ವರ್ಗ ಹೇಳಿದ್ದು, ಈ ವಿಳಂಬ ಧೋರಣೆಯಿಂದ ಬೇಸರಗೊಂಡು ಅನಿವಾರ್ಯವಾಗಿ ಶಾಂತಿಯುತ ಮುಷ್ಕರದ ನಿರ್ಧಾರ ಕೈಗೊಂಡಿದ್ದಾರೆ. ಡಿಸೆಂಬರ್ 31ರ ನಂತರ ಬೇಡಿಕೆ ಈಡೇರುವವರೆಗೆ ಕರ್ತವ್ಯಕ್ಕೆ ಹಾಜರಾಗುವುದಿಲ್ಲ ಎಂದು ಹೇಳಲಾಗಿದೆ.

ಹಿಂದಿನ ವೇತನ ಹೆಚ್ಚಳದ 38 ತಿಂಗಳ ಬಾಕಿ ಬಿಡುಗಡೆ ಮಾಡಬೇಕು. ಮೂಲ ವೇತನಕ್ಕೆ ಶೇ.25 ರಷ್ಟು ವೇತನ ಹೆಚ್ಚಿಸಿ ಶೇ.31 ರಷ್ಟು ತುಟ್ಟಿ ಭತ್ಯೆ ವಿಲೀನಗೊಳಿಸಿ ವೇತನ ಶ್ರೇಣಿ ಸಿದ್ಧಪಡಿಸಬೇಕು. ನೌಕರರ ಭತ್ಯೆಗಳನ್ನು 5 ಪಟ್ಟು ಹೆಚ್ಚಳ ಮಾಡಬೇಕು. ಪ್ರತಿ ತಿಂಗಳು 2000 ರೂ. ವೈದ್ಯಕೀಯ ಚಿಕಿತ್ಸಾ ವೆಚ್ಚ ನೀಡಬೇಕು. ಬಸ್ ನಿಲ್ದಾಣ ಮತ್ತು ಬಸ್ ಘಟಕಗಳಲ್ಲಿ ಸೂಕ್ತ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಶಕ್ತಿ ಯೋಜನೆಯಿಂದ ಆಗುತ್ತಿರುವ ಶಿಕ್ಷೆ, ಕಿರುಕುಳ ಸಮಸ್ಯೆ ಪರಿಹರಿಸಬೇಕು. ನೌಕರರ ಮುಂಬಡ್ತಿಗೆ ಕ್ರಮ ಕೈಗೊಳ್ಳಬೇಕು. ಹೆಚ್ಚುವರಿ ಕೆಲಸದ ಅವಧಿಗೆ ಓಟಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲಾಗಿದೆ.

ಬಾವಿಗೆ ಬಿದ್ದು ಇಬ್ಬರು ಸಾವು



ಕೊಪ್ಪಳ: ಆಟವಾಡುತ್ತಿದ್ದಾಗ ಬಾವಿಗೆ ಬಿದ್ದು ಇಬ್ಬರು ಮಕ್ಕಳು ಸಾವನ್ನಪ್ಪಿರುವ ದಾರುಣ ಘಟನೆ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಅಮ್ಮಡಿ ಎಸ್ಟೇಟ್ ನಲ್ಲಿ ಸಂಭವಿಸಿದೆ.

ಸೀಮಾ(6), ರಾಧಿಕಾ (2), ಮೃತ ಮಕ್ಕಳು, ಮಧ್ಯ ಪ್ರದೇಶ ಮೂಲದ ಸುನೀತಾ ಎಂಬುವರು ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡಲು ಬಂದಿದ್ದರು. ಕೂಲಿ ಕೆಲಸಕ್ಕಾಗಿ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಕಾಫಿ ತೋಟಕ್ಕೆ ಹೋಗಿದ್ದ ತಾಯಿ ಕೂಲಿ ಮುಗಿಸಿ ಮತ್ತೆ ಮನೆಗೆ ಬಂದಾಗ ಮಕ್ಕಳು ನಾಪತ್ತೆಯಾಗಿದ್ದರು.ಗಾಬರಿಗೊಂಡ ತಾಯಿ ಸುನೀತಾ ಸುತ್ತಮುತ್ತಲಿನ ಕಾರ್ಮಿಕರಿಗೆ ಮಕ್ಕಳು ಇಲ್ಲದಿರುವ ವಿಷಯವನ್ನು ತಿಳಿಸಿದಾಗ ಕಾರ್ಮಿಕರು ಸುತ್ತ ಪರಿಶೀಲನೆ ನಡೆಸಿದಾಗ ಸಮೀಪದ ಬಾವಿಯಲ್ಲಿ ಮಕ್ಕಳ ಮೃತ ದೇಹ ಪತ್ತೆಯಾಗಿದೆ. ತಾಯಿ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಹೋದಾಗ ಆಟವಾಡುತ್ತಾ ಬಾವಿಯ ಬಳಿ ಬಂದು ಆಯ ತಪ್ಪಿ ಪ್ರಾಣ ಕಳೆದು ಕೊಂಡಿರುವ ಶಂಕೆ ವ್ಯಕ್ತವಾಗಿದೆ. ಭೂ ಮಟ್ಟದಿಂದ ಬಾವಿ ಕೇವಲ ಮೂರರಿಂದ ನಾಲ್ಕು ಅಡಿಯಷ್ಟು ನೀರಿನ ಮಟ್ಟ ಇದ್ದು ಕೈಗೆ ತಾಗುತ್ತದೆ. ಘಟನೆ ಸಂಬಂಧ ಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಳ್ಳೇಗಾಲಕ್ಕೆ ಭೇಟಿ ನೀಡಿ ಮಾಜಿ ಶಾಸಕರು ಹಾಗೂ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರು ಆದ ದಿವಂಗತ ಎಸ್.ಜಯಣ್ಣ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ಕುಟುಂಬವರ್ಗಕ್ಕೆ ಸಾಂತ್ವನ ಹೇಳಿದರು.

ಚಾಕು ಹಿಡಿದು ಹೊಡೆದಾಡಿದ ಯುವಕರು

ಗದಗ: ಹಾಡಹಗಲೇ ನಡುಬೀದಿಯಲ್ಲಿ ಇಬ್ಬರು ಯುವಕರು ಚಾಕು ಹಿಡಿದು ಹೊಡೆದಾಡಿದ ಘಟನೆ ಗದಗ ನಗರದ ಚೆನ್ನಮ್ಮ ಸರ್ಕಲ್ ಬಳಿ ನಡೆದಿದೆ.

ಹಣಕಾಸು ಹಾಗೂ ಕೌಟುಂಬಿಕ ವಿಚಾರವಾಗಿ ಫಕೀರೇಶ ನಂದಿಹಳ್ಳಿ ಹಾಗೂ ಗಂಗಾಧರ ಹಿರೇಮಠ ಕಿತ್ತಾಡಿದ್ದಾರೆ. ಈ ಇಬ್ಬರು ಮೂಲತಃ ಮುಂಡರಗಿ ತಾಲೂಕಿನ ಚಿರ್ಚಿಹಾಳ ಗ್ರಾಮದ ನಿವಾಸಿಗಳು. ಕಳೆದ ನಾಲ್ಕೈದು ವರ್ಷಗಳಿಂದ ಗದಗ ನಗರದ ಹುಡೋ ಕಾಲೋನಿಯಲ್ಲಿ ವಾಸವಾಗಿದ್ದಾರೆ. ಇಬ್ಬರು ನಡುವೆ ಹಣಕಾಸು ವಿಚಾರವಾಗಿ ಆಗಾಗ ಗಲಾಟೆ ಆಗುತ್ತಿತ್ತು. ಇದರ ಜೊತೆಗೆ ಫಕೀರೇಶನ ಮಗಳು ಗಂಗಾಧರನ ಮನೆಗೆ ಬಂದು ತಂದೆ ಬಗ್ಗೆ ದೂರು ಹೇಳಿದ್ದಾಳೆ.

ನನ್ನ ತಾಯಿ ಹಾಗೂ ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ. ವಿನಾಕಾರಣ ಕಿರುಕುಳ ಕೊಡ್ತಿದ್ದಾನೆ ಎಂದು ದೂರಿದ್ದಾಳೆ. ಇದರಿಂದ ಕೊಪಿತಗೊಂಡ ಗಂಗಾಧರ್ ಫಕೀರೇಶನೊಂದಿಗೆ ಜಗಳವಾಡಿದ್ದಾನೆ. ಮಾತಿಗೆ ಮಾತು ಬೆಳೆದು ವಿಕೋಪಕ್ಕೆ ತಿರುಗಿದೆ. ನಂತರ ಒಬ್ಬರನೊಬ್ಬರು ರಸ್ತೆಯಲ್ಲೇ ಹೊಡೆದಾಡಿಕೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಕೋಮಾಗೆ ಹೋಗಿದ್ದ ಯುವತಿ ಸಾವು

ರಾಯಚೂರು: ನಗರದ ಮಡ್ಡಿಪೇಟೆಯಲ್ಲಿ ಬೀದಿ ನಾಯಿಗಳ ದಾಳಿಯಿಂದ ತಲೆಗೆ ತೀವ್ರ ಪೆಟ್ಟಾಗಿ ಕೋಮಾ ಸ್ಥಿತಿಗೆ ತಲುಪಿದ್ದ ಯುವತಿ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾಳೆ. 20 ವರ್ಷದ ಮಹಾದೇವಿ ಮೃತ ದುರ್ದೈವಿ ಯುವತಿ. ನಗರದ ರಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಯುವತಿ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾಳೆ. ಮಂಗಳವಾರ ಬೆಳಗ್ಗೆ ದೇವಾಲಯಕ್ಕೆ ಹೊರಟಿದ್ದ ಯುವತಿ ಮೇಲೆ ಬೀದಿ ನಾಯಿಗಳ ಗುಂಪು ದಾಳಿ ಮಾಡಿತ್ತು. ನಾಯಿಗಳ ದಾಳಿಗೆ ಹೆದರಿದ ಯುವತಿ ಕೆಳಗೆ ಬಿದ್ದಿದ್ದು ತಲೆಗೆ ಬಲವಾದ ಪೆಟ್ಟಾಗಿತ್ತು. ತಲೆಗೆ ಪೆಟ್ಟು ಬಿದ್ದಿದ್ದರಿಂದ ರಕ್ತ ಹೆಪ್ಪುಗಟ್ಟಿ ಯುವತಿ ಕೋಮಾ ಸ್ಥಿತಿಗೆ ಹೋಗಿದ್ದಳು. ಯುವತಿಯನ್ನು ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಸಾರಿಗೆ ಇಲಾಖೆಗೆ 3 ಸಾವಿರಕ್ಕೂ ಅಧಿಕ ಬಸ್‌ಗಳ ಸೇರ್ಪಡೆ

ಬೆಂಗಳೂರು: ರಾಜ್ಯ ಸರಕಾರದಿಂದ ಸಾರಿಗೆ ಇಲಾಖೆಗೆ ಹೊಸದಾಗಿ 3,579 ಬಸ್‌ಗಳು ಸೇರ್ಪಡೆಯಾಗಿದ್ದು, ಈ ಮೂಲಕ ಇಲಾಖೆಗೆ ಮತ್ತಷ್ಟು ಶಕ್ತಿ ತುಂಬಿದಂತಾಗಿದೆ.

ಈ ಕುರಿತು ಮಾಹಿತಿ ನೀಡಿರುವ ರಾಜ್ಯ ಸರಕಾರ 20.35 ಕೋಟಿ ರುಪಾಯಿ ವೆಚ್ಚದಲ್ಲಿ ಬಸ್‌ಗಳ ಲೊಕೇಶನ್ ಟ್ರ್ಯಾಕಿಂಗ್ ಸಾಧನ ಮತ್ತು ತುರ್ತು ಪ್ಯಾನಿಕ್ ಬಟನ್ ಅಳವಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಉಡುಪಿ, ಚಿಕ್ಕಬಳ್ಳಾಪುರ, ನೆಲಮಂಗಲ, ಮಡಿಕೇರಿ ಮತ್ತು ಮಧುಗಿರಿಯಲ್ಲಿ ಸ್ವಯಂ ಚಾಲಿತ ಚಾಲನಾ ಪರೀಕ್ಷಾ ಪಥಗಳು ಹಾಗೂ ದೇವನಹಳ್ಳಿ, ತುಮಕೂರಿನಲ್ಲಿ ಸೀಜಿಂಗ್ ಯಾರ್ಡ್‌ಗಳನ್ನು 10 ಕೋಟಿ ರುಪಾಯಿಗಳ ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದಿದೆ.

ಶಕ್ತಿ ಯೋಜನೆಯಡಿ ಈವರೆಗೆ ಸಾರಿಗೆ ಬಸ್ಸುಗಳಲ್ಲಿ 316.32 ಕೋಟಿ ರುಪಾಯಿ ಮಹಿಳಾ ಪ್ರಯಾಣಿಕರು ಉಚಿತವಾಗಿ ಪ್ರಯಾಣಿಸಿದ್ದಾರೆ. ಸಾರಿಗೆ ವಾಹನಗಳಿಗೆ ಅರ್ಹತಾ ಪರೀಕ್ಷೆ ಕೈಗೊಳ್ಳಲು 32 ಸ್ಥಳಗಳಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸ್ವಯಂ ಚಾಲಿತ ಪರೀಕ್ಷಾ ಕೇಂದ್ರಗಳ ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದೆ.

ಸದನದಲ್ಲಿ ಇಂದು ಪಂಚಮಸಾಲಿ...

← ಮೊದಲಪುಟದಿಂದ

ಆದ್ದರಿಂದ ಗುರುವಾರ ಲಾಠಿಚಾರ್ಜ್ ವಿಷಯ ಮುಂದಿಟ್ಟು ಕೊಂಡು ಯತ್ನಾಳ್ ಅವರೇ ಸರಕಾರದ ವಿರುದ್ಧ ಸಮರ ಸಾರುವ ಸಾಧ್ಯತೆಯಿದೆ. ಇದೇ ರೀತಿ ವಿಧಾನ ಪರಿಷತ್‌ನಲ್ಲಿಯೂ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಬಿಜೆಪಿ ಸಿದ್ಧತೆ ನಡೆಸಿಕೊಂಡಿದೆ. ಈ ಮೂಲಕ ಚಳಿಗಾಲದ ಅಧಿವೇಶನ ಗದ್ದಲ-ಗಲಾಟೆ ಯಲ್ಲಿ ಮುಗಿಯುವ ಸರ್ವಸಾಧ್ಯತೆಗಳಿವೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಕಾಂಗ್ರೆಸ್ ನಾಯಕರು ಬಿಜೆಪಿ ಸರಕಾರದ ಅವಧಿ ಯಲ್ಲಿ ಪಂಚಮಸಾಲಿಗೆ 2ಎ ಮೀಸಲು ನೀಡಬೇಕು ಎಂದು ಆಗ್ರಹಿಸಿದ್ದರು. ತಮ್ಮ ಪ್ರಣಾಳಿಕೆಯಲ್ಲಿಯೂ ಈ ಬಗ್ಗೆ ಪ್ರಸ್ತಾಪಿಸಿದ್ದರು. ಜತೆಗೆ ಈಗಿನ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೇರಿದಂತೆ ಹಲವು ಶಾಸಕರು, ಸಚಿವರು ಮೀಸಲು ನೀಡುವ ಬಗ್ಗೆ ಮಾತನಾಡಿದ್ದರು. ಆದರೀಗ, ಪಂಚಮಸಾಲಿಗೆ ಮೀಸಲು ನೀಡುವ ವಿಷಯದ ಬಗ್ಗೆ ನಡೆಯುವ ಹೋರಾಟವನ್ನೇ ಹತ್ತಿಕ್ಕುವ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದು ಪ್ರಮುಖ ಅಸ್ತ್ರವಾಗಲಿದೆ. ಈ ಮೂಲಕ ಕಾಂಗ್ರೆಸಿನ ಲಿಂಗಾಯತ ಶಾಸಕರನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ಮಾಡಲಿದ್ದಾರೆ.

ಸಮರ್ಥಿಸಿಕೊಳ್ಳಲು ಸರಕಾರ ಸಿದ್ಧತೆ

ಪ್ರತಿಪಕ್ಷಗಳ ಅಸ್ತ್ರಕ್ಕೆ ಪ್ರತಿಯಾಗಿ ಸರಕಾರ ಈಗಾಗಲೇ ಪ್ರತ್ಯಾಸ್ತ್ರ ಸಿದ್ಧಪಡಿಸಿಕೊಂಡಿದೆ. ಪ್ರಮುಖವಾಗಿ, ಪಂಚಮಸಾಲಿ ಹೋರಾಟಗಾರರು ಶಾಂತಿಯುತ ಪ್ರತಿಭಟನೆಗೆ ಒಪ್ಪಿ ಬಳಿಕ ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲು ಮುಂದಾಗಿದ್ದೇ ಗೊಂದಲಕ್ಕೆ ಕಾರಣ. ಇದರೊಂದಿಗೆ ಪೊಲೀಸರ ಮೇಲೆ ಚಪ್ಪಲಿ ಹಾಗೂ ಕಲ್ಲುಗಳಿಂದ ಹಲ್ಲೆ ನಡೆಸಿದ್ದಾರೆ. ಆದ್ದರಿಂದ ಅನಿವಾರ್ಯವಾಗಿ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ. ಈ ಗಲಾಟೆಯಲ್ಲಿ ಹೋರಾಟಗಾರರಿಗಿಂತ ಹೆಚ್ಚಾಗಿ ಪೊಲೀಸರೇ ಗಾಯಗೊಂಡಿದ್ದಾರೆ ಎನ್ನುವ ಅಂಶವನ್ನು ಸದನದಲ್ಲಿ ಮಂಡಿಸಿ, ಸಮರ್ಥನೆ ಮಾಡಿಕೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ.

KODAGU INSTITUTE OF MEDICAL SCIENCES, MADIKERI
(Government of Karnataka-Reg Autonous Institute)
Phone: 08272 220606 Website: www.kimskodagu.kar.nic.in
Ref:No. DME/2024-25/IND: Date: 10.12.2024

TENDER NOTIFICATION

Under signed invites e-tender notification in two Bid system from eligible Manufactures/Suppliers/ Authorized Dealers through e-procurement portal GOK, https://kppp.karnataka.gov.in with EMD for the supply of HNS & other Stationary items to KOIMS and Teaching Hospital, KOIMS, Madikeri, for more information contact e-procurement portal or office of the undersigned.

e-mail: directormckodagu@gmail.com

Sd/-
Director and Dean
Kodagu Institute of Medical Sciences,
Madikeri, 571201

ಉಪನಿರ್ದೇಶಕರು(ಅಭಿವೃದ್ಧ) ಹಾಗೂ ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)ಸಿ.ಬಿ ಬಳ್ಳಾರಿ.
ಮೊ.ಸಂ:9448999360, ದೂರವಾಣಿ & ಫ್ಯಾಕ್ಸ್ : 08392-241070.
ಇ-ಮೇಲ್ ಐಡಿ: diet.bellary@gmail.com

All in one Computer, 2Kv UPS with Battery & 2 Mini MFD Printer with Scanner ಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಅರ್ಜಿ

2024-25ನೇ ಸಾಲಿಗೆ TALP ಮಾದರಿಯ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲು ಬಳ್ಳಾರಿ/ವಿಜಯನಗರ ಜಿಲ್ಲೆಯಲ್ಲಿ ಒಟ್ಟು 10 ಪ್ರೌಢ ಶಾಲೆಗಳಿಗೆ **All in one Computer, 2Kv UPS with Battery & 2 Mini MFD Printer with Scanner.** ಗಳನ್ನು ವೆಚ್ಚ ರೂ.63.00 ಲಕ್ಷಗಳಲ್ಲಿ ಸರಬರಾಜು ಮಾಡಲು ಅರ್ಹ ಟೆಂಡರ್‌ದಾರರಿಂದ ಟೆಂಡರ್ ಕರೆಯಲಾಗಿದೆ. **(DPI/2024-25/IND0389)** ಪ್ರಯುಕ್ತ ಆಸಕ್ತರು ದಿನಾಂಕ: **10.12.2024** ರಿಂದ ದಿನಾಂಕ: **24.12.2024** ರ ಸಂಜೆ 5.00 ಗಂಟೆಯ ಒಳಗಾಗಿ **https://kppp.karnataka.gov.in** ನಲ್ಲಿ ಸಲ್ಲಿಸುವುದು. ದಿನಾಂಕ: **26.12.2024** ರಂದು ಸಂಜೆ 5.10ಕ್ಕೆ ತಾಂತ್ರಿಕ ಬಿಡ್‌ನ್ನು ಹಾಗೂ ದಿನಾಂಕ: **27.12.2024**ರಂದು (ಸಾಂಭಾವ್ಯ ದಿನಾಂಕ) ಸಂಜೆ 5.10 ಗಂಟೆಗೆ ಆರ್ಥಿಕ ಬಿಡ್‌ನ್ನು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ 08392-241070ಗೆ ಸಂಪರ್ಕಿಸಲುಕೋರಿದೆ.

ಸಹಿ/-ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು [ಅಭಿವೃದ್ಧಿ]
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಬಳ್ಳಾರಿ
ಡಿಐಪಿಆರ್/ಬಳ್ಳಾರಿ/673/ಕೆಎಸ್‌ಎಂಸಿಎ/2024-25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಗೋಕಾಕ

ಸಂಖ್ಯೆ:ಕೃಮಾಇ/ಕೃಉಮಾಸ(ಗೋ)/ಅಭಿಕೆ/442/2024-25 ದಿನಾಂಕ:12/12/2024

ಇ-ಟೆಂಡರ ಪ್ರಕಟಣೆ

2024-25ನೇ ಸಾಲಿನಲ್ಲಿ ಗೋಕಾಕ ಮುಖ್ಯ ಮಾರುಕಟ್ಟೆ ಪ್ರಾಂಗಣದ ಈ ಕೆಳಕಾಣಿಸಿದ ಕಾಮಗಾರಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್‌ಗಿಟ್ಟ ಮೊತ್ತ ಜಿ.ಎಸ್.ಟಿ. ಹೊರತು ಪಡಿಸಿ (ಲಕ್ಷಗಳಲ್ಲಿ)	ಪ್ರಿ ಬಿಡ್ ದಿನಾಂಕ ಮತ್ತು ಸಮಯ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ	
					ತಾಂತ್ರಿಕ ಬಿಡ್	ಆರ್ಥಿಕ ಬಿಡ್
1	Supplying, Installing, Commissioning, Stamping as per Technical Specification of Electronic Weigh bridge (80MT Capacity) including all necessary Civil (Foundation, Ramp, Control room, Approach road etc.,) AT MMY GOKAK of APMC, GOKAK.	60.80	24/12/2024 ಬೆಳಿಗ್ಗೆ 11:30 ಗಂಟೆಗೆ	30/12/2024 ಸಂಜೆ 5:30 ಗಂಟೆಗೆ	01/01/2025 ಬೆಳಿಗ್ಗೆ 11:30 ಗಂಟೆಗೆ	10/01/2025 ಸಂಜೆ 4:30 ಗಂಟೆಗೆ

ಇ.ಎಂ.ಡಿ. ಮೊತ್ತ ಹಾಗೂ ಟೆಂಡರ್ ಷರತ್ತು ಹಾಗೂ ನಿಬಂಧನೆಗಳು ಇ-ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ http://www.kppp.karnataka.gov.in ವೆಬ್ ಸೈಟ್‌ನಲ್ಲಿ ಹಾಗೂ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080-22501216/25501227 ಪಡೆಯಬಹುದಾಗಿದೆ.

DIPR/BGM/1283/2023-24

ಸಹಿ/-
ಕಾರ್ಯದರ್ಶಿ,
ಕೃಉಮಾಸ, ಗೋಕಾಕ

ಸಹಿ/-
ಆಡಳಿತಾಧಿಕಾರಿಗಳು
ಕೃಉಮಾಸ, ಗೋಕಾಕ

ಹುಟ್ಟೂರಿನಲ್ಲಿ ಅಂತಿಮ ನಮನ | ಅಂತ್ಯಕ್ರಿಯೆಯಲ್ಲಿ ಪಕ್ಷಾತೀತರಾಗಿ ಪಾಲ್ಗೊಂಡ ಗಣ್ಯರು

ಮದ್ದೂರ ಸಾರಥಿಗೆ ಕಣ್ಣೀರ ವಿದಾಯ

ಮದ್ದೂರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಮತ್ತು ರಾಜ್ಯದ ಹಿರಿಯ ನಾಯಕ ಉಪಸ್ಥಿತಿಯಲ್ಲಿ ರಾಜಕೀಯ ಅಜಾತಶತ್ರು, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು. ಪಕ್ಷಭೇದವಿಲ್ಲದೆ ಎಲ್ಲ ರಾಜಕೀಯ ಪಕ್ಷಗಳ ನಾಯಕರು, ಧಾರ್ಮಿಕ ಮುಖಂಡರು ಹಾಜರಿದ್ದು ಅಗಲಿದ ನಾಯಕನಿಗೆ ಅಂತಿಮ ಗೌರವ ಸಲ್ಲಿಸಿದರು.

ತಾಲೂಕಿನ ಕೊಪ್ಪ ಮತ್ತಿತರೆಡೆ ವರ್ತಕರು, ವ್ಯಾಪಾರಸ್ಥರು, ಸ್ವಯಂ ಪ್ರೇರಿತ ಬಂದ್ ಮಾಡುವ ಮೂಲಕ ಅಗಲಿದ ನಾಯಕನಿಗೆ ಅಂತಿಮ ನಮನ ಸಲ್ಲಿಸಿದರು. ಜತೆಗೆ ಸರಕಾರಿ ಕಚೇರಿಗಳು, ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು.

ಬ್ಯಾರಿಕೇಡ್ ವ್ಯವಸ್ಥೆ: 200 ಮೀ. ಅಂತರದಿಂದ ಸಾರ್ವಜನಿಕರ ದರ್ಶನ ಸಂಬಂಧ ಬ್ಯಾರಿಕೇಡ್ ವ್ಯವಸ್ಥೆ ಕಲ್ಪಿಸುವ ಜತೆಗೆ ಎಸ್.ಎಂ.ಕೃಷ್ಣ ಅವರ ಅಂತಿಮ ದರ್ಶನಕ್ಕೆ ಅಚ್ಚುಕಟ್ಟಾದ ವ್ಯವಸ್ಥೆ ಕೈಗೊಳ್ಳುವ ಜತೆಗೆ ಅಷ್ಟೇ ಪ್ರಮಾಣದಲ್ಲಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಮದ್ದೂರು ತಾಲೂಕಿನ ಸೋಮನ ಹಳ್ಳಿ ಗ್ರಾಮಕ್ಕೆ ಮಧ್ಯಾಹ್ನ ಎರಡು ಗಂಟೆಗೆ ಎಸ್.ಎಂ.ಕೃಷ್ಣ ರವರ ಪಾರ್ಥಿವ ಶರೀರ ಆಗಮಿಸಿತು. ಸ್ಥಳದಲ್ಲಿದ್ದ ಸ್ಥಳೀಯ ಗ್ರಾಮಸ್ಥರು, ಸಾರ್ವಜನಿಕರು, ಅಭಿಮಾನಿಗಳು, ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರವನ್ನು ಕಣ್ತುಂಬಿಕೊಂಡು ಗೌರವ ಸಲ್ಲಿಸಿದರು.

ಕೋಲೂರು ಮಾರ್ಗ:

ನೆರೆಯ ಚನ್ನಪಟ್ಟಣ ತಾಲೂಕಿನ ಕೋಲೂರು ಮಾರ್ಗವಾಗಿ ಮಂಡ್ಯ ಜಿಲ್ಲೆ ಮದ್ದೂರು ಗಡಿಗ್ರಾಮ ನಿಡಘಟ್ಟಕ್ಕೆ ಮಧ್ಯಾಹ್ನ 2 ಗಂಟೆಗೆ ಆಗಮಿಸಿದ ಪಾರ್ಥಿವ ಶರೀರವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಕೆ.ಎಂ.ಉದಯ, ದಿನೇಶ್ ಗೂಳೀಗೌಡ, ರವಿಕುಮಾರ್, ಜಿಲ್ಲಾಡಳಿತದ ಪರವಾಗಿ ಜಿಲ್ಲಾಧಿಕಾರಿ ಡಾ.ಕುಮಾರ್, ದಕ್ಷಿಣ ವಲಯ ಐ.ಜಿ.ಪಿ ಡಾ.ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಮದ್ದೂರು ತಹಸೀಲ್ದಾರ್ ಡಾ.ಸ್ಮಿತಾ ಬರಮಾಡಿಕೊಂಡು ದಾರಿಯುದ್ದಕ್ಕೂ ನೆರೆದಿದ್ದ ಸ್ಥಳೀಯ ಗ್ರಾಮದ ನಿವಾಸಿಗಳು ಎಸ್.ಎಂ.ಕೃಷ್ಣ ರವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಅಂತ್ಯಕ್ರಿಯೆ: ತಾಲೂಕಿನ ಸೋಮನಹಳ್ಳಿಯ ಬೆಂಗಳೂರು-ಮೈಸೂರು ಹೆದ್ದಾರಿ ಬದಿಯ ಎಸ್.ಎಂ.ಕೃಷ್ಣ ಅವರಿಗೆ ಸೇರಿದ 2.20 ಎಕರೆ ಜಮೀನಿನಲ್ಲಿ ಸಿದ್ಧಪಡಿಸಿದ್ದ 80x100 ಅಳತೆಯ ಜರ್ಮನ್ ಟೆಂಟ್ ಅಡಿಯಲ್ಲಿ ಗಣ್ಯರು ಸಾರ್ವಜನಿಕರು ಮತ್ತು ಎಸ್.ಎಂ.ಕೃಷ್ಣ ಅವರ ಕುಟುಂಬ ಸದಸ್ಯರಿಗೆ ಸಾವಿರ ಆಸನಗಳ ವ್ಯವಸ್ಥೆ ಅಣಿಗೊಳಿಸಲಾಗಿತ್ತು.

ಅಶ್ರುತರ್ಪಣ: ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ಪಕ್ಷಾತೀತವಾಗಿ ಆಗಮಿಸಿದ್ದ ಎಸ್.ಎಂ.ಕೃಷ್ಣ ಅವರ ಅಭಿಮಾನಿಗಳು, ಗಣ್ಯರು, ವಿವಿಧ ರಾಜಕೀಯ ಪಕ್ಷಗಳ ಚುನಾಯಿತ ಸದಸ್ಯರು, ಮುಖಂಡರು ಭಾಗಿಯಾಗಿ ಅಗಲಿದ ನಾಯಕನಿಗೆ ಅಶ್ರುತರ್ಪಣ ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ ಕೃಷ್ಣ ಅವರ ಪಾರ್ಥಿವ ಶರೀರವನ್ನು ಅಂತಿಮ ಸಂಸ್ಕಾರಕ್ಕೆ ಮದ್ದೂರಿಗೆ ಕೊಂಡೊಯ್ಯುವ ಮುನ್ನ ಸದಾಶಿವನಗರ ನಿವಾಸದಲ್ಲಿ ಪತ್ನಿ ಪ್ರೇಮಾ ಕೃಷ್ಣ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಕುಟುಂಬ ಸದಸ್ಯರು ಆದಿ ಚುಂಚನಗಿರಿ ಮಹಾಸಂಸ್ಥಾನದ ನಿರ್ಮಲಾನಂದ ಶ್ರೀಗಳ ಸಮ್ಮುಖದಲ್ಲಿ ಅಂತಿಮ ವಿಧಿ ನೆರವೇರಿಸಿದರು.

ನಿರೂಪಕರಾದ ಡಿಸಿಎಂ

ಪಾರ್ಥಿವ ಶರೀರದ ಅಂತ್ಯ ಸಂಸ್ಕಾರ ನೆರವೇರುವವರೆಗೆ ಸರಿಸುಮಾರು 4 ಗಂಟೆಗೂ ಹೆಚ್ಚುಕಾಲ ಗಣ್ಯರು, ಸಾರ್ವಜನಿಕರು, ಕುಟುಂಬ ಸದಸ್ಯರು ಹಾಗೂ ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸ್ ಸಿಬ್ಬಂದಿಯನ್ನು ನಿಯಂತ್ರಿಸುವಲ್ಲಿ ಸ್ವತಃ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಮುಂದಾಗುವ ಜತೆಗೆ ಪೂರ್ಣ ಅವಧಿಯುದ್ದಕ್ಕೂ ಮೈಕ್ ಹಿಡಿದು ಧ್ವನಿ ವರ್ಧಕದ ಮೂಲಕ ಸೂಚನೆ ನೀಡುತ್ತಾ ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದಂತೆ ನಿರೂಪಕರಾದರು.

ಕುಡಿಯುವ ನೀರು, ಕಾಫಿ, ಊಟದ ವ್ಯವಸ್ಥೆ

ಅಂತಿಮ ಕ್ರಿಯೆ ವಿಧಿ ವಿಧಾನಗಳ ಹಿನ್ನೆಲೆಯಲ್ಲಿ ಹಾಜರಿದ್ದ ಗಣ್ಯರು, ಸಾರ್ವಜನಿಕರಿಗೆ ಬೆಳಿಗ್ಗೆ 10 ಗಂಟೆಯಿಂದಲೇ ಕುಡಿಯುವ ನೀರು, ಕಾಫಿ, ಟೀ ವ್ಯವಸ್ಥೆ ಜತೆಗೆ ಅಂತ್ಯಕ್ರಿಯೆ ಮುಕ್ತಾಯದ ಬಳಿಕವೂ ಸರಕು ಸಾಗಣೆ ವಾಹನದಲ್ಲಿ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡ ಸಾರ್ವಜನಿಕರಿಗೆ ಊಟ ಮತ್ತು ನೀರಿನ ವಿತರಣೆ ಮಾಡಲಾಯಿತು.

ಗಣ್ಯರು ಭಾಗಿ

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಮುಖ್ಯಮಂತ್ರಿ ಡಿ.ಕೆಶಿವಕುಮಾರ್, ಕೇಂದ್ರ ಸಚಿವರಾದ, ಪ್ರಲ್ಹಾದ್ ಜೋಶಿ, ಎಚ್.ಡಿ.ಕುಮಾರಸ್ವಾಮಿ, ಸಚಿವ ಎನ್.ಚಲುವರಾಯಸ್ವಾಮಿ, ಸಭಾಪತಿ ಯು.ಟಿ.ಖಾದರ್, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ , ಸಂಸದರಾದ ಬಸವರಾಜು ಬೊಮ್ಮಾಯಿ, ಡಿ.ಸುಧಾಕರ್ ಸೇರಿದಂತೆ ಸಚಿವ ಸಂಪುಟದ ಬಹುತೇಕ ಸಚಿವರು, ಶಾಸಕರು, ಮಾಜಿ ಸಚಿವರು, ಎಸ್.ಎಂ.ಕೃಷ್ಣ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.

ಕಳೇಬರಕ್ಕೆ ಹೆಗಲು ಕೊಟ್ಟ ಡಿ.ಕೆ. ಬ್ರದರ್ಸ್

ಮಂಡ್ಯದ ಸೋಮನಹಳ್ಳಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಯಡಿಯೂರಪ್ಪ ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವನ್ನಿಟ್ಟು ಅಂತಿಮ ನಮನ ಸಲ್ಲಿಸಿದರು.

ನಾನಾ ರಾಜಕೀಯ ಮುಖಂಡರಿಂದ ಅಂತಿಮ ದರ್ಶನ | ಜಿಲ್ಲಾಡಳಿತದಿಂದ ದರ್ಶನಕ್ಕೆ ಸಕಲ ವ್ಯವಸ್ಥೆ | ಘೋಷಣೆಗಳು ಕೂಗಿ ಅಭಿಮಾನ ಮೆರೆದ ಜನ

ಅಂತಿಮ ನಮನ ಸಲ್ಲಿಸಿದ ರಾಮನಗರ ಜನತೆ

ರಾಮನಗರ: ಜಿಲ್ಲೆ ಮೂಲಕ ಮಂಡ್ಯಕ್ಕೆ ಹೋದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಪಾರ್ಥೀವ ಶರೀರದ ಅಂತಿಮ ದರ್ಶನವನ್ನು ಬುಧವಾರ ಜಿಲ್ಲೆಯ ಜನಪ್ರತಿನಿಧಿಗಳು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಕಾರ್ಯಕರ್ತರು ಸಂಘ-ಸಂಸ್ಥೆ, ಸಂಘಟನೆಗಳ ಪದಾಧಿಕಾರಿಗಳು, ಸರಕಾರಿ ಅಧಿಕಾರಿಗಳು ಹಾಗೂ ಸಾರ್ವಜನಿಕರು ಪಡೆದರು.

ಬೆಂಗಳೂರಿನ ಸದಾಶಿವನಗರದಲ್ಲಿರುವ ಕೃಷ್ಣ ಅವರ ನಿವಾಸದಿಂದ ಬೆಳಿಗ್ಗೆ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಸೋಮನಹಳ್ಳಿಗೆ ಗಾಜಿನ ವಾಹನದಲ್ಲಿ ಪಾರ್ಥೀವ ಶರೀರ ತೆಗೆದುಕೊಂಡು ಹೋಗಲಾಯಿತು. ಜಿಲ್ಲೆ ಮಾರ್ಗವಾಗಿ ಹೊರಟ ಶರೀರದ ಅಂತಿಮ ದರ್ಶನಕ್ಕೆ ಬಿಡದಿ, ರಾಮನಗರ ಹಾಗೂ ಚನ್ನಪಟ್ಟಣದಲ್ಲಿ ಜಿಲ್ಲಾಡಳಿತವು ಪೆಂಡಾಲ್ ಹಾಕಿಸಿ, ಸರದಿಯಲ್ಲಿ ದರ್ಶನ ಪಡೆಯಲು ಬ್ಯಾರಿಕೇಡ್ ಹಾಕಿ ವ್ಯವಸ್ಥೆ ಮಾಡಲಾಗಿತ್ತು.

ವಾಹನವು ಐಜೂರು ವೃತ್ತಕ್ಕೆ 11.05ಕ್ಕೆ ಬಂದಿತು. ಅಷ್ಟೊತ್ತಿಗಾಗಲೇ ಜಮಾಯಿಸಿದ ಜನಪ್ರತಿನಿಧಿಗಳು, ರಾಜಕಾರಣಿಗಳು, ಮುಖಂಡರು, ಕಾರ್ಯಕರ್ತರು, ಅಧಿಕಾರಿಗಳು, ಸಾರ್ವಜನಿಕರು, ಅಭಿಮಾನಿಗಳಿಗೆ ಪಾರ್ಥೀವ ಶರೀರದ ದರ್ಶನಕ್ಕೆ 15 ನಿಮಿಷ ಅವಕಾಶ ನೀಡಲಾಯಿತು. ಜನರು ಎಸ್.ಎಂ. ಕೃಷ್ಣ ಅವರಿಗೆ ಜಯವಾಗಲಿ' ಎಂದು ಘೋಷಣೆಗಳನ್ನು ಕೂಗಿ ಅಭಿಮಾನ ಮೆರೆದರು.

ಬಿಜಿಎಸ್ ವೃತ್ತದಲ್ಲಿ ವ್ಯವಸ್ಥೆ; ಬಿಡದಿಯನ್ನು ಬೆಳಗ್ಗೆ 10 ಗಂಟೆಗೆ ಪ್ರವೇಶಿಸಿದ ಪಾರ್ಥೀವ ಶರೀರದ ವಾಹನವನ್ನು ಬಿಜಿಎಸ್ ವೃತ್ತದಲ್ಲಿ 10 ನಿಮಿಷ ನಿಲ್ಲಿಸಿ, ಸಾರ್ವಜನಿಕರ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ನಂತರ ಅಲ್ಲಿಂದ ಹೊರಟ ವಾಹನವು 10.45ರ ಸುಮಾರಿಗೆ ರಾಮನಗರ ಪ್ರವೇಶಿಸಿತು. ಅಂಬೇಡ್ಕರ್ ನಗರ, ಗಾಂಧಿನಗರ, ರೇಷ್ಮೆ ಮಾರುಕಟ್ಟೆ ಬಳಿ ಅಂತಿಮ ದರ್ಶನಕ್ಕೆ ಜನ ಜಮಾಯಿಸಿದ್ದರಿಂದ ಅಲ್ಲಿ ವಾಹನವನ್ನು ನಿಧಾನಗೊಳಿಸಲಾಯಿತು.

ಅಶ್ರುತರ್ಪಣ

ಸಂಸ್ಕಾರವಂತ ಮನುಷ್ಯ ಹೇಗಿರಬೇಕು ಎಂಬುದಕ್ಕೆ ಎಸ್ ಎಂ ಕೃಷ್ಣ ಮಾದರಿಯಾಗಿದ್ದರು. ಅವರ ರಾಜಕೀಯ ಹಾಗೂ ಖಾಸಗಿ ಜೀವನದಲ್ಲಿ ಒರಟಾಗಿ, ಏಕವಚನದಲ್ಲಿ ಮಾತನಾಡಿದ್ದು ನಾವು ನೋಡಿಲ್ಲ, ರಾಜಕಾರಣಿ ಪಡೆಯದಂತಹ ಸ್ಥಾನ, ಗೌರವ ಪಡೆದಿದ್ದಾರೆ.

ಜೆಸಿ ಮಾಧುಸ್ವಾಮಿ, ಮಾಜಿ ಸಚಿವ

ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರ ನಿಧನ ನನಗೆ ವೈಯಕ್ತಿಕವಾಗಿ ನೋವು ತಂದಿದೆ. ಅವರಿಗೆ ನಾವು ಸಕಾಲೀನರಲ್ಲ, ನಾವು ಕಿರಿಯರು. ಅವರಿಂದ ಹಲವು ರೀತಿಯಲ್ಲಿ ಮಾರ್ಗದರ್ಶನ ಪಡೆದಿದ್ದೇನೆ. ಬೆಂಗಳೂರು ನಗರ ಅಭಿವೃದ್ಧಿ, ಐಟಿ ಬಿಟಿ ಕೊಡುಗೆ ಅಪಾರ. ನಮ್ಮ ರಾಜ್ಯದ ಇತಿಹಾಸದಲ್ಲಿ ಕೃಷ್ಣ ಅವರು ಚಿರಸ್ಥಾಯಿಯಾಗಿ ಉಳಿಯಲಿದ್ದಾರೆ.

– ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಕರ್ನಾಟಕ ಕಂಡ ಅತ್ಯುತ್ತಮ ಮುಖ್ಯಮಂತ್ರಿಗಳಲ್ಲಿ ಒಬ್ಬರಾಗಿದ್ದ ಹಿರಿಯರು, ಮುತ್ಸದ್ದಿಗಳಾದ ಎಸ್.ಎಂ.ಕೃಷ್ಣ ಅವರು ನಮ್ಮನ್ನು ಅಗಲಿರುವ ಸುದ್ದಿ ಕೇಳಿ ಬಹಳ ನೋವುಂಟಾಯಿತು. ಅಗಲಿದ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ.

– ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ರಾಜ್ಯಾಧ್ಯಕ್ಷ

ಎಸ್.ಎಂ.ಕೃಷ್ಣ ಅವರ ಅಗಲಿಕೆ ಮಂಡ್ಯದ ಜನತೆಗೆ ಹೆಚ್ಚಾಗಿದೆ. ಮಂಡ್ಯದಲ್ಲಿ 100 ಬೆಡ್ ನ ಹೆರಿಗೆ ಆಸ್ಪತ್ರೆಯನ್ನು ಕಟ್ಟಿಸಲಾಗುತ್ತಿದೆ. ಅದಕ್ಕೆ ಎಸ್.ಎಂ.ಕೃಷ್ಣ ಅವರ ಹೆಸರನ್ನು ಇಡಲು ಸಿಎಂಗೆ ಮನವಿ ಮಾಡಲಾಗಿದೆ. ಮಂಡ್ಯದ ಪಾರ್ಕ್‌ಗೂ ಸಹ ಕೃಷ್ಣ ಅವರ ಹೆಸರಿಡಲು ತೀರ್ಮಾನಿಸಲಾಗುವುದು.

– ಪಿ.ರವಿಕುಮಾರ್ ಗಣಿಗ, ಮಂಡ್ಯ ಶಾಸಕ

ಮುಖ್ಯಮಂತ್ರಿಯಾಗಿ ಬೆಂಗಳೂರಿಗೆ ಐಟಿಬಿಟಿ ಸ್ಪರ್ಶ ನೀಡಿದರು. ಸ್ತ್ರೀಶಕ್ತಿ ಬಲವರ್ಧನೆ, ಮೆಟ್ರೋ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಸೇರಿದಂತೆ ಆಧುನೀಕರ ಕರ್ನಾಟಕ ನಿರ್ಮಾಣಕ್ಕೆ ಬುನಾದಿ ಅವರು. ಎಸ್.ಎಂ.ಕೃಷ್ಣ ಅವರ ರಾಜಕೀಯ ಜೀವನ ಯುವ ರಾಜಕಾರಣಿಗಳಿಗೆ ಮಾದರಿಯಾಗಲಿದೆ.

– ಸಿ.ಎಸ್.ಪುಟ್ಟರಾಜು, ಮಾಜಿ ಸಚಿವ

ಮಂಡ್ಯ ಜಿಲ್ಲೆಯ ಹೆಮ್ಮೆ ಎಸ್.ಎಂ.ಕೃಷ್ಣ ಅವರ ಸಾವಿನ ಸುದ್ದಿ ಕೇಳಿ ಅತೀವ ದುಖ:ವಾಯಿತು. ಸಜ್ಜನರಾಗಿ ಶಿಸ್ತುಬದ್ಧ ಜೀವನ, ಆದರ್ಶ ಪ್ರಾಯ ನಡವಳಿಕೆ ಮೂಲಕ ರಾಜಕೀಯ, ಸಾಮಾಜಿಕ ಜೀವನದಲ್ಲಿ ವಿಭಿನ್ನರಾಗಿದ್ದ ಅವರ ಮಾರ್ಗದರ್ಶನ, ಆಶೀರ್ವಾದ ನಮ್ಮ ಕುಟುಂಬಕ್ಕೆ ದೊರಕಿದ್ದು ಸೌಭಾಗ್ಯವೇ ಸರಿ.

– ಸುಮಲತಾ ಅಂಬರೀಷ್, ಮಾಜಿ ಸಂಸದೆ

ಅಪರೂಪ

ಬಿಕ್ಕಿ ಬಿಕ್ಕಿ ಅತ್ತ ಡಿ.ಕೆ. ಶಿವಕುಮಾರ್

ಎಸ್.ಎಂ.ಕೃಷ್ಣ ಅವರ ಪಾರ್ಥೀವ ಶರೀರಕ್ಕೆ ಪುಷ್ಪ ನಮನ ಸಲ್ಲಿಸುವ ವೇಳೆ ಉಪಮುಖ್ಯಮಂತ್ರಿ ಮತ್ತು ಸಂಬಂಧಿಯೂ ಆದ ಡಿ.ಕೆ. ಶಿವಕುಮಾರ್ ಬಿಕ್ಕಿ ಬಿಕ್ಕಿ ಅತ್ತರು. ಶವ ಪೆಟ್ಟಿಗೆಗೆ ಹೆಗಲು ಕೊಟ್ಟು ನಡೆದ ಡಿ.ಕೆ. ಶಿವಕುಮಾರ್ ಅವರು ನಂತರ ಚಿತೆಯ ಮೇಲೆ ಶ್ರೀಗಂಧದ ತುಂಡುಗಳನ್ನು ಇಟ್ಟು ನಮಿಸಿ ಭಾವುಕರಾದರು. ಅಗ್ನಿಸ್ಪರ್ಶ ಮಾಡಲು ಸಮಯ ಮೀರುತ್ತಿದ್ದ ಕಾರಣ, ಪ್ರಧಾನ ವೈದಿಕ ಭಾನುಪ್ರಕಾಶ್ ಹೊರತುಪಡಿಸಿ, ಚಿತೆ ಕಟ್ಟೆಯ ಮೇಲೆ ನಿಂತಿದ್ದ ಸಂಬಂಧಿಕರು ಮತ್ತು ಪುರೋಹಿತರು ಕೂಡಲೇ ಕೆಳಗಿಳಿಯುವಂತೆ ತಾಕೀತು ಮಾಡಿದರು.

ಡಿ.ಕೆ.ಶಿವಕುಮಾರ್ ತಾವೇ ಮೈಕ್ ಹಿಡಿದು, ಸೂಚನೆ ಕೊಡುತ್ತಾ ಆರಂಭದಿಂದ ಕೊನೆಯವರೆಗೆ ಜನರನ್ನು ನಿಯಂತ್ರಿಸಿದರು. ಕಾಲ ಕಾಲಕ್ಕೆ ಅಂತ್ಯಕ್ರಿಯೆ ವಿಧಿವಿಧಾನಗಳು ನಡೆಯುವಂತೆ ನೋಡಿಕೊಂಡರು. ಜನರು ಗದ್ದಲ ಮಾಡಿದಾಗ ಗದರಿ ನಿಯಂತ್ರಿಸಿದರು.

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ನಿಧನ ಕೇವಲ ಮಂಡ್ಯ ಜಿಲ್ಲೆ ಮಾತ್ರವಲ್ಲದೇ ರಾಜ್ಯಕ್ಕೆ ತುಂಬಲಾರದ ನಷ್ಟ. ಸಿಎಂ ಆಗಿ, ಕೇಂದ್ರ ಮಂತ್ರಿಯಾಗಿ, ಗವರ್ನರ್ ಆಗಿ ಮಾಡಿದ ಸಾಧನೆ ನಿಜಕ್ಕೂ ಅನನ್ಯ. ಇಂತಹ ಮೇರು ವ್ಯಕ್ತಿತ್ವದ ರಾಜಕಾರಣಿ ಮಂಡ್ಯ ಜಿಲ್ಲೆಯವರೆಂಬುದು ನಮಗಿನ್ನೂ ವಿಶೇಷ.

–ಕೆ.ಟಿ.ಶ್ರೀಕಂಠೇಗೌಡ ವಿಧಾನಪರಿಷತ್ ಸದಸ್ಯ

ವಿಶ್ವವಾಣಿ

ಸಂಪಾದಕೀಯ

ಇವರಿಗೆ ಬುದ್ಧಿ ಹೇಳೋರ್‍ಯಾರು?

ಭ್ರಷ್ಟ ಅಧಿಕಾರಿಗಳ ವಿರುದ್ಧದ ಲೋಕಾಯುಕ್ತ ಕಾರ್ಯಾಚರಣೆಯು ಚುರುಕುಗೊಂಡಿರುವುದು ಶ್ಲಾಘನೀಯ ಬೆಳವಣಿಗೆ. ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಯಚೂರು, ಕಲಬುರ್ಗಿ, ಚಿತ್ರದುರ್ಗ, ಕೊಪ್ಪಳ ಜಿಲ್ಲೆಗಳಲ್ಲಿ ವಿವಿಧ ಸ್ತರದ ಅಧಿಕಾರಿಗಳ ಮನೆಗಳ ಮೇಲೆ ಮಂಗಳವಾರ ಏಕಕಾಲಿಕವಾಗಿ ಲೋಕಾಯುಕ್ತ ಅಧಿಕಾರಿಗಳ ದಾಳಿಯಾದ ಸುದ್ದಿಯನ್ನು ಈಗಾಗಲೇ ನೀವು ಓದಿದ್ದೀರಿ. ಹೀಗೆ ನಡೆದ ದಾಳಿ ಮತ್ತು ಪರಿಶೀಲನೆಯ ಸಂದರ್ಭದಲ್ಲಿ ಅಪಾರ ನಗದು ಮತ್ತು ಮಹತ್ವದ ದಾಖಲೆಗಳು, ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಪತ್ತೆಯಾಗಿರುವುದು ವರದಿಯಾಗಿದೆ. ಹೀಗೆ ದಾಳಿಗೊಳಗಾದ ಅಧಿಕಾರಿಗಳ ಪೈಕಿ ಒಬ್ಬರು ಬೆಳಗ್ಗೆ 6 ಗಂಟೆಯಿಂದ 10 ಗಂಟೆಯವರೆಗೆ ಲೋಕಾಯುಕ್ತ ಅಧಿಕಾರಿಗಳಿಗೆ ಮನೆಯ ಬಾಗಿಲು ತೆರೆಯದೆ ಸತಾಯಿಸಿರುವುದೂ ತಿಳಿದುಬಂದಿದೆ. ಇವೆಲ್ಲ ಏನನ್ನು ಹೇಳುತ್ತವೆ ಎಂಬುದು ಸ್ಪಷ್ಟಗೋಚರ. ಭ್ರಷ್ಟಾಚಾರ, ಲಂಚಗುಳಿತನ, ಅಕ್ರಮ ವ್ಯವಹಾರ ಹೀಗೆ ನಮ್ಮ ಅಧಿಕಾರಿಶಾಹಿಯನ್ನು ಅಮರಿಕೊಂಡಿರುವ ವ್ಯಾಧಿಗಳು ಒಂದೆರಡಲ್ಲ. ಇವುಗಳ ನಿವಾರಣೆಯಾಗದ ಹೊರತು ವ್ಯವಸ್ಥೆ ಆರೋಗ್ಯದಿಂದ ನಳನಳಿಸದು. ಆದಾಯಕ್ಕೆ ಮೀರಿದ ಆಸ್ತಿ, ಹಣ, ಸಂಪತ್ತನ್ನು ಹೊಂದಿದ್ದು ಅದು ಲೋಕಾಯುಕ್ತ ಅಧಿಕಾರಿಗಳಿಗೆ ಗೊತ್ತಾದರೆ ಸಂಕಷ್ಟ ತಪ್ಪಿದ್ದಲ್ಲ ಹಾಗೂ ತರುವಾಯದ ಬೆಳವಣಿಗೆಗಳಿಂದ ಮರ್ಯಾದೆ ಮಣ್ಣುಪಾಲಾಗುತ್ತದೆ ಎಂಬ ಕಹಿವಾಸ್ತವವನ್ನು ಅರಿತಿದ್ದರೂ, ಕೆಲವರು ಭ್ರಷ್ಟಾಚಾರಕ್ಕೆ ಮತ್ತು ಲಂಚಗುಳಿತನಕ್ಕೆ ಒಡ್ಡಿಕೊಳ್ಳುವುದೇಕೋ ಗೊತ್ತಾಗುತ್ತಿಲ್ಲ. ಪ್ರಾಮಾಣಿಕವಾಗಿ ಮತ್ತು ಪರಿಶ್ರಮದಿಂದ ದುಡಿದ ಹಣ ಮಾತ್ರವೇ ಕೈಯಲ್ಲಿ ಉಳಿಯುವುದು; ಮಿಕ್ಕದ್ದೆಲ್ಲಾ ಯಾವತ್ತಾದರೂ ಒಂದು ದಿನ ಕೈಬಿಟ್ಟು ಹೋಗುವಂಥದ್ದೇ ಎಂಬ ಸರಳ ಸತ್ಯವನ್ನು ಕೆಲವರು ಅರ್ಥಮಾಡಿಕೊಳ್ಳುವವರೆಗೆ ಇಂಥ ದಾಳಿಗಳು ನಡೆಯುತ್ತಲೇ ಇರಬೇಕಾಗುತ್ತದೆ ಎನಿಸುತ್ತದೆ. 'ಕಂಡವರ ಕಾಸು ಅಥವಾ ಅಕ್ರಮ ಸಂಪಾದನೆ ಅಮೇಧ್ಯಕ್ಕೆ ಸಮ' ಎಂಬ ಮಾತನ್ನು ನಮ್ಮ ಮನೆಗಳಲ್ಲಿ ಹಳೆಯ ತಲೆಗಳು ಈಗಲೂ ಹೇಳುವುದನ್ನು ನೀವು ಕೇಳಿರಬಹುದು. ಆದರೆ ಭ್ರಷ್ಟ ಅಧಿಕಾರಿಗಳಿಗೆ ಅಕ್ರಮ ಸಂಪಾದನೆಯೇ ರುಚಿಹತ್ತಿಸಿದೆ ಎನಿಸುತ್ತದೆ. ಇವರಿಗೆ ಬುದ್ಧಿ ಹೇಳೋರ್‍ಯಾರು?

ಸೊಂಪಾದಕೀಯ

KNOW ಪಾರ್ಕಿಂಗ್

ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಮತ್ತು ಪಾರ್ಕಿಂಗ್‌ನದ್ದೇ ಸಮಸ್ಯೆ. ನಗರ ಬೆಳೆಯುತ್ತಿದ್ದಂತೆ ಜನರ ಕೈಯಲ್ಲಿ ದುಡ್ಡು ಓಡಾಡುತ್ತದೆ, ಹಾಗಾಗಿ ಜನ ಗಾಡಿಗಳಲ್ಲಿ ಓಡಾಡೋದು ಜಾಸ್ತಿ ಆಗುತ್ತೆ ಅನ್ನೋದು ಸಹಜ. ಆದರೆ, ಇದರಿಂದ ಟ್ರಾಫಿಕ್ ಜಾಮ್ ಮತ್ತು ಪಾರ್ಕಿಂಗ್ ಸಮಸ್ಯೆಯೂ ಬೆಳೆಯುತ್ತದೆ. ಟ್ರಾಫಿಕ್ ಜಾಮ್ ಸಮಸ್ಯೆಯನ್ನು ಹೇಗೋ ನಿಭಾಯಿಸಬಹುದು. ಆದರೆ ಹೊರಗೆ ಬೈಕ್ ಕಾರುಗಳನ್ನು ತೆಗೆದುಕೊಂಡು ಹೋದಾಗ ಕೆಲವೊಮ್ಮೆ ಪಾರ್ಕಿಂಗ್ ಮಾಡೋಕೇ ಎಷ್ಟೋ ಸಮಯ ವೇಸ್ಟ್ ಮಾಡಬೇಕಾಗುತ್ತದೆ. ಹಾಗಾಗಿ ಈ ಪಾರ್ಕಿಂಗ್ ವಿಷ್ಯದಲ್ಲಿ ನಿಯಮಗಳನ್ನು ಬ್ರೇಕ್ ಮಾಡೋರು ತುಂಬಾ ಜನ. ಆದರೆ ಇದಕ್ಕೆಲ್ಲಾ ಬ್ರೇಕ್ ಹಾಕೋಕೆ ಪೊಲೀಸರು ಟ್ರಾಫಿಕ್ ನಿಯಮಗಳನ್ನು ಸ್ಟ್ರಿಕ್ಟ್ ಮಾಡುತ್ತಲೇ ಬಂದಿದ್ದಾರೆ. ಈಗ ಈ ಪಾರ್ಕಿಂಗ್ ನಿಯಮ ಮುರಿಯುವವರು ಈ ಸುದ್ದಿ ಕೇಳಿ ಮೂಗು ಮುರಿಯಬಹುದು ಅನ್ನೋ ವಿಷಯ ಇಲ್ಲಿದೆ. ಇನ್ನು ಮುಂದೆ, ಎಲ್ಲೆಂದರಲ್ಲಿ ಪಾರ್ಕ್ ಮಾಡೋದು ಹೀಗೆ ಪಾರ್ಕಿಂಗ್ ನಿಯಮಗಳನ್ನು ಮುರಿಯೋ ಕೆಲಸ ಮಾಡಿದರೆ, ಜೈಲಿನಲ್ಲಿ ಮುದ್ದೆ ಮುರಿಯುವ ಪರಿಸ್ಥಿತಿ ಬಂದರೂ ಬರಬಹುದು. ಮೊದಲು ಮತ್ತು ಎರಡನೇ ಬಾರಿಗೆ ರೂಲ್ಸ್ ಬ್ರೇಕ್ ಮಾಡಿ ಪಾರ್ಕಿಂಗ್ ಮಾಡಿದರೆ ಎಂದಿನಂತೆ ಮುಚ್ಕೊಂಡು ಫೈನ್ ಕಟ್ಟಬೇಕು. ಆದರೆ ಮೂರನೇ ಬಾರಿ ರಿಪೀಟ್ ಆದ್ರೆ, ಇನ್ನು ಮುಂದೆ ಹೀಗೆ ಮಾಡಲ್ಲ ಅಂತ ಮುಚ್ಚಳಿಕೆ ಬರೆದುಕೊಡಬೇಕಂತೆ. ಆದರೆ ಈ ಮುಚ್ಚಳಿಕೆಗೆ ಭಾರಿ ಮಹತ್ವ ಇದೆ. ಇದನ್ನು ಬರೆದುಕೊಟ್ಟ ನಂತರ ಮತ್ತೆ ನೀವು ಮಾಡಬಾರದ ಜಾಗದಲ್ಲಿ ಪಾರ್ಕಿಂಗ್ ಮಾಡಿ ಸಿಕ್ಕಿಬಿದ್ದರೆ, ಜೈಲಿನಲ್ಲಿ ಬಾಡಿ ಪಾರ್ಕಿಂಗ್ ಮಾಡಬೇಕಾಗುತ್ತದೆ. ಹೊಸ ನಿಯಮದ ಪ್ರಕಾರ ಮುಚ್ಚಳಿಕೆ ಬರೆದುಕೊಟ್ಟ ನಂತರವೂ ಮತ್ತೆ ತಪ್ಪು ಮಾಡಿದರೆ, 50 ಸಾವಿರದಿಂದ 1 ಲಕ್ಷ ರುಪಾಯಿವರೆಗಿನ ದಂಡ ವಿಧಿಸಲಾಗುತ್ತದೆ. ದಂಡ ಕಟ್ಟಲು ಆಗದಿದ್ದರೆ ತಟ್ಟೆ, ಲೋಟದೊಂದಿಗೆ ಜೈಲೂಟ ಗ್ಯಾರಂಟಿ. ಈಗಾಗಲೇ ಹಲವರ ಬಳಿ ಪೊಲೀಸರು ಇಂಥ ಮುಚ್ಚಳಿಕೆ ಬರೆಸಿಕೊಂಡಿದ್ದಾರಂತೆ. ಫುಟ್‌ಪಾತ್ ಮೇಲೆ ನಿಯಮ ಮೀರಿ ಪಾರ್ಕ್ ಮಾಡುವವರಿಗಷ್ಟೇ ಅಲ್ಲದೆ, ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುವವರಿಗೂ ಈ ನಿಯಮ ಅನ್ವಯಿಸುತ್ತದೆ ಎನ್ನಲಾಗಿದೆ. ಆದರೆ ಬೇರೆ ಕಡೆ ಜಾಗ ಸಿಗದೆ, ಎಷ್ಟೋ ವರ್ಷಗಳಿಂದ ಫುಟ್‌ಪಾತ್ ಮೇಲೆಯೇ ವ್ಯಾಪಾರ ಮಾಡಿ ಜೀವನ ಮಾಡುತ್ತಿರುವ ಬೀದಿ ಬದಿ ವ್ಯಾಪಾರಿಗಳು ಈ ನಿಯಮ ಕೇಳಿ, 'ಮೈ ಫುಟ್' ಅಂತ ಶಾಪ ಹಾಕುತ್ತಿದ್ದಾರಂತೆ.

ಸಂಪಾದಕರ ಸದ್ಯಶೋಧನೆ

ಈ ದೇಶದ ಹೆಸರು ಕೇಳಿದ್ದೀರಾ?

ನಾನು ಇಲ್ಲಿ ತನಕ ಆಫ್ರಿಕಾ ಖಂಡದಲ್ಲಿರುವ ಚಾಡ್ ಎಂಬ ದೇಶಕ್ಕೆ ಹೋಗಿದ್ದೇನೆ, ನೋಡಿದ್ದೇನೆ ಎಂದು ಹೇಳಿದ್ದನ್ನು ಕೇಳಿಲ್ಲ. ಪತ್ರಿಕೆಗಳಲ್ಲೂ ಈ ದೇಶದ ಬಗ್ಗೆ ಪ್ರಕಟವಾದ ಪರಿಚಯಾತ್ಮಕ, ಪ್ರವಾಸೋದ್ಯಮ ಸಂಬಂಧಿ ಲೇಖನಗಳನ್ನು ಓದಿಲ್ಲ. ಈ ದೇಶದ ವಿದ್ಯಮಾನದ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಯನ್ನೂ ಓದಿದ ನೆನಪಿಲ್ಲ. ಆ ದೇಶ ಯಾವ ಕಾರಣಕ್ಕೂ ಸುದ್ದಿಯಾದದ್ದಿಲ್ಲ. ಅದು ಒಳ್ಳೆಯ ಕಾರಣವಿರಬಹುದು, ಕೆಟ್ಟದ್ದಿರಬಹುದು (2 ವರ್ಷಗಳ ಹಿಂದೆ ಆ ದೇಶದ ಅಧ್ಯಕ್ಷನ ಹತ್ಯೆಯಾದಾಗ ಸಣ್ಣ ಸುದ್ದಿ ಓದಿದ ನೆನಪು). ಚಾಡ್ ಹೊರಜಗತ್ತಿಗೆ ಅಪರಿಚಿತವೇ. ಆಫ್ರಿಕಾ ಖಂಡದಲ್ಲೂ ಅದು ಅಷ್ಟು ಪರಿಚಿತವಲ್ಲ. ಒಂದು ದೇಶ ಈ ರೀತಿ ಅಜ್ಞಾತವಾಗಿರುವುದು ಸೋಜಿಗವೇ. ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ, ಸುಡಾನ್, ಆಲ್ಜೀರಿಯಾ, ಈಜಿಪ್ಟ್, ಲಿಬಿಯಾ, ಅಂಗೋಲಾವನ್ನು ಬಿಟ್ಟರೆ ಭೂಪ್ರದೇಶದಲ್ಲಿ ಚಾಡ್ ದೊಡ್ಡದು. ಅದು ಬೇರೆ ದೇಶಗಳಿಂದ ಸುತ್ತುವರಿದಿರುವ ದೇಶ. ಇದನ್ನು Land-locked Country ಎಂದು ಕರೆಯುತ್ತಾರೆ. ಅಂದರೆ ಆ ದೇಶವನ್ನು ಲಿಬಿಯಾ, ಸುಡಾನ್, ನೈಜೀರಿಯಾ, ನಿಗರ್, ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್, ಕ್ಯಾಮರೂನ್ ದೇಶಗಳು ಆವೃತವಾಗಿವೆ. ಎಂಜಮೀನ (N'Djamena) ಎಂಬ ನಗರ ಚಾಡ್ ದೇಶದ ರಾಜಧಾನಿ. ಅದು ಆ ದೇಶದ ದೊಡ್ಡ ನಗರವೂ ಹೌದು. ಲೇಕ್ ಚಾಡ್‌ನಿಂದಾಗಿ ಆ ದೇಶಕ್ಕೆ ಆ ಹೆಸರು ಬಂದಿದೆ. ಆಫ್ರಿಕಾ ಖಂಡದಲ್ಲಿ 6ನೇ ಅತಿ ದೊಡ್ಡ ದೇಶವಾದರೂ, ಅಲ್ಲಿನ ಜನಸಂಖ್ಯೆ ಕೇವಲ 1 ಕೋಟಿ 60 ಲಕ್ಷ. ಅಲ್ಲಿನ ಅಧಿಕೃತ ಭಾಷೆ ಅರೇಬಿಕ್ ಮತ್ತು ಫ್ರೆಂಚ್. ಇದರ ಹೊರತಾಗಿ ನೂರಕ್ಕೂ ಹೆಚ್ಚು ಭಾಷೆಗಳನ್ನು ಮಾತಾಡುವ ಜನಾಂಗಗಳಿವೆ. ಇಸ್ಲಾಂ (55.1%) ಮತ್ತು ಕ್ರಿಶ್ಚಿಯಾನಿಟಿ (41.1%) ಪ್ರಮುಖ ಧರ್ಮಗಳು. ಅಭಿವೃದ್ಧಿ ಸೂಚ್ಯಂಕದಲ್ಲಿ ಕೊನೆಯಿಂದ 2ನೇ ಸ್ಥಾನ. ಅತಿ ಬಡತನ ಮತ್ತು ಅತಿ ಭ್ರಷ್ಟಾಚಾರದಿಂದ ಕಂಗೆಟ್ಟಿರುವ ಆ ದೇಶ ಸದ್ಯೋಭವಿಷ್ಯದಲ್ಲಿ ಅಭಿವೃದ್ಧಿಯಾಗುವ ಯಾವ ಸೂಚನೆಗಳಿಲ್ಲ. ದೇಶದ ಶೇ.80ರಷ್ಟು ಜನ ಬಡತನದಲ್ಲಿ ದಯನೀಯವಾದ ಬದುಕನ್ನು ಸಾಗಿಸುತ್ತಿದ್ದಾರೆ. ಈ ಕಾರಣದಿಂದ ಅಲ್ಲಿಗೆ ಯಾರೂ ಹೋಗಲು ಬಯಸುವುದಿಲ್ಲ. 2 ದಶಕಗಳ ಹಿಂದೆ, ತೈಲನಿಕ್ಷೇಪ ಕಂಡು ಬಂತು. ಅದೇ ರಫ್ತಿನ ಪ್ರಾಥಮಿಕ ಗಳಿಕೆ ಮೂಲ. ಅದನ್ನು ಬಿಟ್ಟರೆ ಸಾಂಪ್ರದಾಯಿಕ ಹತ್ತಿ ಉದ್ಯಮ ಪ್ರಮುಖವಾದುದು. ಕೊಲೆ, ಸುಲಿಗೆ, ಅತ್ಯಾಚಾರ ಸಾಮಾನ್ಯ. ಸಶಸ್ತ್ರಧಾರಿ ಪೊಲೀಸರು ಮತ್ತು ಸೈನಿಕರ ಉಪಟಳವೂ ಅಷ್ಟಿಷ್ಟಲ್ಲ. ಅಂತಾರಾಷ್ಟ್ರೀಯ ಒತ್ತಡ, ಕ್ಷಿಪ್ರ ಕ್ರಾಂತಿ ಮತ್ತು ನಾಗರಿಕ ಯುದ್ಧಗಳ ನಡುವೆಯೂ ಇದ್ರಿಸ್ ಡೆಬಿ ಎಂಬಾತ 1990ರಿಂದ 31 ವರ್ಷಗಳ ಕಾಲ ಚಾಡ್ ದೇಶವನ್ನು ಆಳಿದ. ನಂತರ ಸಂಭವಿಸಿದ ನಾಗರಿಕ ಯುದ್ಧದಲ್ಲಿ ಅವನನ್ನು ಹತ್ಯೆ ಮಾಡಲಾಯಿತು. ಪ್ರಗತಿಯ ಸೂರ್ಯ ಆ ದೇಶದ ಮೇಲೆ ಉದಯವಾಗದಿರುವುದು ದುರ್ದೈವ. 1987ರಲ್ಲಿ ಆ ದೇಶದಲ್ಲಿ ಕೇವಲ 30 ಕಿ.ಮೀ. ಡಾಂಬರ್ ರಸ್ತೆಯಿತ್ತು. ಈಗ 2000 ಕಿ.ಮೀ. ರಸ್ತೆಯಿದೆ. ಚಾಡ್‌ನಲ್ಲಿ 50 ವಿಮಾನ ನಿಲ್ದಾಣಗಳಿದ್ದರೂ, ಸಿಮೆಂಟ್ ರನ್ ವೇ ಇರುವುದು 10 ನಿಲ್ದಾಣಗಳಲ್ಲಿ ಮಾತ್ರ. ರಾಜಧಾನಿಯಲ್ಲಿರುವ ಒಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಆಫ್ರಿಕಾದ ಕೆಲವು ದೇಶಗಳಿಗೆ ಮತ್ತು ಪ್ಯಾರಿಸ್‌ಗೆ ವಿಮಾನ ಸಂಚಾರವಿದೆ. ಭಾರತೀಯರು ಇಲ್ಲದ ದೇಶವಿಲ್ಲ. ಆಫ್ರಿಕಾದ ಬಹುತೇಕ ದೇಶಗಳಲ್ಲಿ ಭಾರತೀಯರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಆದರೆ ಚಾಡ್‌ನಲ್ಲಿ ಹೆಚ್ಚೆಂದರೆ 500 ಜನರಿರಬಹುದು. ಅವರೆಲ್ಲ ತೈಲ ಕಂಪನಿಗಳಲ್ಲಿ, ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಭಾರತ ಮತ್ತು ಚಾಡ್ ಮಧ್ಯೆ ದ್ವಿಪಕ್ಷೀಯ ಸಂಬಂಧವಿದೆ. ಆದರೆ ಅದು ಸಾಂಪ್ರದಾಯಿಕ ಮಟ್ಟಕ್ಕೆ ಮಾತ್ರ ಸೀಮಿತವಾಗಿದೆ. ಚಾಡ್‌ನಲ್ಲಿ ಒಂಟೆ ರೇಸ್ ಬಹಳ ಜನಪ್ರಿಯ. ಒಂಟೆ ರೇಸ್ ಸಮಯದಲ್ಲಿ ಬೇರೆ ದೇಶಗಳಿಂದ ಜನ ಬರುವುದುಂಟು.

ರಾಜಕಾರಣಿ ಎಂದು ಕರೆಯಲು ಮನಸ್ಸಾಗದ ಒಬ್ಬ ಸ್ಟೇಟ್ಸ್‌ಮನ್ ಕುರಿತು

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ನಾನು 'ವಿಜಯ ಕರ್ನಾಟಕ' ಸಂಪಾದಕನಾಗುವುದಕ್ಕಿಂತ ಮುನ್ನ ಎಸ್ಸೆಂ ಕೃಷ್ಣ ಅವರನ್ನು ಖುದ್ದಾಗಿ ಭೇಟಿ ಆಗಿರಲಿಲ್ಲ. ಅವರು ಮುಖ್ಯಮಂತ್ರಿಯಾಗಿ ಒಂದು ವರ್ಷವಾಗಿತ್ತು, ನಾನು 'ವಿಜಯ ಕರ್ನಾಟಕ' ಸಂಪಾದಕನಾಗಿ ಮೂರು ತಿಂಗಳಾಗಿತ್ತು. ಒಮ್ಮೆ ಎಸ್ಸೆಂ ಕೃಷ್ಣ, ಸ್ನೇಹಿತ ಆರ್.ಟಿ.ನಾರಾಯಣ ಮತ್ತು ನಾನು ವೆಸ್ಟ್ ಎಂಡ್ ಹೋಟೆಲಿನಲ್ಲಿ ರಾತ್ರಿ ಊಟಕ್ಕೆ ಸೇರಿದ್ದೆವು. ಅದೇ ನನ್ನ ಮತ್ತು ಅವರ ಮೊದಲ ಮುಲಾಕತ್.

''ಭಟ್ರೇ! ನಿಜ ಹೇಳಲಾ? ನಿಮಗೆ 55-60 ವರ್ಷ ವಯಸ್ಸಾಗಿರಬಹುದು ಅಂತ ಅಂದುಕೊಂಡಿದ್ದೆ. ನೀವು ಇಷ್ಟು ಚಿಕ್ಕ ವಯಸ್ಸಿನವರು ಎಂಬ ಕಲ್ಪನೆಯೇ ಇರಲಿಲ್ಲ. ವಯಸ್ಸಿನಲ್ಲಿ ಹಿರಿಯರಾದವರು ಸಂಪಾದಕರಾಗುತ್ತಾರೆ ಎಂಬುದು ನನ್ನ ಗ್ರಹಿಕೆ. ಅಂದ ಹಾಗೆ ನಿಮಗೆ ಈಗ ಎಷ್ಟು ವರ್ಷ ವಯಸ್ಸು?'' ಎಂದು ಕೃಷ್ಣ ಕೇಳಿದರು. ''ಸರ್, ನನಗೆ 32 ವರ್ಷ. ನನ್ನ ವಯಸ್ಸಿಗಿಂತ ಹೆಚ್ಚು ವರ್ಷ ವೃತ್ತಿಯಲ್ಲಿ ಅನುಭವ ಹೊಂದಿದವರನ್ನು ನೋಡಿದ ನಿಮಗೆ, ನಾನು ಕಿರಿಯನಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ. ನಾನು ನಿಮ್ಮ ಹಾಗೆ ಯುವಕನೇ'' ಎಂದು ಹೇಳಿದಾಗ ತಮ್ಮ ಬೊಚ್ಚು ಬಾಯಿ ಅಗಲಿಸಿ, ಚಾವಣಿ ನೋಡುತ್ತಾ ಜೋರಾಗಿ ನಕ್ಕಿದ್ದರು.

''ಸರ್, ನಿಹಾರಿಕಾ, ಭೂಮಿಕಾ ಅಂತ ಹೇಳಿದರೆ 25-28 ವರ್ಷದ ಯುವತಿಯರ ಚಿತ್ರ ಕಣ್ಮುಂದೆ ಬರುತ್ತದೆ. ವಿಶ್ವೇಶ್ವರ ಭಟ್ಟ ಅಂತ ಹೇಳಿದರೆ 60 ವರ್ಷ ಆಸುಪಾಸಿನ ನವವೃದ್ಧನ ಪ್ರತಿಕೃತಿ ಕಣ್ಮುಂದೆ ಬರುವುದು ಸಹಜ. ನನ್ನನ್ನು ನೋಡಿದ ಅನೇಕರಿಗೆ ನಿಮಗಾದ ಅನುಭವವೇ ಆಗಿದೆ'' ಎಂದು ಹೇಳಿದಾಗ, ಮತ್ತೊಮ್ಮೆ ನಮ್ಮ ನಗು ಚಾವಣಿ ತಲುಪಿತ್ತು. ನಮ್ಮಿಬ್ಬರ ಮಾತುಕತೆ ಆರಂಭವಾಗಿದ್ದು ಹಾಗೆ. ಅಂದು ನಾವು ಮೂವರು ಲೋಕಾಭಿರಾಮ ಮಾತಾಡುತ್ತಾ, ಊಟ ಮಾಡುತ್ತಾ ಸುಮಾರು ಮೂರು ತಾಸು ಕಳೆದಿದ್ದೆವು. ಅವರಿಗೆ ಮೇಲಿಂದ ಮೇಲೆ ಫೋನ್ ಬರುತ್ತಿತ್ತು. ''ತೀರಾ ಎಮರ್ಜೆನ್ಸಿ ಇದ್ದರೆ ಮಾತ್ರ ಕೊಡಿ, ಇಲ್ಲದಿದ್ದರೆ ಫೋನ್ ಕೊಡಬೇಡಿ'' ಎಂದು ಹೇಳಿ ಹರಟೆಯಲ್ಲಿ ತಲ್ಲೀನರಾದರು.

ಕೃಷ್ಣ ಮಹಾನ್ ಹರಟೆಕೋರರೇನಲ್ಲ, ಅವರು ಮಿತಭಾಷಿಯೇ. ತಾವೇ ಕೈಯಾರೆ ಸೃಷ್ಟಿಸಿಕೊಂಡ ಇಮೇಜ್ ಅವರನ್ನು ಹಾಗೆ ಮಾಡಿಬಿಟ್ಟಿತ್ತು. ಆದರೆ ಹರಟೆ, ತಿಳಿಹಾಸ್ಯ, ವಿಡಂಬನೆ, ಹಾಸ್ಯ ಪ್ರಸಂಗಗಳನ್ನು ಅವರು ಬಹಳ ಇಷ್ಟಪಡುತ್ತಾರೆ ಎಂದು ನನಗೆ ಗೊತ್ತಾಗಿದ್ದು ಆಗಲೇ. ಕೆಲವು ರಾಜಕಾರಣಿಗಳ ಮುಂದೆ ಜೋಕು ಹೇಳಬೇಕು, ತಮಾಷೆ ಮಾಡಬೇಕೆಂದು ಅನಿಸುವುದಿಲ್ಲ (ದೇವೇಗೌಡ, ಯಡಿಯೂರಪ್ಪನವರ ಮುಂದೆ ಜೋಕ್ ಹೇಳಲು ಸಾಧ್ಯವಾ, ಸ್ವಲ್ಪ ಯೋಚಿಸಿ). ಆದರೆ ಕೃಷ್ಣ ಅವರ ಮುಂದೆ ಹೇಳಿದರೆ, (ಬೊಚ್ಚು) ಬಾಯಿ ತುಂಬಾ ನಗುತ್ತಿದ್ದರು, ಕೆಲವೊಮ್ಮೆ ಬಿದ್ದೂ ಬಿದ್ದು ನಗುತ್ತಿದ್ದರು. ಅದು ಕೃಷ್ಣ ಅವರೊಂದಿಗಿನ ಮೊದಲ ಭೇಟಿ ಎಂದು ನನಗೆ ಅನಿಸಲೇ ಇಲ್ಲ. ಇಬ್ಬರು ಆಪ್ತ ಸ್ನೇಹಿತರು ಬಹಳ ವರ್ಷಗಳ ನಂತರ ಭೇಟಿಯಾದ ಭಾವ ನಮ್ಮಿಬ್ಬರಲ್ಲೂ ನೆಲೆಸಿತ್ತು. ಈ ಭಾವನೆಯನ್ನು ಅವರೂ ವ್ಯಕ್ತಪಡಿಸಿದ್ದರು.

ಆದರೆ ದಿನ ಕಳೆದಂತೆ, ನಮ್ಮಿಬ್ಬರ ಮಧ್ಯೆ ವಿಶ್ವಾಸವೇನೋ ಹಾಗೇ ಇತ್ತು, ಆದರೆ ನಗು ಮಾಯವಾಗಿತ್ತು. ಇದಕ್ಕೆ ಕಾರಣ ಪತ್ರಿಕೆಯ ಧೋರಣೆ. ನಾವು ಕೃಷ್ಣ ಅವರ ಕೆಲವು ನಿರ್ಧಾರಗಳನ್ನು ನೇರಾನೇರ ಟೀಕಿಸಿದಾಗ ಸಹಜವಾಗಿ ಅವರಿಗೆ ಬೇಸರ ತರಿಸಿತ್ತು. 'ವಿಜಯ ಕರ್ನಾಟಕ'ದ ಯಶಸ್ಸಿಗೆ ನಾವು ಕೃಷ್ಣ ಸರಕಾರದ ಧೋರಣೆಗಳನ್ನು ಕಟುವಾಗಿ ಟೀಕಿಸುತ್ತಿದ್ದುದು ಸಹ ಕಾರಣವಾಗಿತ್ತು. ಏಕೆಂದರೆ, ಬೇರೆ ಯಾವ ಪತ್ರಿಕೆಗಳೂ ಸರಕಾರವನ್ನು ಟೀಕಿಸುತ್ತಿರಲಿಲ್ಲ. ಆ ದಿನಗಳಲ್ಲಿ 24 ಗಂಟೆ ನ್ಯೂಸ್ ಚಾನೆಲ್ಲುಗಳ ಭರಾಟೆಯೂ ಇದ್ದಿರಲಿಲ್ಲ. ಅದರಲ್ಲೂ ಛಾಪಾ ಕಾಗದ ಹಗರಣ ಉತ್ತುಂಗಕ್ಕೇರಿದಾಗ, ಮುಖ್ಯಮಂತ್ರಿ ಕೃಷ್ಣ ಅವರಿಗೆ ನೇರವಾಗಿ ಮುಖಪುಟದಲ್ಲಿ 'ಏನಂತೀರಿ ಕೃಷ್ಣ?' ಶೀರ್ಷಿಕೆಯಡಿಯಲ್ಲಿ ನಿತ್ಯವೂ ಪ್ರಕಟಿಸುತ್ತಿದ್ದ ಐದು ಪ್ರಶ್ನೆಗಳು ಅವರಿಗೆ ತೀವ್ರ ಕಸಿವಿಸಿ ಮತ್ತು ಮುಜುಗರವನ್ನುಂಟು ಮಾಡಿದ್ದವು. ಸುಮಾರು ನೂರಕ್ಕೂ ಹೆಚ್ಚು ಪ್ರಶ್ನೆಗಳು ಅವರನ್ನು ನಿರುತ್ತರರನ್ನಾಗಿಸಿದ್ದವು. ಈ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವಂತೆ ಪ್ರತಿಪಕ್ಷಗಳು ಗಂಟುಬಿದ್ದಿದ್ದವು.

ಒಂದು ವಿವಾಹ ಆರತಕ್ಷತೆ ಕಾರ್ಯಕ್ರಮದಲ್ಲಿ ಮುಖಾಮುಖಿಯಾದರೂ, ಕೃಷ್ಣ ಅವರು ಮುಖ ತಿರುಗಿಸಿ ನಡೆದಿದ್ದು ಕಂಡು ನನ್ನ ಬಗ್ಗೆ ಅವರೊಳಗಿನ ಉರಿಯುವ ಕೋಪಕುಂಡ ಅದೆಷ್ಟು ತೀಕ್ಷ್ಣವಾಗಿದೆ ಎಂಬುದನ್ನು ನಾನು ಊಹಿಸಿದ್ದೆ. ಅಂಬೇಡ್ಕರ್ ಭವನದಲ್ಲಿ ನಡೆದ ಮಾಧ್ಯಮ ಅಕಾಡೆಮಿ ಕಾರ್ಯಕ್ರಮದಲ್ಲಿ, ''ವಿಜಯ ಕರ್ನಾಟಕ ಪತ್ರಿಕೆ ನಿಮ್ಮ ಬಗ್ಗೆ ಸತತವಾಗಿ ಬರೆಯುತ್ತಿದೆಯಲ್ಲ?'' ಎಂದು ಪತ್ರಕರ್ತರು ಕೇಳಿದಾಗ, ''ಹೌದಾ? ನನಗೆ ಗೊತ್ತಿಲ್ಲವಲ್ಲ... ಆ ಹೆಸರಿನ ಪತ್ರಿಕೆ ಇದೆಯಾ?'' ಎಂದು ಥೇಟು ತಮ್ಮದೇ ಧಾಟಿಯಲ್ಲಿ, ಎದುರಾಳಿಯನ್ನು ತಿವಿಯುವಂತೆ ಪ್ರತಿಕ್ರಿಯಿಸಿದ್ದರು. ಇದರಿಂದ ನಮ್ಮ 'ಬೌನ್ಸರ್' ಇನ್ನೂ ಹೆಚ್ಚಾಯಿತು. 'ವಿಜಯ ಕರ್ನಾಟಕ' ಮಗ್ಗುಲ ಮುಳ್ಳಾಗಿ ಕಾಡುತ್ತಿದೆ ಎಂದು ಅವರಿಗೆ ಅನಿಸಿತ್ತು. ಅದನ್ನು ಅವರು ನಮಗಿಬ್ಬರಿಗೂ ಆತ್ಮೀಯರಾದ ಆರ್.ಟಿ.ನಾರಾಯಣರ ಮುಂದೆ ವ್ಯಕ್ತಪಡಿಸಿದ್ದರು. 'ಆರ್‌ಟಿಎನ್' ಕಾಫಿಗೆ-ತಿಂಡಿಗೆ ಕರೆಯುತ್ತಿದ್ದರು. ಆದರೆ ಈ ವಿಷಯವನ್ನು ಪ್ರಸ್ತಾಪಿಸುತ್ತಿರಲಿಲ್ಲ. ಕೃಷ್ಣ ಸಂಪುಟದ ಎಲ್ಲ ಮಂತ್ರಿಗಳ ವಿರುದ್ಧ ನಾವು 'ದಂಡ-ಪಿಂಡಗಳು' ಸರಣಿಯನ್ನು ಆರಂಭಿಸಿದಾಗಲೂ ಅವರು ವ್ಯಗ್ರರಾಗಿದ್ದರು. ಒಂದು ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ನಾವಿಬ್ಬರೂ ಒಂದೇ ವೇದಿಕೆಯಲ್ಲಿ ಅಕ್ಕ-ಪಕ್ಕ ಕುಳಿತರೂ, ಆರಂಭದ ಹಸ್ತಲಾಘವ ಬಿಟ್ಟರೆ ಮಾತಿಲ್ಲ, ಕತೆಯಿಲ್ಲ. ಮುಖ್ಯಮಂತ್ರಿ ಪಕ್ಕದಲ್ಲಿ ಕುಳಿತಿದ್ದರೆ ಸುಮ್ಮನಿರುವ ಜಾಯಮಾನ ನನ್ನದಲ್ಲ. ಆದರೆ ಅಂದು ಕೃಷ್ಣ ಅವರ ಕುದಿಮೌನ ನನ್ನನ್ನು ಸುಮ್ಮನಿರಿಸಿತ್ತು.

ಈ ಮಧ್ಯೆ ಕೃಷ್ಣ ಅವರು ಆಯ್ದ ಕೆಲವು ಸಂಪಾದಕರಿಗೆ ಮತ್ತು ಮುಖ್ಯ ವರದಿಗಾರರಿಗೆ ಬಿಡಿಎ ನಿವೇಶನ ನೀಡಲು ಮುಂದಾದರು. ಕೃಷ್ಣ ಆಪ್ತರೊಬ್ಬರು ನನ್ನನ್ನು ಭೇಟಿ ಮಾಡಿ, ''ಸಾಹೇಬ್ರು ಕಳಿಸಿದ್ದಾರೆ, ನೀವು ಈ ಫಾರ್ಮಿಗೆ ಒಂದು ಸಹಿ ಹಾಕಿ ಕೊಡಿ. ನಿಮಗೊಂದು ನಿವೇಶನ ಮಂಜೂರು ಮಾಡಲು ಹೇಳಿದ್ದಾರೆ'' ಎಂದು ಹೇಳಿದರು. ನಾನು ಅದನ್ನು ನಯವಾಗಿ ತಿರಸ್ಕರಿಸಿದೆ. 'ವಿಜಯ ಕರ್ನಾಟಕ'ದ ಅಂದಿನ ಮುಖ್ಯ ವರದಿಗಾರರಿಗೂ ನಿವೇಶನ ಕೊಡುವ ಭರವಸೆ ನೀಡಲಾಗಿತ್ತು. ನಾನು ಅವರಿಗೆ, ''ಒಂದೋ ನೀವು ನಿಮ್ಮ ನೌಕರಿಯನ್ನು ಇಟ್ಟುಕೊಳ್ಳಬಹುದು, ಇಲ್ಲವೇ ಸೈಟನ್ನು ಇಟ್ಟುಕೊಳ್ಳಬಹುದು'' ಎಂದೆ. ಅವರು ಸೈಟನ್ನು ಇಟ್ಟುಕೊಂಡರು. ಆ ಕಾರಣಕ್ಕೆ ಅವರು ಕೆಲಸ ಕಳೆದುಕೊಂಡರು. ಅದೇ ಬೇರೆ ಕತೆ, ಇರಲಿ.

2004ರ ಚುನಾವಣೆಯಲ್ಲಿ ಎಸ್ಸೆಂ ಕೃಷ್ಣ ನೇತೃತ್ವದಲ್ಲಿ ಕಾಂಗ್ರೆಸ್ ದಯನೀಯ ಸೋಲು ಅನುಭವಿಸಿತು. ಹತಾಶರಾಗಿ ಅವರು ದೇವೇಗೌಡರ ಬೆಂಬಲವನ್ನು ಯಾಚಿಸಿದ್ದರು. ಆ ಸೋಲಿನ ಕಹಿನೋವು ಕೆಲ ತಿಂಗಳು ಅವರನ್ನು ತೀವ್ರ ಘಾಸಿಗೊಳಿಸಿತ್ತು. ನಂತರ ಏಕಾಏಕಿ ಅವರು ಮಹಾರಾಷ್ಟ್ರದ ರಾಜ್ಯಪಾಲರಾಗಿ ನೇಮಕಗೊಂಡರು. ಒಂದು ದಿನ ನನ್ನ ಜನ್ಮದಿನದಂದು ಬೆಳಗ್ಗೆ ಅನಿರೀಕ್ಷಿತವಾಗಿ ಮಹಾರಾಷ್ಟ್ರದ ರಾಜಭವನದಿಂದ ಫೋನ್ ಬಂದಿತು. ಅತ್ತ ಕಡೆಯಿಂದ ರಾಜ್ಯಪಾಲ ಕೃಷ್ಣ ಮಾತಾಡುತ್ತಿದ್ದರು. ಜನ್ಮದಿನದಂದು ಶುಭ ಹಾರೈಸಿ, ಉಭಯಕುಶಲೋಪರಿ ವಿಚಾರಿಸಿದರು. ಕೊನೆಯಲ್ಲಿ, ''ನೀವು ನನ್ನ ಅತಿಥಿಯಾಗಿ ಇಲ್ಲಿಗೆ ಬರಬೇಕು'' ಎಂದು ಹೇಳಿದರು. ನಾನು ಅವರಿಂದ ಆ ಕರೆ ಮತ್ತು ಆಹ್ವಾನವನ್ನು ನಿರೀಕ್ಷಿಸಿರಲಿಲ್ಲ. ನನಗೆ ಸಂತೋಷವಾಯಿತು. ನಮ್ಮಿಬ್ಬರ ನಡುವಿನ ತಪ್ಪಿದ ಹಳಿ ಸರಿಯಾಗಿ, ಪುನಃ ಸುಗಮ ಸಂಚಾರಕ್ಕೆ ತೆರೆದುಕೊಂಡಿತು ಎಂದು ಭಾವಿಸಿದೆ. ಅದಾಗಿ ಆರು ತಿಂಗಳ ಬಳಿಕ, ಮಂತ್ರಾಲಯದ ಸ್ವಾಮೀಜಿಯವರ ಆಪ್ತ ಕಾರ್ಯದರ್ಶಿಯವರು ನನ್ನನ್ನು ಸಂಪರ್ಕಿಸಿ, ''ನಾವು ರಾಜಭವನಕ್ಕೆ ಹೋದಾಗ, ಅದೂ ಇದೂ ಮಾತಾಡುವಾಗ ಕೃಷ್ಣ ಅವರು ನಿಮ್ಮನ್ನು ನೆನಪಿಸಿಕೊಂಡರು'' ಎಂದು ಹೇಳಿದರು. ನಾನು ಅದೇ ದಿನ ಅವರನ್ನು ಸಂಪರ್ಕಿಸಿದೆ. ಕೃಷ್ಣ ಫೋನಿನಲ್ಲಿ, ''ಕರ್ನಾಟಕದಲ್ಲಿ ಏನು ನಡೀತಾ ಇದೆ?'' ಎಂದು ಕೇಳಿದರು. ನಾನು ಮಾತಾಡಲು ಶುರುವಿಡುತ್ತಿದ್ದಂತೆ, ''ಇವೆಲ್ಲ ಫೋನಿನಲ್ಲಿ ಬೇಡ, ಇಲ್ಲಿಗೆ ಬನ್ನಿ. ಎರಡು ದಿನ ನನ್ನ ಅತಿಥಿಯಾಗಿ ರಾಜಭವನದಲ್ಲಿ ಇರಿ. ಇಲ್ಲಿ ಎಲ್ಲ ಮಾತಾಡೋಣ, ಬನ್ನಿ'' ಎಂದು ಹೇಳಿದರು. ಅದಾಗಿ ಒಂದು ವಾರದಲ್ಲಿ ನಾನು ಅವರ ಗೆಸ್ಟ್ ಆಗಿ ರಾಜಭವನದಲ್ಲಿದ್ದೆ. ಆ ಎರಡು ದಿನ ನಾವು ರಾಜಭವನದ ಚಾವಣಿಯನ್ನು ನೋಡಿ, ಎಷ್ಟು ಸಲ ನಕ್ಕಿದ್ದೆವೋ ನಮಗೇ ಗೊತ್ತು. ಪತ್ರಿಕೆಯಲ್ಲಿ ನಾವು ಅವರ ವಿರುದ್ಧ ಬರೆದ ಯಾವ ಸಾಲುಗಳನ್ನೂ ಕೃಷ್ಣ ಮನಸ್ಸಿನಲ್ಲಿ ಇಟ್ಟುಕೊಂಡಿರಲಿಲ್ಲ. ನನ್ನ ಮನಸ್ಸಿನಲ್ಲಿ ಅವರಿಗೆ ವಿಶೇಷ ಸ್ಥಾನವನ್ನು ನಾನು ಕೊಟ್ಟಿದ್ದು ಆಗಲೇ. ''ನೀವು ಪತ್ರಿಕೆಯನ್ನು ಬಹಳ ಚೆಂದವಾಗಿ ರೂಪಿಸಿದಿರಿ. ನಾನು ಕುತೂಹಲದಿಂದ ನಿಮ್ಮ ಪತ್ರಿಕೆಯನ್ನು ಎದುರು ನೋಡುತ್ತಿದ್ದೆ. ನೀವು, ತ್ಯಾಗರಾಜ ಮತ್ತು ಪ್ರತಾಪ ಸಿಂಹ ಬರೆಯುತ್ತಿದ್ದುದನ್ನು ಓದುತ್ತಿದ್ದೆ'' ಎಂದು ಅವರು ಆಗ ಹೇಳಿದ್ದರು. ಆ ಎರಡು ದಿನ ಅವರೊಂದಿಗೆ ಕಳೆದ ಕ್ಷಣಗಳನ್ನು ನಾನು ಮರೆಯುವಂತಿಲ್ಲ. ಅನಂತರ ನಾವಿಬ್ಬರೂ ಹಲವು ಸಂದರ್ಭಗಳಲ್ಲಿ ಆ ಭೇಟಿಯನ್ನು ನೆನಪಿಸಿಕೊಂಡಿದ್ದುಂಟು.

4 ವರ್ಷಗಳ ಕಾಲ ರಾಜಭವನದಲ್ಲಿದ್ದಾಗ ಅವರು ತಿಂಗಳಿಗೆ ಒಂದೆರಡು ಬಾರಿ ತಪ್ಪದೇ ಫೋನ್ ಮಾಡುತ್ತಿದ್ದರು. ''ಭಟ್ರೇ, ಕರ್ನಾಟಕದಲ್ಲಿ ಏನು ನಡೀತಾ ಇದೆ'' ಎಂದು ಮಾತಿಗೆ ಅಡಿಯಿಡುತ್ತಿದ್ದರು. ಮುಂದಿನ ಅರ್ಧ ಗಂಟೆ ಸರಿದಿದ್ದು ನಮಗೆ ಗೊತ್ತಾಗುತ್ತಿರಲಿಲ್ಲ. 2009ರಲ್ಲಿ ಒಂದು ದಿನ ಡಾ.ಮನಮೋಹನ್ ಸಿಂಗ್ ಸಂಪುಟದಲ್ಲಿ ಕೃಷ್ಣ ಅವರು ವಿದೇಶಾಂಗ ವ್ಯವಹಾರಗಳ ಸಚಿವರಾದಾಗ ಎಲ್ಲರಿಗೂ ಅಚ್ಚರಿ. ಸ್ವತಃ ಕೃಷ್ಣ ಅವರೂ ಒಂದು ದಿನ ತಾವು ಈ ದೇಶದ ವಿದೇಶಾಂಗ ಸಚಿವರಾಗಬಹುದು ಎಂದು ಅಂದುಕೊಂಡಿರಲಿಲ್ಲವೇನೋ. ಪ್ರಧಾನಿಯವರು ಇಷ್ಟಪಟ್ಟು ತಮ್ಮ ಬಳಿಯೇ ಇಟ್ಟುಕೊಳ್ಳುವ ಖಾತೆ ಅದು. ಬೇರೆಲ್ಲ ಖಾತೆಗಳನ್ನು ಯಾರು ಬೇಕಾದರೂ ನಿರ್ವಹಿಸಬಹುದು, ಆದರೆ ವಿದೇಶಾಂಗ ಖಾತೆ ಹಾಗಲ್ಲ. ಅದಕ್ಕೆ ವಿಶೇಷ ವರ್ಚಸ್ಸು, ವ್ಯಕ್ತಿತ್ವ, ಘನತೆ ಉಳ್ಳವರು ಬೇಕು. ನಿಸ್ಸಂದೇಹವಾಗಿ ಆ ಹುದ್ದೆಗೆ ಕೃಷ್ಣ ಅರ್ಹರಾಗಿದ್ದರು. ಅವರ ವ್ಯಕ್ತಿತ್ವ, ಸ್ವಭಾವ, ಗುಣ, ಅಭಿರುಚಿಗೆ ಅದು ಹೇಳಿ ಮಾಡಿಸಿದ ಖಾತೆಯಾಗಿತ್ತು. ಅವರ ಮಾತಿನ ವೈಖರಿ, ಭಾಷೆ, ಪದಗಳ ಆಯ್ಕೆ, ವೇಷ-ಭೂಷಣ, ಹಾವ-ಭಾವಗಳೆಲ್ಲ ರಾಜತಾಂತ್ರಿಕ ವ್ಯವಹಾರಗಳ ನಿರ್ವಹಣೆಗೆ ರೆಡಿಮೇಡ್ ಖಡಕ್ ಬಟ್ಟೆಯಂತಿತ್ತು.

ನನಗೆ ಅವರೊಂದಿಗೆ ಪಾಕಿಸ್ತಾನ, ಇಸ್ರೇಲ್ ಮತ್ತು ಚೀನಾಕ್ಕೆ ಹೋಗುವ ಅವಕಾಶ ಸಿಕ್ಕಿತ್ತು. 10-12 ಜನ ಕುಳಿತುಕೊಳ್ಳುವ ಪುಟ್ಟ ವಿಶೇಷ ವಿಮಾನ. ಏಳೆಂಟು ಗಂಟೆ ವಿಮಾನ ಪ್ರಯಾಣ. ನಾನೊಬ್ಬನೇ ಕನ್ನಡ ಪತ್ರಕರ್ತ. ಆ ಅವಧಿಯಲ್ಲಿ ಕೃಷ್ಣ ಅವರ ಜತೆ ಮುಕ್ತವಾಗಿ ಹರಟೆ ಹೊಡೆಯುವ, ಅವರ ಅನುಭವಗಳಿಗೆ ಕಿವಿಯಾಗುವ, ನೂರಾರು ಪ್ರಸಂಗಗಳನ್ನು ಕೇಳುವ ಅವಕಾಶ ಸಿಕ್ಕಿತ್ತು. ಒಬ್ಬ ವ್ಯಕ್ತಿಯನ್ನು ಸಾರ್ವಜನಿಕವಾಗಿ ದೂರದಿಂದ ನೋಡುವುದಕ್ಕೂ, ಅವರ ಮಾತುಗಳನ್ನು ಹಾಗೆ ಕೇಳುವುದಕ್ಕೂ, ಖಾಸಗಿಯಾಗಿ ಭೇಟಿಯಾಗುವುದಕ್ಕೂ, ಜತೆಯಲ್ಲಿಯೇ ಪ್ರವಾಸ ಮಾಡುವುದಕ್ಕೂ, ಒಟ್ಟಿಗೆ ಕಾಲ ಕಳೆಯುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ವಿದೇಶ ಪ್ರವಾಸದ ಅವಧಿಯಲ್ಲಿ ನನಗೆ ಸಿಕ್ಕಿದ, ನಾನು ನೋಡಿದ ಕೃಷ್ಣ ಅವರೇ ಬೇರೆ. ಈ ಕೃಷ್ಣ, ಆ ಕೃಷ್ಣ ಅಲ್ಲ. ಆ ಕೃಷ್ಣ, ಈ ಕೃಷ್ಣ ಅಲ್ಲ.

ಇಸ್ರೇಲಿನ ರಕ್ಷಣಾ ಸಚಿವ ಮತ್ತು ಪ್ರಧಾನಿಯಾಗಿದ್ದ ಸಿಮೋನ್ ಪೆರೇಸ್ ಅಂದು ಆ ದೇಶದ ಅಧ್ಯಕ್ಷರಾಗಿದ್ದರು. ಅತಿಯಾದ ಭದ್ರತೆಯಿರುವ ಅವರ ನಿವಾಸದಲ್ಲಿ ಕೃಷ್ಣ ಅವರ ಭೇಟಿ ಮತ್ತು ಅವರ ಗೌರವಾರ್ಥ ಭೋಜನಕೂಟ ಏರ್ಪಾಡಾಗಿತ್ತು. ಪೆರೇಸ್ ಅವರು ಕೃಷ್ಣ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡು, ಮೊದಲ ಹದಿನೈದು ನಿಮಿಷ, ಉಭಯ ದೇಶಗಳ ಸಂಬಂಧದ ಬಗ್ಗೆ ಸಾದ್ಯಂತವಾಗಿ ವಿವರಿಸಿದರು. ಕೃಷ್ಣ ವ್ಯಕ್ತಿತ್ವವನ್ನೂ ಪ್ರಶಂಸಿಸಿದರು. ಅದು ಮುಕ್ತ ಮಾತುಕತೆಯಾಗಿತ್ತು. ಅವರ ಮಾತಿನ ನಂತರ ಪೆರೇಸ್ ಪಕ್ಕದಲ್ಲಿಯೇ ಕುಳಿತ ಕೃಷ್ಣ ಏನು ಹೇಳಬಹುದು ಎಂಬ ಬಗ್ಗೆ ನನಗೆ ಅತೀವ ಕುತೂಹಲವಿತ್ತು. ನಾನು ಆ ಕ್ಷಣಗಳಿಗಾಗಿಯೇ ಎದುರು ನೋಡುತ್ತಿದ್ದೆ.

ನಂತರ ಕೃಷ್ಣ ಸರದಿ. ಪೆರೇಸ್ ಕೂಡ ಕೃಷ್ಣ ಅವರ ಮಾತುಗಳಿಗೆ ಕಾದು ಕುಳಿತಿದ್ದರು. ಕೃಷ್ಣ ಅವರು ಯಾವುದೇ ಟಿಪ್ಪಣಿ ನೋಡದೇ, ಪೆರೇಸ್ ಅವರ ಮೇರುಸದೃಶ ವ್ಯಕ್ತಿತ್ವ, ಇಸ್ರೇಲಿನ ಮಹಿಮೆ, ಯಹೂದಿಯರ ತ್ಯಾಗ-ಬಲಿದಾನ, ಮಣ್ಣಿನ ಗುಣ, ಉಭಯ ದೇಶಗಳ ಐತಿಹಾಸಿಕ ರಾಜತಾಂತ್ರಿಕ ಸಂಬಂಧ-ಸಂಪ್ರದಾಯ, ಮಧ್ಯಪ್ರಾಚ್ಯದಲ್ಲಿ ಇಸ್ರೇಲಿನ ಸ್ಥಾನಮಾನ, ಜಗತ್ತಿಗೆ ಆ ದೇಶದ ಕೊಡುಗೆ, ತಮ್ಮ ಭೇಟಿಯ ಉದ್ದೇಶ-ಆಶಯಗಳ ಕುರಿತು ನಿರರ್ಗಳವಾಗಿ ಸುಮಾರು 25 ನಿಮಿಷ ಮಾತಾಡಿದರು. ಬಾಯಿಪಾಠ ಮಾಡಿದ್ದರೂ, ವಾರ್ತಾವಾಚಕರಂತೆ ಓದಿದ್ದರೂ, ಅಷ್ಟು ಒಪ್ಪವಾಗಿ ಒಪ್ಪಿಸಲು ಸಾಧ್ಯವಿರಲಿಲ್ಲ. ಅಂದು ಕೃಷ್ಣ ಎಲ್ಲರನ್ನೂ ಗೆದ್ದಿದ್ದರು. ಇಡೀ ಅಂತಾರಾಷ್ಟ್ರೀಯ ಮಾಧ್ಯಮ ಪ್ರತಿನಿಧಿಗಳು ಅಲ್ಲಿದ್ದರು. ನಾನು ಕೃಷ್ಣ ಅವರ presentationಗೆ ಮಾರುಹೋಗಿದ್ದೆ. ನನಗೆ ಕೃಷ್ಣ ಅವರ ಮತ್ತೊಂದು ಅವತಾರ-ದರ್ಶನ ಸಿಕ್ಕಿತ್ತು. ಕೃಷ್ಣ ಮಾತು ಮುಗಿಸಿದಾಗ, ಸ್ವತಃ ಪೆರೇಸ್ ಅವರು ಎದ್ದು ಹೋಗಿ ಭಾರತದ ವಿದೇಶಾಂಗ ಸಚಿವರನ್ನು ಆಲಂಗಿಸಿ ತಮ್ಮ ಹರ್ಷವನ್ನು ಪ್ರದರ್ಶಿಸಿದರು.

ಆ ದಿನ ರಾತ್ರಿ ಕೃಷ್ಣ ತಾವು ಉಳಿದುಕೊಂಡಿದ್ದ ಜೆರುಸಲೇಮ್‌ನಲ್ಲಿರುವ ಐತಿಹಾಸಿಕ 'ಕಿಂಗ್ ಡೇವಿಡ್ ಹೋಟೆಲ್'ನ ಸ್ವೀಟ್ ರೂಮಿಗೆ ರಾತ್ರಿ ಊಟಕ್ಕೆ ಕರೆದಿದ್ದರು. ಆಗ ಅವರು ಎರಡು ದೇಶಗಳ ಸಂಬಂಧ, ರಾಜತಾಂತ್ರಿಕ ವ್ಯವಹಾರಗಳ ಮಹತ್ವ, ರಾಜತಾಂತ್ರಿಕತೆಯ ಸವಾಲು, ಒಳಸುಳಿ, ಮಜಲುಗಳ ಬಗ್ಗೆ ತುಂಬಾ ಆಳವಾಗಿ ವಿವರಿಸಿದ್ದು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿವೆ. ಅದು, ಕರ್ನಾಟಕದಲ್ಲಿ ನಾವು ನೋಡಿದ ಕೃಷ್ಣ ಇವರೇನಾ ಎಂದು ಬಾಯಿ ತೆರೆದು ಯೋಚಿಸುವಂತೆ ಮಾಡಿತ್ತು. ಇದೊಂದೇ ಅಲ್ಲ, ಚೀನಾ ಮತ್ತು ಪಾಕಿಸ್ತಾನಕ್ಕೆ ಹೋದಾಗಲೂ ಅಲ್ಲಿನ ಪಿಚ್‌ನಲ್ಲಿ ಕೃಷ್ಣ ಸೆಂಚುರಿ ಬಾರಿಸಿದ್ದರು. ಕನ್ನಡ ಮಣ್ಣಿನ ನಾಯಕನೊಬ್ಬ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಸಮರ್ಥವಾಗಿ ಪ್ರತಿನಿಧಿಸಿದ್ದು ಸಾಮಾನ್ಯ ಸಂಗತಿಯಲ್ಲ.

ಒಮ್ಮೆ ಕೃಷ್ಣ ಅವರು ಒಮಾನ್ ದೇಶದ ಪ್ರವಾಸದಲ್ಲಿದ್ದರು. ಅಲ್ಲಿಂದಲೂ ನನ್ನ ಜನ್ಮದಿನದಂದು ಶುಭಾಶಯ ಹೇಳಲು ಫೋನ್ ಮಾಡಿದ್ದರು. ಅವರು ವಿದೇಶಾಂಗ ಸಚಿವ ಹುದ್ದೆಯಿಂದ ನಿರ್ಗಮಿಸಿದ ಬಳಿಕವೂ, ಬೆಂಗಳೂರಿಗೆ ವಾಪಸಾದಾಗಲೂ ನಮ್ಮ ಭೇಟಿ, ಫೋನ್ ಮಾತುಕತೆ ಮುಂದುವರಿದಿತ್ತು. ಅವರು ಅರ್ಧ ಶತಮಾನದ ಕಾಂಗ್ರೆಸ್ ಸಂಬಂಧವನ್ನು ಕಡಿದುಕೊಂಡು, ಬಿಜೆಪಿಯನ್ನು ಯಾಕೆ ಸೇರಿದರೋ, ಇಂದಿಗೂ ನಿಗೂಢ ರಹಸ್ಯವೇ. ಒಂದು ದಿನ ಸದಾಶಿವನಗರದ ಅವರ ನಿವಾಸದಲ್ಲಿ ಈ ಬಗ್ಗೆ ಕೇಳಿದಾಗ, ಕೇಳಿದರೂ ಕೇಳಿಸಿಕೊಳ್ಳದವರಂತೆ ನಟಿಸಿದರು. ''ಅದೊಂದು ದೊಡ್ಡ ಕತೆ'' ಎಂದು ತೇಲಿಸಿದರು. ''ಸಣ್ಣ ಕತೆಯಾಗಿ ಹೇಳಿ'' ಎಂದು ಕೇಳಿದಾಗ, ''ಗೊತ್ತಿರುವ ಕತೆ ಕೇಳುವುದು ನೀರಸ'' ಎಂದು ಸಾಗಹಾಕಿದರು. ನನಗೆ ಕೃಷ್ಣ ಅವರ ಮೌನದ ಪ್ರಭೆ ಗೊತ್ತಾಗಿದ್ದು ಅವರ ಅಳಿಯ ಮತ್ತು ಸ್ನೇಹಿತರಾದ ಸಿದ್ದಾರ್ಥ ನಿಧನರಾದಾಗ. ಅದಾಗಿ ಸುಮಾರು ಒಂದು ತಿಂಗಳ ಬಳಿಕ, ಅವರನ್ನು ನೋಡಲು ಹೋದಾಗ, ಅರ್ಧ ಗಂಟೆ ಏನೂ ಮಾತಾಡದೇ ಹಾಗೇ ಎದ್ದು ಬಂದಿದ್ದೆ.

ಈ ವರ್ಷದ ಜುಲೈನಲ್ಲಿ ನನಗೆ ಲಘು ಹೃದಯಾಘಾತವಾದ ಸುದ್ದಿ ತಿಳಿದು ಕೃಷ್ಣ ಫೋನ್ ಮಾಡಿದ್ದರು. ''ಸದ್ಯದಲ್ಲಿಯೇ ನಿಮ್ಮ ಮನೆಗೆ ಬರುತ್ತೇನೆ'' ಎಂದು ಹೇಳಿದ್ದರು. ಅನಂತರ ಅವರೂ ಅನಾರೋಗ್ಯಕ್ಕೊಳಗಾದರು. ನನಗೂ ಅವರನ್ನು ನೋಡಲು ಆಗಲಿಲ್ಲ.

ಇಂದಿನ ರಾಜಕಾರಣ, ವ್ಯವಸ್ಥೆಯನ್ನು ನೋಡಿದಾಗ ಕೃಷ್ಣ ಅವರ ಉನ್ನತ ವ್ಯಕ್ತಿತ್ವದ ಮಹತ್ವ ಅರಿವಾಗುತ್ತದೆ. ಸಾರ್ವಜನಿಕ ಜೀವನಕ್ಕೆ ಮರ್ಯಾದೆ, ಸಜ್ಜನಿಕೆ, ಘನತೆಯನ್ನು ತಂದುಕೊಟ್ಟ ಕೃಷ್ಣ ಎಂದೂ ಸೇಡಿನ ರಾಜಕಾರಣ ಮಾಡಲಿಲ್ಲ. ಕೆಟ್ಟ ಭಾಷೆ ಬಳಸಲಿಲ್ಲ. ಯಾವ ಸಂದರ್ಭದಲ್ಲೂ ಒಂದು ಮಟ್ಟಕ್ಕಿಂತ ಕೆಳಗಿಳಿದು ರಾಜಕಾರಣ ಮಾಡಲಿಲ್ಲ. ಸುದೀರ್ಘ ಸಾರ್ವಜನಿಕ ಬದುಕಿನಲ್ಲಿ ಎಲ್ಲೂ ಕಪ್ಪುಚುಕ್ಕೆ ಅಂಟಿಸಿಕೊಳ್ಳಲಿಲ್ಲ. ಅವರನ್ನು ರಾಜಕಾರಣಿ ಎಂದು ಕರೆಯಲು ಮನಸ್ಸು ಬಾರದಷ್ಟು ಎತ್ತರಕ್ಕೆ ತಮ್ಮನ್ನು ಏರಿಸಿಕೊಂಡು ಅಪ್ಪಟ Statesman (ರಾಜನೀತಿಜ್ಞ, ಮುತ್ಸದ್ದಿ) ಥರ ನಮ್ಮ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಪಡೆದುಕೊಂಡುಬಿಟ್ಟರು.

I miss him. Always!

ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಧೂಳೀಪಟವಾಗಿದ್ದು ಏಕೆ?

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಮಹಾರಾಷ್ಟ್ರದಲ್ಲಿ ಇತ್ತೀಚೆಗೆ ಅಧಿಕಾರಕ್ಕೆ ಬಂದ ಹೊಸ ಸರಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಿದ್ದೆ. ಎಲ್ಲಿ ನೋಡಿದರೂ ಜನವೋ ಜನ. ಸಮಾರಂಭ ಕಿಕ್ಕಿರಿದು ತುಂಬಿತ್ತು. ಉದ್ಯಮಿಗಳು ಹಾಗೂ ಚಿತ್ರರಂಗದ ಖ್ಯಾತನಾಮರ ಜತೆಗೆ ಬಹಳ ದೊಡ್ಡ ಸಂಖ್ಯೆಯಲ್ಲಿ ಜನಸಾಮಾನ್ಯರೂ ಸೇರಿದ್ದರು. ಅದಕ್ಕಿಂತ ಹೆಚ್ಚಾಗಿ 'ಲಡ್ಕಿ ಬಹಿನ್'ಗಳು ಭಾಗವಹಿಸಿದ್ದರು. ಎಲ್ಲರ ಆಕರ್ಷಣೆಯ ಕೇಂದ್ರಬಿಂದುವಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಉಪಸ್ಥಿತರಿದ್ದರು. ಸ್ವತಃ ಆಗಮಿಸಿ ಅವರು ಹೊಸ ಸರಕಾರವನ್ನು ಹುರಿದುಂಬಿಸಿದರು. ಅವರ ಜತೆಗೆ ಕೇಂದ್ರದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಇನ್ನೂ ಹಲವು ಸಚಿವರು, 19 ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಬೇರೆ ಬೇರೆ ರಾಜಕೀಯ ಪಕ್ಷಗಳ ಪ್ರಮುಖ ನಾಯಕರು ಪಾಲ್ಗೊಂಡಿದ್ದರು. ಈ ಗಣ್ಯಾತಿಗಣ್ಯರ ಉಪಸ್ಥಿತಿಯು ಎನ್‌ಡಿಎ ಮೈತ್ರಿಕೂಟದ ಒಗ್ಗಟ್ಟು ಹಾಗೂ ಪಕ್ಷ ಸಂಘಟನೆಯ ಸಾಮರ್ಥ್ಯವನ್ನು ತೋರಿಸಿತು.

ಅಲ್ಲಿಂದ ಹೊರಟು ಬಂದಮೇಲೆ ನನ್ನ ತಲೆಯಲ್ಲಿ ನಾನಾ ರೀತಿಯ ವಿಶ್ಲೇಷಣೆಗಳು ಮೂಡತೊಡಗಿದವು. ಮೊದಲಿಗೆ ಕಾಂಗ್ರೆಸ್ ಮತ್ತು ಅದರ ಮೈತ್ರಿಪಕ್ಷಗಳ ಅತಿಯಾದ ಆತ್ಮವಿಶ್ವಾಸದ ಬಗ್ಗೆ ಯೋಚನೆ ಬಂತು. ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷ ಬೇರೆಲ್ಲ ಪಕ್ಷಗಳಿಗಿಂತ ಹೆಚ್ಚು ಸೀಟು ಗಳಿಸಿತ್ತು. ಈ ಸಲದ ವಿಧಾನಸಭೆ ಚುನಾವಣೆಯಲ್ಲೂ ಹಾಗೇ ಆಗುತ್ತದೆ ಎಂಬ ಅತಿಯಾದ ನಿರೀಕ್ಷೆಯನ್ನು ಬಹುಶಃ ಕಾಂಗ್ರೆಸ್ ನಾಯಕರು ಹೊಂದಿದ್ದರು. ಆದ್ದರಿಂದಲೇ ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟವಾಗುವುದಕ್ಕೂ ಮುನ್ನ ಅವರು ಬಹಳ ಆತ್ಮವಿಶ್ವಾಸದಿಂದ ಗೆಲುವಿನ ಬಗ್ಗೆ ಮಾತನಾಡುತ್ತಿದ್ದರು. ಯಾವುದೇ ಕಾರಣಕ್ಕೂ ಈ ಸಲ ನಾವು ಸೋಲುವುದಿಲ್ಲ ಎನ್ನುತ್ತಿದ್ದರು. ಆದರೆ, ಫಲಿತಾಂಶ ಪ್ರಕಟವಾದಾಗ ಅವರೆಲ್ಲ ಅದುರಿಹೋದರು. ನಿರೀಕ್ಷೆ ತಲೆಕೆಳಗಾಗಿತ್ತು. ಮಹಾರಾಷ್ಟ್ರದ ಇತಿಹಾಸದಲ್ಲಿ ಮೊದಲ ಬಾರಿ ಕಾಂಗ್ರೆಸ್ ಪಕ್ಷವು ರಾಜ್ಯದ 36 ಜಿಲ್ಲೆಗಳ ಪೈಕಿ 21 ಜಿಲ್ಲೆಗಳಲ್ಲಿ ಒಂದೇ ಒಂದು ಕ್ಷೇತ್ರವನ್ನೂ ಗೆದ್ದಿರಲಿಲ್ಲ. ಸೋಲಾಪುರ, ಕೊಲ್ಲಾಪುರ, ಸತಾರಾ ಮತ್ತು ಪುಣೆಯಂಥ ಪ್ರದೇಶಗಳು ಸಾಂಪ್ರದಾಯಿಕವಾಗಿ ಕಾಂಗ್ರೆಸ್ ಮತ್ತು ಎನ್‌ಸಿಪಿಯ ಭದ್ರಕೋಟೆಯಾಗಿದ್ದವು. ಅವು ಕೂಡ ಈ ಸಲ ಕೈಬಿಟ್ಟು ಹೋದವು. ಮರಾಠವಾಡ ಮತ್ತು ವಿದರ್ಭದಲ್ಲಿ ಈ ಸಲ ಪವಾಡ ಸಂಭವಿಸುತ್ತದೆ ಎಂದೆಲ್ಲಾ ವ್ಯಾಖ್ಯಾನ ಮಾಡುತ್ತಿದ್ದ ಕಾಂಗ್ರೆಸ್ಸಿಗರಿಗೆ ಫಲಿತಾಂಶದ ನಂತರ ನಿರಾಸೆ ಕಾದಿತ್ತು. ಕಾಂಗ್ರೆಸ್ಸಿಗರು ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾಗ ಬಿಜೆಪಿಯ ಹಿರಿಯ ನಾಯಕರೊಬ್ಬರು ನನ್ನ ಬಳಿ, ''ಮರಾಠವಾಡ ಮತ್ತು ವಿದರ್ಭದ ಜನ ನಮ್ಮ ಕೈಹಿಡಿದರೆ ಖಂಡಿತ ಈ ಸಲ ನಾವೇ ಸರಕಾರ ರಚಿಸುತ್ತೇವೆ'' ಎಂದು ಹೇಳಿಕೊಂಡಿದ್ದರು. ಕೊನೆಗೆ ಆಗಿದ್ದೂ ಅದೇ.

ಮಹಾರಾಷ್ಟ್ರದಲ್ಲಿ ಕಾಂಗ್ರೆಸ್‌ಗೆ ಈ ಬಾರಿ ಸಂಘಟನೆಯ ಕೊರತೆ ಎದ್ದು ಕಾಣುತ್ತಿತ್ತು. ಹಿರಿಯ ನಾಯಕರಾದ ಶರದ್ ಪವಾರ್ ಮತ್ತು ಉದ್ಧವ್ ಠಾಕ್ರೆಯಂಥವರು ಕೂಡ ಕಾಂಗ್ರೆಸ್‌ನ ಹಣೆಬರಹ ಬದಲಿಸಲು ಆಗಲಿಲ್ಲ. ಕಾಂಗ್ರೆಸ್‌ನ ಅನೇಕ ಹಿರಿಯ ನಾಯಕರೇ ಸೋತು ಮನೆ ಸೇರಿದರು. ಪಕ್ಷದ ರಾಜ್ಯಾಧ್ಯಕ್ಷ ನಾನಾ ಪಟೋಲೆ ಕೆಲವೇ ಮತಗಳ ಅಂತರದಲ್ಲಿ ಗೆದ್ದು ಸೀಟು ಉಳಿಸಿಕೊಂಡರು. ಚುನಾವಣೆಯ ಸೋಲಿಗೆ ಕಾಂಗ್ರೆಸ್ ಪಕ್ಷವೀಗ ಬೇರೆ ಬೇರೆ ನೆಪಗಳನ್ನು ಹೇಳುತ್ತಿದೆ. ''ಮಹಾಯುತಿ ಮೈತ್ರಿಕೂಟದವರು ಇವಿಎಂಗಳನ್ನು ತಿರುಚಿ ಗೆದ್ದಿದ್ದಾರೆ'' ಎಂದು ಅದು ಆರೋಪಿಸುತ್ತಿದೆ. ಅಮೆರಿಕದ ಶ್ರೀಮಂತ ಉದ್ಯಮಿ ಹಾಗೂ ಟೆಸ್ಲಾ ಕಾರು ಉತ್ಪಾದನಾ ಕಂಪನಿಯ ಮಾಲೀಕ ಎಲಾನ್ ಮಸ್ಕ್ ಅವರು ''ಇಲೆಕ್ಟ್ರಾನಿಕ್ ಮತಯಂತ್ರಗಳನ್ನು ತಿರುಚಬಹುದು'' ಎಂದು ಹೇಳುವ ಮೂಲಕ ಬೆಂಕಿಗೆ ತುಪ್ಪ ಸುರಿದಿದ್ದಾರೆ. ನಿಜ, ತಂತ್ರಜ್ಞಾನದ ವಿಷಯದಲ್ಲಿ ಎಲ್ಲವೂ ಸಾಧ್ಯ ಮತ್ತು ಅನೇಕ ಸಂಗತಿಗಳು ಅಸಾಧ್ಯ. ಆದರೆ ಅದಕ್ಕೆ ಪುರಾವೆಗಳು ಬೇಕು. ಇವಿಎಂಗಳನ್ನು ತಿರುಚಿ ಗೆಲ್ಲಲು ಸಾಧ್ಯ ಅಥವಾ ಯಾರನ್ನಾದರೂ ಸೋಲಿಸಲು ಸಾಧ್ಯ ಎಂದು ಯಾರಾದರೂ ಸಾಬೀತುಪಡಿಸಲಿ! ಆಗ ಒಪ್ಪೋಣ. ವಾದಕ್ಕಾಗಿ ಏನು ಬೇಕಾದರೂ ಹೇಳಬಹುದು. ''ಅವರು ಜಮ್ಮು ಮತ್ತು ಕಾಶ್ಮೀರವನ್ನು ಬಿಟ್ಟುಕೊಟ್ಟು ಹರಿಯಾಣವನ್ನು ತಮಗೆ ಉಳಿಸಿಕೊಂಡರು. ಹಾಗೆಯೇ, ಜಾರ್ಖಂಡ್‌ನಲ್ಲಿ ಬೇಕಂತಲೇ ಸೋತು ಮಹಾರಾಷ್ಟ್ರವನ್ನು ಉಳಿಸಿಕೊಂಡರು'' ಎಂಬಂಥ ಊಹಾಪೋಹದ ಮಾತುಗಳನ್ನೂ ಕೆಲವರು ಆಡುತ್ತಿದ್ದಾರೆ. ಇದನ್ನೆಲ್ಲ ಕೇಳಿದ ಮೇಲೆ ನನ್ನ ಬಳಿ ಒಬ್ಬರು, ''ಬಿಜೆಪಿಯವರು ಇವಿಎಂ ಅನ್ನು ತಿರುಚುವುದೇ ನಿಜವಾಗಿದ್ದಿದ್ದರೆ ಕೇರಳದ ವಯನಾಡಿನಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಹೇಗೆ ಅಷ್ಟೊಂದು ದೊಡ್ಡ ಅಂತರದಲ್ಲಿ ಗೆದ್ದರು?'' ಎಂದು ಕೇಳಿದರು. ಇದಕ್ಕೆ ಇನ್ನೊಬ್ಬರು ವಿಶಿಷ್ಟ ಸ್ಪಷ್ಟೀಕರಣವನ್ನೂ ನೀಡಿದರು- ''ಪ್ರಾಮಾಣಿಕರು ಎಂದು ತೋರಿಸಿಕೊಳ್ಳಲು ಕೆಲವೊಮ್ಮೆ ಹೀಗೆ ಮಾಡಬೇಕಾಗುತ್ತದೆ''!

ಕಾಂಗ್ರೆಸ್‌ನವರ ಸಮಸ್ಯೆಯೇ ಇದು. ಅವರು ಇದೇ ರೀತಿಯ ಧೋರಣೆಯನ್ನು ಮುಂದುವರಿಸಿಕೊಂಡು ಹೋದರೆ ಆ ಪಕ್ಷ ಈಗ ತಲುಪಿರುವ ಸ್ಥಿತಿಯಿಂದ ಮೇಲಕ್ಕೆ ಏಳುವುದಿಲ್ಲ. ಮಹಾರಾಷ್ಟ್ರದ ವಿಷಯಕ್ಕೆ ಬಂದರೆ, ಕೇರಳದ ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತ್ತಲ ಅವರು ಪಕ್ಷದ ಚುನಾವಣಾ ಉಸ್ತುವಾರಿಯಾಗಿ ಆಗಮಿಸುವ ವೇಳೆಗೆ ಸಾಕಷ್ಟು ತಡವಾಗಿತ್ತು. ಅವರು ಪಕ್ಷದ ಕಾರ್ಯಕರ್ತರನ್ನು ಹುರಿದುಂಬಿಸಿ, ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಪ್ರಯತ್ನಿಸಿದರೂ, ಒಬ್ಬ ವ್ಯಕ್ತಿ ಒಂದಿಡೀ ಪಕ್ಷದ ಚುನಾವಣಾ ಭವಿಷ್ಯವನ್ನು ಬದಲು ಮಾಡುವುದು ಕಷ್ಟ. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ತಳಮಟ್ಟದಲ್ಲೇ ಛಿದ್ರವಾಗಿದೆ. ಆದರೂ ಚೆನ್ನಿತ್ತಲ ಅವರು ಪಟ್ಟ ಪರಿಶ್ರಮ ಶ್ಲಾಘನೀಯ. ಅದರ ಪರಿಣಾಮವಾಗಿಯೇ, ಬಿಜೆಪಿಯ ಪ್ರಬಲವಾದ ರಾಜಕೀಯ ಅಲೆಯ ನಡುವೆಯೂ ಯವತ್ಮಾಲ್‌ನಲ್ಲಿ ಅನಿಲ್ ಅಲಿಯಾಸ್ ಬಾಳಾಸಾಹೇಬ್ ಮಂಗೂಲ್ಕರ್ ಹಾಗೂ ನಾಗ್ಪುರದಲ್ಲಿ ವಿಕಾಸ್ ಠಾಕ್ರೆಯಂಥ ಕೆಲ ನಾಯಕರು ಗೆಲ್ಲಲು ಸಾಧ್ಯವಾಯಿತು. ಪಕ್ಷ ಸಂಘಟನೆಯ ಬೆಂಬಲವೂ ಇದ್ದಿದ್ದರೆ ಅವರು ಇನ್ನೂ ಹೆಚ್ಚಿನ ಅಂತರದಲ್ಲಿ ಗೆಲ್ಲಬಹುದಿತ್ತು. ಜಾತಿ ರಾಜಕೀಯ ಮತ್ತು ತಳಮಟ್ಟದಲ್ಲಿನ ಸಂಘಟನೆಯ ಕೊರತೆ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಹಾನಿ ಉಂಟುಮಾಡುತ್ತಿವೆ. ಹಾಗಂತ ಮಹಾಯುತಿ ಮೈತ್ರಿಕೂಟಕ್ಕೆ ಸಮಸ್ಯೆಗಳೇ ಇರಲಿಲ್ಲ ಎಂದಲ್ಲ. ಅವರೂ ನಾನಾ ಅಡೆತಡೆಗಳನ್ನು ಎದುರಿಸಿದರು. ಸೋಯಾಬೀನ್ ಮತ್ತು ಹತ್ತಿಯ ಬೆಲೆ ಕುಸಿತದ ಬಗ್ಗೆ ರೈತರು ಸಿಟ್ಟಾಗಿದ್ದರು. ಅದರ ಜತೆಗೆ ಮರಾಠ ಮೀಸಲಾತಿ ಹೋರಾಟ ಬೇರೆ. ಆದರೆ ಹಿಂದುತ್ವದ ಅಲೆಯಲ್ಲಿ ಈ ಎಲ್ಲಾ ಸಮಸ್ಯೆಗಳೂ ಕೊಚ್ಚಿಹೋದವು. ಬಿಜೆಪಿಯವರು ಈ ಬಾರಿ 'ವೋಟ್ ಜಿಹಾದ್'ಗೆ ಪ್ರತಿಯಾಗಿ 'ಮತಗಳ ಧರ್ಮಯುದ್ಧ'ಕ್ಕೆ ಕರೆ ನೀಡಿದ್ದರು. 'ಏಕ್ ಹೈ ತೋ ಸೇಫ್ ಹೈ', 'ಬಾಟೇಂಗೇ ತೋ ಕಾಟೇಂಗೇ' ರೀತಿಯ ಘೋಷಣೆಗಳು ಮತದಾರರ ಮನಸ್ಸನ್ನು ಗೆದ್ದವು. ಬಿಜೆಪಿ ಮೈತ್ರಿಕೂಟದ ಪರವಾಗಿ ಕೆಲಸ ಮಾಡಿದ ಇನ್ನೊಂದು ಅಂಶವೆಂದರೆ, 'ಮುಸ್ಲಿಮರು ಮತ್ತು ದಲಿತರು ಒಗ್ಗಟ್ಟಾಗುತ್ತಾರೆ ಎಂದಾದರೆ ಹಿಂದೂಗಳು ಏಕೆ ಒಗ್ಗಟ್ಟಾಗಬಾರದು' ಎಂಬ ಚಿಂತನೆ. ಇಂಥದ್ದೊಂದು ನೆರೇಟಿವ್ ಅನ್ನು ಬಿಜೆಪಿಯವರು ಜನರ ಮನಸ್ಸಿನಲ್ಲಿ ಅಚ್ಚೊತ್ತಿಸುವಲ್ಲಿ ಯಶಸ್ವಿಯಾಗಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮತ್ತು ಅದರ ಮಿತ್ರಸಂಘಟನೆಗಳು 90,000 ಕಾರ್ಯಕರ್ತರನ್ನು ಸೇರಿಸಿ 22,000ಕ್ಕೂ ಹೆಚ್ಚು ಸಭೆಗಳನ್ನು ನಡೆಸಿದ್ದವು. ಅವರು ಹಳ್ಳಿ ಹಳ್ಳಿಗಳಲ್ಲಿ ನಡೆಸಿದ ಇಂಥ ಸಭೆಗಳು ಬಿಜೆಪಿಯ ಗೆಲುವಿಗೆ ದೊಡ್ಡ ಕೊಡುಗೆ ನೀಡಿದವು. ಈ ಎಲ್ಲ ಪ್ರಯತ್ನಗಳ ಹೊರತಾಗಿಯೂ, ಬಿಜೆಪಿಗೆ ಇಷ್ಟು ದೊಡ್ಡ ಗೆಲುವು ಲಭಿಸುತ್ತದೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಆದರೆ ಒಬ್ಬ ವ್ಯಕ್ತಿ ಮಾತ್ರ ಇಷ್ಟು ದೊಡ್ಡ ಅಂತರದ ಗೆಲುವು ನಿರೀಕ್ಷಿಸಿದ್ದರು. ಅವರೇ ದೇವೇಂದ್ರ ಸರಿತಾ ಗಂಗಾಧರರಾವ್ ಫಡ್ನವಿಸ್. ಅವರು ''ಬಿಜೆಪಿ ಈ ಬಾರಿ ಖಂಡಿತ 135 ಸೀಟುಗಳನ್ನು ಗೆಲ್ಲುತ್ತದೆ'' ಎಂದು ಹೇಳಿದ್ದರು. ಅದರಂತೆ ಬಿಜೆಪಿ 132 ಸೀಟು ಗೆದ್ದಿತು. ಶಿವಸೇನೆ 57 ಹಾಗೂ ಎನ್‌ಸಿಪಿ 41 ಸೀಟುಗಳನ್ನು ಗೆದ್ದವು. ಈ ಯಶಸ್ಸಿನ ಕ್ರೆಡಿಟ್ ಅಮಿತ್ ಶಾ ಅವರ ರಾಜಕೀಯ ಚಾಣಾಕ್ಷತೆ, ಫಡ್ನವಿಸರ ಕಠಿಣ ಪರಿಶ್ರಮ, ಚಂದ್ರಶೇಖರ ಬವಾನ್‌ಕುಲೆ ಅವರ ಸಂಘಟನಾ ಚಾತುರ್ಯ, ಏಕನಾಥ್ ಶಿಂಧೆಯವರ ಔದಾರ್ಯ ಹಾಗೂ 'ಲಡ್ಕಿ ಬಹಿನ್' ರೀತಿಯ ಯೋಜನೆಗಳಿಗೆ ಸಲ್ಲಬೇಕು. ಅಜಿತ್ ಪವಾರ್ ಕೂಡ ''ನನ್ನನ್ನು ನಂಬಿ, ನಾನೇ ನಿಮ್ಮ ಭವಿಷ್ಯದ ನಾಯಕ'' ಎಂಬ ಸಂದೇಶವನ್ನು ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾದರು.

ಇವೆಲ್ಲದರ ನಡುವೆ ಮಹಾರಾಷ್ಟ್ರದಲ್ಲಿ 'ದೇವ ಭಾವು' ರೂಪದಲ್ಲಿ ಹೊಸ ಭರವಸೆಯೊಂದು ಉದಯವಾಗಿದೆ. ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಅವರ ಜತೆಗೆ ಇಬ್ಬರು ಪ್ರಬಲ ನಾಯಕರಾದ ಏಕನಾಥ್ ಶಿಂಧೆ ಮತ್ತು ಅಜಿತ್ ಪವಾರ್ ಇದ್ದಾರೆ. ಫಡ್ನವಿಸ್‌ರ ಮೊದಲ ಅವಧಿಯಲ್ಲಿ ಸಮೃದ್ಧಿ ಮಹಾಮಾರ್ಗ, ಕರಾವಳಿ ರಸ್ತೆಗಳು, ಅಟಲ್ ಸೇತು, ಮೆಟ್ರೋ ಯೋಜನೆಗಳು, ಜಲ ಶಿವರ್ ಯೋಜನೆಗಳು ಮುಂತಾದ ಅನೇಕ ಯಶಸ್ವಿ ಯೋಜನೆಗಳು ಜಾರಿಗೆ ಬಂದಿದ್ದವು. ಜಲ ಶಿವರ್ ಯೋಜನೆಯು ಅನೇಕ ಹಳ್ಳಿಗಳ ನೀರಿನ ಬವಣೆಯನ್ನು ನಿವಾರಿಸಿತ್ತು. ಆದರೆ ಇನ್ನೂ ಸಾಕಷ್ಟು ಕೆಲಸಗಳು ಆಗುವುದು ಬಾಕಿಯಿದ್ದವು. ಅದರಲ್ಲೂ ವಿದರ್ಭದಂಥ ಹಿಂದುಳಿದ ಪ್ರದೇಶದಲ್ಲಿ ಬಹಳ ಸುಧಾರಣೆಯಾಗುವ ಅಗತ್ಯವಿದೆ. ಅಲ್ಲಿ ಆಟೋಮೊಬೈಲ್ ಉದ್ದಿಮೆ ಸ್ಥಾಪನೆಯಾಗಿ, ಜತೆಗೆ ಇನ್ನಿತರ ಅಭಿವೃದ್ಧಿ ಯೋಜನೆಗಳು ಜಾರಿಗೆ ಬಂದರೆ ಒಳ್ಳೆಯದು. ಜನರು ತಮ್ಮಲ್ಲಿ ಇರಿಸಿದ ನಂಬಿಕೆ ಹಾಗೂ ತೋರಿದ ಪ್ರೀತಿಯನ್ನು ಫಡ್ನವಿಸ್ ಉಳಿಸಿಕೊಳ್ಳಬೇಕಿದೆ.

ಕಾಂಗ್ರೆಸ್ ನಾಯಕರಿಗೆ ನಾನು ಹೇಳುವುದು ಇಷ್ಟೇ: ಪ್ರತಿಯೊಂದಕ್ಕೂ ಗಾಂಧಿ ಕುಟುಂಬದ ಕಡೆಗೇ ನೋಡಬೇಡಿ. ಇನ್ನೂ ಎಷ್ಟು ದಿನ ಕಾಂಗ್ರೆಸ್ ಪಕ್ಷ ಕೇವಲ ರಾಹುಲ್ ಮತ್ತು ಪ್ರಿಯಾಂಕಾ ಗಾಂಧಿಯವರ ಪ್ರಯತ್ನದಿಂದಲೇ ಜೀವ ಹಿಡಿದುಕೊಂಡು ಇರಬೇಕು? ಗಾಂಧಿ ಕುಟುಂಬವು ಕಾಂಗ್ರೆಸ್ ಪಕ್ಷದ ಶಕ್ತಿಕೇಂದ್ರ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೂ ಕಾಂಗ್ರೆಸ್ ಪಕ್ಷದ ನಾಯಕರು ತಮ್ಮ ದೀಪ ತಾವೇ ಹಚ್ಚಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ದೇಶದಲ್ಲಿ ಕಾಂಗ್ರೆಸ್ ಪಕ್ಷ ಈ ರೀತಿಯಲ್ಲಿ ದಿನೇದಿನೆ ಅವಸಾನದತ್ತ ಸಾಗುತ್ತಿರುವುದನ್ನು ನೋಡಿದರೆ ಆತಂಕವಾಗುತ್ತದೆ. ಪ್ರಜಾಪ್ರಭುತ್ವಕ್ಕೆ ಇದು ಒಳ್ಳೆಯದಲ್ಲ. ಪ್ರಬಲವಾದ ವಿರೋಧ ಪಕ್ಷ ಯಾವತ್ತೂ ಈ ದೇಶಕ್ಕೆ ಬೇಕು. ಮಹಾರಾಷ್ಟ್ರದಲ್ಲಿ ಈ ಬಾರಿ ಅಧಿಕೃತವಾಗಿ ವಿರೋಧ ಪಕ್ಷದ ನಾಯಕರೇ ಇರುವುದಿಲ್ಲ. ಆದರೂ ದೇವೇಂದ್ರ ಫಡ್ನವಿಸ್‌ರ ಒಂದು ಹೇಳಿಕೆ ಕೇಳಿ ನನಗೆ ಸಮಾಧಾನವಾಯಿತು. ''ನಾವು ದ್ವೇಷದ ರಾಜಕಾರಣ ಮಾಡುವುದಿಲ್ಲ. ವೈರತ್ವವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವುದಿಲ್ಲ. ಅದರ ಬದಲಿಗೆ ಮಹಾರಾಷ್ಟ್ರವನ್ನು ರೂಪಾಂತರಗೊಳಿಸುವ ಗುರಿಯೊಂದಿಗೆ ಕೆಲಸ ಮಾಡುತ್ತೇವೆ'' ಎಂದು ಅವರು ಹೇಳಿದ್ದಾರೆ. ಫಡ್ನವಿಸ್ ಮತ್ತು ಅವರ ತಂಡಕ್ಕೆ ಶುಭವಾಗಲಿ!

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕಾಚ್

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
  ಭಟ್ರೇ, ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಕೇರಳದ ವಯನಾಡು ಜನರ ಬಗ್ಗೆ ಬಹಳ ಅಕ್ಕರೆ, ಯಾಕೆ?
  – **ಪ್ರಿಯಾಂಕಾ ಅಕ್ಕ ಹೇಳಿದರೆ ಅಕ್ಕರೆ ಬರದಿರುವುದೇ?!**

- **ರಾಘೋಬ, ಮೈಸೂರು**
  ಭಟ್ರೇ, ಸೌಂದರ್ಯ ಪ್ರಜ್ಞೆಯ ಎಸ್.ಎಂ. ಕೃಷ್ಣ ಯಾವುದರ ಬಗ್ಗೆ ಹೆಚ್ಚು ನಿಗವಹಿಸುತ್ತಿದ್ದರು ಗೊತ್ತಾ?
  – **ವೇಷಭೂಷಣ ಮತ್ತು 'ಕೇಶ' ಭೂಷಣ!**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
  ಭಟ್ರೇ, ರಾಜ್ಯಾದ್ಯಂತ ಶೋಕಾಚರಣೆ ಜಾರಿಯಲ್ಲಿರುವಾಗ, ಲೋಕಾಯುಕ್ತರು ಅಧಿಕಾರಿಗಳ ಮನೆ ಮೇಲೆ ದಾಳಿ ಮಾಡುವುದು ಸರಿಯಾ?
  – **ಭ್ರಷ್ಟರನ್ನು ಮತ್ತಷ್ಟು ಶೋಕಗ್ರಸ್ತರನ್ನಾಗಿ ಮಾಡುವ ಸದುದ್ದೇಶ ಅಷ್ಟೇ!**

- **ಬೆಂ.ಮು.ಮಾರುತಿ, ಬೆಂಗಳೂರು**
  ಭಟ್ರೇ, ಸಂಚಾರಿ ಸಿಗ್ನಲ್‌ಗಳಲ್ಲಿ ಕಣ್ಣಿದ್ದೂ ಕುರುಡರಂತೆ ನಟನೆ ಮಾಡಿ ಭಿಕ್ಷೆ ಬೇಡ್ತಾರಲ್ಲ!
  – **ಭಿಕ್ಷೆ ಹಾಕದೇ ಕಣ್ಣಿದ್ದು ಕುರುಡರಂತೆ ವರ್ತಿಸುತ್ತಾರಲ್ಲ?!**

- **ಅಲಮೇಲು, ಮೇಲುಕೋಟೆ**
  ಭಟ್ರೇ, ಚಿಲಿ ದೇಶದಲ್ಲಿ ಪಕ್ಷಿಗಳು ಹೇಗೆ ಕೂಗುತ್ತವೆ?
  – **ಚಿಲಿಪಿಲಿ ಎಂಬ ಉತ್ತರ ಗೊತ್ತಿದ್ದೂ ನನ್ನ ಕೇಳುವುದು ಯಾಕೋ?!**

- **ಸತೀಶ ಹೆಗಡೆ, ಶಿರಸಿ**
  ಭಟ್ರೇ, ಎಸ್ಸೆಂ ಕೃಷ್ಣ ನಿಧನದಿಂದ ದೇಶ ಬಡವಾಯ್ತು ಅಂತಾರಲ್ಲ?
  – **ಅವರು ವಿದೇಶಾಂಗ ಸಚಿವರಾಗಿದ್ದವರು, ಹೀಗಾಗಿ ವಿದೇಶವೂ ಬಡವಾಯ್ತು ಎನ್ನಬೇಕಾಗಿತ್ತು!**

- **ರಾಣಿ, (ಇಮೇಲ್ ಮೂಲಕ)**
  ಭಟ್ರೇ, ಬದುಕಿದ್ದಾಗ ಟೀಕಿಸಿದವರು, ಸತ್ತಾಗ ಕಂಬನಿ ಮಿಡಿಯುತ್ತಾರಲ್ಲ?
  – **ತಾವು ಸತ್ತಾಗಲೂ ಹಾಗೆ ಮಾಡಲಿ ಎಂಬ ದೂರಾಲೋಚನೆ!**

- **ವಿನಾಯಕ ಹಿರೇಮಠ, (ಇಮೇಲ್ ಮೂಲಕ)**
  ಭಟ್ರೇ, ಜೋಕ್ ಹೇಳಿದರೆ ಎಸ್ಸೆಂ ಕೃಷ್ಣ ಬಹಳ ನಗುತ್ತಿದ್ದರಂತೆ?
  – **'ಮಾತಾಡುವಾಗ ಮಾತ್ರ ತೊದಲುತ್ತಾರೆ' ಅಂದ ಹಾಗಾಯ್ತು!**

- **ರೂಪಾ ಶ್ರೀನಾಥ, (ಇಮೇಲ್ ಮೂಲಕ)**
  ಭಟ್ರೇ, ಲೋಕಾಯುಕ್ತರು ಏನು ಮಾಡುತ್ತಿದ್ದಾರೆ?
  – **ಭ್ರಷ್ಟರ ನಿದ್ದೆಗೆಡಿಸುವ ಬದಲು ಅವರೇ ನಿದ್ದೆಯಲ್ಲಿದ್ದಾರಂತೆ!**

- **ಹೇಮಂತ ಬಿ., ಬೆಂಗಳೂರು**
  ಭಟ್ರೇ, ನೀವು ಕಾಂಗ್ರೆಸ್ ಪರವೋ, ಬಿಜೆಪಿ ಪರವೋ?
  – **ಯಾರ ವಿರುದ್ಧ ಎಂಬುದಷ್ಟೇ ಮುಖ್ಯ!**

ಐತಿಹಾಸಿಕ ಕಾದಂಬರಿ ಎಂಬ ಥ್ಯಾಂಕ್‌ಲೆಸ್ ಜಾಬ್

ಕಾಡುದಾರಿ
ಹರೀಶ್ ಕೇರ
vveditoped@gmail.com

ಇತಿಹಾಸವೇ ಅಸಾಧಾರಣ ಕಥೆಗಳಿಂದ ತುಂಬಿಹೋಗಿದೆ. ನನ್ನ ಹೊಸ ಪುಸ್ತಕದಲ್ಲಿ ಅಹ್ಮದ್ ಶಾ ಗಲಿ ಎಂಬ ಒಬ್ಬ ಮುಸ್ಲಿಂ ರಾಜನ ಕಥೆಯಿದೆ. ಅವನು ಆಹಾರ ಸೇವಿಸುವಾಗ ಅವನ ಮೂಗಿನಿಂದ ಹುಳಗಳು ಕೆಳಗೆ ಬೀಳುತ್ತಿದ್ದವು. ಯಾಕೆಂದರೆ ಅವನ ಮುಖದ ತುಂಬೆಲ್ಲಾ ಟ್ಯೂಮರ್ ಗಡ್ಡೆಗಳಿದ್ದವು, ವ್ರಣವಾಗಿತ್ತು. ಇದು ಇತರರಿಗೆ ಗೊತ್ತಾಗದಿರಲಿ ಎಂದು ಅವನು ಬೆಳ್ಳಿಯ ಮುಖವಾಡ ಧರಿಸುತ್ತಿದ್ದ. ಇಂಥದು ಎಲ್ಲಾದರೂ ಕೇಳಿದ್ದೀರಾ? ಇಂಥ ಅಸಾಮಾನ್ಯ ನಿಜ ಸಂಗತಿಗಳೇ ಇರುವಾಗ ಊಹಿಸಿಕೊಂಡು ಕಥೆ ಬರೆಯಬೇಕಾದರೂ ಯಾಕೆ?''– ಹಾಗಂತ ಒಂದು ಕಡೆ ವಿಲಿಯಂ ಡಾಲ್ರಿಂಪಲ್ ಕೇಳಿದ್ದ.

ಇವನು ಇತಿಹಾಸದ ಸಂಗತಿಗಳನ್ನು ಎತ್ತಿಕೊಂಡು ಬರೆಯುವ ನಾನ್ ಫಿಕ್ಷನ್ ಬರಹಗಾರ. ಮುಖ್ಯವಾಗಿ ಭಾರತದಲ್ಲಿನ ಮೊಘಲ್ ಆಳ್ವಿಕೆಯ ಕುರಿತು ಗಣನೀಯ ಸಾಹಿತ್ಯ ನೀಡಿದ್ದಾನೆ. ಈ ಮಾತು ಏಕಕಾಲದಲ್ಲಿ ನಮ್ಮ ಐತಿಹಾಸಿಕ ಕಾದಂಬರಿಕಾರರಿಗೆ ನೆಮ್ಮದಿಯನ್ನೂ ಸಿಟ್ಟನ್ನೂ ತರುವಂತಿದೆ. ನೆಮ್ಮದಿ ಯಾಕೆಂದರೆ, ಇತಿಹಾಸದಲ್ಲಿ ಕಲ್ಪನೆಗಿಂತಲೂ ಸೋಜಿಗಕಾರಿ ವಾಸ್ತವಗಳು ತುಂಬಿವೆ ಎಂಬ ಸಮಾಧಾನ. ಸಿಟ್ಟು ಯಾಕೆಂದರೆ ನಮ್ಮ ಕಲ್ಪನೆ–ಬರಹದ ಪ್ರತಿಭೆಯನ್ನು ನಿಜದ ಮುಂದೆ ಏನೂ ಅಲ್ಲ ಎನ್ನುತ್ತಿದ್ದಾನಲ್ಲ ಎಂಬ ಕಾರಣಕ್ಕೆ.

ಅದಿರಲಿ, ಕನ್ನಡದಲ್ಲಿ ಈಗ ಐತಿಹಾಸಿಕ ಕಾದಂಬರಿಗಳ ಸುಗ್ಗಿಯ ಕಾಲ ಎಂದು ತುಂಬಾ ಮಂದಿ ಹೇಳುತ್ತಿದ್ದಾರೆ. ಇದು ಅರ್ಧಸತ್ಯ. ಐತಿಹಾಸಿಕ ಕಾದಂಬರಿಗಳು ಎಂದಿನಿಂದಲೂ ಕನ್ನಡದಲ್ಲಿ ಬೇಡಿಕೆಯಲ್ಲಿದ್ದವು. ಮಾಸ್ತಿ, ಬೆಟಗೇರಿ ಕೃಷ್ಣಶರ್ಮ, ಕೆ.ವಿ. ಅಯ್ಯರ್, ತರಾಸು ಅವರು ಬರೆಯುತ್ತಿದ್ದ ಕಾಲದಿಂದಲೂ ಅವು ನಾನಾ ರೂಪ, ಅವತಾರಗಳಲ್ಲಿ ಇವೆ. ತರಾಸು ಅವರ 'ದುರ್ಗಾಸ್ತಮಾನ'ವನ್ನೇ ನೋಡುವುದಾದರೆ, ಭರ್ತಿ ಒಂದು ಸಾವಿರ ಪುಟಗಳಷ್ಟಿದ್ದ ಅದು ಸಾಕಷ್ಟು ರೋಚಕವಾಗಿಯೂ ಇತ್ತು. ಮದಕರಿ ನಾಯಕನ ಉತ್ಥಾನ ಮತ್ತು ಪತನದ ಕಥೆಯನ್ನು ಹೊಂದಿದ್ದ ಅದು ಇಂದು ಕೂಡ ಜನಪ್ರಿಯ. ಹಾಗೆಯೇ ಮಾಸ್ತಿಯವರ 'ಚಿಕವೀರ ರಾಜೇಂದ್ರ' ಕೂಡ. ಇಂದು ಈ ಕಾದಂಬರಿಗಳ ಸಂಖ್ಯೆ ಸ್ವಲ್ಪ ಹೆಚ್ಚಾಗಿರಬಹುದು. ಹಾಗಂತ ಇದು ಐತಿಹಾಸಿಕ ಕಾದಂಬರಿಗಳ ಸುವರ್ಣಯುಗ ಎಂಬ ತೀರ್ಮಾನಕ್ಕೆ ಬರಬೇಕಿಲ್ಲ.

ಕನ್ನಡದಲ್ಲಿ ಇವುಗಳ ಇತಿಹಾಸ ನೋಡಿದರೆ ಗಮನಿಸಬಹುದಾದ ಒಂದು ಅಂಶ– ಹೆಚ್ಚಿನ ಕಾದಂಬರಿಕಾರರು ಇತಿಹಾಸದ ಮಹಾಪುರುಷರನ್ನು ಕೇಂದ್ರೀಕರಿಸಿ ಬರೆದಿದ್ದಾರೆ. ಈ ಲೇಖಕರು ಮೊದಲಿಗೆ ಒಬ್ಬ ಕಥಾನಾಯಕನನ್ನು ಆರಿಸಿಕೊಳ್ಳುತ್ತಾರೆ. ನಂತರ ಅವನ ಜೀವನದ ಸುತ್ತ ಕಥೆಯನ್ನು ಹೆಣೆಯುತ್ತಾರೆ– ಚಿಕವೀರ ರಾಜೇಂದ್ರ, ದುರ್ಗಾಸ್ತಮಾನ, ಅಯ್ಯರ್ ಅವರ 'ಶಾಂತಲಾ' ಮೊದಲಾದವು. ಈ ರೂಢಿಯನ್ನು ಮುರಿದ ಕಾದಂಬರಿಗಳೂ ಇದ್ದವು. ವಿಜಯನಗರ ಸಾಮ್ರಾಜ್ಯದ ಇತಿಹಾಸ ಹೊಂದಿರುವ ಗಳಗನಾಥರ 'ಮಾಧವ ಕರುಣಾವಿಲಾಸ', 'ಕನ್ನಡಿಗರ ಕರ್ಮಕಥೆ' ಇದಕ್ಕೆ ಉದಾಹರಣೆ. ಹನೂರು ಕೃಷ್ಣಮೂರ್ತಿಯವರ 'ಅಜ್ಞಾತನೊಬ್ಬನ ಆತ್ಮಚರಿತ್ರೆ', ಇತ್ತೀಚಿನ ವಸುಧೇಂದ್ರರ 'ರೇಷ್ಮೆ ಬಟ್ಟೆ'ಗಳನ್ನು ಇಲ್ಲಿ ನೆನೆಯಬಹುದು. ಇವು ಒಂದು ಕಾಲಘಟ್ಟವನ್ನು ಮುಂದಿಟ್ಟುಕೊಂಡು, ಅಂದಿನ ಜನಜೀವನದ ಸುತ್ತ ಹಬ್ಬಿಸಲ್ಪಟ್ಟವು. ಇಲ್ಲಿ ಯಾವುದೇ ಒಬ್ಬ ಮಹಾಪುರುಷನಿಗೆ ಕೆಲಸವಿಲ್ಲ. ಆಯಾ ಕಾಲಮಾನದ ಪಲ್ಲಟಗಳು ಮತ್ತು ಶ್ರೀಸಾಮಾನ್ಯನೇ ಇಲ್ಲಿ ಕಥಾವಸ್ತು. ಮೊದಲ ಬಗೆಯಲ್ಲಿ ಲೇಖಕನಿಗೆ ಸ್ವಾತಂತ್ರ್ಯ ಕಡಿಮೆ. ಆತ ಇತಿಹಾಸಕ್ಕೆ ಹೆಚ್ಚು ಹತ್ತಿರವಾಗಿರಬೇಕಾಗಿರುತ್ತದೆ. ಆ ಮಹಾನ್ ವ್ಯಕ್ತಿಯ ಜೀವನ ಸುಮಾರು ಮಟ್ಟಿಗೆ ದಾಖಲಾಗಿರುತ್ತದೆ. ಅದನ್ನು ಮೀರಲು ಆಗುವುದಿಲ್ಲ. ಎರಡನೇ ಬಗೆಯದರಲ್ಲಿ ಸ್ವಾತಂತ್ರ್ಯ ಹೆಚ್ಚು, ಕಲ್ಪನೆಗೆ ಅಸೀಮಿತ ಅವಕಾಶ. ಓದುಗರು ಎರಡೂ ಥರದವುಗಳನ್ನೂ ಸಮಾನವಾಗಿ ಮೆಚ್ಚಿದ್ದಾರೆ.

ಎರಡೂ ಬಗೆಯ ಕಾದಂಬರಿಗಳಲ್ಲೂ ಕಥೆಗಾರನಿಗೆ ಬಹಳಷ್ಟು ಹೊಣೆಗಾರಿಕೆ ಇರಬೇಕಾಗುತ್ತದೆ. ಜವಾಬ್ದಾರಿಯುತ ಲೇಖಕ ಇದನ್ನು ಹೊರುತ್ತಾನೆ. ಅವನು ತಾನು ಚಿತ್ರಿಸುತ್ತಿರುವ ಕಾಲದ ಸಾಮಾಜಿಕ–ಸಾಂಸಾರಿಕ–ವಾಣಿಜ್ಯ ವ್ಯವಹಾರ ಇತ್ಯಾದಿಗಳ ವಿವರಗಳಿಗೆ ಬದ್ಧನಾಗಿರಬೇಕಾಗುತ್ತದೆ. ಆ ವಿವರಗಳನ್ನು ಓದಿಯೋ ಇತರ ಮೂಲಗಳಿಂದಲೋ ಸಂಪಾದಿಸಬೇಕಾಗುತ್ತದೆ. ಮಹಾಪುರುಷರ ಕಥೆಗಳೇನೋ ಸಿಗುತ್ತವೆ; ಆದರೆ ಸಾಮಾನ್ಯರ ಜೀವನದ ವಿವರಗಳು ಅಷ್ಟು ಸುಲಭವಾಗಿ ಸಿಗುವುದಿಲ್ಲ. ನೂರು ವರ್ಷಗಳ ಈಚಿನವುಗಳಾದರೆ ಗೆಜೆಟಿಯರ್‌ಗಳಲ್ಲಿರುತ್ತವೆ. ಅದಕ್ಕಿಂತ ಹಿಂದಿನವುಗಳು ಕೆಲವು ಶಾಸನಗಳಲ್ಲಿ, ವಿದೇಶಿ ಪ್ರವಾಸಿಗರ ಕಥನಗಳಲ್ಲಿ ಸಿಗುತ್ತವೆ. ಅದಕ್ಕೂ ಹಿಂದಿನವುಗಳಿಗೆ ಧಾರ್ಮಿಕ–ಶಾಸ್ತ್ರಗ್ರಂಥಗಳನ್ನು ತಡಕಬೇಕು.

ಹೀಗೆ ಸಂಗ್ರಹಿಸಿದ ವಿವರಗಳೂ ನೂರಕ್ಕೆ ನೂರು ನಿಜ ಎನ್ನಲು ಬರುವುದಿಲ್ಲ. ಉದಾಹರಣೆಗೆ ಗೌತಮ ಬುದ್ಧರ ಕಾಲದ ವಿವರಗಳೆಲ್ಲಾ ಆತನಿಂದ 3–4 ತಲೆಮಾರು ನಂತರದವರು ಬರೆದು ಸಂಗ್ರಹಿಸಿದಂಥವು. ಇಂದು ನಾವು ನಮಿಸುವ ಬುದ್ಧನ ಮೂರ್ತಿಗಳು ಅವರ ಎಷ್ಟೋ ಕಾಲದ ನಂತರ ಬಂದ ಗ್ರೀಕ್ ಶಿಲ್ಪಿಗಳು ಚಿತ್ರಿಸಿದ ಪರಿಕಲ್ಪನೆ. ಜೈನ ತೀರ್ಥಂಕರರ ಮೂರ್ತಿಗಳೂ ಅಷ್ಟೆ. ಹೀಗಿರುತ್ತ, ನಾವು ಆ ಕಾಲದ ಭಾಷೆ–ಸಾಹಿತ್ಯದಲ್ಲಿ ದಾಖಲಾದ ವಿವರಗಳನ್ನು ನೆಚ್ಚಬೇಕು. ಇವು ಕೂಡ ಕುರುಡರು ಆನೆಯನ್ನು ಮುಟ್ಟಿದಂತೆಯೇ.

ಇಷ್ಟನ್ನಿಟ್ಟುಕೊಂಡು ಕಥೆಗಾರ ಇತಿಹಾಸದ ಕಾದಂಬರಿ ಬರೆಯಲು ಹೊರಡಬೇಕಾಗುತ್ತದೆ. ಆಗ ಅವನ ಮುಂದೆ ಅಗಾಧವಾಗಿ ನಿಲ್ಲುವ ಸವಾಲು ಎಂದರೆ– ತಾನು ಸಂಗ್ರಹಿಸಿದ ಇಷ್ಟೊಂದು ವಿವರಗಳನ್ನು ಎಲ್ಲಿ ಹೇಗೆ ಬಳಸಬೇಕು ಎಂಬುದು. ವಿವರಗಳು ಇದ್ದಾಗ ಕಾದಂಬರಿ ಅಥೆಂಟಿಕ್ ಆಗುತ್ತದೆ, ನಿಜ. ಆದರೆ ವಿವರಗಳು ಹೆಚ್ಚಾಗಬಾರದು. ಯಾವುದು ಹೆಚ್ಚು, ಯಾವುದು ಕಡಿಮೆ ಎಂದು ನಿರ್ಧರಿಸುವುದು ಹೇಗೆ? ಅದಕ್ಕೆ ಅಳತೆಗೋಲು ಇಲ್ಲ. 'ವಿವರಗಳು ಹೆಚ್ಚು, ಕಥೆ ಕಡಿಮೆ, ಬೋರಿಂಗ್' ಎಂದು ವಿಮರ್ಶಕರು ಕಾದಂಬರಿಯನ್ನು ತಳ್ಳಿಹಾಕುವ ಸಾಧ್ಯತೆ ಹೆಚ್ಚು. ವಿವರಗಳನ್ನೇ ಕೊಡದಿದ್ದರೆ ಇದೇ ವಿಮರ್ಶಕರು 'ಕಾಗಕ್ಕ ಗುಬ್ಬಕ್ಕನ ಕಥೆ' ಎಂದು ಹೇಳುವ ಸಾಧ್ಯತೆಯೂ ಇಲ್ಲದಿಲ್ಲ. ವೀರರ ಕಥೆಗಳನ್ನು ಬರೆಯುವವನು ತನ್ನ ಕಥೆಗಾರಿಕೆಯ ಕುದುರೆಗೆ ಸ್ವಲ್ಪ ಕಡಿವಾಣ ಹಾಕಬೇಕಾಗುತ್ತದೆ. ಈಗಾಗಲೇ ದಾಖಲಾಗಿರುವ ಕಥೆಯನ್ನು ತಳ್ಳಿಹಾಕುವ ಸತ್ಯಗಳನ್ನು ದಾಖಲಿಸಲು ಮುಂದಾದರೆ, ಅದಕ್ಕೆ ಪೂರಕ ಸಾಕ್ಷಿಗಳನ್ನು ಒದಗಿಸಬೇಕಾಗುತ್ತದೆ. ಆಗಲೂ ಆ ದಾಖಲೆಗಳು ಅಧಿಕೃತವೇ, ಏಕಪಕ್ಷೀಯ ಅಲ್ಲವೇ ಎಂಬ ಪ್ರಶ್ನೆ ಬಂದೇ ಬರುತ್ತದೆ. ಉದಾಹರಣೆಗೆ, ಭೈರಪ್ಪನವರು ಬರೆದ 'ಆವರಣ' ಎಂಬ ಕಾದಂಬರಿಯ ಬಿಬ್ಲಿಯೋಗ್ರಫಿಯಲ್ಲಿ ನೀಡಲಾಗಿರುವ ಆಧಾರಕೃತಿಗಳೆಲ್ಲ ಏಕಪಕ್ಷೀಯ ಎಂಬ ಆರೋಪ ಬಂತು.

ಹೀಗೆ ಐತಿಹಾಸಿಕ ಕಾದಂಬರಿ ಬರೆಯುವವನದು ಯಾವಾಗಲೂ ಥ್ಯಾಂಕ್‌ಲೆಸ್ ಜಾಬ್. ಬಹಳ ಮಂದಿ ಆತನ ಕಷ್ಟ, ಪರಿಶ್ರಮವನ್ನು ಗುರುತಿಸುವುದಿಲ್ಲ. ಹೇಗೆ ಬರೆದರೂ ಒಂದಲ್ಲ ಒಂದು ಕೊಂಕನ್ನು ಎದುರಿಸಬೇಕಾಗುತ್ತದೆ. ಒಂದೆರಡು ನೂರು ವರ್ಷಗಳ ಹಿಂದಿನ ಕಥೆ ಬರೆದರೆ, ಆ ಕಥೆಯ ನಿಜಪುರುಷರ ಉತ್ತರಾಧಿಕಾರಿಗಳೋ, ಜಾತ್ಯಸ್ಥರೋ, ಅದೇ ಧರ್ಮೀಯರೋ ತಗಾದೆ ತೆಗೆಯುವ ಸಾಧ್ಯತೆಗಳೇ ಅಧಿಕ. ಆಗ ಬರಹಗಾರನ ಹಿನ್ನೆಲೆ ಮುನ್ನೆಲೆಗಳೂ ಚರ್ಚೆಗೆ ಬರುತ್ತವೆ. ಆತನ ಪಂಥೀಯತೆ, ನಿಲುವುಗಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತದೆ. ಹೀಗೆ ಕಟಕಟೆಯಲ್ಲಿ ನಿಲ್ಲದ ಇತಿಹಾಸ ಕಾದಂಬರಿಕಾರರೇ ಇಲ್ಲವೇನೋ.

ಇಷ್ಟೆಲ್ಲ ಅಪಾಯ ಮೈಮೇಲೆ ಎಳೆದುಕೊಂಡು ಒಬ್ಬ ಕೃತಿಕಾರ ಯಾಕೆ ಇತಿಹಾಸ ಕಾದಂಬರಿ ರಚಿಸುತ್ತಾನೆ? ಇದೀಗ ಒಳ್ಳೆಯ ಪ್ರಶ್ನೆ. ಅಪಾಯ ಇದೆ ಎಂದು ಗೊತ್ತಿದ್ದರೂ ಬಂಗೀ ಜಂಪಿಂಗ್ ಮಾಡುವವರಿಲ್ಲವೆ? ಇದೂ ಅಂಥದೇ ಒಂದು ಥ್ರಿಲ್ ಎಂದು ಹೇಳಿ ಕೈತೊಳೆದುಕೊಂಡುಬಿಡಬಹುದು. ಆದರೆ ಇದಕ್ಕಿಂತಲೂ ಗಾಢವಾದುದು ಇನ್ನೇನೋ ಇದೆ. ಮನುಷ್ಯನ ಜೀನ್‌ನಲ್ಲೇ ಮೂಲ ಹುಡುಕುವ ಹುಕಿಯೊಂದಿದೆ. ಒಂದು ಪ್ರಾಯದ ನಂತರ ತಮ್ಮ ವಂಶವೃಕ್ಷವನ್ನು ರಚಿಸಲು ಮುಂದಾಗುವ ಹಿರಿಯರನ್ನು ನಾವು ನೀವೆಲ್ಲ ನಮ್ಮ ಕುಟುಂಬಗಳಲ್ಲಿ ನೋಡಿಯೇ ಇರುತ್ತೇವಲ್ಲವೆ? ಇದೆಲ್ಲ ಹೀಗೇ ನಡೆಯಿತು, ಹೀಗೂ ನಡೆದಿರಬಹುದು ಎಂದು ಭಾವಿಸುವುದೆಲ್ಲ ಮನುಷ್ಯ ಸ್ವಭಾವ. ಅದನ್ನು ಜತೆಗಾರರಿಗೆ ಹೇಳದಿರುವುದು ಕಥೆಗಾರರಿಗೆ ಕಷ್ಟ.

ಮಹಾಭಾರತವನ್ನು ಇತಿಹಾಸ ಎನ್ನುತ್ತಾರೆ. ಮಹಾಭಾರತದ ಘಟನೆಗಳು, ವಿವರಗಳನ್ನು ಆಧರಿಸಿ ಅದರ ಕಾಲವನ್ನು ಲೆಕ್ಕ ಹಾಕಲಾಗಿದೆ. ಕಥೆಗಳ ಒಳಗೆ ಕಥೆ, ಇತಿಹಾಸದ ಒಳಗೆ ಇತಿಹಾಸ ಹೆಣೆದುಕೊಂಡಿರುವುದು ಇದರ ವಿಶಿಷ್ಟತೆ. ಈ ದೇಶದ ಮೊದಲ ಐತಿಹಾಸಿಕ ಕಾದಂಬರಿಕಾರ ಹಾಗೂ ಓದುಗ ಇಬ್ಬರೂ ಈ ಮಹಾಭಾರತದ ಒಳಗೇ ಇದ್ದಾರೆ. ಅರಸ ಜನಮೇಜಯ ತನ್ನ ತಂದೆ ಪರೀಕ್ಷಿತನನ್ನು ಕೊಂದ ತಕ್ಷಕನ ಮೇಲೆ ಸೇಡು ತೀರಿಸಿಕೊಳ್ಳಲು ಸರ್ಪಯಜ್ಞ ನಡೆಸುತ್ತಾನೆ. ಅಲ್ಲಿಗೆ ಬಂದ ಆಸ್ತಿಕ, ಜನಮೇಜಯನ ಮನವೊಲಿಸಿ ಅದನ್ನು ನಿಲ್ಲಿಸುತ್ತಾನೆ. ಈ ಸಂದರ್ಭದಲ್ಲಿ ಅಲ್ಲಿಗೆ ಬಂದ ಮುನಿ ವೈಶಂಪಾಯನನಿಗೆ ನನ್ನ ಪೂರ್ವಜರ ಕಥೆಯನ್ನು ಹೇಳು ಎಂದು ಜನಮೇಜಯನು ವಿನಂತಿಸುತ್ತಾನೆ. ಹೀಗೆ ವೇದವ್ಯಾಸರಿಂದ ರಚಿತವಾಗಿ ತಮಗೆ ಹೇಳಲ್ಪಟ್ಟ ಪಾಂಡವ–ಕೌರವರ ಕಥೆಯನ್ನು ವೈಶಂಪಾಯನ ಮುನಿಯು ಜನಮೇಜಯನಿಗೆ ಹೇಳುತ್ತಾನೆ. ಇದನ್ನು ಆ ಯಜ್ಞದಲ್ಲಿ ಕೇಳಿಸಿಕೊಂಡ ಸೂತ ಪುರಾಣಿಕರು, ನೈಮಿಷಾರಣ್ಯದಲ್ಲಿ ಋಷಿಗಳಿಗೆ ಬಂದು ಹೇಳುತ್ತಾರೆ.

ಹೀಗೆ ಕೇಳಿಸಿಕೊಳ್ಳುವವರು, ಓದುವವರು ಇಲ್ಲದಿದ್ದರೆ ಕಥೆಗಾರ ಕಥೆ ಬರೆಯಲು ಮುಂದಾಗುವುದು ಕಷ್ಟ. ಇದು ಎಲ್ಲ ಬಗೆಯ ಕಥೆಗಳಿಗೂ ಅನ್ವಯವಾಗುತ್ತದಾದರೂ, ನನ್ನ ಕಥೆಯನ್ನು ಹೇಳಿ, ನಮ್ಮ ಪೂರ್ವಜರ ಕಥೆಯನ್ನು ಹೇಳಿ ಎಂದು ಕೇಳುವವರನ್ನು ಎದುರಿಸಿ ಗೆಲ್ಲುವುದು ಕಡುಕಷ್ಟ. ಇಂಥ ಸುಖವಾದ ಕಷ್ಟವನ್ನು ಎದುರಿಸಿ ಗೆಲ್ಲಲು ಪ್ರತಿ ಲೇಖಕನೂ ಒಳಗೊಳಗೇ ಬಯಸುತ್ತಿರುತ್ತಾನೆ ಅನಿಸುತ್ತದೆ. ಕೆಲವರು ಆ ಕಷ್ಟವನ್ನು ಕೈಗೆತ್ತಿಕೊಳ್ಳುತ್ತಾರೆ, ಉಳಿದವರು ಇಲ್ಲ ಅಷ್ಟೇ. ಐತಿಹಾಸಿಕ ಕಾದಂಬರಿಯಲ್ಲಿ ಓದುಗ ಏನು ಬಯಸುತ್ತಾನೆ ಎಂಬುದಕ್ಕೂ ಇಲ್ಲಿಯೇ ಉತ್ತರವಿದೆ. ಲೇಖಕ, ಓದುಗ ಇಬ್ಬರೂ ಸೇರಿ ತಮ್ಮದೊಂದು ಚರಿತ್ರೆಯನ್ನು ಕಟ್ಟಿಕೊಳ್ಳಲು ಏಕಕಾಲಕ್ಕೆ ಬಯಸುತ್ತಿರುತ್ತಾರೆ. ಇಲ್ಲಿ ಓದುಗನೊಳಗಿರುವ ಕಥೆಗಾರ ಹಾಗೂ ಕಥೆಗಾರನೊಳಗಿರುವ ಓದುಗ ಪರಸ್ಪರ ಮುಖಾಮುಖಿಯಾಗಿ ತಮ್ಮ ಜೀವವಾಹಿನಿಯನ್ನು ತೊಟ್ಟಿಲಲ್ಲಿರಿಸಿ ತೂಗುತ್ತಿರುತ್ತಾರೆ. ಹಾಗೆ ನೋಡಲಾಗಿ, ಐತಿಹಾಸಿಕ ಕಾದಂಬರಿ ಎಂಬುದು ಕಾಲದ ಕೈಗೂಸು. ಅದು ಬರೆದವನಿಗೂ, ಓದುಗನಿಗೂ, ಕಥೆಗಾರನಿಗೆ ಕಥೆಯನ್ನು ಕೊಟ್ಟ ಅದಕ್ಕೂ ಹಿಂದಿನ ಎಲ್ಲ ಚರಿತ್ರಕಾರರಿಗೂ ಸೇರಿದ್ದು. ಆದ್ದರಿಂದ, 'ನಾನು ಈ ಕಾದಂಬರಿ ಬರೆದೆ' ಎಂದು ಐತಿಹಾಸಿಕ ಕಾದಂಬರಿಕಾರ ಎದೆಯುಬ್ಬಿಸಿ ಹೇಳಿಕೊಳ್ಳುವಂತಿಲ್ಲ. ಅವನು ಈ ಕಥೆಯನ್ನು ತನ್ನಲ್ಲಿ ಮೂಡಿಸಿದ ಈ ಜಗತ್ತಿನ ಭವ್ಯ ವಿನ್ಯಾಸಕ್ಕೆ ಋಣಿಯಾಗಿರಬೇಕಾಗುತ್ತದೆ. ಐತಿಹಾಸಿಕ ಕಾದಂಬರಿಕಾರನ ಕಷ್ಟವೇ!

ಅಟಲ್‌ಜೀ ಹೃದಯ ಗೆದ್ದ ಫಡ್ನವಿಸ್

ರಾಜಬೀದಿ
ವಿನಾಯಕ ಮಠಪತಿ

ಸಾಕಷ್ಟು ವರ್ಷಗಳ ಹಿಂದೆ ಮಹಾರಾಷ್ಟ್ರದ ಶಾಸಕರೊಬ್ಬರು ಬಣ್ಣ ಬಣ್ಣದ ಶರ್ಟ್ ತೊಟ್ಟು, ಜಾಹೀರಾತು ಹೋರ್ಡಿಂಗ್‌ನಲ್ಲಿ ಕಾಣಿಸಿಕೊಂಡಿದ್ದ ಫೋಟೋಗಳು ಸಾಮಾಜಿಕ ಮಾಧ್ಯಮಗಳಲ್ಲಿಂದು ಸದ್ದುಮಾಡುತ್ತಿವೆ. ಅವರು ಮಾಜಿ ಪ್ರಧಾನಿ ವಾಜಪೇಯಿಯವರ ಹೃದಯ ಗೆದ್ದವರೂ ಹೌದು. ಅವರೇ ಮಹಾರಾಷ್ಟ್ರದ ಇಂದಿನ ಸಿಎಂ ದೇವೇಂದ್ರ ಫಡ್ನವಿಸ್!

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮಹಾಯುತಿ ಮೈತ್ರಿಕೂಟ ಭರ್ಜರಿ ಗೆಲುವು ದಾಖಲಿಸಿ, ಅತಿಹೆಚ್ಚು ಸ್ಥಾನ ಗೆದ್ದ ಬಿಜೆಪಿಯ ದೇವೇಂದ್ರ ಫಡ್ನವಿಸ್ ನಿರೀಕ್ಷೆಯಂತೆ 3ನೇ ಅವಧಿಗೆ ಸಿಎಂ ಹುದ್ದೆ ಅಲಂಕರಿಸಿರುವುದು ನಿಮಗೆ ಗೊತ್ತಿರುವಂಥದ್ದೇ; ಆದರೆ, ಒಂದು ಕಾಲಕ್ಕೆ ಇವರು ಮಾಡೆಲಿಂಗ್‌ನಲ್ಲೂ ಸದ್ದು ಮಾಡಿದ್ದು ಸಾಕಷ್ಟು ಮಂದಿಗೆ ಗೊತ್ತಿರಲಾರದು. 1970ರಲ್ಲಿ ಜನಿಸಿದ ಫಡ್ನವಿಸ್ 27ನೇ ವಯಸ್ಸಿಗೇ ನಾಗಪುರ ಮುನ್ಸಿಪಲ್ ಕಾರ್ಪೊರೇಷನ್‌ನ ಮೇಯರ್ ಹುದ್ದೆ ಅಲಂಕರಿಸಿದ್ದರು. ನಂತರ 1999ರಲ್ಲಿ ನಾಗಪುರ ನೈಋತ್ಯ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾದ ಇವರು ಈವರೆಗೂ ಸೋಲುಂಡಿಲ್ಲ. ಇಂಥ ಬಿಡುವಿರದ ರಾಜಕಾರಣದ ನಡುವೆಯೂ ಅವರು ಮಾಡೆಲಿಂಗ್‌ನಿಂದಲೂ ಜನಮನ ಸೆಳೆದಿದ್ದುಂಟು. ಅದು 2004ರ ಕಾಲಘಟ್ಟ. ಆಗಿನ್ನೂ ಶಾಸಕರಾಗಿದ್ದ ಫಡ್ನವಿಸ್ ಸಪೂರ ದೇಹಿಯೂ ಸುಂದರಾಂಗನೂ ಆಗಿದ್ದರು. ಇದೇ ವೇಳೆಗೆ ಕಂಪನಿಯೊಂದು ತನ್ನ ಉಡುಪುಗಳ ಜಾಹೀರಾತಿಗೆ ರೂಪದರ್ಶಿಯ ಹುಡುಕಾಟದಲ್ಲಿತ್ತು. ಆಗ ಛಾಯಾಗ್ರಾಹಕ ವಿವೇಕ ರಾನಡೆಯವರಿಗೆ ಹೊಳೆದಿದ್ದು ಫಡ್ನವಿಸ್ ಹೆಸರು. ಶಾಸಕರಾಗಿದ್ದ ಫಡ್ನವಿಸ್ ಇದಕ್ಕೆ ಒಪ್ಪಲಿಲ್ಲ. ಆದರೆ ರಾನಡೆ ತಮ್ಮ ಗೆಳೆಯನ ನೆರವಿನಿಂದ ಫಡ್ನವಿಸ್‌ರನ್ನು ಕೊನೆಗೂ ಒಪ್ಪಿಸಿದರು. ಸುದೀರ್ಘವಾಗಿ ನಡೆದ ಫೋಟೋ ಶೂಟ್‌ನಲ್ಲಿ ವೈವಿಧ್ಯಮಯ ಬಟ್ಟೆಗಳನ್ನು ತೊಟ್ಟು ಫಡ್ನವಿಸ್ ಫೋಸ್ ಕೊಟ್ಟರು.

ಹೇಳಿಕೇಳಿ ನಾಗಪುರ ಶಾಸಕರಾಗಿದ್ದ ಫಡ್ನವಿಸ್‌ಗೆ ಸಹಜವಾಗೇ ಜನಪ್ರಿಯತೆಯೂ ಇತ್ತು. ಈ ಪಟ್ಟಣದ 8ಕ್ಕೂ ಹೆಚ್ಚು ಜಾಹೀರಾತು ಹೋರ್ಡಿಂಗ್‌ಗಳಲ್ಲಿ ಜೀನ್ಸ್ ಪ್ಯಾಂಟ್, ಕೆಂಪು ಶರ್ಟ್ ತೊಟ್ಟ ಫಡ್ನವಿಸ್‌ರ ಫೋಟೋಗಳು ಜನರ ಗಮನ ಸೆಳೆದಿದ್ದವು. ವಾಡಿಕೆಯಂತೆ ಕುರ್ತಾ–ಪೈಜಾಮಾಧಾರಿಯಾಗಿ ಜನಸೇವೆಯಲ್ಲಿ ವ್ಯಸ್ತರಾಗಿರುತ್ತಿದ್ದ ರಾಜಕಾರಣಿಯೊಬ್ಬರು ಹೀಗೆ ಮಾಡೆಲಿಂಗ್‌ನಲ್ಲಿ ಮಿಂಚಿದ್ದು ಮಹಾರಾಷ್ಟ್ರದ ರಾಜಕೀಯ ವಲಯದಲ್ಲಿ ಅಂದು ದೊಡ್ಡ ಸುದ್ದಿಯಾಗಿತ್ತು. ಇದು ಅಟಲ್ ಬಿಹಾರಿ ವಾಜಪೇಯಿ ಅವರ ಗಮನಕ್ಕೂ ಬಂದು, ದೆಹಲಿಗೆ ಬರುವಂತೆ ಫಡ್ನವಿಸ್‌ರಿಗೆ ಅವರು ಸೂಚಿಸಿದರು. ಅಂತೆಯೇ ತೆರಳಿದಾಗ ವಾಜಪೇಯಿಯವರು ''ಆಯಿಯೇ... ಆಯಿಯೇ ಮಾಡೆಲ್ ಜೀ..'' ಎಂದು ಸ್ವಾಗತಿಸಿದರಂತೆ! ತರುವಾಯದಲ್ಲಿ ದೆಹಲಿ ಹೈಕಮಾಂಡ್ ಮಟ್ಟದಲ್ಲೂ ಫಡ್ನವಿಸ್ ಆಕರ್ಷಣೀಯ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದು ಇತಿಹಾಸ.

ತಾಳ್ಮೆ ಮತ್ತು ಸೈದ್ಧಾಂತಿಕ ಬದ್ಧತೆಯಿಟ್ಟುಕೊಂಡು ರಾಜಕಾರಣ ಮಾಡುವವರನ್ನು ಇಂದು ಹುಡುಕುವಂತಾಗಿದೆ. ಆದರೆ ರಾಜಕಾರಣದಲ್ಲಿ ಕಾಯುವಿಕೆಗೆ ಅದರದ್ದೇ ಆದ ಮಹತ್ವವಿದೆ. 'ತಾಳಿದವನು ಬಾಳಿಯಾನು' ಎನ್ನುವಂತೆ ಮಹಾರಾಷ್ಟ್ರ ರಾಜಕಾರಣದಲ್ಲಿ ತಾಳಿದಷ್ಟು ಬೆಳೆದು ನಿಂತವರಲ್ಲಿ ಎದ್ದು ಕಾಣುವ ಹೆಸರು ಫಡ್ನವಿಸ್. ಕೆಲವೇ ವರ್ಷಗಳ ಹಿಂದೆ ಮಹಾರಾಷ್ಟ್ರ ಬಿಜೆಪಿಯು ಕೇವಲ ನಿತಿನ್ ಗಡ್ಕರಿ ಮತ್ತು ದಿವಂಗತ ಗೋಪಿನಾಥ್ ಮುಂಡೆ ಅವರ ಹಿಡಿತದಲ್ಲಿತ್ತು. ಈ ಇಬ್ಬರು ಘಟಾನುಘಟಿಗಳ ನಡುವೆ ರಾಜಕೀಯ ಒಳತಿಕ್ಕಾಟಗಳು ಸಾಮಾನ್ಯವಾಗಿದ್ದವು. ಆದರೆ ಇವರಿಬ್ಬರ ನಡುವೆಯೂ ರಾಜ್ಯದ ಬಿಜೆಪಿ ನೇತಾರರಾಗಿ ಫಡ್ನವಿಸ್ ಹೊಮ್ಮಿದ್ದಕ್ಕೆ ಅವರ ಕಾಯುವಿಕೆ ಮತ್ತು ಪಕ್ಷನಿಷ್ಠೆಗಳೇ ಕಾರಣ ಎಂದರೆ ತಪ್ಪಾಗಲಾರದು.

ಫಡ್ನವಿಸ್‌ರ ತಂದೆ ಗಂಗಾಧರರಾವ್‌ರನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ತಮ್ಮ ರಾಜಕೀಯ ಗುರುಸಮಾನರಾಗಿ ನೋಡುತ್ತಿದ್ದರು. ತರುವಾಯ ಫಡ್ನವಿಸ್‌ರು ಶಾಸಕರಾಗಿ ಆಯ್ಕೆಯಾಗುವುದರ ಹಿಂದೆ ಗಡ್ಕರಿಯವರ ಶ್ರಮವೂ ಸಾಕ್ಷಿತ್ತು. ನಂತರದಲ್ಲಿ ನಿರಂತರವಾಗಿ ವಿಧಾನಸಭಾ ಚುನಾವಣೆಗಳನ್ನು ಗೆಲ್ಲುತ್ತಾ ಬಂದ ಫಡ್ನವಿಸ್ 2014ರಲ್ಲಿ ಸಿಎಂ ಸ್ಥಾನವನ್ನು ಅಲಂಕರಿಸಿದರು; ಆದರೆ 2019ರಲ್ಲಾದ ರಾಜಕೀಯ ಏರಿಳಿತದಿಂದಾಗಿ ಈ ಸ್ಥಾನ ಕೈತಪ್ಪಿತ್ತು. 2022ರಲ್ಲಿ ಮತ್ತೊಮ್ಮೆ ಈ 'ಭಾಗ್ಯ' ಎದುರೇ ಇದ್ದರೂ, ಹೈಕಮಾಂಡ್ ನಿರ್ಧಾರಕ್ಕೆ ತಲೆಬಾಗಿದ್ದರು ಫಡ್ನವಿಸ್.

ಒಮ್ಮೆ 'ಸಿಎಂ' ಎನಿಸಿಕೊಂಡಿದ್ದವರು, ಅನುಭವವೇ ಇರದ ವ್ಯಕ್ತಿಯ ಸಂಪುಟದಲ್ಲಿ ಪುನಃ 'ಡಿಸಿಎಂ' ಹುದ್ದೆ ಅಲಂಕರಿಸುವುದು ಸುಲಭಕ್ಕೆ ಜೀರ್ಣಿಸಿಕೊಳ್ಳುವ ಸಂಗತಿಯಲ್ಲ. ಆದರೆ, ಫಡ್ನವಿಸ್‌ರ ಪಕ್ಷನಿಷ್ಠೆ ಹಾಗೂ ಆ ವೇಳೆ ತೋರಿದ್ದ ಪ್ರಬುದ್ಧತೆಯಿಂದಾಗಿ ಈಗ ಮತ್ತೊಮ್ಮೆ ಸಿಎಂ ಗದ್ದುಗೆ ಅವರನ್ನು ಹುಡುಕಿಕೊಂಡು ಬಂದಿದೆ. ಪಕ್ಷನಿಷ್ಠೆ ಮತ್ತು ತಾಳ್ಮೆಯ ಜತೆಗೆ ಸಮಯಕ್ಕೆ ತಕ್ಕಂತೆ ನಿರ್ಧರಿಸುವ ಪ್ರಬುದ್ಧತೆಯಿದ್ದರೆ ರಾಜಕಾರಣಿಯೊಬ್ಬ ಏನೆಲ್ಲಾ ಪಡೆದುಕೊಳ್ಳಬಹುದು ಎಂಬುದಕ್ಕೆ ಫಡ್ನವಿಸ್ ಒಂದು ಉದಾಹರಣೆ. ಆದರೆ ಈ ಮೇಲ್ಪಂಕ್ತಿಯು ಕರ್ನಾಟಕದ 'ಕಮಲ' ನಾಯಕರಿಗೆ ಈವರೆಗೂ ಅರ್ಥವಾಗದಿರುವುದು ವಿಪರ್ಯಾಸ. ಕಳೆದ ಕೆಲ ವರ್ಷಗಳಿಂದ 'ಮನೆಯೊಂದು ಮೂರು ಬಾಗಿಲು' ಎಂಬಂತಾಗಿದೆ

ಕರ್ನಾಟಕದ ಬಿಜೆಪಿಯ ಸ್ಥಿತಿ. ಇಲ್ಲಿನ ಬಹುತೇಕರಿಗೆ ಅಧಿಕಾರ ಮತ್ತು ಪ್ರಚಾರದ ಹುಚ್ಚು ತಲೆಗೇರಿದ್ದು, ಪಕ್ಷನಿಷ್ಠೆ ಮತ್ತು ಸಂಯಮವನ್ನು, ಹಿರಿಯ ನಾಯಕರ ನಿರ್ಧಾರಕ್ಕೆ ಬದ್ಧವಾಗಿರುವ ಸ್ವಭಾವವನ್ನು ಇವರು ಕಳೆದುಕೊಂಡಿರುವುದು ಸ್ಪಷ್ಟಗೋಚರವಾಗಿದೆ. ಇವರು ಫಡ್ನವಿಸ್‌ರಿಂದ ಕಲಿಯುವುದು ಸಾಕಷ್ಟಿದೆ. ಆಗ ಮಾತ್ರವೇ, ತಮಗೇಕೆ ಫಡ್ನವಿಸ್‌ರಂತೆ ರಾಜಕೀಯದ ಉತ್ತುಂಗಕ್ಕೆ ಏರಲಾಗುತ್ತಿಲ್ಲ ಎಂಬ ಪ್ರಶ್ನೆಗೆ ಅವರಿಗೆ ಉತ್ತರ ಸಿಗುತ್ತದೆ!

• • •

ಮೂರನೇ ಅವಧಿಗೆ ಸಿಎಂ ಹುದ್ದೆ ಅಲಂಕರಿಸುವಾಗಿನ ಪ್ರಮಾಣವಚನದ ವೇಳೆ ಫಡ್ನವಿಸ್ ತಮ್ಮ ಹೆಸರಿನ ಜತೆಗೆ ತಾಯಿಯ ಹೆಸರನ್ನೂ ಸೇರಿಸಿಕೊಂಡಿದ್ದು ಚರ್ಚೆಯ ವಿಷಯವಾಗಿದೆ. 2014 ಮತ್ತು 2019ರ ಪ್ರಮಾಣವಚನದ ವೇಳೆ ಅವರು 'ನಾನು ದೇವೇಂದ್ರ ಗಂಗಾಧರರಾವ್ ಫಡ್ನವಿಸ್' ಎಂದು ಉಲ್ಲೇಖಿಸಿದ್ದರು. ಆದರೆ ಈ ಸಲ ಅವರು, 'ನಾನು ದೇವೇಂದ್ರ ಸರಿತಾ ಗಂಗಾಧರರಾವ್ ಫಡ್ನವಿಸ್' ಎಂದು ಹೇಳಿಕೊಂಡಿದ್ದು ಹಲವರ ಹುಬ್ಬೇರಿಸಿತ್ತು. ಇದಕ್ಕೊಂದು ಕಾರಣವಿದೆ. ಏಕನಾಥ ಶಿಂಧೆ ಅವರು ಮಹಾರಾಷ್ಟ್ರದ ಹಿಂದಿನ ಸಿಎಂ ಆಗಿದ್ದಾಗ, 2024ರ ಮೇ 1ರಿಂದ ಜನಿಸಿದ್ದ ಪ್ರತಿಯೊಂದು ಮಗುವಿನ ಹೆಸರಿನಲ್ಲಿ ತಂದೆಯ ಜತೆಗೆ ತಾಯಿಯ ಹೆಸರನ್ನೂ ಸೇರಿಸುವ ಮಹತ್ವದ ನಿರ್ಧಾರವನ್ನು ಅವರ ಸರಕಾರ ಕೈಗೊಂಡಿತ್ತು. ಪ್ರತಿ ಮಗುವಿನ ಬೆಳವಣಿಗೆಯಲ್ಲಿ ತಂದೆಯಷ್ಟೇ ತಾಯಿಯ ಪಾತ್ರವೂ ಬಹುಮುಖ್ಯವಾಗಿರುತ್ತದೆ ಎಂಬುದು ಈ ನಿರ್ಧಾರದ ಹಿಂದಿನ ಆಶಯವಾಗಿತ್ತು. ಈ ನಿಲುವನ್ನು ತಳೆದ ನಂತರದಲ್ಲಿ ಅಂದಿನ ಸಿಎಂ ಶಿಂಧೆ, ಡಿಸಿಎಂಗಳಾದ ಫಡ್ನವಿಸ್ ಮತ್ತು ಅಜಿತ್ ಪವಾರ್ ತಂತಮ್ಮ ಹೆಸರಿನ ಜತೆಗೆ ತಾಯಿಯ ಹೆಸರನ್ನೂ ಜೋಡಿಸಿಕೊಂಡಿದ್ದರು. ಹಾಗೆ ನೋಡಿದರೆ, ತಾಯಿ ಸರಿತಾ ಅವರು ಫಡ್ನವಿಸ್‌ರ ಮೊದಲ ರಾಜಕೀಯ ಗುರು ಎಂದರೆ ತಪ್ಪಾಗಲಾರದು. ಆಕೆ ಫಡ್ನವಿಸ್ ಬಾಲಕನಾಗಿದ್ದಾಗ ಆರೆಸ್ಸೆಸ್‌ನ ಶಾಖೆಗಳಿಗೆ ಕೈಹಿಡಿದು ಕರೆದುಕೊಂಡು ಹೋಗುತ್ತಿದ್ದುದುಂಟು. ಅಂದು 'ಫಡ್ನವಿಸ್ ಕುಟುಂಬ' ರಾಜಕೀಯವಾಗಿಯೂ ಗುರುತಿಸಿಕೊಂಡಿತ್ತು. ತಾಯಿ ಸರಿತಾ ಅವರು ವಿದರ್ಭ ಹೌಸಿಂಗ್ ಕ್ರೆಡಿಟ್ ಸೊಸೈಟಿಯ ನಿರ್ದೇಶಕರಾಗಿದ್ದಾಗ, ತಂದೆ ಗಂಗಾಧರರಾವ್ ಅವರು ನಾಗಪುರದಿಂದ ಮಹಾರಾಷ್ಟ್ರ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ನಂತರ ಮಗ ದೇವೇಂದ್ರ ಫಡ್ನವಿಸ್ ಕಾರ್ಪೊರೇಟರ್ ಆಗಿ, 3ನೇ ಬಾರಿಗೆ ರಾಜ್ಯದ ಸಿಎಂ ಆಗುವವರೆಗೆ ಬೆಳೆದಿದ್ದರ ಹಿಂದೆ ತಾಯಿ ಸರಿತಾರ ಶ್ರಮದ ಪಾಲಿದೆ. ಮಹಾರಾಷ್ಟ್ರ ರಾಜಕಾರಣದಲ್ಲಿನ ಮರಾಠಾ ಮತ್ತು ಹಿಂದುಳಿದ ವರ್ಗಗಳ ಜಾತಿ ಸಮೀಕರಣದ ನಡುವೆಯೂ ಬ್ರಾಹ್ಮಣ ಯುವಕನೊಬ್ಬ ತನ್ನ ಚಾಣಾಕ್ಷತೆಯಿಂದ ಯಾವ ಮಟ್ಟಕ್ಕೆ ಬೆಳೆದರು ಎಂಬುದಕ್ಕೆ ಫಡ್ನವಿಸ್ ಉತ್ತಮ ಉದಾಹರಣೆ.

(ಲೇಖಕರು ಪತ್ರಕರ್ತರು)

ಪಂಚ್ ಭಕ್ಷ್ಯ ಪರಮಾನ್ನ..!

ಯಗಟಿ ರಘು ನಾಡಿಗ್

ಕೋವಿಡ್ ಅಕ್ರಮ, ಆಕ್ಸಿಜನ್ ಪ್ರಕರಣ ಮರುತನಿಖೆಗೆ: ಡಿಸಿಎಂ ಡಿಕೆಶಿ



ಅಲ್ಲಿಗೆ, ತಪ್ಪಿತಸ್ಥರು 'ಡ್ರಿಪ್' ಹಾಕಿಸ್ಕೊಂಡು 'ಐಸಿಯು'ನಲ್ಲಿ ಪಾಚ್ಕೋತಾರೆ ಅಂತಾಯ್ತು..!!

ಬಿಸಿಯೂಟದವರ ಬದುಕನ್ನು ತಣ್ಣಗಾಗಿಸುತ್ತಿರುವ ಗೌರವಧನ!

ಸಂಬಳ ಹೆಚ್ಚಿಸಿ ಎಂದು ಆರೇಳು ವರ್ಷದಿಂದ ಹೋರಾಟ ಮಾಡಿದರೂ ಪ್ರಯೋಜನವಾಗುತ್ತಿಲ್ಲ. ತಾಲೂಕು, ಜಿಲ್ಲೆ, ರಾಜ್ಯಮಟ್ಟದಲ್ಲಿ ಹೋರಾಡಿದೆವು. ಸ್ಪಂದನೆ ಶೂನ್ಯವಾಯ್ತು. ಕೇವಲ ನಮ್ಮ ಸಮಯ ಮತ್ತು ಹಣ ವ್ಯರ್ಥವಾಯಿತೇ ವಿನಾ ಯಾವ ಫಲವೂ ದೊರೆಯಲಿಲ್ಲ ಎಂದು ನೊಂದು ನುಡಿಯುತ್ತಿದ್ದಾರೆ ಅಕ್ಷರದಾಸೋಹದ ಅಡುಗೆ ಸಹಾಯಕಿಯರು.

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಜನಪ್ರಿಯ ಯೋಜನೆ, ಭಾಗ್ಯಗಳ ಸದ್ದುಗದ್ದಲಗಳ ಇಂದಿನ ದಿನಗಳಿಗಿಂತ, ನಿಜವಾಗಿಯೂ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದ ದೇಶದ ಮಕ್ಕಳನ್ನು ಶಾಲೆಗೆ ಕರೆತರುವಲ್ಲಿ ಯಶಸ್ವಿಯಾದಂಥ ಯೋಜನೆಗಳನ್ನು ಹಿಂದಿನ ದಿನಮಾನಗಳಲ್ಲಿ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತಂದರೆನ್ನಬಹುದು. ಇಂಥವುಗಳಲ್ಲಿ ಅಕ್ಷರದಾಸೋಹ–ಮಧ್ಯಾಹ್ನದ ಬಿಸಿಯೂಟ ಯೋಜನೆಯೂ ಒಂದು.

ಸುಮಾರು 2008–09ರಲ್ಲಿ ಮಧ್ಯಾಹ್ನದ ಬಿಸಿಯೂಟ ತಯಾರಕರಿಗೆ ಮತ್ತು ಸಹಾಯಕಿಯರಿಗೆ ಕೇವಲ 300 ರು.ಗಳನ್ನು ಗೌರವಧನವಾಗಿ ನೀಡಲಾಗುತ್ತಿತ್ತು. ಇಷ್ಟು ವರ್ಷಗಳ ಸತತ ದುಡಿಮೆಯ ಫಲವಾಗಿ ಇದು ಸದ್ಯಕ್ಕೆ 3,600 ರು.ಗೆ ಬಂದು ನಿಂತಿದೆ. Cook Cum Helper ಸಿಬ್ಬಂದಿಗಳಿಗೆ ಇಡೀ ದೇಶದಲ್ಲೇ ಹೆಚ್ಚು ಸಂಬಳ ನೀಡುತ್ತಿರುವುದು ಕೇರಳ ರಾಜ್ಯ. ಅಲ್ಲಿ ಗೌರವಧನ ಎಂದು 12 ಸಾವಿರ ರು. ಮಾಸಿಕ ಸಂಬಳ ನೀಡುತ್ತಿದ್ದರೆ, ಪ್ರಸ್ತುತ ಕರ್ನಾಟಕದಲ್ಲಿ 3,600 ರು. ನೀಡಲಾಗುತ್ತಿದೆ. ಕನಿಷ್ಠವೇತನ ಎಂದು ಪರಿಗಣಿಸಿದ ಹಣಕ್ಕಿಂತಲೂ ಕಡಿಮೆಯಿರುವ ಈ ಸಂಬಳಕ್ಕೆ ನಮ್ಮ ಮಹಿಳೆಯರು ಸರಕಾರಿ ಪ್ರಾಯೋಜಿತ ಯೋಜನೆಗಳಲ್ಲಿ ದುಡಿಯುತ್ತಿರುವುದು.

ಇಂದಿನ ದುಬಾರಿ ದಿನಗಳಲ್ಲಿ, ಕೆ.ಜಿ. ಬೇಳೆಗೆ 180 ರು., ಕೆಜಿ ಅಕ್ಕಿಗೆ 80 ರು. ಇದೆ. ಈರುಳ್ಳಿ ಬೆಲೆ ಗಗನಕ್ಕೆ ತಾಕಿದೆ. ಇದರೊಟ್ಟಿಗೆ, ಸಂಸಾರದಲ್ಲಿ ಮಕ್ಕಳ ಶಾಲಾ ಖರ್ಚು ಸೇರಿದಂತೆ ಇತರೆ ಖರ್ಚುಗಳನ್ನೂ, ಆಸ್ಪತ್ರೆ, ಔಷಧಿ ವೆಚ್ಚವನ್ನೂ ಭರಿಸಲು ನಿತ್ಯ ದುಡಿಮೆಯ ಇದೇ ಸಂಬಳವೇ ಆಶ್ರಯ. ಗ್ರಾಮೀಣ ಭಾಗದಲ್ಲಿ, ಬಡತನ ರೇಖೆಗಿಂತ ಕೆಳಗಿರುವ ಮತ್ತು ದುಡಿಮೆ ಮಾಡಿಯೇ ಬದುಕಬೇಕಾದ ಸ್ಥಿತಿಯಲ್ಲಿರುವ ಕುಟುಂಬಗಳ ಮಕ್ಕಳು ಸಹಜವಾಗಿಯೇ ತಂದೆ ತಾಯಿಗಳ ಜತೆಗೆ ಕೂಲಿ, ಇತರೆ ದುಡಿಮೆಗೆ ಹೋಗುವುದು ಸಾಮಾನ್ಯ. ಹಾಗಾಗಿ, ಕಲಿಕೆಗೆ ಸರಕಾರಿ ಶಾಲೆಗಳಿಗೆ ಮಕ್ಕಳನ್ನು ಆಕರ್ಷಿಸಲು ಅವರ ದುಡಿಮೆಯ ಭಾರವನ್ನು ಕಡಿಮೆ ಮಾಡಲು ಈ ಬಿಸಿಯೂಟ ಯೋಜನೆಯನ್ನು ಪರಿಚಯಿಸಲಾಯಿತು. 1995ರ ಆಗಸ್ಟ್ 15ರಂದು ರಾಷ್ಟ್ರೀಯ ಪೌಷ್ಠಿಕತೆ (NP-NSPE) ಹೆಚ್ಚಿಸುವ ಯೋಜನೆಯ ಭಾಗವಾಗಿ Mid Day Meal (MDM) ಅನ್ನು ಪ್ರಾರಂಭದಲ್ಲಿ 2,800 ಕೇಂದ್ರಗಳಲ್ಲಿ ಜಾರಿಗೆ ತರಲಾಯಿತು. ಮುಂದೆ 1998ರಲ್ಲಿ ರಾಷ್ಟ್ರವ್ಯಾಪಿ ವಿಸ್ತರಿಸಲಾಯಿತು.

ಮಕ್ಕಳಲ್ಲಿ ಪೌಷ್ಠಿಕತೆ ಹೆಚ್ಚಿಸುವುದು, ಊಟಕ್ಕಾಗಿಯೇ ದುಡಿಮೆಗೆ ಹೊರಟಿರುವ ಮಕ್ಕಳನ್ನು ಕಲಿಕೆಗೆ ಆಕರ್ಷಿಸುವುದು, ಅನಾರೋಗ್ಯ, ಆಹಾರದ ಕೊರತೆಯ ನೆಪದಲ್ಲಿ ಶಾಲೆ ತಪ್ಪಿಸುವುದು ಇದರಿಂದ ನಿಲ್ಲುತ್ತದೆ ಎಂಬ ಉದ್ದೇಶದಿಂದ ಈ ಯೋಜನೆಯನ್ನು ಎಲ್ಲ ಗ್ರಾಮೀಣ ಭಾಗಗಳಿಗೂ ಜಾರಿಗೊಳಿಸಲಾಯಿತು. ಮಧ್ಯಾಹ್ನದ ಬಿಸಿಯೂಟವನ್ನು ರಜಾದಿನಗಳಲ್ಲಿ ಹೊರತುಪಡಿಸಿ, 1ರಿಂದ 5ನೇ ತರಗತಿಯ ಎಲ್ಲ ಮಕ್ಕಳಿಗೆ 450 ಗ್ರಾಂ ಕ್ಯಾಲರಿ, 12 ಗ್ರಾಂ ಪ್ರೋಟೀನ್ ಅಂಶದ ಆಹಾರವನ್ನು ಮತ್ತು 6ರಿಂದ 7ನೇ ತರಗತಿಯವರಿಗೆ 700 ಗ್ರಾಂ ಕ್ಯಾಲರಿ, 20 ಗ್ರಾಂ ಪ್ರೋಟೀನ್‌ಯುಕ್ತ ಆಹಾರ ನೀಡಬೇಕೆಂದು 2015ರಲ್ಲಿ ನಿಗದಿಪಡಿಸಲಾಯಿತು.

ಸರಕಾರದ 2021ರ ಅಧಿಕೃತ ಮಾಹಿತಿಯಂತೆ ಕರ್ನಾಟಕದಲ್ಲಿ 1,20,000 ಸಹಾಯಕಿಯರು (Cooks-Cum-Helpers) Mid Day Meal ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. 2007ರಲ್ಲಿ ಉಪರಾಷ್ಟ್ರಪತಿಗಳ ಆಜ್ಞೆಯ ಮೇರೆಗೆ ಶಾಲಾ ಮಕ್ಕಳಿಗೆ ಹಾಲು ಕೊಡುವ ಯೋಜನೆಯೂ ಇದಕ್ಕೆ ಸೇರಿಕೊಂಡಿತು. ಈ ಯೋಜನೆ ಕೇಂದ್ರ ಸರಕಾರದ್ದಾದರೂ, ಆರ್ಥಿಕ ಸಹಾಯದ ಜತೆಗೆ ಇದನ್ನು ನಿರ್ವಹಿಸುವ ಜವಾಬ್ದಾರಿ ಆಯಾ ರಾಜ್ಯ ಸರಕಾರಗಳದ್ದಾಗಿರುತ್ತದೆ. ಇದಕ್ಕಾಗಿಯೇ, ಕೇಂದ್ರ ಸರಕಾರವು ಪ್ರತ್ಯೇಕ ಬಜೆಟ್ ನಿಗದಿಪಡಿಸಿದ್ದು, ಕೇಂದ್ರ ಮತ್ತು ರಾಜ್ಯಗಳು 60:40ರ ಅನುಪಾತದಲ್ಲಿ ಇದನ್ನು ನಿರ್ವಹಿಸುತ್ತಿವೆ. ಈ ಮೂಲಕ, ದೇಶಾದ್ಯಂತ 12 ಕೋಟಿ ಮಕ್ಕಳು 11 ಲಕ್ಷ ಶಾಲೆಗಳಿಗೆ ಈ ಯೋಜನೆ ಯಶಸ್ವಿಯಾಗಿ ತಲುಪಿದೆ ಎನ್ನಬಹುದು.

2021ರಲ್ಲಿ Mid day Meal ಯೋಜನೆಯನ್ನು PM POSHAN' (Pradhan Mantri Poshan Shakti Nirman) ಎನ್ನುವ ಹೆಸರಿನ ಮೂಲಕ ಮರುಪರಿಚಯಿಸಿ, ಇದಕ್ಕಾಗಿ 2021ರಿಂದ 2025ರವರೆಗಿನ ಯೋಜನೆಗಾಗಿ, 1,30,795 ಕೋಟಿಯಷ್ಟು ಬಜೆಟ್ ಮೀಸಲಿಡಲಾಯಿತು. ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಇಂಥ ಒಂದು ಯೋಜನೆಯ ಯಶಸ್ಸಿನ ಹಿಂದೆ ದುಡಿಯುವ ಸಾವಿರಾರು ಮಹಿಳೆಯರ ಶ್ರಮವಿದೆ ಎಂಬುದನ್ನು ಯಾರೂ ಮರೆಯಬಾರದು. ಸುಮಾರು 25 ವರ್ಷಗಳ ಅವಿರತ ದುಡಿಮೆ ಈ ಸಹಾಯಕಿಯರದು. ಇಂಥವರಿಗೆ ಪ್ರಾರಂಭದಲ್ಲಿ ತಿಂಗಳಿಗೆ 200/300 ರು. ನಿಗದಿಯಾಗಿತ್ತೆಂದರೆ ನೀವು ನಂಬಲೇಬೇಕು. ಹೀಗಾಗಿ, ಕೆಲ ಸರಕಾರಿ ಶಾಲೆಗಳಲ್ಲಿ 'ಅಕ್ಷರ ದಾಸೋಹ'ದ ಅಡುಗೆ ಕೈಂಕರ್ಯದಲ್ಲಿ ತೊಡಗಿರುವ ಅಮ್ಮಂದಿರನ್ನು ಹಾಗೇ ಸುಮ್ಮನೆ ಮಾತಿಗೆಳೆದೆ.

''ಏನಮ್ಮಾ, ನಿಮ್ ಶಾಲೆಯಲ್ಲಿ ಎಷ್ಟು ಮಕ್ಕಳಿಗೆ ಬಿಸಿಊಟ ತಯಾರಿಸ್ತೀರಿ?'' ಎಂದು ಕೇಳಿದ್ದಕ್ಕೆ, ''600+ ಮಕ್ಕಳಿಗೆ ಅಡುಗೆ ಮಾಡಿ ಬಡಿಸ್ತೀವಿ'' ಎಂದರಾಕೆ. ''ಓಹ್! ಅಷ್ಟೊಂದು ಮಕ್ಕಳಿಗೆ ಅಡುಗೆ ಮಾಡಲು ಎಷ್ಟು ಜನ ಸಿಬ್ಬಂದಿಗಳಿದ್ದೀರಿ?'' ಎಂದು ಕೇಳಿದ್ದಕ್ಕೆ, ''ನೂರು ಜನಕ್ಕೆ ಒಬ್ಬರ ಲೆಕ್ಕದಂತೆ 6 ಜನ ಇದ್ದೀವಿ'' ಎಂದರವರು. ''ಮುಖ್ಯ ಅಡುಗೆಯವರಿಗೂ, ಉಳಿದವರಿಗೂ ಸಂಬಳದಲ್ಲಿ ವ್ಯತ್ಯಾಸ ಇದೆಯಾ?'' ಎಂದು ಕೇಳಿದರೆ, ''ಹೌದು, ನಮ್ಮ ಶಾಲೆಯಲ್ಲಿ ಒಬ್ಬರು ಮುಖ್ಯ ಅಡುಗೆಯವರು. ಅವರಿಗೆ 3,700 ರು. ಸಂಬಳ, ಉಳಿದ 5 ಜನರಿಗೆ 3,600 ರು. ಸಂಬಳ!'' ಎಂದರಾಕೆ. ''ಎಷ್ಟು ಗಂಟೆಗೆ ಅಡುಗೆ ಡ್ಯೂಟಿ ಆರಂಭಿಸ್ತೀರಿ?'' ಎಂದು ಕೇಳಿದರೆ, ''ನಮ್ ಶಾಲೆಯಲ್ಲಿ ನೋಡಿ 600+ ಮಕ್ಕಳಿದ್ದಾರೆ. ಬೆಳಗ್ಗೆ 8:30ಕ್ಕೆಲ್ಲ ಶಾಲೆಗೆ ಬರ್ತಿವಿ. ಈಗ ನಿತ್ಯವೂ ಹಾಲು ಕಾಯಿಸಿ ಕೊಡಬೇಕು. ಮೊಟ್ಟೆ ಬೇಯಿಸಿ, ಅದರ ಸಿಪ್ಪೆ ತೆಗೆದುಕೊಡೋದು ಒಂದು ದೊಡ್ಡ ಕೆಲಸ ನಮ್ಮ ಪಾಲಿನದು. ನಂತರ ಮಧ್ಯಾಹ್ನದ ಅಡುಗೆ ತಯಾರಿ, ಆಮೇಲೆ ಅಡುಗೆ ಬಡಿಸಿ, ಪಾತ್ರೆ ತೊಳೆದು, ಅಡುಗೆ ಕೋಣೆ ಶುಚಿಗೊಳಿಸಿ ಹೊರಬರುವಾಗ ಮಧ್ಯಾಹ್ನ 3 ಗಂಟೆಯಾಗುತ್ತದೆ. ಒಟ್ಟು ಕನಿಷ್ಠ 6 ಗಂಟೆ ಕೆಲಸ ಮಾಡ್ತೀವಿ ಒಬ್ಬೊಬ್ಬರೂ. ಈಗ ನಮಗೆ ಈ 6 ಗಂಟೆ ಕೆಲಸಕ್ಕೆ ಎಷ್ಟು ಸಂಬಳ ಸಿಗುತ್ತದೆ ಎಂದು ನೀವೇ ಲೆಕ್ಕ ಹಾಕಿ'' ಎಂದರಾಕೆ!

26 ದಿನಕ್ಕೆ 3,600 ರುಪಾಯಿ ಅಂದರೆ, ಆ ವೇತನದಿಂದ ಅವರ ಜೀವನ ನಿರ್ವಹಣೆ ಸಾಧ್ಯವೇ? ''ಮಧ್ಯಾಹ್ನ ಮೂರರ ನಂತರ ನಮಗೆ ಬೇರೆ ಕೆಲಸಕ್ಕೆ ಹೋಗಲು ಆಗಲ್ಲ. ಇಲ್ಲಿ ಬರುವ ಸಂಬಳದಿಂದ ಜೀವನ ನಡೆಸಲು ಆಗಲ್ಲ'' ಎಂಬುದು ಅವರ ಅಳಲು. ''ಜತೆಗೆ ಆರೇಳು ವರ್ಷ ಸೇವೆ ಸಲ್ಲಿಸಿದವರಿಗೂ ಕೆಲಸದ ಭದ್ರತೆ ಇಲ್ಲ, ಸಂಬಳದಲ್ಲಿ ಏರಿಕೆ ಇಲ್ಲ, ಅಧಿಕ ದಾಖಲಾತಿ ಇರುವ ಶಾಲೆಗಳಲ್ಲಿ ಎಲ್ಲಾ ರೀತಿಯಿಂದಲೂ ಕೆಲಸ ಹೆಚ್ಚು. ಅದೇ ನೂರರ ಒಳಗೆ ವಿದ್ಯಾರ್ಥಿಗಳಿರುವ ಶಾಲೆಯಲ್ಲೂ 'ಅಕ್ಷರ ದಾಸೋಹ' ಇದೆ. ಅಲ್ಲಿ ಇಬ್ಬರು ಸಿಬ್ಬಂದಿಗಳಿದ್ದಾರೆ. ಅವರಿಗೆ ಕೆಲಸದ ಹೊರೆ ತುಂಬಾ ಕಡಿಮೆ. ಆದರೆ ಸಂಬಳ ನಮ್ಮಷ್ಟೇ ಪಡಿತಾರೆ'' ಎನ್ನುವಾಗ ಅಡುಗೆ ಅಮ್ಮನ ಮನದಾಳ ಅರ್ಥವಾಯ್ತು. ''5 ಕೆ.ಜಿ. ಅಕ್ಕಿ ಬೇಯಿಸುವವರಿಗೂ 50 ಕೆ.ಜಿ. ಅಕ್ಕಿ ಬೇಯಿಸುವವರಿಗೂ ಒಂದೇ ಮಾನದಂಡ ಸರಿಯಾ?'' ಎಂಬುದು ಅವರ ಪ್ರಶ್ನೆ.

''ಸರಿ, ಕೆಲಸದ ಪ್ರಮಾಣ, ಸಂಬಳದ ವಿಷಯ ಇಷ್ಟಾಯ್ತು. ಇನ್ನು ಕೊಡುವ ಗೌರವಧನವನ್ನಾದರೂ ಸರಿಯಾದ ಸಮಯಕ್ಕೆ ಅಕೌಂಟಿಗೆ ಜಮಾ ಮಾಡ್ತಿದ್ದಾರಾ?'' ಎಂದು ಕೇಳಿದರೆ, ''ಈಗ ನೋಡಿ ಮೊನ್ನೆ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ 3 ತಿಂಗಳು ನಮ್ಮ ಸಂಬಳ ತಡೆಹಿಡಿದಿದ್ದರು. ಅಂತೂ ಕೊನೆಗೆ 3 ತಿಂಗಳ ಸಂಬಳ ಒಟ್ಟಿಗೆ ಹಾಕಿದ್ರು. ಈಗ ನವೆಂಬರ್ ತಿಂಗಳ ಸಂಬಳ ಈ ವಾರ ಬಂದದ್ದೇ ನಮ್ಮ ಪುಣ್ಯ. ಸಂಬಳ ಹೆಚ್ಚಿಸಿ ಎಂದು ಆರೇಳು ವರ್ಷದಿಂದ ಹೋರಾಟ ಮಾಡಿದರೂ ಪ್ರಯೋಜನ ಆಗಲಿಲ್ಲ. ತಾಲೂಕು, ಜಿಲ್ಲೆ, ರಾಜ್ಯ ಮಟ್ಟದಲ್ಲಿ ನಾವು ಹೋರಾಡಿದೆವು. ಆದರೆ ಸ್ಪಂದನೆ ಶೂನ್ಯವಾಯ್ತು. ಕೇವಲ ನಮ್ಮ ಸಮಯ ಮತ್ತು ಹಣ ವ್ಯರ್ಥವಾಯಿತೇ ವಿನಾ ಯಾವ ಫಲವೂ ದೊರೆಯಲಿಲ್ಲ'' ಎಂದರು.

''ಸರಿ, ವರ್ಷಕ್ಕೊಮ್ಮೆ ಬೋನಸ್, ಯೂನಿಫಾರ್ಮ್ ಏನಾದರೂ ಕೊಡ್ತಾರಾ?'' ಅಂತ ಕೇಳಿದ್ರೆ, ''ಬೋನಸ್ ಇಲ್ಲ ಏನೂ ಇಲ್ಲ. ಯೂನಿಫಾರ್ಮ್ ಅಂತೇನೂ ಇಲ್ಲ. ಅಡುಗೆ ಮಾಡುವಾಗ ಹಾಕುವ ಕವಚದಂಗಿ ವರ್ಷಕ್ಕೊಂದು ಕೊಡ್ತಾರೆ'' ಎಂದರು. ''ಶನಿವಾರನೂ ಅಡುಗೆ ಮಾಡ್ತೀರಾ?'' ಅಂತ ಕೇಳಿದ್ರೆ, ''ಹೌದು ಅದು ಕಡ್ಡಾಯ'' ಎಂದರು. ''ಸರಿ, ದಸರಾ ರಜೆ, ಬೇಸಗೆ ರಜೆಯಲ್ಲಿ ಅಡುಗೆ ಕೆಲಸ ಇರಲ್ಲ. ಆಗ ಸಂಬಳ ಸಿಗುತ್ತಾ?'' ಎಂದು ಕುತೂಹಲದಿಂದ ಕೇಳಿದೆ. ''ಅಯ್ಯೋ ಅಷ್ಟೆಲ್ಲಾ ಉದಾರತೆ ಇದ್ದಿದ್ರೆ, ನಾವು ಹೋರಾಟ ಮಾಡ್ತಿದ್ದವಾ? ಕೆಲಸ ಮಾಡಿದ್ದಕ್ಕೇ ಸರಿಯಾದ ಪಗಾರ ಬರಲ್ಲ. ಇನ್ನು ರಜಾದಿನದ ಸಂಬಳವೆಲ್ಲ ಕನಸಿನ ಮಾತು'' ಎನ್ನುತ್ತಾ ಬೆವರೊರೆಸಿಕೊಂಡರು.

''ಸರಿ, ನಿಮ್ಮ ಬೇಡಿಕೆ ಏನು ಹೇಳಿ?'' ಎಂದೆ ಕೊನೆಯದಾಗಿ. ''ದಿನಕ್ಕೆ ಕನಿಷ್ಠ ಸಂಬಳ ನಿಗದಿ ಮಾಡ್ಲಿ. ಈ ನೂರೈವತ್ತು ರುಪಾಯಿ ಯಿಂದ ಹೇಗೆ ಬದುಕೋದು ನೀವೇ ಹೇಳಿ'' ಎಂದರು. ''ಜತೆಗೆ ನಮಗೆ ಆರೋಗ್ಯ ಭದ್ರತೆ ಬೇಕು. ಅಡುಗೆಮನೆ ಅಂದ ಮೇಲೆ, ಬೆಂಕಿ, ಬಿಸಿ ಪದಾರ್ಥ. ಯಾವಾಗ ಏನೂ ಆಗಬಹುದು. ಹಾಗಾಗಿ ಆ ಕುರಿತು ನಮಗೆ ವಿಮೆಯ ಸೌಲಭ್ಯ ಇದ್ದರೆ ಒಂದಿಷ್ಟು ನಿರಾಳ. ಜತೆಗೆ ಪ್ರತಿವರ್ಷ ಕನಿಷ್ಠವಾದರೂ ಸಂಬಳ ಹೆಚ್ಚಿಸಬೇಕಲ್ವ? ಎಲ್ಲಾ ಉದ್ಯೋಗದವರಿಗೂ ಈ ಸಂಬಳ ಹೆಚ್ಚಳದ ಸೌಲಭ್ಯ ಇದೆ. ನಮ್ಮ ಸಂಬಳವೇಕೆ ನಿಂತ ನೀರು?'' ಎಂದರು. ಹೆಚ್ಚು ದಾಖಲಾತಿ ಇರುವ ಶಾಲೆಯ ಸಿಬ್ಬಂದಿಗಳಿಗೆ ವಿಶೇಷ ಪ್ಯಾಕೇಜ್ ನೀಡಿದರೆ ತುಂಬಾ ಅನುಕೂಲ. ಯಾಕೆಂದರೆ ಇದರಿಂದ ಶ್ರಮದ ಅಪಮೌಲ್ಯ ನಿಲ್ಲುತ್ತದೆ ಎಂಬುದು ಅಕ್ಷರ ದಾಸೋಹ ಸಿಬ್ಬಂದಿಗಳ ಧ್ವನಿಯಾಗಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 353

ಸಮಾಚಾರ ಸಣ್ಣದಲ್ಲ

ಜಮ್ಮು - ಕಾಶ್ಮೀರ ಐಇಡಿ ಪತ್ತೆ

ಶ್ರೀನಗರ: ಕಾಶ್ಮೀರದ ಹಂದ್ವಾರ-ಬಾರಾಮುಲ್ಲಾ ಹೆದ್ದಾರಿಯಲ್ಲಿ ಶಂಕಿತ ಸುಧಾರಿತ ಸ್ಫೋಟಕ ಸ್ಫೋಟಕವನ್ನು (ಐಇಡಿ) ಪತ್ತೆ ಮಾಡಿದ್ದು, ಬಳಿಕ ಅದನ್ನು ಭದ್ರತಾ ಪಡೆಯ ಸೈನಿಕರು ನಾಶ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೊಲೀಸ್ ಮತ್ತು ಭದ್ರತಾ ಪಡೆಗಳು ಜಂಟಿ ಗಸ್ತು ವೇಳೆ ಅನುಮಾನಾಸ್ಪದ ಬ್ಯಾಗ್‌ವೊಂದು ಕುಪ್ವಾರ ಜಿಲ್ಲೆಯ ಹಂದ್ವಾರದಲ್ಲಿನ ಲಂಗೇಟ್ ಹೆದ್ದಾರಿಯ ಪಕ್ಕದಲ್ಲಿ ಬಿದ್ದಿರುವುದನ್ನು ಗಮನಿಸಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಾಂಬ್ ನಿಷ್ಕ್ರಿಯ ದಳದ ಅಧಿಕಾರಿಗಳು ತಕ್ಷಣಕ್ಕೆ ಆಗಮಿಸಿ, ಅನುಮಾನಾಸ್ಪದ ಬ್ಯಾಗ್ ಅನ್ನು ಪ್ರತ್ಯೇಕ ಸ್ಥಳಕ್ಕೆ ತೆಗೆದುಕೊಂಡು ಹೋದರು. ಈ ವೇಳೆ ಐಇಡಿ ಪತ್ತೆಯಾಗಿದ್ದು, ಅದನ್ನು ನಿಷ್ಕ್ರಿಯಗೊಳಿಸಲಾಯಿತು. ಇದರಿಂದಾಗಿ ಯಾವುದೇ ಅನಾಹುತ ಸಂಭವಿಸಿಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಪವನ್‌ಗೆ ಬೆದರಿಕೆ: ಆರೋಪಿಗಳು ಅರೆಸ್ಟ್

ಅಮರಾವತಿ: ಆಂಧ್ರಪ್ರದೇಶದ ಉಪಮುಖ್ಯಮಂತ್ರಿ, ಜನಸೇನಾ ನಾಯಕ ಪವನ್ ಕಲ್ಯಾಣ್‌ಗೆ ಬೆದರಿಕೆ ಕರೆ ಮಾಡಿದ್ದ ಆರೋಪಿಯನ್ನು ಪೊಲೀಸರು ಪತ್ತೆ ಹಚ್ಚಿ ಬಂಧಿಸಿರುವುದು ಜನಸೈನಿಕರು ಮತ್ತು ಪವನ್ ಕಲ್ಯಾಣ್ ಅಭಿಮಾನಿಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಪವನ್ ಕಲ್ಯಾಣ್ ಅವರ ಕಚೇರಿಗೆ ಬೆದರಿಕೆ ಹಾಕಿರುವ ಫೋನ್ ನಂಬರ್ ಎನ್ ಟಿಆರ್ ಜಿಲ್ಲೆಯ ತಿರುವೂರು ಮೂಲದ ನೂಕಾ ಮಲ್ಲಿಕಾರ್ಜುನರಾವ್ ಎಂಬುವವರ ಹೆಸರಿನಲ್ಲಿದೆ ಎಂದು ಪೊಲೀಸರು ಪತ್ತೆ ಮಾಡಿದ್ದಾರೆ. ಆರೋಪಿಗಳು ಮದ್ಯದ ಅಮಲಿನಲ್ಲಿ ಬೆದರಿಕೆ ಕರೆ ಮಾಡಿದ್ದನ್ನು ಪೊಲೀಸರು ಆರಂಭದಲ್ಲಿ ಪತ್ತೆ ಹಚ್ಚಿದ್ದರುಆರೋಪಿಗಳು ಫೋನ್ ಆನ್ ಮಾಡಿದ ಬಳಿಕ ಲೋಕೇಷನ್ ಪತ್ತೆ ಹಚ್ಚಿ ಬಂಧಿಸಲಾಗಿದೆ.

ಸಿರಿಯಾ: ಮಧ್ಯಂತರ ಸರಕಾರ ಅಸ್ತಿತ್ವಕ್ಕೆ

ಡಮಾಸ್ಕಸ್: ಸಿರಿಯಾ ಅಧ್ಯಕ್ಷ ಬಶರ್ ಅಲ್ ಅಸ್ಸಾದ್‌ರನ್ನು ಅಧಿಕಾರದಿಂದ ಪದಚ್ಯುತಗೊಳಿಸಿ, ಸಿರಿಯಾದ ನಿಯಂತ್ರಣವನ್ನು ಕೈಗೆತ್ತಿಕೊಂಡ ಬಂಡುಕೋರರು ಮಾರ್ಚ್ 1ರ ತನಕ ದೇಶವನ್ನು ಮುನ್ನಡೆಸಲು ಮಧ್ಯಂತರ ಸರ್ಕಾರ ಮತ್ತು ಅದರ ಮುಖ್ಯಸ್ಥರನ್ನು ನೇಮಿಸಿದ್ದಾರೆ, ಮುಹಮ್ಮದ್ ಅಲ್ ಬಶೀರ್ ಅವರು ಈ ಸ್ಥಾನಕ್ಕೆ ನೇಮಕಗೊಂಡಿದ್ದಾರೆ. ಸಿರಿಯಾದ ಸರ್ಕಾರಿ ದೂರದರ್ಶನದ ಟೆಲಿಗ್ರಾಂ ಖಾತೆಯಲ್ಲಿ ಮೊಹಮ್ಮದ್ ಅಲ್ ಬಶೀರ್ ಅವರ ಹೇಳಿಕೆ ಪ್ರಕಟವಾಗಿದ್ದು, ಅವರ ನೇಮಕಾತಿಯನ್ನು ಖಚಿತಪಡಿಸಿದೆ. ಜನರಲ್ ಕಮಾಂಡ್ ನಮಗೆ ಮಾರ್ಚ್ 1ರ ತನಕ ದೇಶದ ಪರಿವರ್ತನಾ ಸರ್ಕಾರದ ನೇತೃತ್ವ ವಹಿಸುವ ಜವಾಬ್ದಾರಿ ನೀಡಿದೆ ಎಂದು ಬಶೀರ್ ಹೇಳಿದ್ದಾರೆ.



ರಾಜ್ಯಸಭಾ ಕಲಾಪ: ಎಚ್‌ಡಿಡಿ ಆಕ್ರೋಶ

ದೆಹಲಿ: ರಾಜ್ಯಸಭೆಯಲ್ಲಿ ಬುಧವಾರವೂ ಭಾರೀ ಗಲಾಟೆ ನಡೆದಿದೆ. ಉಪರಾಷ್ಟ್ರಪತಿ ಜಗದೀಪ್ ಧನಕರ್ ವಿರುದ್ಧ ವಿಪಕ್ಷಗಳು ಅವಿಶ್ವಾಸ ನಿರ್ಣಯ ಮಂಡನೆ ಮಾಡಿರುವುದು ಆಡಳಿತ ಹಾಗೂ ವಿಪಕ್ಷ ಸದಸ್ಯರ ನಡುವೆ ಜೋರು ವಾಗ್ವಾದಕ್ಕೆ ಕಾರಣವಾಗಿದೆ. ಕಾಂಗ್ರೆಸ್ ನೇತೃತ್ವದಲ್ಲಿ ವಿಪಕ್ಷಗಳು ರಾಜ್ಯಸಭೆ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿವೆ. ಈ ಕುರಿತು ಮಾತನಾಡಿದ ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ, ವಿರೋಧ ಪಕ್ಷಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅವಿಶ್ವಾಸ ನಿರ್ಣಯ ಮಂಡಿಸುವ ಮೂಲಕ ಸದನವನ್ನು ಸಮರ್ಪಕವಾಗಿ ನಡೆಯಲು ಬಿಡುತ್ತಿಲ್ಲ ಎಂದು ದೂರಿದರು.



ಲಂಕಾ ಅಧ್ಯಕ್ಷ ಮುಂದಿನ ವಾರ ಭಾರತಕ್ಕೆ

ಕೊಲಂಬೊ: ಶ್ರೀಲಂಕಾ ಅಧ್ಯಕ್ಷ ಅನುರಾ ದಿಸ್ಸಾನಾಯಕೆ ಅವರು ಮುಂದಿನ ವಾರ ಭಾರತಕ್ಕೆ ಭೇಟಿ ನೀಡುತ್ತಿದ್ದು, ಅವರು ಅಧಿಕಾರಕ್ಕೆ ಬಂದ ನಂತರ ಕೈಗೊಳ್ಳುತ್ತಿರುವ ಮೊದಲ ಅಂತಾರಾಷ್ಟ್ರೀಯ ಪ್ರವಾಸ ಇದಾಗಿದೆ. ದಿಸ್ಸಾನಾಯಕ ಅವರ ಭೇಟಿಯಿಂದ ಭಾರತ ಮತ್ತು ಶ್ರೀಲಂಕಾ ನಡುವಿನ ಸಂಬಂಧ ಇನ್ನಷ್ಟು ಗಟ್ಟಿಗೊಳ್ಳಲಿದೆ ಎಂದು ಪರಿಗಣಿಸಲಾಗಿದೆ. ಅವರು ಡಿಸೆಂಬರ್ 15ರಿಂದ 17ರವರೆಗೆ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಶ್ರೀಲಂಕಾದ ಕ್ಯಾಬಿನೆಟ್ ವಕ್ತಾರ ಡಾ ನಳಿಂದಾ ಜಯತಿಸ್ಸಾ ಅವರು ತಿಳಿಸಿದ್ದಾರೆ.

{ದೇವೇಂದ್ರ ಪಡ್ನವಿಸ್} ಮಹಾರಾಷ್ಟ್ರ ಮುಖ್ಯಮಂತ್ರಿ

ಮಹಾರಾಷ್ಟ್ರ ಸರ್ಕಾರದ ಸಂಪುಟ ವಿಸ್ತರಣೆ ಡಿಸೆಂಬರ್ 14ರೊಳಗೆ ನಡೆಯಲಿದೆ. ಮೂರು ಪಕ್ಷಗಳು (ಬಿಜೆಪಿ, ಶಿವಸೇನೆ ಮತ್ತು ಎನ್‌ಸಿಪಿ) ಸರ್ಕಾರದಲ್ಲಿ ಭಾಗಿಯಾಗಿರುವುದರಿಂದ ಮಾತುಕತೆ ಮತ್ತು ಸಚಿವ ಸಂಪುಟ ವಿಳಂಬವಾಗುತ್ತಿದೆ. ಬಿಜೆಪಿ 21ರಿಂದ 22 ಸಚಿವ ಸ್ಥಾನಗಳನ್ನು ಉಳಿಸಿಕೊಳ್ಳುವ ನಿರೀಕ್ಷೆಯಿದ್ದು, ನಾಲ್ಕರಿಂದ ಐದು ಸಚಿವ ಸ್ಥಾನಗಳನ್ನು ಖಾಲಿ ಇಡಬಹುದು

ಸುಗಮ ಕಲಾಪಕ್ಕೆ ಅನುವು ಮಾಡಿಕೊಡುವಂತೆ ಪ್ರತಿಪಕ್ಷದ ಮನವಿ | ತ್ರಿವರ್ಣ ಧ್ವಜ, ಗುಲಾಬಿಯೊಂದಿಗೆ ಸ್ವಾಗತ

ಕಲಾಪ ಬಿಕ್ಕಟ್ಟು: ಸ್ಪೀಕರ್ ಭೇಟಿ ಮಾಡಿದ ರಾಹುಲ್

ದೆಹಲಿ: ಲೋಕಸಭೆಯಲ್ಲಿ ಸುಗಮ ಕಲಾಪಕ್ಕೆ ಮನವಿ ಮಾಡಿರುವ ವಿರೋಧ ಪಕ್ಷದ ಸಂಸದರು, ಒಂದು ಕೈಯಲ್ಲಿ ಪುಟ್ಟದಾದ ತ್ರಿವರ್ಣ ಧ್ವಜ, ಮತ್ತೊಂದು ಕೈಯಲ್ಲಿ ಕೆಂಪು ಗುಲಾಬಿಯೊಂದಿಗೆ ಆಡಳಿತ ಬಿಜೆಪಿ ಪಕ್ಷದ ಸದಸ್ಯರನ್ನು ಸ್ವಾಗತಿಸಿದರು. ಸಂಸತ್ ಕಲಾಪ ಬಿಕ್ಕಟ್ಟಿನ ನಡುವೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಬುಧವಾರ ಭೇಟಿ ಮಾಡಿದ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ತಮ್ಮ ವಿರುದ್ಧ ಬಿಜೆಪಿ ಸಂಸದರು ಮಾಡಿರುವ ಅವಹೇಳನಕಾರಿ ಹೇಳಿಕೆಗಳನ್ನು ದಾಖಲೆ ಯಿಂದ ತೆಗೆದು ಸುಗಮ ಕಲಾಪಕ್ಕೆ ಅನುವು ಮಾಡಿಕೊಡುವಂತೆ ಮನವಿ ಮಾಡಿದ್ದಾರೆ.

ಅದಾನಿ ಪ್ರಕರಣದಿಂದ ಗಮನವನ್ನು ಬೇರೆಡೆ ಸೆಳೆಯಲು ಬಿಜೆಪಿ ನನ್ನ ವಿರುದ್ಧ ನಿರಾಧಾರ ಆರೋಪ ಮಾಡುತ್ತಿದೆ. ಆದರೆ ಇಂತಹ ಯಾವುದೇ ಆರೋಪಗಳಿಂದ ನಾನು ವಿಚಲಿತನಾಗುವುದಿಲ್ಲ ಎಂದಿದ್ದಾರೆ. ಡಿಸೆಂಬರ್ 13 ರಿಂದ ಲೋಕಸಭೆಯಲ್ಲಿ ಸಂವಿಧಾನ ಕುರಿತು ಚರ್ಚೆಗೆ ತಮ್ಮ ಪಕ್ಷ ಬಯಸಿದ್ದು, ಸುಗಮ ಕಲಾಪಕ್ಕೆ ನಾವು ಯತ್ನಿಸಲಿದ್ದೇವೆ ಎಂದು ತಿಳಿಸಿದ್ದಾರೆ.

ಸಂಸತ್ ಹೊರಗಡೆ ಸುದ್ದಿಗಾರರೊಂದಿಗೆ ಮಾತನಾಡಿದ ರಾಹುಲ್ ಗಾಂಧಿ, ಸ್ಪೀಕರ್ ಜೊತೆಗೆ ಮಾತನಾಡಿದ್ದೇನೆ. ತನ್ನ ವಿರುದ್ಧ ಮಾಡಲಾಗಿರುವ ಅವಹೇಳನಕಾರಿ ಹೇಳಿಕೆಗಳನ್ನು ತೆಗೆದುಹಾಕಬೇಕು ಎಂದು ನಮ್ಮ ಪಕ್ಷದವರು ಹೇಳಿದ್ದಾರೆ. ಅವುಗಳನ್ನು ಪರಿಶೀಲಿಸುವುದಾಗಿ ಸ್ಪೀಕರ್ ಹೇಳಿದ್ದಾರೆ ಎಂದೂ ತಿಳಿಸಿದರು.

ಬಿಜೆಪಿ ಎಲ್ಲಾ ರೀತಿಯ ನಿರಾಧಾರ ಆರೋಪಗಳನ್ನು ಮುಂದುವರೆಸಿದೆ. ಆದರೆ, ನಾವು ಸುಗಮ ಕಲಾಪಕ್ಕೆ ಸಹಕರಿಸಲು ನಿರ್ಧರಿಸಿದ್ದೇವೆ. ಬಿಜೆಪಿಯವರು ಏನೇ ಪ್ರಚೋದಿಸಲಿ, ಅವರಿಗೆ ಅವಕಾಶ ಮಾಡಿಕೊಡುತ್ತೇವೆ. ಆದರೆ, ನಾವು ಸುಗಮ ಕಲಾಪ ನಡೆಯಲು ಅವಕಾಶ ಮಾಡಿಕೊಡುವುದಕ್ಕೆ ಯತ್ನಿಸುತ್ತೇವೆ. ಡಿಸೆಂಬರ್ 13 ರಂದು ಸಂವಿಧಾನ ಕುರಿತ ಚರ್ಚೆಗೆ ಬಯಸಿದ್ದೇವೆ ಎಂದು ರಾಹುಲ್ ಗಾಂಧಿ ಹೇಳಿದರು. ಬಿಜೆಪಿ ಸಂಸದರು ನನ್ನ ಬಗ್ಗೆ ಏನೇ ಮಾತನಾಡಲಿ, ಆದರೆ ಸಂವಿಧಾನ ಕುರಿತು ಚರ್ಚೆ ನಡೆಯಬೇಕು. ಇದು ತುಂಬಾ ಸರಳವಾಗಿದೆ. ಅದಾನಿ ವಿಚಾರದ ಬಗ್ಗೆ ಚರ್ಚೆಗೆ ಅವರು ಸಿದ್ಧರಿಲ್ಲ. ಅದಾನಿ ವಿಚಾರದಿಂದ ಗಮನ ಬೇರೆಡೆ ಸೆಳೆಯಲು ಯತ್ನಿಸುತ್ತಿದ್ದಾರೆ. ಅಧಿವೇಶನದ ಕೊನೆಯ ವರೆಗೂ ನಾವು ಅವರನ್ನು ಬಿಟ್ಟುಕೊಡುವುದಿಲ್ಲ ಎಂದು ತಿಳಿಸಿದರು.

ರಾಜ್ಯಸಭಾಧ್ಯಕ್ಷರ ಪಕ್ಷಪಾತ ಧೋರಣೆ

ರಾಜ್ಯಸಭಾ ಅಧ್ಯಕ್ಷರ ಕಾರ್ಯವೈಖರಿ ಅವರ ಸ್ಥಾನದ ಘನತೆಗೆ ವ್ಯತಿರಿಕ್ತವಾಗಿದೆ. ಅವರು ಪ್ರತಿಪಕ್ಷ ನಾಯಕರನ್ನು ಗುರಿಯಾಗಿಸಿಕೊಂಡು ಆಗಾಗ್ಗೆ ಸರ್ಕಾರವನ್ನು ಹೊಗಳುತ್ತಾ ಸರ್ಕಾರದ ವಕ್ತಾರರಂತೆ ಕೆಲಸ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದಾರೆ. ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಬುಧವಾರ ಪತ್ರಿಕಾಗೋಷ್ಠಿ ಯನ್ನುದ್ದೇಶಿಸಿ ಮಾತನಾಡಿದ ಖರ್ಗೆ, ಧನ್‌ಕರ್ ಅವರ ಕಾರ್ಯವೈಖರಿಯಿಂದಾಗಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವುದನ್ನು ಬಿಟ್ಟು ಪ್ರತಿಪಕ್ಷಗಳಿಗೆ ಬೇರೆ ಆಯ್ಕೆ ಇರಲಿಲ್ಲ ಎಂದರು. ರಾಜ್ಯಸಭಾ ಅಧ್ಯಕ್ಷ ವಿರುದ್ಧ ನಮಗೆ ಯಾವುದೇ ವೈಯಕ್ತಿಕ ದ್ವೇಷ ಅಥವಾ ರಾಜಕೀಯ ಜಗಳವಿಲ್ಲ. ಪ್ರಜಾಪ್ರಭುತ್ವ, ಸಂವಿಧಾನವನ್ನು ರಕ್ಷಿಸಲು ನಾವು ಈ ಕ್ರಮ ಕೈಗೊಂಡಿದ್ದೇವೆ. ಸಾಕಷ್ಟು ಯೋಚಿಸಿದ ನಂತರ ಅವರ ಪದಚ್ಯುತಿಗೆ ನೋಟಿಸ್ ಸಲ್ಲಿಸು ವುದು ಬಿಟ್ಟು ನಮಗೆ ಬೇರೆ ಆಯ್ಕೆ ಇರಲಿಲ್ಲ ಎಂದೂ ಹೇಳಿದರು.

ರೈಲ್ವೆ ತಿದ್ದುಪಡಿ ಮಸೂದೆ ಲೋಕಸಭೆ ಅಸ್ತು

ನವದೆಹಲಿ: ರೈಲ್ವೆ ಕಾನೂನುಗಳಿಗೆ ತಿದ್ದುಪಡಿ ತರುವ ರೈಲ್ವೆ (ತಿದ್ದುಪಡಿ) ಮಸೂದೆ-2024 ಅನ್ನು ಬುಧವಾರ ಲೋಕಸಭೆಯಲ್ಲಿ ಅಂಗೀಕರಿಸಿದ್ದು, ಇದು ಭಾರತೀಯ ರೈಲ್ವೆಯನ್ನು ಖಾಸಗೀಕರಣ ಮಾಡುವುದಕ್ಕೆ ಅವಕಾಶ ನೀಡುವುದಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ರೈಲ್ವೆ ತಿದ್ದುಪಡಿ ಮಸೂದೆ ಮೇಲಿನ ಚರ್ಚೆಗೆ ಪ್ರತಿಕ್ರಿಯಿಸಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು, ತಿದ್ದುಪಡಿಯು ರೈಲ್ವೆ ಯನ್ನು ಖಾಸಗೀಕರಣಗೊಳಿಸುತ್ತದೆ ಎಂಬ ನಕಲಿ ನಿರೂಪಣೆಯನ್ನು ಹುಟ್ಟುಹಾಕಲಾಗಿದೆ ಎಂದರು. ಸಂವಿಧಾನದ ಬಗ್ಗೆ ಅವರ (ವಿರೋಧ) ನಕಲಿ ನಿರೂಪಣೆ ವಿಫಲವಾಗಿದೆ , ಈಗ ಇದು ಸಹ ವಿಫಲವಾಗಲಿದೆ ಎಂದು ರೈಲ್ವೆ ಸಚಿವರು ಪ್ರತಿಪಾದಿಸಿದರು. ಚರ್ಚೆಯ ನಂತರ ಧ್ವನಿ ಮತದ ಮೂಲಕ ಮಸೂದೆಯನ್ನು ಅಂಗೀಕರಿಸಲಾಯಿತು. ರೈಲ್ವೆ ಕಾಯಿದೆ- 1989ಕ್ಕೆ ತಿದ್ದುಪಡಿ ಜೊತೆಗೆ ರೈಲ್ವೆ ಮಂಡಳಿಯ ಅಧಿಕಾರಗಳನ್ನು ಹೆಚ್ಚಿಸಲು ಮತ್ತು ಕಾರ್ಯಾಚರಣೆ ದಕ್ಷತೆ ಸುಧಾರಣೆಯ ಗುರಿಯನ್ನು ಇದು ಹೊಂದಿದೆ. ಇಂಡಿಯನ್ ರೈಲ್ವೆ ಬೋರ್ಡ್ ಕಾಯ್ದೆ-1905 ಅನ್ನು ರೈಲ್ವೆ ಆ್ಯಕ್ಟ್- 1989ಗೆ ಸೇರಿಸುವ ಉದ್ದೇಶವನ್ನು ಮಸೂದೆ ಹೊಂದಿದೆ. ಇದು ಭಾರತೀಯ ರೈಲ್ವೆಯ ಕಾನೂನಿನ ಚೌಕಟ್ಟನ್ನು ಸರಳೀಕರಿಸಲಿದೆ ಎಂದು ವೈಷ್ಣವ್ ಹೇಳಿದ್ದಾರೆ.

ಪಂಜಾಬ್ ರೈತರ ಘೋಷಣೆ | ಡಿ.8ರಿಂದ ಸ್ಥಗಿತವಾಗಿದ್ದ ಚಳವಳಿ

ಡಿ.14ರಿಂದ ಮತ್ತೆ ದೆಹಲಿ ಚಲೋ

ಚಂಡೀಗಢ: ಡಿ.14ರಂದ ದೆಹಲಿ ಚಲೋ ಪ್ರತಿಭಟನಾ ರ‍್ಯಾಲಿಯನ್ನು ಪುನಾರಂಭಿಸುವುದಾಗಿ ಪಂಜಾಬ್ ರೈತರು ಘೋಷಿಸಿದ್ದಾರೆ. ತಮ್ಮ ಬೇಡಿಕೆಗಳನ್ನು ದೀರ್ಘಕಾಲದಿಂದ ಈಡೇರಿಸದಿರುವ ಹಿನ್ನೆಲೆಯಲ್ಲಿ ಮತ್ತೆ ಪ್ರತಿಭಟನೆ ಆರಂಭಿಸುವುದಾಗಿ ರೈತರು ಹೇಳಿದ್ದಾರೆ. ಪ್ರತಿಭಟನೆಗೆ 10 ತಿಂಗಳು ತುಂಬಿರುವ ಹಿನ್ನೆಲೆಯಲ್ಲಿ ಒಗ್ಗಟ್ಟಿನ ಬಲ ಪ್ರದರ್ಶನಕ್ಕಾಗಿ ಶುಕ್ರವಾರ ಹರಿಯಾಣದ ಎರಡು ಅಂತಾರಾಜ್ಯ ಗಡಿಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಆಗಮಿಸುವಂತೆ ರೈತ ಸಂಘಟನೆಗಳು ರೈತರಿಗೆ ಕರೆ ನೀಡಿವೆ.

ಸಂಸತ್ತಿನ ಮುಂದೆ ಪ್ರತಿಭಟನೆ ನಡೆಸಲು 101 ರೈತರ ಗುಂಪು ಡಿಸೆಂಬರ್ 14ರಂದು ದೆಹಲಿಯತ್ತ ಮೆರವಣಿಗೆ ನಡೆಸಲಿದೆ ಎಂದು ರೈತ ಮುಖಂಡ ಸರ್ವನ್ ಸಿಂಗ್ ಪಂಧೇರ್ ಮಂಗಳವಾರ ಪ್ರತಿಭಟನಾ ಸ್ಥಳದಲ್ಲಿ ಮಾಧ್ಯಮಗಳಿಗೆ ತಿಳಿಸಿದರು. ಹರಿಯಾಣದ ಗಡಿಯಲ್ಲಿನ ಶಂಭುವಿನಲ್ಲಿ ಪೊಲೀಸರು ನಡೆಸಿದ ಅಶ್ರುವಾಯು ಶೆಲ್ ದಾಳಿಯಲ್ಲಿ ಕೆಲವರು ಗಾಯಗೊಂಡ ನಂತರ, ಪ್ರತಿಭಟನಾನಿರತ ರೈತರು ಎರಡು ದಿನಗಳ ಪ್ರತಿಭಟನೆಯ ನಂತರ ಡಿಸೆಂಬರ್ 8ರಂದು ದೆಹಲಿಗೆ ಕಾಲ್ನಡಿಗೆ ಮೆರವಣಿಗೆಯನ್ನು ಸ್ಥಗಿತಗೊಳಿಸಿದ್ದರು. ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಸೆಕ್ಷನ್ 163ರ ಅಡಿಯಲ್ಲಿ ನಿಷೇಧಾಜ್ಞೆ ವಿಧಿಸಲಾಗಿರುವುದರಿಂದ ರಾಷ್ಟ್ರ ರಾಜಧಾನಿಗೆ ತೆರಳುತ್ತಿದ್ದ ರೈತರು ಮುಂದೆ ಹೋಗದಂತೆ ಪೊಲೀಸರು ಸೂಚಿಸಿದ್ದರು. ಈ ಮಧ್ಯೆ ಉಪವಾಸದ 15ನೇ ದಿನದಂದು ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೆವಾಲ್ ಅವರ ಸ್ಥಿತಿ ಹದಗೆಡಲು ಪ್ರಾರಂಭಿಸಿದೆ. ದಲ್ಲೆವಾಲ್ ಅವರ ತೂಕ ಕಡಿಮೆಯಾಗುತ್ತಿದೆ ಮತ್ತು ಅವರ ರಕ್ತದೊತ್ತಡ ಸ್ಥಿರವಾಗಿಲ್ಲ ಎಂದು ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರು ಹೇಳಿದ್ದಾರೆ. ಹರಿಯಾಣ ಸರ್ಕಾರವು ಈ ಗಡಿಯನ್ನು ಭಾರತ-ಪಾಕಿಸ್ತಾನ ಗಡಿಯಂತೆ ಪರಿವರ್ತಿಸಿದೆ ಎಂದು ಪ್ರತಿಭಟನಾನಿರತ ರೈತರೊಬ್ಬರು ಆರೋಪಿಸಿದರು.

ರೈತ ಚಳವಳಿಯ ಹಿನ್ನೆಲೆ

ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಖಾತರಿ, ಸಾಲಮನ್ನಾ ಮತ್ತು ಕೃಷಿ ಕ್ಷೇತ್ರದ ಪರಿಸ್ಥಿತಿಗಳನ್ನು ಸುಧಾರಿಸುವ ಸುಧಾರಣೆಗಳು ಸೇರಿದಂತೆ ತಮ್ಮ ದೀರ್ಘಕಾಲದ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತರು ಪ್ರತಿಭಟನಾ ರ‍್ಯಾಲಿ ನಡೆಸುತ್ತಿದ್ದಾರೆ. ದೆಹಲಿಗೆ ತೆರಳುತ್ತಿದ್ದ ರ‍್ಯಾಲಿಯನ್ನು ಪೊಲೀಸರು ತಡೆದ ನಂತರ ರೈತರು ಫೆಬ್ರವರಿ 13ರಿಂದ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಬ್ಯಾನರ್ ಅಡಿಯಲ್ಲಿ ಪಂಜಾಬ್ ಮತ್ತು ಹರಿಯಾಣ ನಡುವಿನ ಶಂಭು ಮತ್ತು ಖನೌರಿ ಗಡಿ ಸ್ಥಳಗಳಲ್ಲಿ ಕ್ಯಾಂಪ್ ಹೂಡಿದ್ದಾರೆ.

ಕಂಗನಾ ವಿವಾದಾತ್ಮಕ ಹೇಳಿಕೆ | ಸೋಶಿಯಲ್ ಮಿಡಿಯಾದಲ್ಲಿ ಟ್ರೆಂಡ್

99%ರಷ್ಟು ಮದುವೆಗಳಲ್ಲಿ ಪುರುಷರದ್ದೇ ತಪ್ಪು

ದೆಹಲಿ: ಪತ್ನಿಯ ಕಿರುಕುಳದಿಂದ ಬೇಸತ್ತು ಉತ್ತರ ಪ್ರದೇಶ ಮೂಲದ ಎಂಜಿನಿಯರ್ ಅತುಲ್ ಸುಭಾಷ್ ಬೆಂಗಳೂರಿನಲ್ಲಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ದೇಶಾದ್ಯಂತ ವ್ಯಾಪಕ ಚರ್ಚೆ ಹುಟ್ಟು ಹಾಕಿದೆ. ಇದೀಗ ಬಾಲಿವುಡ್ ನಟಿ, ಸಂಸದೆ ಕಂಗನಾ ರಾಣಾವತ್ ಈ ಘಟನೆ ಬಗ್ಗೆ ಪ್ರತಿಕ್ರಿಯಿಸಿದ್ದು, ಶೇ. 99ರಷ್ಟು ಮದುವೆಗಳಲ್ಲಿ ಪುರುಷರು ತಪ್ಪು ಮಾಡುತ್ತಾರೆ. ಇದೇ ಕಾರಣಕ್ಕೆ ಇಂತಹ ಘಟನೆ ನಡೆಯುತ್ತಿದೆ ಎಂದು ವಿವಾದಾತ್ಮಕ ಹೇಳಿಕೆ ನೀಡಿ, ಸೋಶಿಯಲ್ ಮೀಡಿಯಾದಲ್ಲಿ ಮತ್ತೊಮ್ಮೆ ಸದ್ದು ಮಾಡುತ್ತಿದ್ದಾರೆ.

ಪತ್ನಿ ಮತ್ತು ಆಕೆಯ ಮನೆಯವರು ನಿರಂತರ ಕಿರುಕುಳ ನೀಡುತ್ತಿದ್ದಾರೆ ಎಂದು 24 ಪುಟಗಳ ಡೆತ್‌ನೋಟ್ ಬರೆದಿಟ್ಟು ಅತುಲ್ ಸುಭಾಷ್ ಆತ್ಮಹತ್ಯೆಗೆ ಶರಣಾಗಿದ್ದಾರೆ, ಜತೆಗೆ ವಿಡಿಯೊ ಮಾಡಿ ಪತ್ನಿಯ ಕೃತ್ಯವನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಮಹಿಳಾ ಪರ ಕಾನೂನಿನ ದುರುಪಯೋಗದ ಕುರಿತು ಇದು ಚರ್ಚೆ ಹುಟ್ಟು ಹಾಕಿದೆ. ಮೆನ್‌ಟೂ ಹ್ಯಾಶ್ ಟ್ಯಾಗ್ ಸೋಶಿಯಲ್ ಮೀಡಿಯಾದಲ್ಲಿ ಟ್ರೆಂಡ್ ಆಗಿದೆ. ಅತಿಯಾದ ಒತ್ತಡ ತಾಳಲಾರದೆ ಅವರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಪ್ರತಿ ದಿನ ಮಹಿಳೆಯರ ವಿರುದ್ಧ ಶೋಷಣೆ ನಡೆಯುತ್ತಿದೆ. ಓರ್ವ ಮಹಿಳೆಯ ಉದಾಹರಣೆ ತೆಗೆದುಕೊಂಡು ಇದನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ಹಿಂದಿನಿಂದಲೂ ಸಾಂಪ್ರದಾಯಿಕವಾಗಿ ನಡೆದುಕೊಂಡು ಬರುತ್ತಿದ್ದ ಮದುವೆ ವ್ಯವಸ್ಥೆ ಉತ್ತಮವಾಗಿತ್ತು, ಆದರೆ ಇತ್ತೀಚೆಗೆ ಇದರಲ್ಲಿ ಸೋಷಿಯಲಿಸಂ, ಕಮ್ಯುನಿಸಂ ತೂರಿಕೊಂಡಿದ್ದು, ವ್ಯವಸ್ಥೆಯನ್ನೇ ಬುಡಮೇಲಾಗಿಸಿದೆ ಎಂದು ಅವರು ಕಿಡಿ ಕಾರಿದ್ದಾರೆ. ಸದ್ಯ ಅವರ ಈ ಹೇಳಿಕೆಗೆ ಪರ-ವಿರೋಧ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಸಾಮಾಜಿಕ ಜಾಲತಾಣ ಅಭಿಯಾನ: ಈ ಘಟನೆಗೆ ಸಂಬಂಧಿಸಿದಂತೆ ಇದೀಗ ಸಾಮಾಜಿಕ ಜಾಲತಾಣದಲ್ಲಿ 'ಜಸ್ಟೀಸ್ ಫಾರ್ ಅತುಲ್' ಎಂಬ ಅಭಿಯಾನ ಪ್ರಾರಂಭವಾಗಿದೆ. ಅತುಲ್‌ನ ಆಪ್ತರು, ಸ್ನೇಹಿತರು ಸೇರಿದಂತೆ ಇದೀಗ ಘಟನೆಗೆ ಸಂಬಂಧಪಟ್ಟಂತೆ ಹಲವರಿಂದ ಸಾಮಾಜಿಕ ಜಾಲತಾಣದಲ್ಲಿ ಬುಧವಾರ ಸಂಜೆಯಿಂದ ಭಾರೀ ಅಭಿಯಾನ ಆರಂಭವಾಗಿದೆ

ಕಂಗನಾ ರಾಣಾವತ್ ಹೇಳಿದ್ದೇನು?

ಸುದ್ದಿಸಂಸ್ಥೆಯೊಂದರ ಜತೆ ಮಾತನಾಡಿದ ಕಂಗನಾ ಅವರು, 'ಈ ಘಟನೆಯಿಂದ ಇಡೀ ದೇಶವೇ ಆಘಾತಕ್ಕೊಳಗಾಗಿದೆ. ಅತುಲ್ ಅವರ ವಿಡಿಯೊ ಹೃದಯ ವಿದ್ರಾವಕವಾಗಿದೆ. ನಕಲಿ ಸ್ತ್ರೀವಾದ ಖಂಡನೀಯ. ಈ ಪ್ರಕರಣದಲ್ಲಿ ಕೋಟ್ಯಂತರ ರೂ. ಸುಲಿಗೆ ಮಾಡಲಾಗಿದೆ. ಇದೇ ಕಾರಣಕ್ಕೆ ಶೇ. 99ರಷ್ಟು ಮದುವೆಗಳಲ್ಲಿ ಪುರುಷರು ತಪ್ಪು ಮಾಡುತ್ತಾರೆ ಎಂದು ಹೇಳಲಾಗುತ್ತಿದೆ. ಹೀಗಾಗಿ ಇಂತಹ ಘಟನೆ ನಡೆಯುತ್ತದೆ' ಎಂದು ಹೇಳಿದ್ದಾರೆ.

ಸಿರಿಯಾ: ಭಾರತೀಯರ ರಕ್ಷಣೆ

ದೆಹಲಿ: ಸಿರಿಯಾದಲ್ಲಿ ಉಂಟಾದ ಬಿಕ್ಕಟ್ಟು ಇತರ ದೇಶಗಳಲ್ಲಿ ಆತಂಕ ಸೃಷ್ಟಿಸಿದೆ. ಅಲ್ಲಿನ ಅಧ್ಯಕ್ಷ ಬಶರ್ ಅಸ್ಸಾದ್ ಸರಕಾರವನ್ನು ಬಂಡುಕೋರರು ಪತನಗೊಳಿಸಿದ್ದು, ಹೊಸ ಸರಕಾರ ರಚನೆಗೆ ಸಿದ್ಧತೆ ನಡೆದಿದೆ. ಸದ್ಯ ಅಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ಸಿರಿಯಾದಲ್ಲಿ ಭಾರತೀಯ ಪ್ರಜೆಗಳ ರಕ್ಷಣೆಗೆ ಭಾರತ ಸರ್ಕಾರವು ಮುಂದಾಗಿದೆ. ಈ ನಿಟ್ಟಿನಲ್ಲಿ ಮಂಗಳವಾರ ಸಿರಿಯಾದಿಂದ 75 ಭಾರತೀಯ ಪ್ರಜೆಗಳನ್ನು ಸ್ಥಳಾಂತರಿಸುವ ಕಾರ್ಯ ನಡೆದಿದೆ. ಡಮಾಸ್ಕಸ್ ಮತ್ತು ಬೈರುತ್‌ನಲ್ಲಿನ ಭಾರತೀಯ ರಾಯಭಾರಿ ಕಚೇರಿ ಈ ಸ್ಥಳಾಂತರಕ್ಕೆ ಮುಂದಾಗಿದೆ. ಅಲ್ಲಿನ ಭದ್ರತೆಯ ಹಿತದೃಷ್ಟಿಯ ಮೌಲ್ಯಮಾಪನದ ಬಳಿಕ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ತಡರಾತ್ರಿ ಹೇಳಿಕೆ ಹೊರಡಿಸಿರುವ ಸಚಿವಾಲಯ, ಸಿರಿಯಾ ದೇಶದಲ್ಲಿನ ಇತ್ತೀಚಿನ ಬೆಳವಣಿಗೆ ಹಿನ್ನೆಲೆ ಭಾರತ ಸರಕಾರವು ಇಂದು 75 ಭಾರತೀಯರ ಸ್ಥಳಾಂತರ ಮಾಡಿದೆ. ಅದರಲ್ಲಿ ಸೈದಾ ಜೈನಬ್‌ನಲ್ಲಿ ಸಿಲುಕಿದ್ದ 44 ಮಂದಿ ಜಮ್ಮು ಮತ್ತು ಕಾಶ್ಮೀರದ ಜೈರೀನ್‌ಗಳು ಇದ್ದಾರೆ. ಎಲ್ಲಾ ಭಾರ ತೀಯರೂ ಸುರಕ್ಷಿತವಾಗಿ ಲೆಬನಾನ್ ಗಡಿ ದಾಟಿದ್ದು, ಲಭ್ಯವಿರುವ ವಾಣಿ ಜ್ಯ ವಿಮಾನದಲ್ಲಿ ಭಾರತಕ್ಕೆ ಮರಳಲಿದ್ದಾರೆ ಎಂದು ತಿಳಿಸಿದೆ.ಸಿರಿಯಾ ಬಂಡುಕೋರರು ಅಲ್ಲಿನ ರಾಜಧಾನಿ ಡಮಾಸ್ಕಸ್ ಸೇರಿದಂತೆ ಹಲವು ಪ್ರಮುಖ ನಗರವನ್ನು ವಶಕ್ಕೆ ಪಡೆಯುವ ಮೂಲಕ ಸರ್ವಾಧಿಕಾರಿ ಸರಕಾರವನ್ನು ಕೆಳಗಿಳಿಸಿದ್ದರು.

ಸಹಾಯವಾಣಿ ಕಾರ್ಯಾರಂಭ

ವಿದೇಶದಲ್ಲಿ ಸಿಲುಕಿರುವ ಭಾರತೀಯರ ಸುರಕ್ಷತೆ ಮತ್ತು ಭದ್ರತೆಯು ಭಾರತ ಸರ್ಕಾರದ ಆದ್ಯತೆಯಾಗಿದೆ ಎಂದು ಸಚಿವಾಲಯ ತಿಳಿಸಿದೆ. ಈ ಹಿನ್ನೆಲೆ ಸಿರಿಯಾದಲ್ಲಿ ಸಿಲುಕಿರುವ ಭಾರತೀಯರು ಡಮಾಸ್ಕ್‌ಸ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಸಂಪರ್ಕಿಸುವಂತೆ ಸಲಹೆ ನೀಡಲಾಗಿದೆ, ಸಿರಿಯಾದಲ್ಲಿನ ಪರಿಸ್ಥಿತಿ ಕುರಿತು ಭಾರತ ಕುರಿತು ಸೂಕ್ಷ್ಮ ಮೇಲ್ವಿಚಾರಣೆ ನಡೆಸಲಿದೆ ಎಂದಿದೆ. ಸಿರಿಯಾದಲ್ಲಿ ಸಿಲುಕಿರುವ ಭಾರತೀಯರು ಡಮಾಸ್ಕಸ್‌ನಲ್ಲಿರುವ ತುರ್ತು ಸಹಾಯವಾಣಿ +963 993385973ಗೆ ವಾಟ್ಸಾಪ್ ಮತ್ತು hoc.damascus@mea.gov.in ಇ-ಮೇಲ್ ಮೂಲಕ ಸಂಪರ್ಕಿಸುವಂತೆಯೂ ಸಲಹೆ ನೀಡಲಾಗಿದೆ.

ಭಾರತದ ವಿವಿಧ ಐಐಟಿಗಳು ಶ್ರೇಯಾಂಕದಲ್ಲಿ ಉನ್ನತ ಸ್ಥಾನ | ದೆಹಲಿ ಐಐಟಿ ಪ್ರಥಮ

ವರ್ಲ್ಡ್ ವಿ.ವಿ ರ‍್ಯಾಂಕಿಂಗ್: ಐಐಎಸ್ಸಿಗೆ 6ನೇ ಸ್ಥಾನ

ಲಂಡನ್: ಕ್ಯೂಎಸ್ ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕಗಳು, ಸಸ್ಟೈನಿಬಿಲಿಟಿ-2025ರಲ್ಲಿ ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಭಾರತದ ಅಗ್ರ ವಿಶ್ವವಿ ದ್ಯಾನಿಲಯವಾಗಿ ಸ್ಥಾನ ಪಡೆದಿದೆ. ಸಂಸ್ಥೆ ಯು ಒಟ್ಟಾರೆ 80.6 ಅಂಕಗಳನ್ನು ಪಡೆದಿದೆ ಮತ್ತು 255 ಸ್ಥಾನಗಳನ್ನು ಜಿಗಿದು ಜಾಗತಿಕ ವಾಗಿ 171ನೇ ಸ್ಥಾನಕ್ಕೇರಿದೆ. ಎರಡನೇ ಶ್ರೇಯಾಂಕವನ್ನು ಖರಗ್‌ಪುರದ ಇಂಡಿ ಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ-ಕೆಜೆಪಿ) ಪಡೆದಿದ್ದು ಒಟ್ಟಾರೆ ಸ್ಕೋರ್ 78.6 ಮತ್ತು ಜಾಗತಿಕ ಶ್ರೇಣಿ 202ನೇ ಸ್ಥಾನ ಪಡೆದಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಾಂಬೆ (ಐಐಟಿಬಿ) ಒ ಟ್ಟಾರೆ ಸ್ಕೋರ್ 76.1 ಜತೆಗೆ ಜಾಗತಿಕ ಶ್ರೇಣಿ 234 ಅಂಕ ಪಡೆದು ಮೂರನೇ ಸ್ಥಾನದಲ್ಲಿದೆ.

ಐಐಟಿ ಕಾನ್ಪುರ ನಾಲ್ಕನೇ ಸ್ಥಾನದಲ್ಲಿದ್ದು, ಮತ್ತು ಮದ್ರಾಸ್ ಐಐಟಿ ಐದನೇ ಸ್ಥಾನಲ್ಲಿದೆ. ದೆಹಲಿ ವಿಶ್ವವಿದ್ಯಾಲಯ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕ್ರಮವಾಗಿ ಆರು ಮತ್ತು ಏಳನೇ ಸ್ಥಾನದಲ್ಲಿವೆ. ವೆಲ್ಲೂರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ), ವೆಲ್ಲೂರ್ ಎಂಟನೇ ಸ್ಥಾನದಲ್ಲಿದೆ, ಕರ್ನಾಟಕದ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಒಂಬತ್ತನೇ ಸ್ಥಾನದಲ್ಲಿ ಮತ್ತು ಚೆನ್ನೈನ ಅಣ್ಣಾ ವಿಶ್ವವಿದ್ಯಾಲಯ ಹತ್ತನೇ ಸ್ಥಾನದಲ್ಲಿದೆ. ಒಟ್ಟು 78 ಭಾರತೀಯ ವಿಶ್ವವಿದ್ಯಾನಿಲಯಗಳು 2025ರ ಕ್ಯೂಎಸ್ ಸುಸ್ಥಿರತೆಯ ಶ್ರೇಯಾಂಕದಲ್ಲಿ ಕಾಣಿಸಿಕೊಂಡಿವೆ, ದೇಶದ ಟಾಪ್ 10 ಸಂಸ್ಥೆಗಳಲ್ಲಿ ಒಂಬತ್ತು ಈ ವರ್ಷ ತಮ್ಮ ಶ್ರೇಯಾಂಕದಲ್ಲಿ ಉನ್ನತ ಸ್ಥಾನಕ್ಕೇರಿದೆ ಮತ್ತು 21 ಹೊಸ ಸಂಸ್ಥೆಗಳು ಪ್ರವೇಶ ಪಡೆದಿವೆ.

ಲಂಡನ್ ಮೂಲದ ಕ್ವಾಕ್ವೆರೆಲ್ಲಿ ಸೈಮಂಡ್ಸ್ (ಕ್ಯೂಎಸ್) ಉಪಾಧ್ಯಕ್ಷ ಬೆನ್ ಸೌಟರ್ ಅವರು 2025ರ ಕ್ಯೂಎಸ್, ಸಸ್ಟೈನಿಬಿಲಿಟಿ ಶ್ರೇಯಾಂಕದಲ್ಲಿ ಕಾಣಿಸಿಕೊಂಡಿರುವ 78 ಭಾರತೀಯ ವಿಶ್ವವಿದ್ಯಾನಿಲಯಗಳ ಪೈಕಿ 34 ಕಳೆದ ವರ್ಷದ ಸ್ಥಾನಗಳಲ್ಲಿ ಸುಧಾರಣೆ ಕಂಡಿವೆ ಮತ್ತು ಎಂಟು ತಮ್ಮ ಸ್ಥಾನಗಳನ್ನು ಕಾಯ್ದುಕೊಂಡಿವೆ ಎಂದು ಸುದ್ದಿ ಸಂಸ್ಥೆಯು ಉಲ್ಲೇಖಿಸಿದೆ. ಇದು ಭಾರತೀಯ ಉನ್ನತ ಶಿಕ್ಷಣ ಪರಿಸರ ವ್ಯವಸ್ಥೆಗೆ ಅತ್ಯುತ್ತಮ ಸಾಧನೆಯಾಗಿದೆ ಮತ್ತು ಭಾರತೀಯ ವಿಶ್ವವಿದ್ಯಾಲಯಗಳು ಮುನ್ನುಗ್ಗುತ್ತಿವೆ ಎಂಬುದನ್ನು ತೋರಿಸುತ್ತದೆ.ಸಾಮಾಜಿಕ ಪ್ರಭಾವದ ವರ್ಗ ದಲ್ಲಿ, ಭಾರತೀಯ ವಿಶ್ವವಿದ್ಯಾನಿಲಯಗಳು ಆರೋಗ್ಯ ಮತ್ತು ಯೋಗಕ್ಷೇಮ, ಶಿಕ್ಷಣದ ಪರಿಣಾಮ ಮತ್ತು ಸಮಾನತೆಯ ಮಸೂ ರಗಳಲ್ಲಿ ತಮ್ಮ ಸೂಚಕ ಅಂಕಗಳನ್ನು ಸುಧಾರಿಸಲು ನೋಡಬಹುದು, ಅಲ್ಲಿ ದೇಶದ ಯಾವುದೇ ಸಂಸ್ಥೆಗಳು ಅಗ್ರ 350ರಲ್ಲಿ ಕಾಣಿಸಿಕೊಂಡಿಲ್ಲ. ಜ್ಞಾನ ವಿನಿಮಯದಲ್ಲಿ ಭಾರತದ ವಿಶ್ವವಿದ್ಯಾಲಯಗಳು ಉತ್ತಮ ಅಂಕ ಗಳಿಸಿವೆ.

ವಿದೇಶಿ ವಿ.ವಿ: ಸುಸ್ಥಿರ ಶ್ರೇಯಾಂಕ

ಟೊರೊಂಟೊ ವಿಶ್ವವಿದ್ಯಾಲಯ, ಕೆನಡಾವು 2025 ಕ್ಯೂಎಸ್ ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕಗಳು, ಸುಸ್ಥಿರತೆಯಲ್ಲಿ ಉನ್ನತ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಿದೆ. ವಿಶ್ವದ ಅತೀ ದೊಡ್ಡ ಪರಿಸರ, ಸಾಮಾಜಿಕ ಮತ್ತು ಆಡಳಿತ ಸವಾಲುಗಳನ್ನು ನಿಭಾಯಿಸಲು ಸಂಸ್ಥೆಯ ಸಾಮರ್ಥ್ಯವನ್ನು ಅಳೆಯಲು ವಿನ್ಯಾಸಗೊಳಿಸಲಾದ ಸೂಚಕಗಳನ್ನು ಒಳಗೊಂಡಿರುವ ವಿಧಾನವನ್ನು ಬಳಸಿಕೊಂಡು ಶ್ರೇಯಾಂಕಗಳನ್ನು ಸಂಕಲಿಸಲಾಗಿದೆ.

ಐಐಟಿಗಳ ಮೇಲುಗೈ

ಐಐಟಿ-ದೆಹಲಿ ಮತ್ತು ಐಐಟಿ-ಕಾನ್ಪುರ್ ಪರಿಸರದ ಪ್ರಭಾವಕ್ಕಾಗಿ ವಿಶ್ವದ ಅಗ್ರ 100ರಲ್ಲಿ ಸ್ಥಾನ ಪಡೆದಿವೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಎಸ್‌ಎಸ್‌ಸಿ), ಬೆಂಗಳೂರು ಪರಿಸರ ಶಿಕ್ಷಣಕ್ಕಾಗಿ ವಿಶ್ವದ 50 ಟಾಪ್‌ಗಳಲ್ಲಿ ಸ್ಥಾನ ಪಡೆದಿದೆ. 2025 ಕ್ಯೂಎಸ್ ಶ್ರೇಯಾಂಕದಲ್ಲಿ ಕಾಣಿಸಿಕೊಂಡಿರುವ 78 ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ, 34 ಕಳೆದ ವರ್ಷದ ಸ್ಥಾನವನ್ನು ಸುಧಾರಿಸಿದೆ ಮತ್ತು ಎಂಟು ತಮ್ಮ ಸ್ಥಾನಗಳನ್ನು ಉಳಿಸಿಕೊಂಡಿವೆ. 2025ರ ಶ್ರೇಯಾಂಕಗಳು 107 ದೇಶಗಳು ಮತ್ತು ಪ್ರಾಂತ್ಯಗಳಿಂದ 1,740 ವಿಶ್ವವಿದ್ಯಾಲಯಗಳನ್ನು ಪ್ರದರ್ಶಿಸುತ್ತವೆ, ಇದು ಹಿಂದಿನ ಆವೃತ್ತಿಯಿಂದ ಗಮನಾರ್ಹ ಬೆಳವಣಿಗೆಯನ್ನು ಪ್ರತಿಬಿಂಬಿಸಿದ್ದು, 95 ಸ್ಥಳಗಳಲ್ಲಿ 1,397 ಸಂಸ್ಥೆಗಳನ್ನು ಒಳಗೊಂಡಿದೆ.

ರಾಜ್‌ನಾಥ್-ಪುಟಿನ್ ದ್ವಿಪಕ್ಷೀಯ ಮಾತುಕತೆ

ಮಾಸ್ಕೋ: ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಂಗಳವಾರ ರಷ್ಯಾ ಅಧ್ಯಕ್ಷ ವಾಡ್ಲಿಮಿರ್ ಪುಟಿನ್ ಅವರನ್ನು ಮಾಸ್ಕೋದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಈ ವೇಳೆ ರಷ್ಯಾದೊಂದಿಗೆ ಭಾರತದ ಬಾಂಧವ್ಯ ಅತ್ಯಂತ ಎತ್ತರದ ಪರ್ವತಕ್ಕಿಂತಲೂ ಎತ್ತರವಾಗಿದೆ ಮತ್ತು ಸಾಗರದ ಅತ್ಯಂತ ಆಳವಾಗಿರುವ ಪ್ರದೇಶಕ್ಕಿಂತಲೂ ಆಳವಾಗಿದೆ ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ. ಸಭೆಯಲ್ಲಿ ಉಭಯ ದೇಶಗಳ ನಡುವಿನ ಬಾಂಧವ್ಯ ಗಟ್ಟಿಯಾಗಿದ್ದು, ಸಹಭಾಗಿತ್ವದ ಪ್ರಯತ್ನಗಳು ಗಮನಾರ್ಹ ಫಲಿತಾಂಶಗಳಿಗೆ ದಾರಿ ಮಾಡಿಕೊಡುತ್ತವೆ ಎಂದು ಉಭಯ ನಾಯಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಎರಡು ದೇಶಗಳ ನಡುವಿನ ಸ್ನೇಹವು ಅತ್ಯಂತ ಎತ್ತರದ ಪರ್ವತಕ್ಕಿಂತ ಎತ್ತರವಾಗಿದೆ ಮತ್ತು ಆಳವಾದ ಸಾಗರಕ್ಕಿಂತ ಆಳವಾಗಿದೆ' ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ. ಭಾರತ ಯಾವಾಗಲೂ ರಷ್ಯಾದ ಪರವಾಗಿ ನಿಂತಿದೆ ಮತ್ತು ಭವಿಷ್ಯದಲ್ಲಿಯೂ ಈ ನೀತಿಯನ್ನು ಮುಂದುವರೆಸುತ್ತದೆ ಎಂದು ಸಿಂಗ್ ಪುಟಿನ್ ಅವರಿಗೆ ತಿಳಿಸಿದ್ದಾರೆ. ವಾಡ್ಲಿಮಿರ್ ಪುಟಿನ್ ಭೇಟಿಗೂ ಮುನ್ನಾ ರಾಜನಾಥ್ ಸಿಂಗ್ ಅವರು ಮಿಲಿಟರಿ ಸಹಕಾರಕ್ಕೆ ಸಂಬಂಧಿಸಿದ ಭಾರತ- ರಷ್ಯಾ ಅಂತರ-ಸರ್ಕಾರಿ ಆಯೋಗದ 21ನೇ ಅಧಿವೇಶನದಲ್ಲಿ ರಷ್ಯಾದ ರಕ್ಷಣಾ ಸಚಿವ ಆಂಡ್ರೆ ಬೆಲೊಸೊವ್ ಅವರೊಂದಿಗೆ ಪಾಲ್ಗೊಂಡರು.

ಬಾಂಗ್ಲಾ: ಅಲ್ಪಸಂಖ್ಯಾತರ ವಿರುದ್ಧ 88 ಪ್ರಕರಣ ದೃಢ

ಢಾಕಾ: ಆಗಸ್ಟ್‌ನಲ್ಲಿ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ನಿರ್ಗಮನದ ನಂತರ ಬಾಂಗ್ಲಾದೇಶವು ಅಲ್ಪಸಂಖ್ಯಾತರನ್ನು, ಮುಖ್ಯವಾಗಿ ಹಿಂದೂಗಳನ್ನು ಗುರಿಯಾಗಿಸಿಕೊಂಡು 88 ಕೋಮು ಹಿಂಸಾಚಾರದ ಪ್ರಕರಣಗಳನ್ನು ಅಲ್ಲಿನ ಹಂಗಾಮಿ ಸರ್ಕಾರ ದೃಢಪಡಿಸಿದೆ. ಹಂಗಾಮಿ ಸರ್ಕಾರದ ಮುಖ್ಯಸ್ಥ ಮುಹಮ್ಮದ್ ಯೂನಸ್ ಅವರ ಪತ್ರಿಕಾ ಕಾರ್ಯದರ್ಶಿ ಶಫೀಕುಲ್ ಆಲಂ ಅಂಕಿ-ಅಂಶಗಳನ್ನು ಬಹಿರಂಗಪಡಿಸಿದ್ದು, ದಾಳಿಗೆ ಸಂಬಂಧಿಸಿದಂತೆ 70 ವ್ಯಕ್ತಿಗಳನ್ನು ಬಂಧಿಸಲಾಗಿದೆ ಎಂದು ಹೇಳಿರುವುದನ್ನು ಸುದ್ದಿ ಸಂಸ್ಥೆ ವರದಿ ಮಾಡಿದೆ.

ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ 2-3 ದಿನಗಳ ಹಿಂದೆ ಬಾಂಗ್ಲಾಕ್ಕೆ ಭೇಟಿ ನೀಡಿದ್ದು, ಬಾಂಗ್ಲಾದೇಶದ ನಾಯಕತ್ವದೊಂದಿಗಿನ ಸಭೆಗಳಲ್ಲಿ ಬಾಂಗ್ಲಾದೇಶದ ಅಲ್ಪಸಂಖ್ಯಾತರ ಸುರಕ್ಷತೆ ಮತ್ತು ಕ್ಷೇಮದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ಹೆಚ್ಚುತ್ತಿರುವ ದಾಳಿಗಳ ಬಗ್ಗೆ ಭಾರತದ ಆತಂಕವನ್ನು ಮಿಶ್ರ ವ್ಯಕ್ತಪಡಿಸಿದ್ದರು, ದುರ್ಬಲ ಸಮುದಾಯಗಳ ವರ್ಧಿತ ರಕ್ಷಣೆಗಾಗಿ ಒತ್ತಾಯಿಸಿದ್ದರು. ಈ ಬೆನ್ನಲ್ಲೇ ಬಾಂಗ್ಲಾ ಹಂಗಾಮಿ ಸರ್ಕಾರ ಅಲ್ಪಸಂಖ್ಯಾತರ ಮೇಲಿನ ದಾಳಿಗಳನ್ನು ಒಪ್ಪಿಕೊಂಡಿದೆ. ಭಾರತ ಬಾಂಗ್ಲಾದೇಶದೊಂದಿಗೆ ಸಕಾರಾತ್ಮಕ ಮತ್ತು ಪರಸ್ಪರ ಪ್ರಯೋಜನಕಾರಿ ಸಂಬಂಧವನ್ನು ಬಯಸುತ್ತದೆ, ರಚನಾತ್ಮಕ ಮತ್ತು ಜನಕೇಂದ್ರಿತ ಪಾಲುದಾರಿಕೆಯ ಬಯಕೆಯನ್ನು ಒತ್ತಿಹೇಳುತ್ತದೆ ಎಂದು ತಮ್ಮ ಭೇಟಿಯಲ್ಲಿ ಮಿಸ್ತ್ರಿ ಹೇಳಿದ್ದರು.

498(ಎ) ದುರ್ಬಳಕೆ ಸುಪ್ರೀಂ ಕೋರ್ಟ್ ಕಳವಳ

ದೆಹಲಿ: ವೈವಾಹಿಕ ವಿವಾದ ಪ್ರಕರಣಗಳಲ್ಲಿ ಕಾನೂನುಗಳ ದುರುಪಯೋಗದ ಬಗ್ಗೆ ಸುಪ್ರೀಂ ಕೋರ್ಟ್ ಬುಧವಾರ ಕಠಿಣ ಎಚ್ಚರಿಕೆ ನೀಡಿದ್ದು, ವೈಯಕ್ತಿಕ ದ್ವೇಷ ಸಾಧಿಸಲು ಪತಿ ಮತ್ತು ಅವರ ಕುಟುಂಬದ ವಿರುದ್ಧ ಸೆಕ್ಷನ್ 498(ಎ) ಸಾಧನವಾಗಿ ಬಳಸಬಾರದು ಎಂದು ಹೇಳಿದೆ. ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 498ಎ (ಕೌಟುಂಬಿಕ ದೌರ್ಜನ್ಯ ಮತ್ತು ಕಿರುಕುಳದಿಂದ ಮಹಿಳೆಯರ ರಕ್ಷಣೆ) ದುರುಪಯೋಗದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ನಿರ್ದಿಷ್ಟವಾಗಿ ಮಹಿಳೆಯರು ತಮ್ಮ ಪತಿ ಮತ್ತು ಅವರ ಕುಟುಂಬದ ವಿರುದ್ಧ ತನ್ನ ಅವಿವೇಕದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಬಳಸಿಕೊಳ್ಳುತ್ತಿದ್ದಾರೆ ಎಂದು ನ್ಯಾಯಮೂರ್ತಿ ಬಿವಿ ನಾಗರತ್ನ ಮತ್ತು ನ್ಯಾಯಮೂರ್ತಿ ಎನ್ ಕೋಟೀಶ್ವರ್ ಸಿಂಗ್ ಅವರ ಪೀಠ ಹೇಳಿದೆ.

ವಿಚ್ಛೇದನಕ್ಕೆ ಪತಿ ಮನವಿ ಸಲ್ಲಿಸಿದ ನಂತರ ಪತ್ನಿ ತನ್ನ ಪತಿ ಮತ್ತು ಅತ್ತೆಯ ವಿರುದ್ಧ ಸೆಕ್ಷನ್ 498 (ಎ) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣವನ್ನು ರದ್ದುಗೊಳಿಸಲು ತೆಲಂಗಾಣ ಹೈಕೋರ್ಟ್ ನಿರಾಕರಿಸಿತ್ತು, ಇದನ್ನು ಪ್ರಶ್ನಿಸಿ ಪತಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ರಾಹುಲ್-ಸೊರೊಸ್ ಪಾರ್ಟ್‌ನರ್ಸ್: ಫ್ರಾನ್ಸ್

ದೆಹಲಿ: ಫ್ರಾನ್ಸಿನ ಮಿಡಿಯಾಪಾರ್ಟ್ ಎನ್ನುವ ಮಾಧ್ಯಮವೊಂದು ರಾಹುಲ್ ಗಾಂಧಿ ವಿರುದ್ಧ ಗಂಭೀರ ಆರೋಪವನ್ನು ಹೊರಿಸಿದೆ. ಬಿಲಿನಿಯೇರ್ ಜಾರ್ಜ್ ಸೊರೊಸ್ ಮತ್ತು ಆಮಸ್ಟರ್ಡ್ಯಾಮ್‌ನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಒಸಿಸಿಆರ್‌ಪಿ ಜತೆಗೆ, ರಾಹುಲ್ ಗಾಂಧಿ ಸಂಪರ್ಕವನ್ನು ಹೊಂದಿದ್ದಾರೆ ಎಂದು ಆರೋಪಿಸಿದೆ. ಕಾಂಗ್ರೆಸ್ ಸರ್ಕಾರದ ಅದಾನಿ ಹೋರಾಟಕ್ಕೆ ಕೌಂಟರ್ ಕೊಡಲು, ಎನ್‌ಡಿಎ ಸದಸ್ಯರು ಸೊರೊಸ್ ವಿಚಾರವನ್ನು ಕೈಗೆತ್ತಿಕೊಂಡಿದ್ದಾರೆ. ರಾಹುಲ್ ಗಾಂಧಿಗೂ, ಸೊರೊಸ್ ಅವರಿಗೂ ಏನು ಸಂಬಂಧ ಎನ್ನುವುದನ್ನು ಕಾಂಗ್ರೆಸ್ ಸ್ಪಷ್ಟ ಪಡಿಸಬೇಕು ಎಂದು ಒತ್ತಾಯಿಸಿದೆ. ಆದರೆ ಮೂವತ್ತು ವರ್ಷಗಳ ಹಿಂದಿನ ವಿಚಾರವನ್ನು ಕೈಗೆತ್ತಿಕೊಂಡು ಗೊಂದಲ ಸೃಷ್ಟಿಸಿದೆ ಎಂದು ಸಂಸದೆ ಪ್ರಿಯಾಂಕ ಗಾಂಧಿ ಪ್ರತಿಕ್ರಿಯಿಸಿದ್ದಾರೆ. ಅದಾನಿ ವಿಚಾರಕ್ಕೆ ಸಂಬಂಧಿಸಿದಂತೆ ಡಿಬೇಟ್ ನಡೆಯುವುದು ಬಿಜೆಪಿಗೆ ಬೇಕಾಗಿಲ್ಲ, ಹಾಗಾಗಿ ನನ್ನ ಮೇಲೆ ಆರೋಪ ಮಾಡುತ್ತಿವೆ. ಸೊರೊಸ್ ವಿಚಾರವನ್ನು ಮುಂದಿಟ್ಟುಕೊಂಡು ನನ್ನನ್ನು ಗುರಿಯಾಗಿಸುವುದು ಬಿಜೆಪಿಯ ಉದ್ದೇಶ ಎಂದು ರಾಹುಲ್ ಗಾಂಧಿ ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಅವರು ಬಿಜೆಪಿಯನ್ನು ಆರೋಪಿಸಿದರೇ ಹೊರತು, ಸೊರೊಸ್ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟನೆಯನ್ನು ನೀಡಿಲ್ಲ.

ಸಮಾಚಾರ ಸಣ್ಣದಲ್ಲ

ಕೃಷಿ ಸುಧಾರಣೆಗೆ ಅಗ್ರಿ-ಸ್ಟ್ಯಾಕ್ ವರದಾನ

ದೆಹಲಿ: ದೇಶದ ಕೃಷಿ ಕ್ಷೇತ್ರದ ಸುಧಾರಣೆಗಾಗಿ ವಿವಿಧ ಕ್ಷೇತ್ರದ ಪಾಲುದಾರರನ್ನು ಒಂದೇ ವೇದಿಕೆಯಡಿ ತರಲು ಅಗ್ರಿ-ಸ್ಟ್ಯಾಕ್ ಡಿಜಿಟಲ್ ಪೋರ್ಟಲ್ ಅನ್ನು ರೂಪಿಸಲಾಗುತ್ತಿದೆ. ಯುಪಿಐ ಬಳಿಕ ದೇಶದಲ್ಲಿ ರೂಪುಗೊಳ್ಳಲಿರುವ ಹೊಸ ಅನ್ವೇಷಣೆ ಇದಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಭಾರತೀಯ ಕೈಗಾರಿಕಾ ಒಕ್ಕೂಟದ ಜಾಗತಿಕ ಆರ್ಥಿಕ ನೀತಿ ವೇದಿಕೆಯಿಂದ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ಸರಕಾರ ರೂಪಿಸುತ್ತಿರುವ ಈ ಡಿಜಿಟಲ್ ಫೌಂಡೇಶನ್‌ನಿಂದ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು. ಅಗ್ರಿ-ಸ್ಟ್ಯಾಕ್ ಎಂದರೆ ರೈತರ ಮಾಹಿತಿಯ ಭಂಡಾರವಾಗಿದೆ. ಇದರಡಿ ಅವರ ಭೂ ದಾಖಲೆಗಳನ್ನು ಆಧಾರ್‌ಗೆ ಲಿಂಕ್ ಮಾಡಲಾಗುತ್ತದೆ.

ಬಡವರ ಭೂಮಿ ಆಕ್ರಮಿಸಿದವರಿಗೆ ಪಾಠ

ಗೋರಖಪುರ: ಬಡವರ ಭೂಮಿಯನ್ನು ಅಕ್ರಮವಾಗಿ ವಶಪಡಿಸಿಕೊಂಡಿದ್ದಲ್ಲಿ ಅದನ್ನು ತೆರವುಗೊಳಿಸಿ, ಅತಿಕ್ರಮಣಕಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಭೂ ಒತ್ತುವರಿ ಪ್ರಕರಣಗಳ ಬಗ್ಗೆ ಅಧಿಕಾರಿಗಳು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು. ಬಡವರನ್ನು ಶೋಷಿಸುವ ಭೂ ಮಾಫಿಯಾಗಳು ಹಾಗೂ ಗೂಂಡಾಗಳನ್ನು ಯಾವುದೇ ಕಾರಣಕ್ಕೂ ಸುಮ್ಮನೆ ಬಿಡಬಾರದು ಎಂದು ಸೂಚನೆ ನೀಡಿದ್ದಾರೆ. ಭೂ ಮಾಫಿಯಾ ಹಾಗೂ ಅತಿಕ್ರಮಣಕಾರರಿಗೆ ತಕ್ಕ ಪಾಠ ಕಲಿಸಲು ಬದ್ಧರಾಗಿದ್ದು, ತಾವು ಅಧಿಕಾರದಲ್ಲಿರುವವರೆಗೆ, ಯಾವೊಬ್ಬ ಬಡವರೂ ಅತಿಕ್ರಮಣಕ್ಕೆ ಹೆದರಿ ಪಲಾಯನ ಮಾಡಲು ಬಿಡುವುದಿಲ್ಲ ಎಂದು ಭರವಸೆ ನೀಡಿದರು.

ಪದೇ ಪದೆ ಬರುವ ಚುನಾವಣೆಗಳು ರಾಷ್ಟ್ರದ ಪ್ರಗತಿಗೆ ಅಡ್ಡಿ

ಚಂಡೀಗಢ: ಪದೇ ಪದೆ ಎದುರಾಗುವ ಚುನಾವಣೆಗಳು ರಾಷ್ಟ್ರದ ಪ್ರಗತಿಗೆ ಅಡೆತಡೆಗಳನ್ನು ಸೃಷ್ಟಿಸುತ್ತಿವೆ ಎಂದು ಪ್ರತಿಪಾದಿಸಿರುವ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಒಂದು ರಾಷ್ಟ್ರ, ಒಂದು ಚುನಾವಣೆ ನೀತಿಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಅಂತಾರಾಷ್ಟ್ರೀಯ ಗೀತಾ ಉತ್ಸವದ ಅಂಗವಾಗಿ ಕುರುಕ್ಷೇತ್ರದಲ್ಲಿ ಬುಧವಾರ ನಡೆದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ದೇಶವು ಕ್ಷಿಪ್ರಗತಿಯಲ್ಲಿ ಮುನ್ನಡೆಯುತ್ತಿದೆ ಎಂದರು. ಮೋದಿ ಅವರ ನೇತೃತ್ವದಲ್ಲಿ ವೈಭವಯುತ, ಸಮೃದ್ಧ ಮತ್ತು ಶಕ್ತಿಯುತ ಭಾರತವನ್ನು ನಿರ್ಮಿಸಲಾಗುತ್ತಿದೆ. ಶೀಘ್ರದಲ್ಲೇ, ಭಾರತವು ನಮ್ಮ ಕಣ್ಣಮುಂದೆಯೇ ವಿಶ್ವ ಗುರು (ವಿಶ್ವ ನಾಯಕ) ಆಗಲಿದೆ. ಇದರಲ್ಲಿ ಯಾವುದೇ ಸಂದೇಹವಿಲ್ಲ. ಇದು ಇಡೀ ಜಗತ್ತಿಗೆ ತಿಳಿದಿದೆ ಎಂದರು.

2ಸಾವಿರ ರು. ಆನ್‌ಲೈನ್ ಸಾಲಕ್ಕೆ ವ್ಯಕ್ತಿ ಆತ್ಮಹತ್ಯೆ

ಹೈದರಾಬಾದ್: ಆನ್ಲೈನ್ ಲೋನ್ ಆ್ಯಪ್‌ಗಳ ಕಿರುಕುಳಕ್ಕೆ ಬೇಸತ್ತು ನವ ವಿವಾಹಿ ತನೊಬ್ಬ ಆತ್ಮಹತ್ಯೆಗೆ ಶರಣಾಗಿ ರುವ ಘಟನೆ ಆಂಧ್ರ ಪ್ರದೇಶದ ವಿಶಾಖಪಟ್ಟಣಂ ನಿಂದ ವರದಿಯಾಗಿದೆ. ದುರಂತವೆಂದರೆ ಆನ್ಲೈನ್ ಲೋನ್ ಆ್ಯಪ್‌ನವರು ಕೇವಲ 2 ಸಾವಿರ ರು. ಬಾಕಿ ಮೊತ್ತಕ್ಕೆ 22 ವರ್ಷದ ನರೇಂದ್ರ ಎಂಬ ಈ ವ್ಯಕ್ತಿಗೆ ನಿರಂತರ ಕಿರುಕುಳ ನೀಡುತ್ತಿದ್ದರು. ಇದರಿಂದ ಬೇಸತ್ತು ಈ ನವ ವಿವಾಹಿತ ಆತ್ಮಹತ್ಯೆಗೆ ಶರಣಾಗಿದ್ದಾರೆ. ಪೊಲೀಸರು ನೀಡಿರುವ ಮಾಹಿತಿಯಂತೆ, ವೃತ್ತಿಯಲ್ಲಿ ಮೀನುಗಾರನಾಗಿರುವ ನರೇಂದ್ರ ಪ್ರತಿಕೂಲ ಹವಾಮಾನದ ಕಾರಣದಿಂದ ಕಳೆದ ಕೆಲವು ತಿಂಗಳುಗಳಿಂದ ಮೀನುಗಾರಿಕೆಗೆ ಹೋಗಲಾಗದೆ ಮನೆಯಲ್ಲೇ ಇದ್ದರು. ಈ ಸಂದರ್ಭದಲ್ಲಿ ಅವರು ಇನ್ಸ್ಟಂಟ್ ಲೋನ್ ಆ್ಯಪ್ ಮೂಲಕ 2 ಸಾವಿರ ರುಪಾಯಿ ಸಾಲ ಪಡೆದುಕೊಂಡಿದ್ದರು. ನರೇಂದ್ರ ಅವರು ತಾವು ಪಡೆದುಕೊಂಡಿದ್ದ ಎರಡು ಸಾವಿರ ರುಪಾಯಿಗಳನ್ನು ಹಿಂಪಾವತಿ ಮಾಡಿದ್ದರೂ, ಸಾಲ ನೀಡಿದ ಸಂಸ್ಥೆಯ ಕೆಲ ವ್ಯಕ್ತಿಗಳು ಬಡ್ಡಿಯ ರೂಪದಲ್ಲಿ ದೊಡ್ಡ ಮೊತ್ತವನ್ನು ನೀಡುವಂತೆ ಅವರಿಗೆ ಕಿರುಕುಳ ನೀಡಿದ್ದಾರೆ ಎನ್ನಲಾಗಿದೆ.

{ **ಮಮತಾ ಬ್ಯಾನರ್ಜಿ** } ಪಶ್ಚಿಮ ಬಂಗಾಳ ಸಿಎಂ

ಬಿಜೆಪಿಯೇತರ ಮೈತ್ರಿಕೂಟದ ನಾಯಕಿಯಾಗಿ ನನಗೆ ಬೆಂಬಲ ನೀಡಿದ ಎಲ್ಲರಿಗೂ ಋಣಿ. ಇಂಡಿಯ ಮೈತ್ರಿಕೂಟ ಒಗ್ಗಟ್ಟಾಗಿರಬೇಕು ಎಂದು ನಾನು ಬಯಸುತ್ತೇನೆ. ಮೈತ್ರಿಕೂಟ ಮತ್ತು ಎಲ್ಲ ನಾಯಕರ ಆರೋಗ್ಯಕ್ಕಾಗಿ ಪ್ರಾರ್ಥಿಸುತ್ತೇನೆ.

ಪಂಚಮಸಾಲಿ ಮೀಸಲು ಅಪಾಯಕಾರಿ ರಾಜಕೀಯ ಪ್ರಹಸನಕ್ಕೆ ದಾರಿ ಮಾಡಿಕೊಡುವ ಸಾಧ್ಯತೆ

ಯತ್ನಾಳ್ ಹೋರಾಟದ ಹಿಂದೆ ಕಾಣದ ಕೈ?

● ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ವಿಪರೀತಕ್ಕೆ ಹೋಗುವ ಆತಂಕ ಮೂಡಿಸಿರುವ ಪಂಚಮಸಾಲಿ ಹೋರಾಟ ರಾಜ್ಯದಲ್ಲಿ ಇನ್ನೂ ಅಪಾಯಕಾರಿ ರಾಜಕೀಯ ಪ್ರಹಸನಕ್ಕೆ ದಾರಿ ಮಾಡುವ ಸಾಧ್ಯತೆ ಇದೆ.

ಈಗಾಗಲೇ ಬೆಳಗಾವಿಯ ಸುವರ್ಣಸೌಧ ಬಳಿ ಜಯಮೃತ್ಯುಂಜಯ ಸ್ವಾಮಿ ನೇತೃತ್ವದಲ್ಲಿ ನಡೆದ ಪ್ರತಿಭಟನೆ, ಸರಕಾರದ ಮುಂದೆ ನೆತ್ತರು ಚೆಲ್ಲುವಂತೆ ಮಾಡಿ ಮುಂದಿನ ಹೋರಾಟದ ತೀವ್ರತೆಯನ್ನು ಈಗಾಗಲೇ ಸೂಚಿಸಿದೆ.

ಈ ಮೂಲಕ ಬೆಳಗಾವಿ ಅಧಿವೇಶನದ ಉದ್ದಕ್ಕೂ ಇದೊಂದು ರಾಜಕೀಯ ಅಸ್ತ್ರ, ಪ್ರತ್ಯಸ್ತ್ರವಾಗಿ ಬಳಕೆ ಆಗಲಿದೆ. ಆದರೆ ವಾಸ್ತವದಲ್ಲಿ ಇದು ಯಾವುದೇ ಪಕ್ಷಕ್ಕೆ ಅಸ್ತ್ರವೂ ಅಲ್ಲ. ಪ್ರತಿ ಅಸ್ತ್ರವೂ ಆಗುವುದಿಲ್ಲ. ಏಕೆಂದರೆ ಪಂಚಮಸಾಲಿ ಮೀಸಲಾತಿಯನ್ನು ಪ್ರತಿಪಕ್ಷ ಬಿಜೆಪಿ ಈಗ ಕೇಳುತ್ತಿರುವ ರೀತಿಯೂ ವೈಜ್ಞಾನಿಕವಾಗಿಲ್ಲ. ಇದನ್ನು ಸರಕಾರ ಕೂಡಲೇ ನಿರ್ಧರಿಸುವುದು ಕೂಡ ವೈಜ್ಞಾನಿಕವಾಗುವುದಿಲ್ಲ. ಕಾರಣ ಸದ್ಯ ಪ್ರವರ್ಗ 3ಬಿಯಲ್ಲಿ ಇರುವ ಪಂಚಮಸಾಲಿ ಸಮಾಜವನ್ನು ಏಕಾಏಕಿ ಪ್ರವರ್ಗ 2ಎಗೆ ಸೇರಿಸುವುದಾಗಲಿ, ಅದನ್ನು ಆ ಸಮಾಜದವರು ಕೇಳುತ್ತಿರುವುದಾಗಲಿ ಸದ್ಯ ವೈಜ್ಞಾನಿಕ ತಳಹದಿ ಮೇಲೆ ನಿಂತಿದೆ ಎಂದು ನೇರವಾಗಿ ಹೇಳಲಾಗದು. ಹೀಗಾಗಿ ಪಂಚಮಸಾಲಿ ಹೋರಾಟ ಇನ್ನೂ ಕೆಲ ಕಾಲ ನಡೆಯಲಿದ್ದು, ಇದು ಕೇವಲ ಪರಿಹಾರ ಸಿಗದ ರಾಜಕೀಯ ಪ್ರಹಸನವಾಗಿ ಉಳಿಯಲಿದೆ ಎನ್ನುತ್ತಾರೆ ಕಾನೂನು ತಜ್ಞರು.

2ಎಗೆ ಬದಲಾಯಿಸುವುದು ಸುಲಭವಲ್ಲ

ರಾಜ್ಯದಲ್ಲಿ ಹಿಂದುಳಿದ ವರ್ಗಗಳನ್ನು ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-3ಎ ಹಾಗೂ ಪ್ರವರ್ಗ-3ಬಿ ಮೀಸಲು ಸೌಲಭ್ಯವಿದೆ. ವೀರಶೈವ ಲಿಂಗಾಯತ ಹಾಗೂ ಪಂಚಮಸಾಲಿ ಜಾತಿಗಳು 3ಬಿ ಅಡಿ ಮೀಸಲಾತಿ ಪಡೆಯುತ್ತಿವೆ. ಯಾವುದೇ ಸಮಾಜಕ್ಕೆ ಮೀಸಲು ಸೌಲಭ್ಯ ಕಲ್ಪಿಸಬೇಕಾದರೆ ಆ ಸಮಾಜಕ್ಕೆ ನಿಗದಿತ ಆಯೋಗದ ಶಿಫಾರಸು ಅಗತ್ಯ. ಜತೆಗೆ ಆ ಸಮಾಜಕ್ಕೆ ಸಂಬಂಧಿಸಿದಂತೆ ಕುಲಶಾಸ್ತ್ರೀಯ ಅಧ್ಯಯನದ ವರದಿ ಇರಬೇಕು. ಹಾಗೆಯೇ ಆ ಸಮಾಜ ಉದ್ಯೋಗ ಮತ್ತು ಶಿಕ್ಷಣದಲ್ಲಿ ಎಷ್ಟರಮಟ್ಟಿಗೆ ಹಿಂದುಳಿದಿದ್ದಾರೆ, ಸರಕಾರದ ಸೌಲಭ್ಯ ಪಡೆದಿದ್ದಾರೆ ಎನ್ನುವ ಮಾಹಿತಿ ಇರಬೇಕು. ಆದರೆ ಪಂಚಮಸಾಲಿ ಸಮಾಜದ ಬೇಡಿಕೆಗೆ ಆಯೋಗದ ಶಿಫಾರಸ್ಸಿನ ತಳಹದಿ ಇರುವ ವಾದ ಕೇಳಿ ಬರುತ್ತಿಲ್ಲ. ಜಯಪ್ರಕಾಶ್ ಹೆಗಡೆ ಅವರು ನೀಡಿರುವ ವರದಿಯನ್ನು ಕೂಡ ಸರಕಾರ ಅನುಮೋದಿಸಿದಂತೆ ಕಾಣುತ್ತಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಈ ಆಯೋಗಗಳ ವರದಿಯಲ್ಲಿ ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲು ಕಲ್ಪಿಸಬೇಕೆಂದು ಶಿಫಾರಸು ಆಯೋಗ ಶಿಫಾರಸು ಮಾಡಿದೆ ಎನ್ನುವ ಅಂಶವು ಬಹಿರಂಗವಾಗಿಲ್ಲ. ಹೀಗಾಗಿ ಏಕಾಏಕಿ ಪಂಚಮಸಾಲಿ 3ಬಿ ಯಿಂದ 2 ಎಗೆ ಬದಲಾಯಿಸುವುದು ಸುಲಭವಲ್ಲ ಎನ್ನುತ್ತಾರೆ ಅಧಿಕಾರಿಗಳು.

ಪಂಚಮಸಾಲಿ ಸಮಾಜದವರು 2ಎ ಮೀಸಲು ಕೇಳುವುದು ಸಂವಿಧಾನ ವಿರೋಧವಾಗುತ್ತದೆ. ಬೇಕಿದ್ದರೆ ಅವರು 3ಬಿಯಲ್ಲಿ ಇರುವ ಮೀಸಲು ಪ್ರಮಾಣವನ್ನು ಹೆಚ್ಚಳಕ್ಕೆ ಒತ್ತಾಯಿಸಬಹುದು.
-ಸಿ.ಎಸ್.ದ್ವಾರಕನಾಥ್ ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷ

ಯತ್ನಾಳ್ ದಿಢೀರ್ ಹೋರಾಟದ ಹಿಂದೇನು?

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ಬಹಿರಂಗ ಸಮರ ಸಾರಿದ್ದ ಬಸನಗೌಡ ಪಾಟೀಲ್ ಯತ್ನಾಳ್ ದೆಹಲಿ ಭೇಟಿ ಸಂದರ್ಭದಲ್ಲಿ ಬಿಜೆಪಿ ಹೈಕಮಾಂಡ್ ಪಂಚಮಸಾಲಿ ಅಸ್ತ್ರ ಪ್ರಯೋಗಕ್ಕೆ ಸೂಚನೆ ನೀಡಿತ್ತು ಎನ್ನಲಾಗಿದೆ. ಹೀಗಾಗಿ ಬಹುತೇಕ ಮೂಲೆಗುಂಪಾಗಿದ್ದ ಪಂಚಮಸಾಲಿ ಹೋರಾಟ ಬೆಳಗಾವಿ ಅಧಿವೇಶನ ಆರಂಭವಾಗುತ್ತಿದ್ದಂತೆ ಮುನ್ನೆಲೆಗೆ ಬಂದಿತ್ತು. ಹಾಗೆ ನೋಡಿದರೆ ಈ ವಿಚಾರ ಬಿಜೆಪಿಯ ಬಹುತೇಕ ಮಂದಿಗೆ ಪಂಚಮಸಾಲಿ ಹೋರಾಟ ಇಷ್ಟು ತಾರಕಕ್ಕೆ ಹೋಗುವ ಕಲ್ಪನೆ ಕೂಡ ಇರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಹಿಂದಿನ ಸರಕಾರದ ಎಡವಟ್ಟು ಏನು?

ಈ ಹಿಂದಿನ ಬಸವರಾಜ ಬೊಮ್ಮಾಯಿ ಸರಕಾರ ಪಂಚಮಸಾಲಿಗಳನ್ನು '2ಎ'ಗೆ ಸೇರಿಸಿಲ್ಲ ಬದಲಾಗಿ, ಅಲ್ಪಸಂಖ್ಯಾತ ಮುಸ್ಲಿಂರಿಗೆ ನೀಡಿದ್ದ ಶೇ.4ರಷ್ಟು ಮೀಸಲಾತಿಯನ್ನು ರದ್ದುಪಡಿಸಿ, 3ಎ ಹಾಗೂ 3ಬಿಗೆ ತಲಾ ಶೇ.2ರಂತೆ ಮೀಸಲಾತಿ ಹಂಚಿಕೆ ಮಾಡಿತ್ತು. ಇದನ್ನು ಆಕ್ಷೇಪಿಸಿ ಮುಸ್ಲಿಂರು ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರಿಂದ ಅದೀಗ ಯಥಾ ಸ್ಥಿತಿಯಲ್ಲಿದೆ. ಹಾಗೆ ನೋಡಿದರೆ ಹಿಂದಿನ ಬಿಜೆಪಿ ಸರಕಾರ ಒಕ್ಕಲಿಗರು ಮತ್ತು ವೀರಶೈವ ಲಿಂಗಾಯತರಿಗೆ ನೀಡಿದ ಈ ಸಲ ಶೇ.2ರಷ್ಟು ಹೆಚ್ಚಳ ಮಾಡಿರುವುದನ್ನು ಕೂಡ ಕೋರ್ಟ್‌ನಲ್ಲಿ ಪ್ರಶ್ನಿಸಿದರೆ ಅದಕ್ಕೂ ತೊಂದರೆ ಉಂಟಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ ಎನ್ನುತ್ತಾರೆ ಕಾನೂನು ತಜ್ಞರು.

ಸಿರಿಯಾ ಸ್ಥಿತಿಗೆ ಅಮೆರಿಕ, ಇಸ್ರೇಲ್ ಕಾರಣ

ಸಿರಿಯಾ ಘಟನೆ ಹಿಂದಿನ ಮಾಸ್ಟರ್‌ಮೈಂಡ್ ಅಮೆರಿಕ | ಇರಾನ್‌ನ ಪರಮೋಚ್ಛ ನಾಯಕ ಅಯತ್ ಉಲ್ಲಾ ಅಲಿ ಖಮೇನಿ ವಾಗ್ದಾಳಿ | ಸಿರಿಯಾದ ಮಧ್ಯಂತರ ಸರಕಾರದ ಪ್ರಧಾನಿಯಾಗಿ ಮೊಹಮದ್ ಅಲ್ ಬಶೀರ್ ಆಯ್ಕೆ

ತೆಹ್ರಾನ್(ಇರಾನ್): ಸಿರಿಯಾದಲ್ಲಿ ಸರಕಾರ ಪತನ ಸೇರಿದಂತೆ ಇತ್ತೀಚಿನ ಘಟನೆಗಳು ಅಮೆರಿಕ ಮತ್ತು ಇಸ್ರೇಲ್‌ನ ಜಂಟಿ ಯೋಜನೆಯ ಭಾಗವಾಗಿವೆ ಎಂದು ಇರಾನ್‌ನ ಪರಮೋಚ್ಛ ನಾಯಕ ಅಯತ್ ಉಲ್ಲಾ ಅಲಿ ಖಮೇನಿ ಆರೋಪಿಸಿದ್ದಾರೆ.

'ಸಿರಿಯಾದಲ್ಲಿ ಏನು ಆಗಿದೆಯೋ ಅದು ಅಮೆರಿಕ ಮತ್ತು ಇಸ್ರೇಲ್‌ನ ಜಂಟಿ ಯೋಜನೆಯ ಭಾಗ ಎಂಬುವುದರಲ್ಲಿ ಯಾವುದೇ ಸಂಶಯ ಉಳಿದಿಲ್ಲ. ನಮ್ಮ ಬಳಿ ಅದಕ್ಕೆ ಸಾಕ್ಷಿಗಳಿವೆ. ಈ ಸಾಕ್ಷಿಗಳು ನಮ್ಮ ಸಂಶಯವನ್ನು ದೂರಾಗಿಸಿವೆ'ಎಂದು ಖಮೇನಿ ಹೇಳಿರುವುದಾಗಿ ಇರಾನ್‌ನ ಮಾಧ್ಯಮವೊಂದು ವರದಿ ಮಾಡಿದೆ.

ಸಿರಿಯಾದ ನೆರೆಯ ದೇಶವು ಈ ವಿಷಯದಲ್ಲಿ ಸ್ಪಷ್ಟವಾದ ಪ್ರಮುಖ ಪಾತ್ರವನ್ನು ವಹಿಸುತ್ತಿದೆ ಎಂದು ಇಸ್ರೇಲ್ ಹೆಸರು ಉಲ್ಲೇಖಿಸದೇ ವಾಗ್ದಾಳಿ ನಡೆಸಿದರು. ಪ್ರತಿಯೊಬ್ಬರೂ ಇದನ್ನು ನೋಡುತ್ತಿದ್ದಾರೆ. ಎಲ್ಲರಿಗೂ ಇದು ತಿಳಿದಿದೆ. ಆದರೆ, ಪ್ರಮುಖ ಸಂಚುಕೋರ, ಮಾಸ್ಟರ್‌ಮೈಂಡ್ ಮತ್ತು ಕಮಾಂಡ್ ಸೆಂಟರ್ ಅಮೆರಿಕ ಎಂದು ಅವರು ಹೇಳಿದ್ದಾರೆ.

ಸಿರಿಯಾ ಅಧ್ಯಕ್ಷರಾಗಿದ್ದ ಬಶರ್ ಅಸಾದ್ ಬಂಡುಕೋರರ ದಾಳಿಗೆ ಹೆದರಿ ಇತ್ತೀಚೆಗೆ ರಾಜೀನಾಮೆ ನೀಡಿ ದೇಶ ಬಿಟ್ಟು ಪರಾರಿಯಾಗಿದ್ದರು.



ಬಶರ್ ಪಲಾಯನ ಮಾಡುತ್ತಿದ್ದಂತೆ ಪ್ರತಿಭಟನಕಾರರು ಭಾನುವಾರ ಮುಂಜಾನೆ ಮಿಂಚಿನ ಕಾರ್ಯಾಚರಣೆ ನಡೆಸಿದರು. ಆಡಳಿತದ ಮೇಲೆ ಹಿಡಿತ ಸಾಧಿಸಿದ್ದರು. ಅಲ್ಲದೆ, ಎಲ್ಲ ಕೈದಿಗಳನ್ನು ಬಿಡುಗಡೆ ಮಾಡಲಾಗಿತ್ತು.

ಈ ಬೆಳವಣಿಗೆಯು ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಕಂಪನ ಸೃಷ್ಟಿಸಿದೆ. ಈ ಪ್ರದೇಶದಲ್ಲಿ ರಷ್ಯಾ ಮತ್ತು ಇರಾನ್ ಹೊಂದಿದ್ದ ಪ್ರಭಾವಕ್ಕೆ ಭಾರಿ ಏಟು ಬಿದ್ದಂತಾಗಿದೆ. ಸಂಘರ್ಷದ ಉದ್ದಕ್ಕೂ ಬಶರ್‌ಗೆ ಈ ಎರಡೂ ದೇಶಗಳು ಬೆಂಬಲ ನೀಡಿದ್ದವು. ಆದರೆ, ಈಗ ತಮ್ಮ ದೇಶವೇ ಎದುರಿಸುತ್ತಿರುವ ಬಿಕ್ಕಟ್ಟಿನಿಂದಾಗಿ ದೂರ ಇದ್ದವು.

ರಷ್ಯಾದಲ್ಲಿ ಬಶರ್

ಮಾಸ್ಕೊ: ಸಿರಿಯಾದಲ್ಲಿ ಹೋರಾಟಗಾರರು ಬಂಡಾಯವೆದ್ದ ಬಳಿಕ ಪಲಾಯನ ಮಾಡಿದ್ದ ಅಧ್ಯಕ್ಷ ಬಶರ್ ಅಸಾದ್ ರಷ್ಯಾದಲ್ಲಿ ನೆಲೆಸಿದ್ದಾರೆ ಎಂದು ರಷ್ಯಾದ ಹಿರಿಯ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ. ಅಸಾದ್ ದೇಶ ತೊರೆದ ಬಳಿಕ ಅವರ ಬಗ್ಗೆ ಅಧಿಕೃತ ಮಾಹಿತಿಯನ್ನು ಇದೇ ಮೊದಲ ಬಾರಿಗೆ ರಷ್ಯಾ ಸರಕಾರ ನೀಡಿರುವುದಾಗಿ ಎನ್‌ಬಿಸಿ ಸುದ್ದಿ ಸಂಸ್ಥೆ ವರದಿ ಮಾಡಿದೆ. ಅಸ್ಸಾದ್ ಅವರನ್ನು ಅತ್ಯಂತ ಸುರಕ್ಷಿತೆಯಿಂದ ರಷ್ಯಾಕ್ಕೆ ಕರೆತರಲಾಗಿದೆ. ಎಂದು ಉಪ ವಿದೇಶಾಂಗ ಸಚಿವ ಸೆರ್ಗೆಯ್ ರಿಯಾಬ್ಕೊವ್ ಹೇಳಿರುವುದಾಗಿ ತಿಳಿದುಬಂದಿದೆ.

ಇಸ್ರೇಲ್ ದಾಳಿ: 29 ಜನ ಬಲಿ

ಗಾಜಾಪಟ್ಟಿಯ ಮೇಲೆ ಡ್ರೋನ್ ದಾಳಿ

ಇಸ್ರೇಲ್ ದಾಳಿಯ ನಂತರ ಮನೆಯಲ್ಲಿನ ಅಳಿದುಳಿದ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿರುವ ಗಾಜಾದ ನಾಗರಿಕ.

ದೀರ್ ಅಲ್-ಬಲಾಹ್ (ಗಾಜಾ ಪಟ್ಟಿ): ಮಂಗಳವಾರ ರಾತ್ರಿ ಮತ್ತು ಬುಧವಾರ ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ 29 ಜನ ಹತರಾಗಿದ್ದಾರೆ.

ಗಾಜಾ ಗಡಿಭಾಗದಲ್ಲಿರುವ ಬೈತ್ ಲಹಿಯಾ ನಗರದಲ್ಲಿ 19 ಮಂದಿ ಮೃತಪಟ್ಟಿದ್ದಾರೆ. ನಸೀರತ್ ನಿರಾಶ್ರಿತರ ಶಿಬಿರದ ಮೇಲೆ ನಡೆದ ದಾಳಿಯಲ್ಲಿ 7 ಮಂದಿ ಸಾವಿಗೀಡಾಗಿದ್ದಾರೆ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಆಸ್ಪತ್ರೆಯ ಪ್ರವೇಶ ದ್ವಾರದ ಬಳಿ ಸಂಭವಿಸಿದ ದಾಳಿಯಲ್ಲಿ ಒಬ್ಬ ಮಹಿಳೆ ಹಾಗೂ ಆಕೆಯ ಮೂವರು ಮಕ್ಕಳು ಸೇರಿದಂತೆ ಒಟ್ಟು ಮೂವರು ಮೃತಪಟ್ಟಿದ್ದಾರೆ ಎಂದು ಕಮಲ್ ಅದ್ವನ್ ಆಸ್ಪತ್ರೆ ಹೇಳಿದೆ.

ದಾಳಿಯ ಬಗ್ಗೆ ಇಸ್ರೇಲ್ ಸೇನೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ನಾಗರಿಕರಿಗೆ ಹಾನಿಯಾಗುವುದನ್ನು ತಪ್ಪಿಸಲು ಪ್ರಯತ್ನಿಸುತ್ತಿದ್ದೇವೆ. ಆದರೆ ಬಂಡುಕೋರರು ಜನರ ನಡುವೆ ಅವಿತುಕೊಂಡು ಅವರ ಜೀವಕ್ಕೆ ಸಂಚಕಾರ ತರುತ್ತಿದ್ದಾರೆ ಎಂದು ಇಸ್ರೇಲ್ ಪದೇ ಪದೇ ಹೇಳುತ್ತಿದೆ.

ಬಂಡುಕೋರರು ಬುಧವಾರ ಇಸ್ರೇಲ್ ಕಡೆಗೆ ನಾಲ್ಕು ರಾಕೆಟ್‌ಗಳನ್ನು ಹಾರಿಸಿದ್ದಾರೆ ಅದರಲ್ಲಿ ಎರಡನ್ನು ಹೊಡೆದುರುಳಿಸಲಾಗಿದೆ. ಇನ್ನೆರಡು ರಾಕೆಟ್‌ಗಳು ಖಾಲಿ ಜಾಗಕ್ಕೆ ಬಿದ್ದಿದ್ದು ಯಾವುದೇ ಹಾನಿ ಸಂಭವಿಸಿಲ್ಲ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಬೈರುತ್ ವರದಿ: ಲೆಬನಾನ್‌ನ ದಕ್ಷಿಣದಲ್ಲಿರುವ ಪಟ್ಟಣವೊಂದರ ಮೇಲೆ ಇಸ್ರೇಲ್ ಪಡೆಗಳು ಡ್ರೋನ್ ಮೂಲಕ ಬುಧವಾರ ನಡೆಸಿದ ದಾಳಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ಮೀಸಲಾತಿ ವಿಚಾರದಲ್ಲಿ ಬಿಜೆಪಿ ಸರಕಾರದ ಆದೇಶದಂತೆ ವಾದ ಮಂಡಿಸಲಿ

ಸುಪ್ರೀಂನಲ್ಲಿ ಸಮರ್ಥ ವಾದ ಮಂಡನೆ ಆಗಲಿ: ಬೊಮ್ಮಾಯಿ

ಬೆಂಗಳೂರು: ಮೀಸಲಾತಿ ವಿಚಾರದಲ್ಲಿ ಕಾನೂನು ಬದ್ದವಾಗಿ ನಾವು ಮಾಡಿರುವ ಆದೇಶವನ್ನು ರಾಜ್ಯ ಸರಕಾರ ಸುಪ್ರೀಂ ನಲ್ಲಿ ಸಮರ್ಥವಾಗಿ ವಾದ ಮಂಡಿಸಿ ಹೊಸ ಮೀಸಲಾತಿ ಸಂಪೂರ್ಣವಾಗಿ ಜಾರಿಗೊಳಿಸಲು ಎಲ್ಲ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಪಂಚಮಸಾಲಿ ಸಮಾಜ ಲಿಂಗಾಯತರಲ್ಲಿಯೇ ಅತ್ಯಂತ ದೊಡ್ಡ ಸಮಾಜ. ರೈತಾಪಿ ಕುಟುಂಬ ಹೊಂದಿರುವ ಸಮಾಜವು ನಾಡಿಗೆ ಅನ್ನಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಸಮಾಜ, ಕಿತ್ತೂರು ಚನ್ನಮ್ಮ, ಬೆಳವಡಿ ಮಲ್ಲಮ್ಮ ಈ ಸಮಾಜಕ್ಕೆ ಸೇರಿದವರಾಗಿದ್ದರು. ಸಂಗೊಳ್ಳಿ ರಾಯಣ್ಣ ಹಾಲು ಮತದ ಸಮಾಜಕ್ಕೆ ಸೇರಿದವರಾಗಿದ್ದರೂ ಕಿತ್ತೂರು ಚನ್ನಮ್ಮಳ ಬಲಗೈ ಬಂಟ ಆಗಿದ್ದನ್ನು ನಾವು ಇಲ್ಲಿ ಸ್ಮರಿಸಬಹುದು. 2011-12ರಲ್ಲಿ ಪಂಚಮಸಾಲಿ ಸಮಾಜ ಹಿಂದುಳಿದ ವರ್ಗಕ್ಕೆ ಸೇರಿಸುವ ಕೆಲಸವನ್ನು ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ನಮ್ಮ ಬಿಜೆಪಿ ಸರಕಾರ ಮಾಡಿದ್ದು ಗಮನಾರ್ಹ ಎಂದು ತಿಳಿಸಿದ್ದಾರೆ. 2016ರಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜ ಸಮಿತಿ ಮುಂದೆ ಪಂಚಮಸಾಲಿ ಸಮಾಜ ಪ್ರವರ್ಗ 2ಎ.ಗೆ ಸೇರಿಸಬೇಕೆಂಬ ಬೇಡಿಕೆ ಇತ್ತು. ಆಗ ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಇತ್ತು. ಆಗ ಕಾಂತರಾಜ್ ಸಮಿತಿ ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2 ಎ.ಗೆ ಸೇರಿಸಲು ಸಂಪೂರ್ಣವಾಗಿ ತಿರಸ್ಕಾರ ಮಾಡಿದ್ದು ಪಂಚಮಸಾಲಿ ಸಮುದಾಯದ ವಿರುದ್ಧ ಅಂದಿನ ಸರಕಾರಕ್ಕೆ ಇದ್ದ ಮನೋಭಾವ ಸ್ಪಷ್ಟವಾಗುತ್ತದೆ. ಧರ್ಮದ ಆಧಾರದ ಮೇಲೆ ಮೀಸಲಾತಿ ಇಲ್ಲ ಎನ್ನುವುದು ಸಂವಿಧಾನದಲ್ಲಿ ಸ್ಪಷ್ಟವಾಗಿದೆ. ಅದರ ಅನುಗುಣವಾಗಿ ರಾಜ್ಯದಲ್ಲಿ ಅಲ್ಪಸಂಖ್ಯಾತರಿಗೆ ಪ್ರವರ್ಗ 2ಬಿ ಯಲ್ಲಿ ನೀಡಿದ್ದ ಶೇ 4%ರಷ್ಟು ಮೀಸಲಾತಿ ನಾವು ಸಂವಿಧಾನಬದ್ದವಾಗಿ, ಕಾನೂನಾತ್ಮಕವಾಗಿ ಪ್ರವರ್ಗ 3ಸಿ ಮತ್ತು 3ಡಿ ಮಾಡಿ ವೀರಶೈವ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳಿಗೆ ಹಂಚಿಕೆ ಮಾಡಿದ್ದೇವೆ. ಆಂಧ್ರದ ವಿಚಾರದಲ್ಲಿ ಧರ್ಮಾಧಾರಿತ ಮೀಸಲಾತಿಗೆ ಅವಕಾಶ ಇಲ್ಲ ಅನ್ನುವುದನ್ನು ಆಂಧ್ರಪ್ರದೇಶ ಹೈಕೋರ್ಟ್ ಕೂಡ ಎತ್ತಿ ಹಿಡಿದಿದೆ. ಈಗ ಪಶ್ಚಿಮ ಬಂಗಾಲ ವಿಚಾರದಲ್ಲಿ ಸುಪ್ರೀಂ ಧರ್ಮಾಧಾರಿತ ಮೀಸಲಾತಿ ನೀಡಲು ಅವಕಾಶ ಇಲ್ಲ ಅಂತ ಬಹಳ ಸ್ಪಷ್ಟವಾಗಿ ಹೇಳಿದೆ. ಹೀಗಿದ್ದರೂ ಕೂಡ ರಾಜ್ಯ ಸರಕಾರ ನಾವು ಮಾಡಿರುವ ತೀರ್ಮಾನಕ್ಕೆ ಬೆಂಬಲ ಕೊಡಲು ನಿರಾಕರಿಸುತ್ತಿದೆ ಎಂದು ತಿಳಿಸಿದ್ದಾರೆ.

ಸೌಹಾರ್ದತೆಯಿಂದ ಬಗೆಹರಿಸಲಿ: ಪಂಚಮಸಾಲಿ ಹೋರಾಟದಲ್ಲಿ ಹಿಂಸಾಚಾರ ಆಗಿರುವುದು ಅಲ್ಲಿಯ ಅಧಿಕಾರಿಗಳ ಧಾಷ್ಟ್ಯ, ದುರ್ನಡತೆ ಮತ್ತು ದರ್ಪವೇ ಕಾರಣ. ಮುಖ್ಯಮಂತ್ರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ, ಮತ್ತು ಪ್ರಜಾಪ್ರಭುತ್ವದಲ್ಲಿ ನಮ್ಮ ಹಕ್ಕು ಕೇಳಲು ಸ್ವತಂತ್ರರು ಅನ್ನುವ ಬಗ್ಗೆ ಅವರಿಗೆ ನಂಬಿಕೆ ಇದ್ದರೆ, ಕೂಡಲೇ ಲಾಠಿ ಚಾರ್ಜ್ ಮಾಡಿರುವ ಅಧಿಕಾರಿಗಳನ್ನು ಅಮಾನತು ಮಾಡಬೇಕು ಹಾಗೂ ಪಂಚಮಸಾಲಿ ಮುಖಂಡರನ್ನು ಮಾತುಕತೆಗೆ ಕರೆಯಿಸಿ ಸೌಹಾರ್ದತೆಯಿಂದ ಬಗೆಹರಿಸಲು ಪ್ರಮಾಣಿಕ ಪ್ರಯತ್ನ ಮಾಡಬೇಕು ಎಂದೂ ಆಗ್ರಹಿಸಿದ್ದಾರೆ.

ಗುರುವಾಯೂರು: ಸುಪ್ರೀಂ ನೋಟಿಸ್

ದೆಹಲಿ: ಕೇರಳದ ಗುರುವಾಯೂರು ಶ್ರೀಕೃಷ್ಣ ದೇವಸ್ಥಾನದಲ್ಲಿ ಉದಯಾಸ್ತಮಾನ ಪೂಜೆಯನ್ನು ಸ್ಥಗಿತಗೊಳಿಸಿದ ಕ್ರಮಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೋಟೀಸ್ ಜಾರಿಗೊಳಿಸಿದೆ. ಏಕಾದಶಿ ದಿನದಂದು ನಡೆಸಲಾಗುವ ಉದಯಾಸ್ತ ಮಾನ ಪೂಜೆಯನ್ನು ಆಡಳಿತ ಮಂಡಳಿ ಸ್ಥಗಿತಗೊಳಿಸಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿ ವಿಚಾರಕ್ಕೆ ಸುಪ್ರೀಂ ಕೋರ್ಟ್ ಒಪ್ಪಿದೆ.

ನ್ಯಾಯಮೂರ್ತಿಗಳಾದ ಜೆ ಕೆ ಮಹೇಶ್ವರಿ ಮತ್ತು ರಾಜೇಶ್ ಬಿಂದಾಲ್ ಅವರ ಪೀಠವು ಈ ಪ್ರಕರಣದಲ್ಲಿ ಗುರುವಾಯೂರು ದೇವಸ್ವಂ ಆಡಳಿತ ಮಂಡಳಿಗೆ ನೋಟಿಸ್ ಜಾರಿ ಮಾಡಿದೆ. ಏಕಾದಶಿ ದಿನದಂದೇ ವಿಚಾರಣೆ ನಡೆಯುತ್ತಿದ್ದು, ಮಂಗಳವಾರ ಸಂಜೆಯಿಂದಲೇ ಪೂಜೆ ಆರಂಭವಾಗಬೇಕಿದ್ದ ಕಾರಣ ಈ ಬಾರಿ ಏನೂ ಮಾಡಲು ಸಾಧ್ಯವಿಲ್ಲ ಎಂದು ಪೀಠ ವಿಷಾದ ವ್ಯಕ್ತಪಡಿಸಿತು. ದೇವಾಲಯದ ವೆಬ್‌ಸೈಟ್‌ನಲ್ಲಿಯೇ ಪೂಜೆಯ ಮಹತ್ವವನ್ನು ಉಲ್ಲೇಖಿಸಲಾಗಿದೆ. ಅದನ್ನು ಎಚ್ಚರಿಕೆಯಿಂದ ಅನುಸರಿಸಲು ಆಡಳಿತ ಮಂಡಳಿಗೆ ಸೂಚಿಸಿದೆ.

ಭಾರತದ ವಿರುದ್ಧ ಬಿಎನ್‌ಪಿ ಪ್ರತಿಭಟನೆ

ಢಾಕಾ: ಭಾರತದಲ್ಲಿನ ಬಾಂಗ್ಲಾದೇಶ ಹೈಕಮಿಷನ್ ಕಚೇರಿ ಮೇಲಿನ ದಾಳಿ ಖಂಡಿಸಿ ಹಾಗೂ ದೇಶದ ಬಾವುಟಕ್ಕೆ ಅವಮಾನಿಸಲಾಗಿದೆ ಎಂದು ಆರೋಪಿಸಿ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ)ಯ ಸಾವಿರಾರು ಕಾರ್ಯಕರ್ತರು, ಬೆಂಬಲಿಗರು ಕಾರುಗಳಲ್ಲಿ ಸಾಗಿ ಬುಧವಾರ ಪ್ರತಿಭಟಿಸಿದರು.

ಮಾಜಿ ಪ್ರಧಾನಿ ಖಲೀದಾ ಜಿಯಾ ನೇತೃತ್ವದ ಬಿಎನ್‌ಪಿಯ ಕಾರ್ಯಕರ್ತರು, ಬೆಂಬಲಿಗರು ರಾಜಧಾನಿ ಢಾಕಾದಿಂದ, ಭಾರತಕ್ಕೆ ಹೊಂದಿಕೊಂಡಿರುವ ದೇಶದ ಪೂರ್ವ ಗಡಿಯ ಅಖೌರಾ ಬಳಿಯ ಇಂಟಿಗ್ರೇಟೆಡ್ ಚೆಕ್ ಪೋಸ್ಟ್(ಐಪಿಸಿ)ವರೆಗೆ ಪ್ರತಿಭಟನಾ ರ್‍ಯಾಲಿ ನಡೆಸಿದರು. ಪ್ರತಿಭಟನಕಾರರನ್ನು ಸ್ವಾಗತಿಸಿದ ಜಿಯಾ ಅವರ ಬೆಂಬಲಿಗರು, ಕೆಲ ದೂರದವರೆಗೆ ರ್‍ಯಾಲಿಯೊಂದಿಗೆ ಸಾಗಿ, ಭಾರತದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಚಿನ್ಮಯಿದಾಸ್ ಅರ್ಜಿ ತಿರಸ್ಕೃತ: ತಮ್ಮ ಅರ್ಜಿಯ ವಿಚಾರಣೆಯನ್ನು ನಿಗದಿತ ದಿನಕ್ಕಿಂತ ಮೊದಲೇ ನಡೆಸುವಂತೆ ಕೋರಿ, ದೇಶದ್ರೋಹ ಪ್ರಕರಣದಡಿ ಬಂಧನದಲ್ಲಿರುವ ಹಿಂದೂ ಮುಖಂಡ ಚಿನ್ಮಯಿ ಕೃಷ್ಣದಾಸ್ ಸಲ್ಲಿಸಿದ್ದ ಅರ್ಜಿಯನ್ನು ಚಟ್ಟೋಗ್ರಾಮ ನ್ಯಾಯಾಲಯ ಬುಧವಾರ ತಿರಸ್ಕರಿಸಿದೆ.

ಚಿನ್ಮಯಿ ಕೃಷ್ಣದಾಸ್ ಪರ ವಕೀಲರು ಈ ನಿವೇದನೆ ಮಾಡುವುದಕ್ಕಾಗಿ ಪವರ್ ಆಫ್ ಅಟಾರ್ನಿ ಹೊಂದಿಲ್ಲ. ಹೀಗಾಗಿ ಈಗಾಗಲೇ ನಿಗದಿ ಮಾಡಿರುವಂತೆ ಜ.2ರಂದೇ ಅರ್ಜಿ ವಿಚಾರಣೆ ನಡೆಸಲಾಗುವುದು ಎಂದು ಮೆಟ್ರೊಪಾಲಿಟನ್ ಸೆಷನ್ಸ್ ನ್ಯಾಯಾಧೀಶ ಸೈಫುಲ್ ಇಸ್ಲಾಂ ಹೇಳಿದರು. ವಕೀಲ ರವೀಂದ್ರ ಘೋಷ್, ದಾಸ್ ಪರ ಹಾಜರಿದ್ದರು.

ಹಠಾತ್ ಸಾವಿಗೆ ಕೋವಿಡ್ ಲಸಿಕೆ ಕಾರಣವಲ್ಲ

ದೆಹಲಿ: ಇತ್ತೀಚಿನ ದಿನಗಳಲ್ಲಿ ಯುವಜನತೆಯಲ್ಲಿನ ಹೃದಯಾಘಾತದ ಪ್ರಮಾಣ ಹೆಚ್ಚಾಗುತ್ತಿದ್ದು, ಇದಕ್ಕೆ ಕೋವಿಡ್-19 ವಿರುದ್ಧದ ಲಸಿಕೆ ಕಾರಣವಲ್ಲ ಎಂದು ರಾಜ್ಯಸಭೆಯಲ್ಲಿ ಆರೋಗ್ಯ ಸಚಿವ ಜೆ.ಪಿ.ನಡ್ಡಾ ತಿಳಿಸಿದ್ದಾರೆ. ಇದಕ್ಕೆ ಪೂರಕವಾಗಿ ಅವರು ದಿ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್‌ನ ಸಂಶೋಧನಾ ವರದಿಯನ್ನು ಉಲ್ಲೇಖಿಸಿದ್ದಾರೆ. ರಾಜ್ಯಸಭೆಯಲ್ಲಿ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿ ಅವರು ಈ ಸ್ಪಷ್ಟನೆ ನೀಡಿದ್ದಾರೆ.

ಕೆಲವೊಮ್ಮೆ ನೃತ್ಯ ಮಾಡುವಾಗ ಮತ್ತು ಕೆಲವೊಮ್ಮೆ ಜಿಮ್‌ನಲ್ಲಿ ವರ್ಕೌಟ್ ಮಾಡುವಾಗ ಹೃದಯಾಘಾತದಿಂದ ಸಾವನ್ನಪ್ಪುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿದೆ. ಹಲವರು ಇದಕ್ಕೆ ಕಾರಣ ಕೊರೊನಾ ಲಸಿಕೆ ಕಾರಣ ಎನ್ನುತ್ತಿದ್ದಾರೆ. ಈ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಚರ್ಚೆ ನಡೆಯುತ್ತಿದೆ. ಈ ವದಂತಿಗೆ ಇದೀಗ ಕೇಂದ್ರ ತೆರೆ ಎಳೆದಿದೆ.

729 ಹಠಾತ್ ಸಾವಿನ ಪ್ರಕರಣ: ಸಂಶೋಧನೆಯ ವೇಳೆ ಹಠಾತ್ ಮರಣ ಹೊಂದಿದ 729 ಪ್ರಕರಣಗಳನ್ನು ಮಾದರಿಗಳಾಗಿ ತೆಗೆದುಕೊಳ್ಳಲಾಗಿದೆ. ಈ ಹಿಂದೆ ಕೋವಿಡ್ ಕಾಣಿಸಿಕೊಂಡಿದ್ದರೆ, ಹಠಾತ್ ಸಾವಿನ ಕುಟುಂಬದ ಇತಿಹಾಸ ಹೊಂದಿದ್ದರೆ, ಸಾವಿನ 48 ಗಂಟೆಗಳ ಮೊದಲು ಅತಿಯಾದ ಮದ್ಯಪಾನ, ಡ್ರಗ್ಸ್ ಸೇವಿಸಿದ್ದರೆ, ತೀವ್ರವಾದ ದೈಹಿಕ ಚಟುವಟಿಕೆಯನ್ನು ನಡೆಸಿದ್ದರೆ ಹಠಾತ್ ಸಾವು ಸಂಭವಿಸುವ ಸಾಧ್ಯತೆ ಇದೆ ಎನ್ನುವುದನ್ನು ಕಂಡುಕೊಳ್ಳಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವರು ಹೇಳಿದ್ದಾರೆ. ಕೋವಿಡ್ -19 ವ್ಯಾಕ್ಸಿನೇಷನ್ ಭಾರತದಲ್ಲಿ ಯುವ ವಯಸ್ಕರಲ್ಲಿ ವಿವರಿಸಲಾಗದ ಹಠಾತ್ ಸಾವಿನ ಅಪಾಯವನ್ನು ಹೆಚ್ಚಿಸುವುದಿಲ್ಲ ಎನ್ನುವುದು ಅಧ್ಯಯನದ ಮೂಲಕ ಸ್ಪಷ್ಟವಾಗಿದೆ. ಕೋವಿಡ್ -19 ಬಾಧಿಸಿ ಆಸ್ಪತ್ರೆಗೆ ದಾಖಲಾದವರು, ಹಠಾತ್ ಸಾವಿನ ಕುಟುಂಬದ ಇತಿಹಾಸ ಹೊಂದಿದವರು ಮತ್ತು ಕೆಲವು ಅನಾರೋಗ್ಯ ಜೀವನ ಶೈಲಿ ಅಳವಡಿಸಿಕೊಂಡವರಲ್ಲಿ ವಿವರಿಸಲಾಗದ ಹಠಾತ್ ಸಾವಿನ ಸಾಧ್ಯತೆ ಹೆಚ್ಚಿದೆ ಎಂದೂ ಜೆ.ಪಿ.ನಡ್ಡಾ ಹೇಳಿದ್ದಾರೆ. ವ್ಯಾಕ್ಸಿನೇಷನ್‌ನ ಅಡ್ಡ ಪರಿಣಾಮಗಳನ್ನು ಪತ್ತೆ ಹಚ್ಚಲು ಅಡ್ವರ್ಸ್ ಈವೆಂಟ್ ಫಾಲೋಯಿಂಗ್ ಇಮ್ಯುನೈಸೇಶನ್ (iCDM) ಹೆಸರಿನ ಪ್ರಬಲ ಕಣ್ಗಾವಲು ವ್ಯವಸ್ಥೆಯನ್ನು ರಚಿಸಲಾಗಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಕೇಂದ್ರ ಸಚಿವ ನಡ್ಡಾ ಸ್ಪಷ್ಟನೆ

ಜೆ.ಪಿ.ನಡ್ಡಾ ಹೇಳಿದ್ದೇನು?

ಐಸಿಎಂಆರ್-ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಪಿಡೆಮಿಯಾಲಜಿ ಕಳೆದ ವರ್ಷದ ಮೇ-ಆಗಸ್ಟ್ ಅವಧಿಯಲ್ಲಿ 19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 47 ತೃತೀಯ ಆರೈಕೆ ಆಸ್ಪತ್ರೆಗಳಲ್ಲಿ ಸಂಶೋಧನೆ ನಡೆಸಿ ಭಾರತದ 18-45 ವಯಸ್ಕರಲ್ಲಿ ವಿವರಿಸಲಾಗದ ಹಠಾತ್ ಸಾವುಗಳಿಗೆ ಸಂಬಂಧಿಸಿದ ಅಂಶಗಳು ಎಂಬ ಅಧ್ಯಯನದ ಮೂಲಕ ಈ ನಿಗಮನಕ್ಕೆ ಬರಲಾಗಿದೆ ಎಂದು ನಡ್ಡಾ ತಿಳಿಸಿದ್ದಾರೆ. ಕೋವಿಡ್-19 ಲಸಿಕೆಯ ಕನಿಷ್ಠ 1 ಡೋಸ್ ಅಥವಾ 2 ಡೋಸ್‌ಗಳನ್ನು ತೆಗೆದುಕೊಳ್ಳುವುದು ಯಾವುದೇ ಕಾರಣವಿಲ್ಲದೆ ಸಂಭವಿಸುವ ಹಠಾತ್ ಸಾವಿನ ಸಾಧ್ಯತೆಯನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ ಎಂದು ಸಂಶೋಧನೆಗಳು ತೋರಿಸಿವೆ ಎಂದು ಕೇಂದ್ರ ಆರೋಗ್ಯ ಸಚಿವ ಜೆಪಿ ನಡ್ಡಾ ವಿವರಿಸಿದ್ದಾರೆ.

ಸಜ್ಜನ ರಾಜಕಾರಣದ ಕೊಂಡಿ ಕಳಚಿತು

ಬೆಂಗಳೂರು: ಶಾಂತವೇರಿ ಗೋಪಾಲಗೌಡರ ಜತೆ ಪ್ರಜಾ ಸಮಾಜವಾದಿ ಪಕ್ಷದಿಂದ ರಾಜಕಾರಣ ಆರಂಭಿಸಿದ ಎಸ್.ಎಂ.ಕೃಷ್ಣ ಅವರು ದೇಶದಲ್ಲಿ ಸಜ್ಜನ ರಾಜಕಾರಣಕ್ಕೆ ಹೆಸರುವಾಸಿಯಾಗಿದ್ದರು. ಸಮಾಜವಾದಿ ಚಿಂತನೆ, ಜಾತ್ಯತೀತ ನಿಲುವು, ಮುತ್ಸದ್ದಿತನದ ನಡವಳಿಕೆಗಳಿಂದ ರಾಜ್ಯಕ್ಕೆ ದೊಡ್ಡ ಹೆಸರು ತಂದುಕೊಟ್ಟಿದ್ದಾರೆ. ಎಸ್.ಎಂ.ಕೃಷ್ಣ ಅವರ ಸಾವಿನಿಂದಾಗಿ ಸಜ್ಜನ ರಾಜಕಾರಣದ ಕೊಂಡಿಯೊಂದು ಕಳಚಿದಂತಾಗಿದೆ ಎಂದು ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್.ಶಿವಣ್ಣ ತಿಳಿಸಿದ್ದಾರೆ.

1994ರಲ್ಲಿ ವಿತ್ತ ಸಚಿವರಾಗಿದ್ದ ಸಿದ್ದರಾಮಯ್ಯ ಅವರು ನವೋದ್ಯಮವನ್ನು ಪೋಷಣೆ ಮಾಡಿದರು. ಸ್ಟಾರ್ಟ್‌ಅಪ್‌ಗಳಿಗೆ ತೆರಿಗೆ ವಿನಾಯಿತಿ ಮತ್ತು ಉಚಿತವಾಗಿ ಭೂಮಿ ನೀಡಿ ಪ್ರೋತ್ಸಾಹ ನೀಡಿದ್ದರು. ಇದೇ ಪರಂಪರೆಯನ್ನು ಮುಂದುವರಿಸಿದ ಎಸ್.ಎಂ.ಕೃಷ್ಣ ಅವರು ಬೆಂಗಳೂರು ನಗರವನ್ನು ಸಿಲಿಕಾನ್ ವ್ಯಾಲಿಯನ್ನಾಗಿ ಮಾಡುವಲ್ಲಿ ಯಶಸ್ವಿಯಾದರು. ಅಮೆರಿಕದ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ ಕೂಡ ಬೆಂಗಳೂರನ್ನು ಕೊಂಡಾಡಿದ್ದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ಐಟಿ ಹಬ್ ಆಗಿ ಗುರುತಿಸಿಕೊಳ್ಳಲು ಎಸ್.ಎಂ.ಕೃಷ್ಣ ಅವರ ಶ್ರಮ ಬಹಳಷ್ಟಿದೆ. ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯನ್ನೇ ಮಾಡಿದರು ಎಂದು ತಿಳಿಸಿದ್ದಾರೆ. ಸಮಚಿತ್ತತೆಯಿಂದ ಬದುಕಿ ಬಾಳಿದ ಅವರು ಉತ್ತಮ ಹವ್ಯಾಸಗಳನ್ನು ರೂಢಿಸಿಕೊಂಡಿದ್ದರು. ಯುಪಿಎ ಸರಕಾರದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವರಾಗಿದ್ದ ಅವರು ಹಲವು ದೇಶಗಳೊಂದಿಗೆ ಉತ್ತಮ ಬಾಂಧವ್ಯ ಮೂಡಿಸಲು ಶ್ರಮಿಸಿದ್ದರು. ದೇಶಕ್ಕೆ ಉತ್ತಮ ಕೊಡುಗೆಗಳನ್ನು ನೀಡಿರುವ ಎಸ್.ಎಂ.ಕೃಷ್ಣ ಅವರ ಅಗಲಿಕೆಯಿಂದ ತುಂಬಲಾಗದ ನಷ್ಟ ಉಂಟಾಗಿದೆ. ಅವರ ಕುಟುಂಬ ಸದಸ್ಯರಿಗೆ ಅವರ ಸಾವಿನ ನೋವು ಭರಿಸುವ ಶಕ್ತಿ ಕರುಣಿಸಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಸಂತಾಪ ಸೂಚಿಸಿದ್ದಾರೆ.

ವಿಶ್ವವಾಣಿ

ಆರಾಮ

@vishwavaninews

ಬೆಂಗಳೂರು
ಗುರುವಾರ
12 | 12 | 2024

ಅನುದಿನವೂ ವಿರಾಮಕ್ಕೆ ಒಂದು ನೆಪ

ಬೆಲಗೂರಿನಲ್ಲಿ ಬೆಳಗುತ್ತಿರುವ ಅಧ್ಯಾತ್ಮ ಜ್ಯೋತಿ!

ನಮ್ಮ ರಾಜ್ಯದ ಬಯಲುಸೀಮೆಯ ಪುಟ್ಟ ಹಳ್ಳಿಯಾದ ಬೆಲಗೂರಿನಲ್ಲಿ, ಅಧ್ಯಾತ್ಮ ಜ್ಯೋತಿ ಬೆಳಗುತ್ತಿದೆ. ಅಲ್ಲಿನ ವೀರಪ್ರತಾಪ ಆಂಜನೇಯ ಸ್ವಾಮಿಯ ವಿಶೇಷ ಭಕ್ತರಾದ ಅವಧೂತ ಶ್ರೀ ಬಿಂದುಮಾಧವ ಶರ್ಮಾ ಮಹಾಸ್ವಾಮಿಗಳ ಅವಿರತ ಸೇವೆ, ಕೈಂಕಯವೇ ಇದಕ್ಕೆ ಕಾರಣ. ಇಂದು ಆ ಕ್ಷೇತ್ರದ ಜವಾಬ್ದಾರಿಯನ್ನು ಹೊತ್ತಿರುವ ಶ್ರೀ ವಿಜಯ ಮಾರುತಿ ಶರ್ಮ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಈ ವಾರ ಅಲ್ಲಿ ಮಹಾಬ್ರಹ್ಮರಥೋತ್ಸವ ನಡೆಯುತ್ತಿದೆ.

ಶ್ರೀ ವೀರಪ್ರತಾಪ ಆಂಜನೇಯ ಸ್ವಾಮಿ ಸನ್ನಿಧಿ ಇರುವ ಬೆಲಗೂರು ಕ್ಷೇತ್ರವು, ಇಪ್ಪತ್ತನೆಯ ಶತಮಾನದಲ್ಲಿ ಒಂದು ಪವಾಡಕ್ಕೆ ಸಾಕ್ಷಿಯಾಯಿತು ಎಂದು ಹೇಳಿದರೆ, ಅದು ಅತಿಶಯೋಕ್ತಿಯಲ್ಲ. ಬೆಲಗೂರು ಹಳ್ಳಿಯು ನಮ್ಮ ರಾಜ್ಯದ ಸಾಮಾನ್ಯ ಹಳ್ಳಿಗಳಲ್ಲಿ ಒಂದು; ಬಯಲು ಸೀಮೆಯ ಪ್ರದೇಶವಾದ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನಲ್ಲಿರುವ ಈ ಗ್ರಾಮವು, ಕೆಲವೇ ವರ್ಷಗಳ ಹಿಂದಿನ ತನಕ, ಒಂದು ಪುಟ್ಟ ಹಳ್ಳಿಯಾಗಿದ್ದು, ಸರಳ ಜೀವನಕ್ಕೆ ಹೆಸರಾಗಿತ್ತು.

ಯಾಗ ಯಜ್ಞಗಳು

ಬೆಲಗೂರಿನಂತಹ ಪುಟ್ಟ ಗ್ರಾಮದಲ್ಲಿ ಹಲವು ಪ್ರಮುಖ ಯಾಗಗಳನ್ನು ಆಯೋಜಿಸಿದ್ದು, ಬಿಂದುಮಾಧವ ಶರ್ಮ ಮಹಾಸ್ವಾಮೀಜಿಯವರ ದೂರದೃಷ್ಟಿ ಮತ್ತು ಕೈಂಕರ್ಯವನ್ನು ತೋರಿಸುತ್ತದೆ. ಶ್ರೀ ಮಹಾಲಕ್ಷ್ಮಿ ಯಾಗ, ಕೋಟಿ ರುದ್ರ ಯಾಗ, ಸಹಸ್ರ ಚಂಡಿಕಾ ಯಾಗ ಮೊದಲಾದ ಯಾಗಗಳನ್ನು ಆಯೋಜಿಸಿದ್ದರು. ಜತೆಗೆ, ನಾಡಿನ ವಿವಿಧ ಕ್ಷೇತ್ರಗಳಲ್ಲಿ, ಊರುಗಳಲ್ಲಿ, ಇವರ ನೇತೃತ್ವದಲ್ಲಿ ವಿವಿಧ ಯಾಗಗಳು ನಡೆದು, ಮನುಕುಲದ ಒಳಿತಿಗಾಗಿ ಪ್ರಾರ್ಥನೆಗಳು ನಡೆದವು.

ಇಂತಹ ಪುಟ್ಟ ಊರಿನಲ್ಲಿ, ಶ್ರೀ ವೀರಪ್ರತಾಪ ಆಂಜನೇಯ ಸ್ವಾಮಿಯ ದೇಗುಲವು ಪ್ರಕಾಶಿಸಲು ಆರಂಭಿಸಿದ್ದೇ ಮೊದಲುಗೊಂಡು, ಬೆಲಗೂರು ಗ್ರಾಮವು ಸುತ್ತಲಿನ ಪ್ರದೇಶದಲ್ಲಿ ಬೆಳಗತೊಡಗಿತು. ಇದಕ್ಕೆ ಮುಖ್ಯ ಕಾರಣ, ಅವಧೂತ ಪರಂಪರೆಯ ಸದ್ಗುರುಗಳಾದ ಶ್ರೀ ಬಿಂದುಮಾಧವ ಶರ್ಮ ಮಹಾಸ್ವಾಮಿಗಳ ಕೈಂಕರ್ಯ, ಭಕ್ತಿ, ಶ್ರದ್ಧೆ, ಅಂತಃಕರಣ, ಸರಳತೆ ಮತ್ತು ಮಹಿಮೆ. ಸರಳ ಬದುಕನ್ನು ನಡೆಸಿದ ಅವಧೂತ ಶ್ರೀ ಬಿಂದುಮಾಧವ ಶರ್ಮ ಅವರು, ಬೆಲಗೂರಿನ ಆಂಜನೇಯನ ಆರಾಧಕರಾಗಿದ್ದು, ಗ್ರಾಮೀಣ ಪ್ರದೇಶದ ಜನರಿಗೆ ಭಕ್ತಿಯ ಹೊಸ ಆಯಾಮವನ್ನು ಪೂಚಯಿಸಿ ಬೆಲಗೂರು ಗ್ರಾಮವನ್ನು ಬೆಳಗಿಸಿದರು.

ಅವಧೂತರ ಜನನ

ಬೆಲಗೂರಿನಲ್ಲಿ ಆಂಜನೇಯ ಸ್ವಾಮಿಯ ದೇಗುಲ ಸುಮಾರು ಒಂದು ಸಾವಿರ ವರ್ಷಗಳ ಹಿಂದೆಯೇ ಸ್ಥಾಪನೆಗೊಂಡಿತ್ತು; ಅಲ್ಲಿ ಅರ್ಚಕ ವೃತ್ತಿ ಮಾಡುತ್ತಿದ್ದ ಕುಟುಂಬದಲ್ಲಿ ಅವಧೂತರ ಜನನವಾಯಿತು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿದ ವರ್ಷದಲ್ಲೇ, ವೈಶಾಖ ಶುಕ್ಲ ದಶಮಿಯಂದು, ಅಂದರೆ, 30.4.1947ರಂದು ಅವಧೂತ ಶ್ರೀ ಬಿಂದುಮಾಧವ ಶರ್ಮ ಅವರ ಜನನವಾಯಿತು. 1966ರಿಂದ, ಅಂದರೆ ತಮ್ಮ 19ನೆಯ ವಯಸ್ಸಿನಿಂದ, ಅವಧೂತ ಶ್ರೀ ಬಿಂದುಮಾಧವ ಶರ್ಮ ಮಹಾಸ್ವಾಮಿಗಳು ಬೆಲಗೂರಿನಲ್ಲಿ ಅದ್ವೈತ ಸಿದ್ಧಾಂತದ ಅನುಸಾರ, ತಮ್ಮ ಕೈಂಕರ್ಯ ಆರಂಭಿಸಿದರು; ವೀರಪ್ರತಾಪ ಆಂಜನೇಯನೇ ಅವರಿಗೆ ಆರಾಧ್ಯ ದೈವ. ಆ ಪುಟ್ಟ ಹಳ್ಳಿಯಲ್ಲಿದ್ದುಕೊಂಡೇ, ಜನಸಾಮಾನ್ಯರಿಗೆ ಅಧ್ಯಾತ್ಮದ ಪರಿಚಯ ಮಾಡಿಸಿದರು, ಭಕ್ತಿಯ ರಸ ಉಣಬಡಿಸಿದರು.

ಭೋಜನಶಾಲಾ ನಿರ್ಮಾಣ

ಅಧ್ಯಾತ್ಮದಲ್ಲಿ ಸಾಧನೆ ಮಾಡುತ್ತಲೇ, ಬೆಲಗೂರು ಸುತ್ತಮುತ್ತಲಿನ ಗ್ರಾಮೀಣ ಜನರ ಸೇವೆಯನ್ನೂ ಮಾಡಿದ್ದು ಅವಧೂತರ ವಿಶೇಷ ಕೈಂಕರ್ಯ. ಬೆಲಗೂರಿಗೆ ನಿರಂತರವಾಗಿ ಹರಿದುಬರತೊಡಗಿದ ಭಕ್ತ ಮತ್ತು ಆಸ್ತಿಕ ಜನರಿಗಾಗಿ, 1998ರಲ್ಲಿ ರಾಮ ಮಾನಸ ಮಂದಿರವನ್ನು ನಿರ್ಮಿಸಿದರು. 2010ರಲ್ಲಿ ಬೆಲಗೂರಿನಲ್ಲಿ ಅನ್ನಪೂರ್ಣ ಭೋಜನಶಾಲಾ ನಿರ್ಮಾಣವಾಯಿತು. ಇಲ್ಲಿ ಪ್ರತಿ ದಿನ ಜನರಿಗೆ ಅನ್ನದಾನ ನಡೆಯುತ್ತಲಿದೆ. ಆ ಕ್ಷೇತ್ರದ ಅಧ್ಯಾತ್ಮ ಪ್ರಗತಿಗಾಗಿ, ಜನರ ಉಪಯೋಗಕ್ಕಾಗಿ ಭಾರತಿ ತೀರ್ಥ ಸಭಾ ಭವನವನ್ನು 2017ರಲ್ಲಿ ಸ್ಥಾಪಿಸಿದರು. ಇವೆಲ್ಲಕ್ಕೂ ನಾನಾ ಕಡೆಗಳಿಂದ ಸಂಪನ್ಮೂಲಗಳನ್ನು ಸಂಗ್ರಹಿಸಿದ್ದು ವಿಶೇಷ ಕೈಂಕರ್ಯ ಎನಿಸಿದ್ದು, ಬೆಲಗೂರಿನಲ್ಲಿ ಬೆಳಗುತ್ತಿರುವ ಅಧ್ಯಾತ್ಮ ಜ್ಯೋತಿಯನ್ನು ಗುರುತಿಸಿದ ಜನಸಾಮಾನ್ಯರು ತಾವಾಗಿಯೇ ಕೊಡುಗೆ, ದೇಣಿಗೆಯನ್ನು ನೀಡಿದ್ದು ವಿಶೇಷ. ಇಂತಹದ್ದೊಂದು ಯೋಜನೆಯಿಂದ ಜನರಿಗೆ ಉಪಯೋಗವಾಗುತ್ತದೆ ಎಂದು ಅವಧೂತರು ಮಾಹಿತಿ ನೀಡಿದಾಗ, ಕೇಳುವ ಮೊದಲೇ ಹಲವರು ತಮ್ಮ ಶಕ್ಯಾನುಸಾರ ದೇಣಿಗೆ ನೀಡಿ, ಬೆಲಗೂರು ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಅಳಿಲುಸೇವೆ ಮಾಡಿದ್ದು ವಿಶೇಷ.

ಹನುಮದ್ ವ್ರತ

ಬೆಲಗೂರು ಕ್ಷೇತ್ರದಲ್ಲಿ ವಿಶೇಷವಾಗಿ ಆಚರಣೆಗೊಳ್ಳುವ ಹನುಮದ್ ವ್ರತವು 5 ದಿನಗಳ ಕಾಲ ಪ್ರತಿ ವರ್ಷ ನಡೆಯುತ್ತದೆ. ಈ ಸಮಯದಲ್ಲಿ ಹಿಮಾಲಯ ಮತ್ತು ಇತರ ಪ್ರದೇಶಗಳಿಂದ ಆಗಮಿಸುವ ಸನ್ಯಾಸಿಗಳು, ಸಾದುಗಳು, ಕ್ಷೇತ್ರದ ಹಿರಿಮೆಯನ್ನು ಹೆಚ್ಚಿಸುತ್ತಿದ್ದಾರೆ; 5 ದಿನಗಳ ವ್ರತದ ಸಮಯದಲ್ಲಿ, ಒಂದು ದಿನವನ್ನು ಈ ಸ್ವಾಮಿಗಳ ಸೇವೆಗೆ ಮೀಸಲಿಡಲಾಗುತ್ತದೆ.

ಭಾರತಮಾತಾ ರಥ

ನಮ್ಮ ದೇಶದ ಎಲ್ಲಾ ದೇವಾಲಯಗಳಲ್ಲಿ ರಥಗಳು ಇದ್ದೇ ಇರುತ್ತವೆ. ಬೆಲಗೂರಿನ ವೀರಪ್ರತಾಪ ಆಂಜನೇಯ ದೇವಾಲಯದ ವಿಶೇಷ ಎಂದರೆ, ಇಲ್ಲಿದೆ 'ಭಾರತ ಮಾತಾ ರಥ'! ಹಿರಿಯ ಅವಧೂತ ಶ್ರೀ ಬಿಂದು ಮಾಧವ ಶರ್ಮ ಅವರ ಮಹೋನ್ನತ ಪರಿಕಲ್ಪನೆಯಂತೆ, ಈ ರಥವು ದೇಶದ ಹಿರಿಮೆಯನ್ನು ಸಾರುತ್ತಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ ಶಿಲ್ಪಗಳನ್ನು ಈ ರಥದ ಮೇಲೆ ಕೆತ್ತಲಾಗಿದೆ; ಜತೆಗೆ, ನಾಡಿಗೆ ಕೊಡುಗೆ ನೀಡಿದ, ವಿಜ್ಞಾನಿಗಳು, ಕವಿಗಳು, ಸಾಹಿತಿಗಳು, ಖ್ಯಾತ ವ್ಯಕ್ತಿಗಳನ್ನೂ ಸಹ ಶಿಲ್ಪ ರೂಪದಲ್ಲಿ ಈ ಮರದ ರಥದ ಮೇಲೆ ಕೆತ್ತಿ ಇಡಲಾಗಿದೆ ಮತ್ತು ಇದನ್ನು ವೀಕ್ಷಿಸಿದ ಗ್ರಾಮೀಣ ಜನರು ಮತ್ತು ಪ್ರವಾಸಿಗರು, ದೇಶದ ಇತಿಹಾಸವನ್ನು ಸ್ಥಳದಲ್ಲೇ ಪರಿಚಯಪಡೆಯಬಹುದು! ಭಾರತಮಾತ ರಥವು ನಮ್ಮ ದೇಶದಲ್ಲೇ ಅನನ್ಯ ಮತ್ತು ಇದರ ಪರಿಕಲ್ಪನೆಯು, ಹಿರಿಯ ಅವಧೂತರಾದ ಶ್ರೀ ಬಿಂದು ಮಾಧವ ಶರ್ಮಾ ಅವರದ್ದು ಎಂಬುದು ನಮ್ಮ ನಾಡಿಗೆ ಹೆಮ್ಮೆಯ ವಿಚಾರ ಎನಿಸಿದೆ.

ಶ್ರೀ ವಿಜಯ ಮಾರುತಿ ಶರ್ಮ ಸ್ವಾಮೀಜಿ

ಹಲವು ದಶಕಗಳ ಕಾಲ ಅಧ್ಯಾತ್ಮ ಪ್ರಗತಿಗಾಗಿ ತಮ್ಮ ಜೀವವನ್ನೇ ಮುಡಿಪಾಗಿಟ್ಟ ಅವಧೂತ ಶ್ರೀ ಬಿಂದು ಮಾಧವ ಶರ್ಮ ಮಹಾಸ್ವಾಮೀಜಿಯವರು, ತಮಗೆ ವಯಸ್ಸಾದುದನ್ನು ಗಮನಿಸಿ, ಉತ್ತರಾಧಿಕಾರಿಯನ್ನು ನೇಮಿಸಿದರು. 30.4.2019ರಂದು ಶ್ರೀ ಮಾರುತಿ ಪೀಠವನ್ನು ಸ್ಥಾಪಿಸಿ, ಶ್ರೀ ವಿಜಯ ಮಾರುತಿ ಶರ್ಮ ಇವರನ್ನು, ತಮ್ಮ ಉತ್ತರಾಧಿಕಾರಿಯನ್ನಾಗಿ ಮತ್ತು ಮೊದಲ ಪೀಠಾಧಿಪತಿಯಾಗಿ ನಾಮಕರಣ ಮಾಡಿದರು ಮತ್ತು ಬೆಲಗೂರು ಕ್ಷೇತ್ರದ ಹೊಣೆಯನ್ನು ಅವರಿಗೆ ಒಪ್ಪಿಸಿದರು. ಹಿರಿಯ ಅವಧೂತರ ಮಾರ್ಗದರ್ಶನದಲ್ಲಿ, ಇಂದು ಶ್ರೀ ವಿಜಯ ಮಾರುತಿ ಶರ್ಮ ಅವರು, ಬೆಲಗೂರು ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ ಮತ್ತು ಅಲ್ಲಿನ ಪರಂಪರೆಯ ಪಾವಿತ್ರ್ಯತೆಯನ್ನು ಕಾಪಾಡುತ್ತಾ, ಮನುಕುಲದ ಒಳಿತಿಗಾಗಿ ಅಗತ್ಯ ಎನಿಸುವ ಎಲ್ಲಾ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಹಿರಿಯ ಅವಧೂತರ ಕೊಡುಗೆಯನ್ನು ಗಮನಿಸಿ ಮತ್ತು ಇಂದು ಬೆಲಗೂರು ಕ್ಷೇತ್ರದಲ್ಲಿನ ಅಧ್ಯಾತ್ಮ ಜ್ಯೋತಿಯನ್ನು ಗುರುತಿಸಿ, ಆ ಪೀಠಕ್ಕೆ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ'ಯನ್ನು ಇತ್ತೀಚೆಗೆ ಪ್ರದಾನ ಮಾಡಲಾಯಿತು ಮತ್ತು ಅವಧೂತ ಶ್ರೀ ಬಿಂದುಮಾಧವ ಶರ್ಮಾ ಸದ್ಗುರುಗಳ ಪರವಾಗಿ ಶ್ರೀ ವಿಜಯ ಮಾರುತಿ ಶರ್ಮಾ ಗುರುಗಳವರು ಪ್ರಶಸ್ತಿಯನ್ನು ಸ್ವೀಕರಿಸಿ, ಅದನ್ನು ಜನಸಾಮಾನ್ಯರಿಗೆ ಮತ್ತು ಮನುಕುಲದ ಒಳಿತಿಗಾಗಿ ಸಮರ್ಪಿಸಿದರು.

ಮಹಾಬ್ರಹ್ಮರಥೋತ್ಸವ

ಶ್ರೀ ಕ್ಷೇತ್ರ ಬೆಲಗೂರಿನಲ್ಲಿ 11.12.2024ರಿಂದ 15.12.2024ರ ತನಕ ಲಕ್ಷ್ಮೀನಾರಾಯಣ ಸ್ವಾಮಿಯವರ ಮತ್ತು ಶ್ರೀ ವೀರಪ್ರತಾಪ ಆಂಜನೇಯ ಸ್ವಾಮಿಯವರ ವಾರ್ಷಿಕ ಮಹಾ ಬ್ರಹ್ಮರಥೋತ್ಸವದ ಕಾರ್ಯಕ್ರಮಗಳ ನಡೆಯುತ್ತಿದ್ದು, ಶೃಂಗೇರಿ ಶಾರಧಾಪೀಠಾಧೀಶ್ವರರಾದ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲಸಂಜಾತ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ಪೂರ್ಣಾನುಗ್ರಹದೊಂದಿಗೆ, ಶ್ರೀ ಬಿಂದುಮಾಧವ ಶರ್ಮಾ ಮಹಾಸ್ವಾಮಿಗಳ ಆಶೀರ್ವಾದದೊಂದಿಗೆ, ಶ್ರೀ ಮಾರುತಿ ಪೀಠಾಧಿಪತಿಗಳಾದ ಶ್ರೀ ವಿಜಯ ಮಾರುತಿ ಶರ್ಮಾ ಗುರುಗಳ ಮಾರ್ಗದರ್ಶನದಲ್ಲಿ ಈ ಕಾರ್ಯ ಕ್ರಮಗಳು ನಡೆಯುತ್ತಿವೆ. ಇದರ ಭಾಗವಾಗಿ, 12.12.2024ರಂದು ಗುರುವಾರ ಸೀತಾರಾಮ ಕಲ್ಯಾಣೋತ್ಸವ, 13.12.2024ರಂದು ಶುಕ್ರವಾರ ಮಹಾಬ್ರಹ್ಮರಥೋತ್ಸವ, 14ರಂದು ವಿರಾಟ ದತ್ತಾತ್ರೇಯ ಸ್ವರೂಪಿ ಸಾಧು ಪೂಜೆ ಮತ್ತು 15 ರಂದು ಪುಷ್ಪೋತ್ಸವ ಮತ್ತು ಇತರ ಹಲವು ಕಾರ್ಯಕ್ರಮಗಳು ನಡೆಯುತ್ತಿವೆ.

ಚಿತ್ತ ವಿಹಾರ

ಸದಾ ಜಾಗೃತರಾಗಿರಿ!

ಬದುಕಿನ ಹಲವು ಸಂದರ್ಭಗಳಲ್ಲಿ ಭ್ರಮೆ ಯಲ್ಲಿ ತೇಲುತ್ತೇವೆ. ಮನಸ್ಸಿನ ಏಕಾಗ್ರತೆ ಯನ್ನು ಚಂಚಲಗೊಳಿಸಿಕೊಳ್ಳುತ್ತೇವೆ. ಎಲ್ಲವನ್ನೂ ನಂಬಿ ಬಿಡುತ್ತೇವೆ. ನಮ್ಮ ಅವಿವೇಕದ ನಡೆಯಿಂದಾಗಿ, ನಮ್ಮದೇ ದೌರ್ಬಲ್ಯತೆಯಿಂದಾಗಿ ದುಃಖವನ್ನು, ಸಂಕಟ ಆಪತ್ತುಗಳನ್ನು ಬರಮಾಡಿಕೊಳ್ಳುತ್ತೇವೆ. ಕ್ಷಣ ಕಾಲದ ನಮ್ಮ ಮೈಮರೆಯುವಿಕೆ, ವರ್ತಮಾನದ ನಮ್ಮ ಬದುಕನ್ನು ಸಂಪೂರ್ಣ ಸರ್ವನಾಶ ಮಾಡಿ ಬಿಡ ಬಲ್ಲದು. ಒಬ್ಬ ಚಾಣಾಕ್ಷ ವ್ಯಾರಿಯು ಯಾವುದೋ ಔಷಧಿಯೊಂದನ್ನು ಮಾರಾಟ ಮಾಡುತ್ತಿದ್ದ. 'ಇವು ಗಳು ನೋಡಲು ಸಾಮಾನ್ಯ ಸಕ್ಕರೆಯ ಗುಳಿಗೆಯಂತೆ ಕಾಣುತ್ತಿದ್ದರೂ ಇವು ತುಂಬ ಉಪಯುಕ್ತವಾದ ಪರಿಣಾಮವನ್ನುಂಟು ಮಾಡಬಲ್ಲ ಸಾಮರ್ಥ್ಯ ಹೊಂದಿವೆ. ಒಂದು ತಿಂಗಳು ಸೇವಿಸದರೆ ದಡ್ಡನೂ ಜಾಣನಾಗಬಲ್ಲ' ಎಂದು ಪ್ರಚಾರ ಮಾಡತೊಡಗಿದ. 'ಒಂದು ತಿಂಗಳ ನಂತರ ಮತ್ತೆ ಬರುತ್ತೇನೆ. ನೀವೆಲ್ಲ ಅಗಾಧವಾದ ಬದಲಾವಣೆಯನ್ನು ಕಂಡುಕೊಂಡಿರು ತ್ತೀರಿ' ಎಂದೆಲ್ಲ ಹೇಳಿದ. ಹಲವರು ಅವನು ಮಾರುತ್ತಿದ್ದ ಔಷಧಿಯನ್ನು ಖರೀದಿ ಮಾಡಿದರು. ಒಂದು ತಿಂಗಳುಗಳ ಕಾಲ ಹಳ್ಳಿಯ ಎಲ್ಲ ಜನರೂ ಅವನ ಔಷಧಿಯನ್ನು ಸೇವಿದರೂ ಯಾವುದೇ ಬದಲಾ ವಣೆಯ ಯಾರಲ್ಲೂ ಆಗಿರಲಿಲ್ಲ. ವಾಸ್ತವದಲ್ಲಿ ಅದು ಸಾಮಾನ್ಯ ಸಕ್ಕರೆಯ ಗುಳಿಗೆಯಾಗಿತ್ತು. ಜನರು ಮಾತ್ರ ಆ ಚಾಣಾಕ್ಷ ವ್ಯಾಪಾರಿಯ ಮಾತಿನ ಮೋಡಿಗೆ ಮರುಳಾಗಿದ್ದರು! ನಾವು ಪ್ರತಿ ಕ್ಷಣ, ಪ್ರತಿ ಘಂಟೆಯೂ ಎಚ್ಚರದಿಂದ ಇರಬೇಕು. ಪ್ರತಿ ಕ್ಷಣವೂ ವರ್ತಮಾನ ದಲ್ಲಿ ಬದುಕುವುದನ್ನು ರೂಢಿಸಿಕೊಳ್ಳಬೇಕು. ನಮ್ಮದೇ ಮೈಮರೆವಿನಿಂದಾಗಿ ದಿನನಿತ್ಯವೂ ಅವಘಡಗಳು, ಅಪಘಾತಗಳು, ಸಂಭವಿಸುತ್ತಲೇ ಇರುವುದು ನಮ್ಮೆ ಲ್ಲರ ಅನುಭವವಾಗಿದೆ. ಒಂದು ಕ್ಷಣ ಎಚ್ಚರ ತಪ್ಪಿದರೂ ಅವಘಡದಿಂದ ಹಾನಿಯಾಗುವುದನ್ನು ಕಾಣ ಬಹುದು. ನಮ್ಮ ಮನಸ್ಸು ಮರ್ಕಟದಂತೆ. ಒಂದು ಕ್ಷಣವೂ ಅದು ನಿಂತಲ್ಲಿ ನಿಲ್ಲಲಾರದು. ನಾವು ನಮ್ಮ ಮನಸ್ಸನ್ನು ಸಾಧ್ಯವಾದಷ್ಟು ಚಿಂತೆ, ಅನಗತ್ಯ ಭಯ, ತವಕ, ತಲ್ಲಣಗಳಿಂದ ಮುಕ್ತವಾಗಿಸಿಕೊಳ್ಳುವುದರಿಂದ, ನಮ್ಮ ಭಾವನೆ ಮತ್ತು ಆಲೋಚನೆಗಳನ್ನು ಪರಿಶುದ್ಧಗೊಳಿಸಿಕೊಳ್ಳುವುದರಿಂದ ವರ್ತಮಾನದ ಜೊತೆಗೆ ನಮ್ಮ ಮನಸ್ಸನ್ನು ಸಮೀಕರಿಸಿಕೊಳ್ಳಲು ಸಾಧ್ಯವಾಗು ತ್ತದೆ. ಸದಾ ಜಾಗ್ರತವಾದ ಮನಸ್ಥಿತಿಯಿಂದ ಬದುಕು ಹಸನಾದೀತು.

● ಮಹಾದೇವ ಬಸರಕೋಡ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಈ ಹಳ್ಳಿಯ ಎಲ್ಲರೂ ಕಲಾವಿದರು!

ಮನೆಯ ಸದಸ್ಯರೆಲ್ಲರೂ ಸ್ಥಳೀಯವಾಗಿ ಲಭ್ಯವಿರುವ ಸಾಮಗ್ರಿಗಳನ್ನು ಬಳಸಿ ಚಿತ್ರ ರಚಿಸುವುದು, ಕಲಾಕೃತಿಗಳನ್ನು ತಯಾರಿಸುವುದು ವಿಶೇಷ.

● ಧಾರಿಣಿ ಮಾಯಾ

ಒಡಿಶಾ ರಾಜ್ಯದ ಪುರಿಯಿಂದ 14 ಕಿ.ಮೀ. ದೂರದಲ್ಲಿರುವ ರಘುರಾಜ್‌ಪುರ ಎಂಬ ಹಳ್ಳಿ ಪರಂಪರೆಯಿಂದ ನಡೆದು ಬಂದ ಕರಕುಶಲಕ್ಕೆ ಹೆಸರುವಾಸಿಯಾಗಿದೆ. ಸುಮಾರು 100 ಮನೆಗಳಿರುವ ಇದೊಂದು ಚಿಕ್ಕ ಹಳ್ಳಿ. ಈ ಊರಿನ ಒಳಗೆ ಕಾಲಿಡುತ್ತಿದ್ದಂತೆ ಓಣಿಯ ಇಕ್ಕೆಲಗಳಲ್ಲೂ ಪುಟ್ಟ ಪುಟ್ಟ ಮನೆಗಳು; ಈ ಮನೆಗಳ ಗೋಡೆಗಳ ಮೇಲೆಲ್ಲಾ ಚಿತ್ತಾಕರ್ಷಕ ಚಿತ್ರಗಳು ಕಂಡುಬರುತ್ತವೆ. ಈ ಹಳ್ಳಿಯೇ ಒಂದು ಆರ್ಟ್ ವಿಲೇಜ್ ಆಗಿದ್ದು, ಇದು ಹೆರಿಟೇಜ್ ವಿಲೇಜ್ ಎಂದೇ ಖ್ಯಾತಿ ಗಳಿಸಿದೆ.

ಇಲ್ಲಿಗೆ ಪ್ರವಾಸಿಗರು ಅಡಿ ಇಡುತ್ತಿದ್ದಂತೆ ಆ ಹಳ್ಳಿಯ ಜನ ಒಬ್ಬರ ಹಿಂದೊಂಬ್ಬರು ಬಂದು ತಮ್ಮ ಮನೆಗೆ ಬಂದು ಅವರು ರಚಿಸಿರುವ ಕಲಾಕೃತಿಗಳನ್ನು ನೋಡಿ ಬನ್ನಿರಿ ಎಂದು ದುಂಬಾಲು ಬೀಳುತ್ತಾರೆ. ಒಂದು ಮನೆಯ ಒಳಹೊಕ್ಕಾಗ, ಮನೆಯ ಗೋಡೆಯೇ ಕಾಣಿಸದಷ್ಟು ಕರಕುಶಲಗಳು, ಚಿತ್ರಕಲೆಗಳು, ಮುಖವಾಡಗಳು ರಾರಾಜಿಸುತ್ತಿದ್ದವು. ಒಂದು ಮೂಲೆಯಲ್ಲಿ ಬಟ್ಟೆಯ ಮೇಲೆ ಮೂಡಿಸಿದ್ದ ಚಿತ್ರಕಲೆಗಳನ್ನು ಸುರುಳಿ ಸುತ್ತಿ ಜೋಡಿಸಿಡಲಾಗಿದ್ದವು. ಪ್ರತಿ ಮನೆಯ ಎಲ್ಲಾ ಸದಸ್ಯರೂ ಕಲಾವಿದರೇ!

ಶಿಲ್ಪ ಗುರು ಡಾ. ಜಗನ್ನಾಥ ಮಹಾಪಾತ್ರ ಎಂಬ ಪತ್ತಚಿತ್ರ ಕಲಾಕಾರರಿಂದ ಈ ಸಾಂಪ್ರದಾಯಿಕ ಕಲೆ ಈ ಊರಿನಲ್ಲಿ ಗಟ್ಟಿ ನೆಲೆಯೂರಿದೆ. ಈ ಕಲೆಯೇ ಇಲ್ಲಿ ನೆಲೆಸಿರುವವರ ಜೀವನಕ್ಕೆ ಆಧಾರ. ಪತ್ತಚಿತ್ರಕ್ಕೆ ಪೂರ್ವ ತಯಾರಿ ಬಹುಮುಖ್ಯ ಪಾತ್ರವಹಿಸುತ್ತದೆ. ಒಂದರ ಮೇಲೊಂದು ಹಳೆಯ ಹತ್ತಿ ಸೀರೆಯನ್ನಿಟ್ಟು, ಹುಣಿಸೆ ರಸ ಹಚ್ಚಿ, ಬಿಸಿಲಿನಿಂದ ಒಣಗಿಸಿ, ನಂತರ ಮತ್ತೊಂದು ಸೀರೆಯನ್ನಿಟ್ಟು ಅದೇ ರೀತಿ ಮಾಡಿದಾಗ, ಕ್ಯಾನ್ವಾಸ್ ಬೋರ್ಡಿನಂತೆ ಗಟ್ಟಿಯ ರಟ್ಟಿನಂತೆ ತಯಾರಾಗುತ್ತದೆ. ಆಗ ಅದರ ಮೇಲೆ ಬೇಕಾದ ಚಿತ್ರ ಬಿಡಿಸಿ ಬಣ್ಣ ತುಂಬಲಾಗುತ್ತದೆ. ಇದರ ಮೇಲೆ ಮೂಡುವ ಸಂಕೀರ್ಣವಾದ ಚಿತ್ರಗಳು ಪ್ರಾಣಿ, ಪಕ್ಷಿ, ಹೂವು, ಎಲೆ, ರಾಧಾ ಕೃಷ್ಣನ ರಾಸಲೀಲೆ, ಜಗನ್ನಾಥ, ಪೌರಾಣಿಕ ಕಥೆಗಳು, ಜಾನಪದ ಕಥೆಗಳು, ಅಷ್ಟೇ ಅಲ್ಲದೆ ಸಂಪೂರ್ಣ ರಾಮಾಯಣವನ್ನೇ ಭಾಗಗಳಾಗಿ ಚಿತ್ರದಲ್ಲಿ ಮೂಡಿಸಿರುವುದು ಎಲ್ಲವೂ ಅವರ ಕಲೆಯ ಹಿಂದಿನ ಶ್ರದ್ಧೆ, ಪರಿಶ್ರಮವನ್ನು ಎತ್ತಿ ಹಿಡಿಯುತ್ತದೆ.

ಪತ್ತಚಿತ್ರ ಅಲ್ಲದೇ, ಇದೇ ರೀತಿಯ ಚಿತ್ರಕಲೆ ಟಸ್ಸರ್ ಬಟ್ಟೆಯ ಮೇಲೂ ಬಿಡಿಸುತ್ತಾರೆ. ಇದರ ಜತೆಗೇ, ಮರದ ಗೊಂಬೆಗಳು, ತೆಂಗಿನ ಚಿಪ್ಪಿನ ಕಲಾಕೃತಿಗಳು, ಕಾಗದದಿಂದ ರುಬ್ಬಿ ಮಾಡಿದ ಆಕೃತಿಗಳು, ತಾಳೆ ಎಲೆಯ ಮೇಲೆ ಚಿತ್ರ ಕೆತ್ತನೆಗಳೆಲ್ಲ ಆಕರ್ಷಕವಾಗಿರುತ್ತವೆ. ಯಾವುದೇ ಗ್ರಾಹಕ ಇಲ್ಲಿ ಕಾಲಿಟ್ಟೊಡನೆ ತಮ್ಮ ಕಲಾಕೃತಿಗಳನ್ನು ಒಳ್ಳೆಯ ಬೆಲೆಗೆ ಮಾರಲು ಅಕ್ಕ ಪಕ್ಕದ ಮನೆಯವರಿಗೇ ಪೈಪೋಟಿ ಏರ್ಪಡುತ್ತದೆ. ಒಂದು ಕಲಾಕೃತಿಗೆ ಒಬ್ಬರು ಹೇಳಿದ ಬೆಲೆ ಅದೇ ರೀತಿಯ ಕಲಾಕೃತಿ ಮತ್ತೊಬ್ಬರಲ್ಲಿ ದುಪ್ಪಟ್ಟು ಬೆಲೆ ಇರಲೂ ಸಾಧ್ಯ. ಹಾಗಾಗಿ ಕೊಳ್ಳುವವರು ಮೊದಲು ಒಂದಿಷ್ಟು ಮನೆಗಳಿಗೆ ಎಡತಾಕಿ ಬೆಲೆ ತಿಳಿದು ಕೊಂಡುಕೊಳ್ಳುವುದು ಸೂಕ್ತ. ಇದೇ ರೀತಿ, ಪುರಿಯಿಂದ 45 ಕಿ.ಮೀ ನಲ್ಲಿ ಪಿಪಿಲೀ ಎಂಬ ಹಳ್ಳಿಯಲ್ಲೂ ಕಲಾಕೃತಿಗಳನ್ನು ಖರೀದಿಸಬಹುದು. ಇಲ್ಲಿ ದೊರಕುವ ಆನೆ, ನವಿಲಿನ ಕಲಾಕೃತಿಯ ಕಸೂತಿ ಮಾಡಿದ ನೆಲಹಾಸು, ಹೊದಿಕೆ, ಬ್ಯಾಗ್, ದಿಂಬಿನ ಹೊದಿಕೆ, ಬಣ್ಣದ ಹೆಣಿಕೆಯ ಛತ್ರಿಗಳು ಆಕರ್ಷಕ.

ಮರಣ ನಮ್ಮನ್ನು ಕೊಲ್ಲುವುದಿಲ್ಲ

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಕೃಷ್ಣ ಅರ್ಜುನನಿಗೆ ಹೇಳುತ್ತಾನೆ ನೀನು ನಾನು ಮತ್ತು ಈ ಯುದ್ಧ ಭೂಮಿಯ ಮೇಲಿರುವ ಪ್ರಭುಗಳು ಇಲ್ಲದಿದ್ದಾಗ ಭೂತ, ವರ್ತಮಾನ, ಭವಿಷ್ಯ ಎಂಬ ಕಾಲವೇ ಇರುವುದಿಲ್ಲ (2.12). ಮತ್ತು ಮುಂದುವರಿದು ಹೇಳುತ್ತಾನೆ. ಅವಿನಾಶಿ, ಶಾಶ್ವತ ಜೀವಂತ ವಸ್ತುವಿನ ಭೌತಿಕ ಭಾಗವು ಖಂಡಿತ ನಾಶವಾಗುತ್ತದೆ. ಹಾಗಾಗಿ ಮುಂದಿರುವ ಯುದ್ಧವನ್ನು ಮಾಡಲೇಬೇಕಾಗಿದೆ. ಈ ಜೀವಂತ ವಸ್ತುವನ್ನು ಆತ್ಮ ಚೈತನ್ಯ ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಕೃಷ್ಣ ಅದನ್ನೇ ದೇಹಿ ಎಂದು ಕರೆಯುತ್ತಾನೆ.

ಕೃಷ್ಣ ಸೃಷ್ಟಿಯ ಸತ್ವದಿಂದ ಪ್ರಾರಂಭಿಸುತ್ತಾನೆ ಮತ್ತು ಅವಿನಾಶಿ, ಅಪರಿಮಾಣವಾದ ಎಲ್ಲವನ್ನೂ ಆವರಿಸಿರುವ ಹಾಗೂ ಶಾಶ್ವತವಾದ 'ಜೀವಂತ ವಸ್ತು' ವಿನ ಬಗ್ಗೆ ಹೇಳುತ್ತಾನೆ. ಎರಡನೆಯದಾಗಿ ಅದೇ 'ಜೀವಂತ ವಸ್ತು' ನಿಶ್ಚಿತವಾಗಿ ನಾಶವಾಗುವ ಭೌತಿಕ ಭಾಗವನ್ನು ಹೊಂದಿದೆ. ಕೃಷ್ಣ ಆ ಪ್ರಭುಗಳ ಬಗ್ಗೆ ಹೇಳಿದಾಗ ಅವರಲ್ಲಿರುವ ಅವಿನಾಶಿ, ಶಾಶ್ವತ 'ಜೀವಂತ ವಸ್ತು'ವನ್ನು ಸೂಚಿಸುತ್ತಾನೆ.

ಮೂಲಭೂತವಾಗಿ ನಾವು ಎರಡು ಭಾಗಗಳಿಂದ ಆಗಿದ್ದೇವೆ. ಮೊದಲನೆಯದು ನಿಶ್ಚಿತವಾಗಿ ನಾಶವಾಗುವ ದೇಹ ಮತ್ತು ಮನಸ್ಸು ಅವು ನೋವು ನಲಿವುಗಳ ದ್ವಂದ್ವಕ್ಕೆ ವಶವಾಗಿವೆ. ಅರ್ಜುನ ಆ ನೋವನ್ನು ಅನುಭವಿಸುತ್ತಾನೆ. ಎರಡನೇ ಭಾಗ ಶಾಶ್ವತವಾದ 'ದೇಹಿ' ಇದನ್ನು ಅರ್ಥ ಮಾಡಿಕೊಂಡು ದೇಹ ಮತ್ತು ಮನಸ್ಸಿನೊಂದಿಗೆ (ಅಸತ್) ಗುರುತಿಸಿಕೊಳ್ಳುವುದು ಬಿಟ್ಟು 'ದೇಹಿ' (ಸತ್) ಯೊಂದಿಗೆ ಗುರುತಿಸಿ ಕೊಳ್ಳಬೇಕೆಂದು ಕೃಷ್ಣ ಒತ್ತಿ ಹೇಳುತ್ತಾನೆ. ಈ ಗುರುತಿಸಿಕೊಳ್ಳುವಿಕೆ ನಿಂತಾಗ ಬುದ್ಧತ್ವ 'ಜ್ಞಾನೋದಯ' ಉಂಟಾಗುತ್ತದೆ . ಇದು ಒಂದು ಅನುಭವ ಹಾಗೂ ಇದನ್ನು ಶಬ್ದಗಳಲ್ಲಿ ವಿವರಿಸಲು ಸಾಧ್ಯವಿಲ್ಲ.

ಕೃಷ್ಣನು ಅರ್ಜುನನಿಗೆ ಯುದ್ಧ ಮಾಡು ಎಂದು ಹೇಳುವ ಗೀತೆಯ ಭಾಗವು ತುಂಬಾ ಕಷ್ಟಕರವಾಗಿದ್ದು ತಿಳಿದುಕೊಳ್ಳಲು ಕಠಿಣವಾಗಿದೆ. ಕೆಲವರ ಪ್ರಕಾರ ಕುರುಕ್ಷೇತ್ರ ಯುದ್ಧ ನಡೆದೇ ಇಲ್ಲ ಹಾಗೂ ಇದು ಕೇವಲ ನಮ್ಮ ದಿನನಿತ್ಯದ ಹೋರಾಟಗಳ ರೂಪಕ ಚಿತ್ರಣವಾಗಿದೆ. ಯುದ್ಧದಿಂದ ಅರ್ಜುನ ಹಿಮ್ಮೆಟ್ಟಿದ್ದರೆ ಯುದ್ಧ ನಿಲ್ಲುವುದು ಅಸಂಭವವಾಗಿತ್ತು. ಜಾಗೃತಿ ಮತ್ತು ಅರಿವು ಎಂಬ ಶಸ್ತ್ರಗಳಿಂದ ಯುದ್ಧವನ್ನು ಎದುರಿಸಬೇಕೆಂದು ಕೃಷ್ಣ ಪ್ರತಿಪಾದಿಸುತ್ತಾನೆ ಅರ್ಜುನ ಯುದ್ಧದಿಂದ ಹಿಂತೆಗೆದರು ತನ್ನ ಅಹಂಕಾರದಿಂದಾಗಿ (ನಾನೇ ಕರ್ತೃ) ಅವನು ಶಾಶ್ವತವಾಗಿ ವಿಷಾದದ ಗುಲಾಮನಾಗಿ ಉಳಿಯುತ್ತಾನೆಂದು ಕೃಷ್ಣನಿಗೆ ಗೊತ್ತಿತ್ತು. ಆದ್ದರಿಂದ ಈ (ಸತ್)ನ್ನು ತಿಳಿದುಕೊಂಡು ಯುದ್ಧ ಮಾಡಬೇಕೆಂದು ಕೃಷ್ಣ ತಿಳಿಸುತ್ತಾನೆ.

ದಿನ ದರ್ಶಿಕೆ

ಮಾರ್ಗಶಿರ ಮಾಸ, ಶುಕ್ಲ ಪಕ್ಷ, ದ್ವಾದಶಿ ತಿಥಿ, ಅಶ್ವಿನಿ ನಕ್ಷತ್ರ, ಪರಿಘ ಯೋಗ, ಬಾವ ಕರಣ, ಮೇಷ ಲಗ್ನ, ವೃಶ್ಚಿಕ ರಾಶಿ, ಹೇಮಂತ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ

ಮನೆಮದ್ದು

ಒಂದು ಕಪ್ ತಣ್ಣನೆಯ ಹಾಲಿನಲ್ಲಿ ಒಂದು ನಿಂಬೆ ಹಿಂಡಿ. ಇದರ ನಂತರ ತಕ್ಷಣ ಅದನ್ನು ಕುಡಿಯಿರಿ. ಏಕೆಂದರೆ ಹೆಚ್ಚು ಹಾಲಿಗೆ ನಿಂಬೆರಸ ಹಿಂಡಿ ಹೆಚ್ಚು ಕಾಲ ಇರಿಸಿದರೆ ಅದು ಸಿಡಿಯುತ್ತದೆ. ಈ ಪರಿಹಾರವನ್ನು ಮೂರು ದಿನಗಳವರೆಗೆ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಳ್ಳಬೇಕು. ಎಮ್ಮೆಯ ಹಾಲು ಹುಳಿಯಾಗುವುದರಿಂದ ಬಿಸಿಮಾಡಿದ ತಂಪಾಗಿಸಿದ ಹಸುವಿನ ಹಾಲನ್ನು ಬಳಸಿ. ಇದಿರಿಂದ ಪೈಲ್ಸ್, ಮಲಬದ್ಧತೆ ಸಮಸ್ಯೆ ದೂರವಾಗುತ್ತದೆ.

ಸೌಂದರ್ಯ ಸೂತ್ರ

ಒಂದು ಕಪ್ ಹಾಲಿಗೆ 1 ಚಮಚ ಅಕ್ಕಿ ಹಿಟ್ಟು ಸೇರಿಸಿ 5 ನಿಮಿಷ ಕುದಿಸಿ, ಮಿಶ್ರಣ ತಣಿದ ನಂತರ 1 ಚಮಚ ಜೇನು ಸೇರಿಸಿ ಮುಖಕ್ಕೆ ಹಚ್ಚಿ ಮಸಾಜ್ ಮಾಡಿ. 15-20 ನಿಮಿಷ ಬಿಟ್ಟು ತಣ್ಣೀರಿನಿಂದ ಮುಖ ತೊಳೆಯಿರಿ. ಇದು ನಿಮ್ಮ ಮುಖವನ್ನು ಶುಚಿಗೊಳಿಸಿ ಹೊಳಪು ನೀಡುತ್ತದೆ. ಕಪ್ಪು ಕಲೆಗಳನ್ನು ಮತ್ತು ಮುಖದಲ್ಲಿನ ಟ್ಯಾನ್ ಅನ್ನು ತೆಗೆದುಹಾಕುತ್ತದೆ.

ದಿನ ಭವಿಷ್ಯ

ಮೇಷ ಕೆಲಸದ ಒತ್ತಡ ಹೆಚ್ಚಾದರೂ ಇಂದಿನ ಸಾಧನೆ ಸಂತೋಷವನ್ನು ತರುತ್ತದೆ. ಆರೋಗ್ಯದ ಬಗ್ಗೆ ಹೆಚ್ಚು ಗಮನಕೊಡಿ.

ವೃಷಭ ಹಳೆಯ ಸ್ನೇಹಿತರ ಭೇಟಿ ಸಂತೋಷ ತರುತ್ತದೆ. ಹಣಕಾಸು ಸ್ಥಿತಿಯಲ್ಲಿ ಸುಧಾರಣೆ ಕಾಣಬಹುದು. ಸಂಯಮ ಇರಲಿ.

ಮಿಥುನ ಹೊಸ ಅವಕಾಶಗಳನ್ನು ನಿರ್ಲಕ್ಷಿಸಬೇಡಿ. ನಿರ್ಣಯಗಳಲ್ಲಿ ಸೂಕ್ತ ಸಮಯ ಕಾಯಿರಿ. ಕುಟುಂಬ ಸದಸ್ಯರಿಂದ ಸಹಕಾರ ದೊರೆಯಬಹುದು.

ಕಟಕ ಆರೋಗ್ಯದ ಮೇಲೆ ಹೆಚ್ಚಿನ ಗಮನ ಅಗತ್ಯವಾಗಿ ಇರಲಿ. ಇಂದು ಮಿತವಾದ ನಿದ್ದೆ ಮತ್ತು ಆಹಾರ ಅವಶ್ಯಕ.

ಸಿಂಹ ನಾಯಕತ್ವ ಗುಣ ಇಂದು ಸ್ಪಷ್ಟವಾಗುತ್ತದೆ. ನಿಮ್ಮ ಶ್ರಮ ಫಲ ನೀಡುತ್ತದೆ. ಹೊಸ ವ್ಯಕ್ತಿಗಳೊಂದಿಗೆ ಪರಿಚಯ ಸಂಭವನೀಯ.

ಕನ್ಯಾ ಹಣಕಾಸು ನಿರ್ವಹಣೆಯಲ್ಲಿ ಎಚ್ಚರಿಕೆ ಇರಲಿ. ಇಂದು ಆಲೋಚನೆ ಮಾಡದೇ ನಿರ್ಧಾರ ಕೈಗೊಳ್ಳುವುದು ಹಾನಿಕಾರಕ.

ತುಲಾ ನಿಮ್ಮ ಶಕ್ತಿ ಮತ್ತು ಧೈರ್ಯವು ಇಂದಿನ ಗೆಲುವಿಗೆ ಮಾರ್ಗಸೂಚಿ ಆಗುತ್ತದೆ. ಶಾಂತ ಚಿತ್ತದಿಂದ ಕೆಲಸಮಾಡಿ.

ವೃಶ್ಚಿಕ ವ್ಯವಹಾರದಲ್ಲಿ ಯಶಸ್ಸು ನಿರೀಕ್ಷಿಸಲಾಗಿದೆ. ನಿಮ್ಮ ಶಕ್ತಿ ಮತ್ತು ಸ್ಥೈರ್ಯವು ಮುಂದಿನ ದಿನಗಳಿಗೆ ಸಹಾಯ ಮಾಡುತ್ತದೆ.

ಧನು ಪರಿಚಿತರ ಸಹಾಯದಿಂದ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ. ಧನ ವ್ಯವಹಾರದಲ್ಲಿ ಇನ್ನಷ್ಟು ಜಾಗ್ರತೆ ಇರಲಿ.

ಮಕರ ನಿಮ್ಮ ಪರಿಶ್ರಮದ ಫಲವನ್ನು ಇಂದು ಕಾಣಲು ಸಾಧ್ಯ. ಶಾಂತ ಮನಸ್ಸಿನಿಂದ ನಿರ್ಣಯಗಳನ್ನು ಕೈಗೊಳ್ಳಿ.

ಕುಂಭ ಹೊಸ ಸೃಜನಾತ್ಮಕ ಆಲೋಚನೆಗಳು ಬೆಳೆಯುತ್ತವೆ. ಸ್ನೇಹಿತರಿಂದ ಉತ್ತಮ ಸಹಕಾರ ಮತ್ತು ಪ್ರೋತ್ಸಾಹ ದೊರೆಯುವ ಸಂಭವವಿದೆ.

ಮೀನ ಮಹತ್ವದ ನಿರ್ಣಯಗಳನ್ನು ಮುಂದೆ ತೆಗೆದುಕೊಳ್ಳಿ. ಇಂದು ಮನಸ್ಸಿಗೆ ಶಾಂತಿ ನೀಡುವ ಕ್ರಿಯೆಗಳಲ್ಲಿ ತೊಡಗಿರಿ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಖ್ಯಾತ ಸಿನಿಮಾ ನಟ, ಸೂಪರ್ ಸ್ಟಾರ್ ರಜನಿಕಾಂತ್ ಹುಟ್ಟುಹಬ್ಬ
- ರಾಷ್ಟ್ರೀಯ ಯುವ ದಿನ
- 1946: ಖ್ಯಾತ ಡಿಟರ್ಜೆಂಟ್ ಟೈಡ್ ಮಾರುಕಟ್ಟೆಗೆ ಲಗ್ಗೆಯಿಟ್ಟದ್ದು
- 1980: ವಿಶ್ವದ ಖ್ಯಾತ ತಂತ್ರಜ್ಞಾನ ಕಂಪನಿ, ಆ್ಯಪಲ್ ಯುಎಸ್ ಸ್ಟಾಕ್ ಮಾರ್ಕೆಟ್‌ನಲ್ಲಿ ಲಿಸ್ಟ್ ಆಯಿತು.

ಚಿತ್ರಸ್ಫೂರ್ತಿ

ಇಂದು ಹಿಟ್ಲರ್ ಅನ್ನು ತುಂಬಾ ಜನ ವಿರೋಧಿಸುತ್ತಾರೆ. ಯಾರಾದರೂ ಜಾಸ್ತಿ ಸಿಟ್ಟಿನಿಂದ, ಶಿಸ್ತಾಗಿ ಇದ್ದರೆ ಅವರನ್ನು ಹಿಟ್ಲರ್ ಎಂದೂ ಕರೆಯುವುದುಂಟು. ಅದರೊಂದಿಗೆ, ಹಿಟ್ಲರ್ ಸಹ ಅತಿಹೆಚ್ಚು ಜನರ ಪ್ರೀತಿ, ವಿಶ್ವಸವನ್ನು ಗಳಿಸಿದ್ದ ಎಂಬುವುದಕ್ಕೆ ಎರಡು ಮಾತಿಲ್ಲ.

ಭಗವಂತನನ್ನೇ ದಾನವಾಗಿ ಪಡೆದ ಅತ್ರಿ ಮಹರ್ಷಿಗಳು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಮ್ಮೆ ಭಗವಂತ ವೈಕುಂಠದಲ್ಲಿರುವ ಎಲ್ಲ ಸಂಪತ್ತನ್ನು ಖಾಲಿ ಮಾಡಬೇಕೆಂದು ನಿರ್ಧರಿಸಿದನು. (ಮನುಷ್ಯನೂ ಹಾಗೆ ಮನಸ್ಸಿನ ವಿಷಯಗಳನ್ನು ಖಾಲಿ ಮಾಡುವುದರ ಜೊತೆಗೆ, ಗಳಿಸಿದ ಸಂಪತ್ತನ್ನು ಖಾಲಿ ಮಾಡಿದಾಗ ಕಲಿತ ಜ್ಞಾನ ಮಾತ್ರ ಉಳಿಯುವುದು) ಹಾಗೆ ದಾನ ಮಾಡಲು ಒಂದು ಯಾಗವನ್ನು ಕೈಗೊಂಡನು. ಈ ಯಜ್ಞದ ಮುಖ್ಯ ಉದ್ದೇಶ ತನ್ನಲ್ಲಿರುವ ಸಕಲ ಸಂಪತ್ತು-ವಸ್ತುಗಳನ್ನು ಖಾಲಿ ಮಾಡುವುದೇ ಆಗಿತ್ತು. ಯಾಗದ ದಿನವನ್ನು ಗೊತ್ತು ಮಾಡಿ, ಚಕ್ರವರ್ತಿಗಳು, ಋಷಿಮುನಿಗಳು ಮತ್ತು ಬ್ರಾಹ್ಮಣರಿಗೆ ವೈಕುಂಠಕ್ಕೆ ಬರಲು ಆಹ್ವಾನ ಕಳಿಸಿದನು.

ಯಾಗದ ದಿನ ಮಹರ್ಷಿಗಳಾದ ಭೃಗು- ವಿಶ್ವಾಮಿತ್ರ- ಭಾರದ್ವಾಜ- ವಸಿಷ್ಠರು - ಅಗಸ್ತ್ಯ ಕಶ್ಯಪ- ಜಮದಗ್ನಿ- ವಸಿಷ್ಠ- ಗೌತಮ ಮಹರ್ಷಿ, ಚಕ್ರವರ್ತಿಗಳು, ಬ್ರಾಹ್ಮಣರು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಯಜ್ಞಕ್ಕೆ ಬಂದರು. ಯಜ್ಞ ಮುಗಿಯಿತು ಪೂರ್ಣಾವತಿ ಕೊಟ್ಟು, ಎಲ್ಲರಿಗೂ ಭಗವಂತನೇ ಮುಂದೆ ನಿಂತು ಅತಿಥಿ ಸತ್ಕಾರ ಮಾಡಿ, ಸತ್ಕರಿಸಿ ಅತಿಥಿಗಳಿಗೆ ಹೇಳಿದ, ಈ ವೈಕುಂಠದಲ್ಲಿರುವ ಸಂಪತ್ತನ್ನು ಯಾರಿಗೆ ಏನೇನು ಬೇಕೋ ತೆಗೆದುಕೊಂಡು ಹೋಗಿ, ಇಲ್ಲಿ ಅಪ್ಸರೆಯರು ಆನೆ, ಕುದುರೆ, ಗೋವು, ರಥ, ಚಿನ್ನ, ವಜ್ರ -ವೈಡೂರ್ಯ, ಸಿಂಹಾಸನ, ರತ್ನ-ಧನ- ಕನಕ ಪಿತಾಂಬರ ಮುತ್ತು ರತ್ನಗಳಿಂದ ಕಟ್ಟಿದ ವೈಕುಂಠದ ಕಂಬ ತೊಲೆ ಬಾಗಿಲು ಎಲ್ಲವನ್ನು ಅತಿಥಿಗಳು ತೆಗೆದುಕೊಂಡು ಹೋದರು. ಕೊನೆಗೆ ದ್ವಾರಪಾಲಕರಾದ ಜಯ -ವಿಜಯರ ಕೈಲಿದ್ದ ಬೆಳ್ಳಿ ದಂಡವನ್ನು ತೆಗೆದುಕೊಂಡು ಹೋದರು. ವೈಕುಂಠ ಖಾಲಿ. ಖಾಲಿಯಾದ ವೈಕುಂಠದಲ್ಲಿ ಭಗವಂತ ಒಬ್ಬನೇ ಕುಳಿತಿದ್ದಾನೆ. ಯಜ್ಞ ಕಾರ್ಯಕ್ಕೆ ಬಂದವರೆಲ್ಲ ಸ್ಮೃತಿ ಪಟಲದಲ್ಲಿ ಬಂದರು. ಆದರೆ ಅತ್ರಿ ಮಹರ್ಷಿಗಳು ಬಂದಿಲ್ಲ ಎಂಬುದು ಗಮನಕ್ಕೆ ಬಂದು ಅವರನ್ನು ಕರೆ ತರಲು ಜಯ ವಿಜಯರನ್ನು ಕಳಿಸಿದನು.

ದ್ವಾರಪಾಲಕರು ಅತ್ರಿ ಮಹರ್ಷಿಗಳನ್ನು ಕರೆಯಲು ಬಂದಾಗ, ಅತ್ರಿಗಳು ಜಪ -ತಪ ನಿತ್ಯಾನುಷ್ಠಾನಗಳಲ್ಲಿ ತೊಡಗಿದ್ದು, ಇನ್ನೂ ಮುಗಿದಿರಲಿಲ್ಲ. ಆಹ್ನಿಕ ಮಾಡುವುದು ಬಾಕಿ ಇತ್ತು ಅವರು ಅನುಷ್ಠಾನಗಳನ್ನು ಮುಗಿಸಿ ಬರುತ್ತೇನೆ, ಎಂದು ಕೈ ಸನ್ನೆ ಮಾಡಿ ಹೇಳಿ, ನೀವು ಹೋಗಿ ಎಂದರು. ಮಹರ್ಷಿಗಳು ಎಲ್ಲ ಮುಗಿಸಿ ವೈಕುಂಠಕ್ಕೆ ಬಂದರು. ದ್ವಾರಪಾಲಕರು, 'ಮಹರ್ಷಿಗಳೇ ಈಗ ಬಂದಿರಲ್ಲ ಇಲ್ಲಿ ಏನೂ ಉಳಿದಿಲ್ಲ ಎಲ್ಲ ಖಾಲಿ' ಎಂದರು. ಅತ್ರಿಗಳು ಹೇಳಿದರು 'ನಾನು ಬಂದಿರುವ ವಿಷಯ ಭಗವಂತನಿಗೆ ಹೇಳು' ಎನ್ನುತ್ತಿದ್ದಂತೆ. ಸ್ವತಃ ಭಗವಂತನೇ ಎದ್ದು ಬಂದು ಅತ್ರಿ ಮಹರ್ಷಿಗಳನ್ನು ಒಳಗೆ ಕರೆದೊಯ್ದು ಹೇಳಿದ, 'ಮಹರ್ಷಿಗಳೇ ನಿಮ್ಮನ್ನು ಕೂರಿಸಲು ಒಂದು ಆಸನವೂ ಇಲ್ಲ, ನಿಮಗೆ ಏನು ಕೊಡಲಿ? ಮಹರ್ಷಿಗಳೇ' ಎಂದನು. 'ಏಕೆ ಹಾಗೆ ಹೇಳುವೆ ನಾರಾಯಣ, ಎಲ್ಲ ಖಾಲಿಯಾದರೆ ಆಗಲಿ ನನಗೆ ನೀನಿರುವೆಯಲ್ಲ' ಎಂದರು.

ಭಗವಂತನಿಗೆ ಅದೇ ಬೇಕಾಗಿತ್ತು ಅವರ ಮಾತನ್ನು ಒಪ್ಪಿ ಹೇಳಿದ, ನನ್ನ 'ಏನಃ ನಿಮಗೆ ಕೊಡಲು ಬೇರೆ ಏನೂ ಇಲ್ಲ. ನಾನು ನಿಮ್ಮ ನಿಷ್ಠೆ- ಅನುಷ್ಠಾನವನ್ನು ಮೆಚ್ಚಿದ್ದೇನೆ. ಆದ್ದರಿಂದ ನಾನೇ ಸ್ವತಃ ನನ್ನನ್ನೇ ನಿಮಗೆ ದಾನ ಕೊಡುವೆ' ಎಂದನು. ಭಗವಂತ ತನ್ನನ್ನು ತಾನೇ ಅತ್ರಿ ಮಹರ್ಷಿಗಳಿಗೆ ದಾನ ಕೊಟ್ಟನು. ಹೀಗೆ ಅತ್ರಿಗಳಿಗೆ ತಾನೇ ದಾನವಾಗಿ ಕೊಟ್ಟುಕೊಂಡ ಕಾರಣ 'ದತ್ತ' ಎಂಬ ಹೆಸರು ಬಂದಿತು. ಮುಂದೆ ಅತ್ರಿ- ಅನುಸೂಯಾ ದಂಪತಿಗಳ ಮಗನಾಗಿ ಭಗವಂತನೇ ದತ್ತಾತ್ರೇಯನಾಗಿ ಅವತರಿಸಿದನು.

ಎಂಥ ಅದ್ಭುತವಾದ ಕಥೆ. ಭಗವಂತನಲ್ಲಿ ಈ ರೀತಿಯ ಭಕ್ತಿ ಸಮರ್ಪಣಾ ಭಾವ ಇದ್ದಾಗ ಭಗವಂತನೇ ನಮ್ಮೊಂದಿಗೆ ಸದಾ ಇರುತ್ತಾನೆ ಎನ್ನುವುದಕ್ಕೆ ಈ ಕಥೆ ಅತ್ಯುತ್ತಮ ಉದಾಹರಣೆ.

ಎಲ್ಲಕ್ಕಿಂತ ಹೆಚ್ಚಾಗಿ ಪ್ರಪಂಚಿಕ ವಸ್ತುಗಳ ಮೋಹ ಇದ್ದಾಗ, ನಾವು ಅವುಗಳನ್ನು ಮಾತ್ರ ಜೀವನದಲ್ಲಿ ಪಡೆಯುತ್ತೇವೆ. ಅದಕ್ಕೆ ಮಿಗಿಲಾಗಿ ಭಗವಂತನಲ್ಲಿ ನಮ್ಮ ಭಕ್ತಿಯನ್ನು ಸಮರ್ಪಿಸಿಕೊಂಡಾಗ ಮುಕ್ತಿಯ ಮಾರ್ಗ ನಮ್ಮದಾಗುತ್ತದೆ.

ಪದಬಂಧ



ಎಡದಿಂದ ಬಲಕ್ಕೆ:
1. ಮಾಡುವ ಕೆಲಸದಿಂದ ಪಡೆದ ಬಿಡುವು (3)
4. ಅಂತ್ಯವೇನೋ ಎಂಬಂತಿದೆ ಕ್ಷಿತಿಜ (3)
6. ಹಲವರ ನಡುವೆ ಪಾಲು ಮಾಡುವಿಕೆ (3)
8. ಸಾಕಷ್ಟು ಧನವಿರುವಾತ (4)
9. ಪೂರ್ಣವಾಗು ಅಥವಾ ಈಡೇರು (4)
11. ಬಣ್ಣದೊಂದಿಗೆ ಬಳಸಿದ ಜೀರ್ಕೋಳವೆ (4)
13. ಬೆಲೆಬಾಳುವ ರತ್ನಗಳ ಸರ (4)
15. ಗಾಳಿ, ಬೆಳಕಿಗಾಗಿ ಮಾಡಿದ ಕಿಟಕಿ (4)
17. ರೋಗಿ ಹೋಗುವ ಆಸ್ಪತ್ರೆಗೆ ಮತ್ತೊಂದು ಹೆಸರು (4)
19. ಕಡಲಿಗೆ ಮತ್ತೊಂದು ಹೆಸರು (3)
21. ಪಣಕ್ಕಿಟ್ಟ ಕನ್ನಡಿ (3)
22. ಮಳೆ ತರುವ ಮೋಡ (3)

ಮೇಲಿನಿಂದ ಕೆಳಕ್ಕೆ:
2. ಸೀತೆಯನ್ನು ಅಪಹರಿಸಿದ ಲಂಕೆಯ ಅಧಿಪತಿ (3)
3. ಎಲೆ ಅಡಕೆಯ ಚೀಲವನ್ನು ಹೀಗೆನ್ನುವರು (2)
5. ತರುವಾಗ ಕಂಡ ಹೆಂಗಳೆಯರಿಗೆ ಪ್ರಿಯವಾದ ಮನೆ (3)
6. ಅಂತೂ ಇಂತೂ ಕಂಡಿತು ಮಜಲು (2)
7. ಹಾಲು, ಮೊಸರಿನ ಸಾರವತ್ತಾದ ಭಾಗ (2)
8. ದುರಾಸೆಗೆ ಮತ್ತೊಂದು ಹೆಸರು (3)
10. ಮಣಿಯೊಂದಿಗೆ ಬಂದಿರುವ ಸುಂದರಿ (3)
12. ಕಾವಿಬಟ್ಟೆಗೆ ಹೀಗೆನ್ನುವರು (3)
14. ಅಸ್ತವ್ಯಸ್ತವಾಗಿ ಬಂದಿರುವ ಛಾಯೆ (3)
15. ವಾದದ ಮಧ್ಯೆಯೇ ಇದೆ ಮೋಡ (3)
16. ಕಾಡು ತಿರುಗಿದರೆ ಹೊಸದು (2)
17. ಇನ್ನೊಂದು ಮೊಸರು (2)
18. ಸಾರ್ವಜನಿಕವಲ್ಲ, ಇದು ಸ್ವಂತದ್ದು (3)
20. ಎರಡಕ್ಷರದ ಮನುಷ್ಯ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 5. ಬನ 6. ದುಬಾರಿ 7. ನಭ 8. ಪಹರೆ 10. ತನಯ 14. ಜನವರಿ 15. ತರಗತಿ 16. ಕನಸು 18. ಹಾಸಿಗೆ 20. ದಾರ 21. ವತ್ಸರ 22. ಳೆಮ

ಮೇಲಿನಿಂದ ಕೆಳಕ್ಕೆ: 1. ದಿನಪ 2. ಕುದುರೆ 3. ದುರಿತ 4. ವಿನಯ 9. ಹಯವದನ 11. ನಗರವಾಸಿ 12. ಮಜಲು 13. ಅಂತಿಮ 16. ಕರಡಿ 17. ಸುವರ್ಣ 18. ಹಾರಕ 19. ಗೆಳೆಯ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಭೂಮಿಯ ಶ್ವಾಸಕೋಶ

ಪ್ರತಿವರ್ಷವೂ ಅರಣ್ಯ ದಿನವನ್ನು ಆಚರಿಸುತ್ತೇವೆ. ಪ್ರತಿಯೊಬ್ಬರಿಗೂ ಆಮ್ಲಜನಕ ಬೇಕು ಎನ್ನುವ ಸಣ್ಣ ಮಾಹಿತಿಯಂತೂ ಇದೆ. ಮನೆಗೊಂದು ಮರ ಊರಿಗೊಂದು ವನ ಎಂಬ ಘೋಷಣೆಯೂ ಇದೆ. ಆದರೆ, ಎಷ್ಟರ ಮಟ್ಟಿಗೆ ಜನ ಕಾಡುಗಳನ್ನು ಬೆಳೆಸುವಲ್ಲಿ, ಗಿಡವನ್ನು ಹಚ್ಚುವುದಕ್ಕಿಂತ ಅದನ್ನು ಪೋಷಿಸುವಲ್ಲಿ ನಿರತರಾಗಿದ್ದಾರೆ? ಮಲೆನಾಡಿನ ಎಷ್ಟೋ ಊರುಗಳು ಸುಂದರ ಸ್ವಚ್ಛಂದ ಶುದ್ಧಗಾಳಿಯನ್ನು ಹೊಂದಿದೆ. ಆದರೆ, ಬೇರೆ ಕಡೆಯ ನಗರ ಪ್ರದೇಶಗಳು? ಹೀಗೆ ಕಾಡುಗಳನು ಕಡೆಯುತ್ತಾ ಹೊದಂತೆ, ಉಸಿರಾಡಲು ಗಾಳಿಯಿಲ್ಲದೇ ನರಳಬೇಕಾಗುವ ಪರಿಸ್ಥಿತಿ ಉಂಟಾಗಬಹುದು. ಇದೆಲ್ಲ ಏಕೆ ಹೇಳತ್ತಿದ್ದೇವೆ ಎಂದರೆ, ನಮುಗೆಲ್ಲ ಅಮೆಜಾನ್ ಅಂದರೆ ಗೊತ್ತು, ಇ-ಕಾಮರ್ಸ್ ವೆಬ್‌ಸೈಟ್ ಅಮೆಜಾನ್ ಅಲ್ಲ! ಇದು ಬದಲಿಗೆ ಅಮೆಜಾನ್ ಕಾಡು. ವಿಶ್ವದ ಅತೀ ದಟ್ಟ ಅರಣ್ಯಗಳಲ್ಲೊಂದು. ತನ್ನ ಮಡಿಲಿನಲ್ಲಿ ಎಷ್ಟೋ ಗೊತ್ತಿರದ ಸಂಗತಿಯನ್ನು ಸರೆಗಿನಿಂದ ಮುಚ್ಚಿಕೊಂಡಿದೆ. ಬರೀ ಅಷ್ಟೇ ಅಲ್ಲ, ಇದು ವಿಶ್ವಕ್ಕೆ ಬೇಕಾಗಿರುವ ಆಮ್ಲಜನಕದಲ್ಲಿ ಶೇ.20ರಷ್ಟನ್ನು ಕೊಡುತ್ತದೆ. ದಕ್ಷಿಣ ಅಮೆರಿಕ, ಬ್ರೆಜಿಲ್, ಪೆರು ಹಾಗೂ ಕೊಲಂಬಿಯಾದಾದ್ಯಂತ ಹರಡಿಕೊಂಡಿರುವ ಇದು, ವಿಶ್ವದ ಹೆಚ್ಚುಕಡಿಮೆ ಶೇ.10ರಷ್ಟು ಗೊತ್ತಿರುವ ಪ್ರಜಾತಿಗಳನು ಒಳಗೊಂಡಿದೆ. ಹಾಗೇ ಅತಿಹೆಚ್ಚು ಕಾರ್ಬನ್ ಅನ್ನು ನುಂಗಿ ಭೂಮಿಗೆ ದೊಡ್ಡ ಸಹಾಯ ಮಾಡುತ್ತಿದೆ.

ಪುಸ್ತಕ ಲೋಕ

ತೇಜಸ್ವಿ ಕೆಲವು ಪ್ರಸಂಗಗಳು



ಎಚ್.ಎಸ್. ಸತ್ಯನಾರಾಯಣ ಅವರ ತೇಜಸ್ವಿ ಕುರಿತ ಬರಹಗಳ ಸಂಗ್ರಹವಾಗಿದೆ. ಪ್ರಕೃತಿಯೊಡನೆ ಸುಖ ದುಃಖಗಳ ಅವಿನಾಭಾವ ಸಂಬಂಧ ಹೊಂದಿದ್ದ ಅಪರೂಪದ ಲೇಖಕರಾದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆಯುವ, ಬದುಕುವ ಬಗೆಯನ್ನು ನಮಗೆಲ್ಲ ಕಲಿಸಿದವರು. ಅವರ ವ್ಯಕ್ತಿತ್ವವನ್ನು ಅನಾವರಣಗೊಳಿಸುವ ಈ ಕೃತಿಯಲ್ಲಿ ಲೇಖಕರ ಸ್ವಾನುಭವದ ಜೊತೆಜೊತೆಗೆ ಕೇಳಿದ, ಓದಿದ ಪುಟ್ಟ ಪುಟ್ಟ ಸಂಗತಿಗಳು ಜೊತೆಗೂಡಿ ಇಡಿಯಾಗಿ ತೇಜಸ್ವಿಯವರನ್ನು ಪರಿಚಯ ಮಾಡಿಕೊಡುತ್ತದೆ. ಈ ಬಿಡಿ ಬಿಡಿ ಬರಹಗಳನ್ನು ಎಲ್ಲಿಂದ ಬೇಕಾದರೂ ಪ್ರವೇಶಿಸಬಹುದು, ಎಲ್ಲಿ ಬೇಕಾದರೂ ನಿರ್ಗಮಿಸಬಹುದು. ತೇಜಸ್ವಿಯವರ ವಿಸ್ತಾರ ಬದುಕಿನ ಹಲವು ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವಲ್ಲಿ ಈ ಚಿಟ್ಟೆ ಕತೆಗಳು ಸಫಲವಾಗಿವೆ. ತೇಜಸ್ವಿಯವರ ಬದುಕು-ಬರಹಗಳ ಅಬ್ಬಿಗೆ ಇದೊಂದು ಪುಟ್ಟ ಹಾಯಿದೋಣಿಯಂತಹ ಪುಸ್ತಕ ತೇಜಸ್ವಿಯವರ ಸ್ವಭಾವವನ್ನು ಚೆನ್ನಾಗಿ ಅರಿತಿದ್ದ ಡಾ.ಎಚ್.ಎಸ್. ಸತ್ಯನಾರಾಯಣ ಅವರು ಯಾವುದೇ ಅತಿರೇಕದ ವರ್ಣನೆಗಿಳಿಯದೆ, ಒಂದು ಬಗೆಯ ನಿರ್ಲಿಪ್ತತೆಯನ್ನು ಕಾಯ್ದುಕೊಂಡು ತಮಗೆ ಕಾಣಿಸಿದ್ದನ್ನು ಓದುಗರಿಗೂ ತೋರಿಸುವ ಕೆಲಸ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಕಲಾಕೃತಿಯ ಭಾವನೆಗಳನ್ನು ವ್ಯಕ್ತಪಡಿಸುವ ಎಐ

ತಿಳಿಯೋಣ

• ಎಲ್.ಪಿ.ಕುಲಕರ್ಣಿ



ಇಂದು, ಕೃತಕ ಬುದ್ಧಿಮತ್ತೆ ಎಲ್ಲರಂಗದಲ್ಲೂ ಕರಾರುವಕ್ಕಾಗಿ ತನ್ನ ಚಾಕಚಕ್ಯತೆಯನ್ನು ತೋರಿಸುತ್ತಿರುವುದು ನಮಗೆ ಗೊತ್ತೇ ಇದೆ. ಇದು ಹೀಗೆ ಮುಂದುವರಿದರೆ, ಮನುಷ್ಯನ ಸೂಕ್ಷ್ಮ ಸ್ವ-ಆಲೋಚನೆ, ಭಾವನೆಗಳನ್ನು ತೋರ್ಪಡಿಸುವಿಕೆ ಮುಂತಾದ ಅಂಶಗಳಲ್ಲೂ ಸಾಮರ್ಥ್ಯ ಸಾಧಿಸಿದರೆ ಮುಗಿದೆ ಹೋಯಿತು. ತಾನೇ ಸಾಕಿದ ಗಿಣಿ ತನ್ನದೇ ಮೂಗು ಕಚ್ಚಿದಂತೆ, ಇಲ್ಲವೇ ಪ್ರೀತಿಯಿಂದ ಮಾತನಾಡಿದಂತೆ ಎಂಬ ಮಾತಿಗೆ ಇಂಬುಕೊಟ್ಟಂತಾಗುತ್ತದೆ.

ಸಂಶೋಧಕರು ಇತ್ತೀಚೆಗೆ ಹೊಸ ಎಐ(ಕೃತಕ ಬುದ್ಧಿಮತ್ತೆ) ಅಲ್ಗಾರಿದಮ್ ಅನ್ನು ಅಭಿವೃದ್ಧಿಪಡಿಸಿದ್ದಾರೆ, ಇದು ಕಲಾಕೃತಿಗಳಲ್ಲಿ ಭಾವನೆಗಳನ್ನು ಗುರುತಿಸುವ ಸಾಮರ್ಥ್ಯವನ್ನು ತೋರ್ಪಡಿಸುತ್ತದೆ, ಭಾವನಾತ್ಮಕ ಬುದ್ಧಿವಂತಿಕೆಯೊಂದಿಗೆ ಯಂತ್ರಗಳನ್ನು ರಚಿಸುವತ್ತ ಹೆಜ್ಜೆ ಹಾಕುತ್ತದೆ ಎನ್ನುತ್ತಿದ್ದಾರೆ ಅವರು.

ಸ್ಟ್ಯಾನ್‌ಫೋರ್ಡ್ ಇನ್ಸ್ಟಿಟ್ಯೂಟ್ ಫಾರ್ ಹ್ಯೂಮನ್ ಸೆಂಟರ್ಡ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಫ್ರಾನ್ಸ್ ಮತ್ತು ಸೌದಿ ಅರೇಬಿಯಾದಲ್ಲಿ ಸಂಶೋಧಕರು ಈ ಅಧ್ಯಯನವನ್ನು ನಡೆಸಿದ್ದಾರೆ. ಚಿತ್ರಗಳೊಳಗಿನ ವಸ್ತುಗಳನ್ನು ಗುರುತಿಸಲು ಮಾತ್ರವಲ್ಲದೆ ಆ ಚಿತ್ರಗಳು ಜನರಲ್ಲಿ ಭಾವನಾತ್ಮಕ ಪ್ರತಿಕ್ರಿಯೆಗಳನ್ನು ಹೇಗೆ ಉಂಟುಮಾಡುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕಂಪ್ಯೂಟರ್‌ಗಳಿಗೆ ಬೋಧನೆ ಮಾಡುವ ಪ್ರಕ್ರಿಯೆಯ ಮೇಲೆ ಕೇಂದ್ರೀಕರಿಸಿದೆ.

ಈ ತಂತ್ರಜ್ಞಾನವು ಪ್ರಸ್ತುತ ತಂತ್ರಜ್ಞಾನಗಳಿಗಿಂತ ಹೆಚ್ಚು ಆಳವಾಗಿ ಭಾವನೆಗಳನ್ನು ನೋಡುವ ಮತ್ತು ಅರ್ಥೈಸುವ ಭವಿಷ್ಯದ ವ್ಯವಸ್ಥೆಗಳಿಗೆ ಕಾರಣವಾಗಬಹುದು ಎಂಬುದು ತಂತ್ರಜ್ಞರ ಅಭಿಪ್ರಾಯ. ಕಲಾವಿದರು ವೀಕ್ಷಕರಲ್ಲಿ ನಿರ್ದಿಷ್ಟ ಭಾವನಾತ್ಮಕ ಪ್ರತಿಕ್ರಿಯೆಗಳನ್ನು ಹೊರಹೊಮ್ಮಿಸುವ ಗುರಿಯನ್ನು ಹೊಂದಿರುವ ಕಾರಣ ಸಂಶೋಧಕರು ತಮ್ಮ ಅಧ್ಯಯನಕ್ಕಾಗಿ ಕಲೆಯನ್ನು ಕೇಂದ್ರೀಕರಿಸಿದ್ದಾರೆ. ಈಗ ಅಭಿವೃದ್ಧಿಪಡಿಸಿದ ಈ ಹೊಸ ಅಲ್ಗಾರಿದಮ್(ಕ್ರಮಾವಳಿ) ಕಲಾಕೃತಿಗಳನ್ನು ವಿಸ್ಮಯ, ವಿನೋದ, ಭಯ ಮತ್ತು ದುಃಖ ಸೇರಿದಂತೆ ಎಂಟು ಭಾವನಾತ್ಮಕ ವರ್ಗಗಳಲ್ಲಿ ಒಂದಾಗಿ ವರ್ಗೀಕರಿಸಬಲ್ಲದು.

ಇದು ಒಂದೇ ಚಿತ್ರದೊಳಗೆ ವಿಭಿನ್ನ ಭಾವನೆಗಳನ್ನು ಗುರುತಿಸುವ ಮೂಲಕ ಚಿತ್ರಕಲೆಯ ಒಟ್ಟಾರೆ ಮನಸ್ಥಿತಿಯನ್ನು ಗುರುತಿಸುವುದನ್ನು ಮೀರಿದೆ. ಹೆಚ್ಚುವರಿಯಾಗಿ, ವರ್ಣಚಿತ್ರದ ವಿಷಯವನ್ನು ನಿಖರವಾಗಿ ವಿವರಿಸುವ ಮತ್ತು ಭಾವನಾತ್ಮಕ ಓದುವಿಕೆಯನ್ನು ಸಮರ್ಥಿಸುವ ಲಿಖಿತ ಶೀರ್ಷಿಕೆಗಳನ್ನು ಈ ಎಐ ರಚಿಸುತ್ತದೆ.

ಎಐ ಗೆ ತರಬೇತಿ ನೀಡಲು, ಸಂಶೋಧಕರು ಆರ್ಟೆಮಿಸ್ ಎಂಬ ಹೊಸ ಡೇಟಾಸೆಟ್ ಅನ್ನು ರಚಿಸಿದ್ದಾರೆ. ಇದರಲ್ಲಿ ಆನ್ಲೈನ್‌ನಲ್ಲಿ ಕಂಡುಬರುವ 81,000 ವರ್ಣಚಿತ್ರಗಳು ಮತ್ತು 6,500 ಕ್ಕೂ ಹೆಚ್ಚು ಭಾಗವಹಿಸುವವರಿಂದ 4,40,000 ಭಾವನಾತ್ಮಕ ಪ್ರತಿಕ್ರಿಯೆಗಳು ಸೇರಿವೆ. ಈ ಪ್ರತಿಕ್ರಿಯೆಗಳು ಕಲಾಕೃತಿಗಳನ್ನು ವೀಕ್ಷಕರಿಗೆ ಹೇಗೆ ಅನಿಸುತ್ತದೆ ಎಂಬುದನ್ನು ವಿವರಿಸುತ್ತದೆ ಮತ್ತು ಅವರ ಭಾವನಾತ್ಮಕ ಆಯ್ಕೆಗಳಿಗೆ ವಿವರಣೆಗಳನ್ನು ಒಳಗೊಂಡಿರುತ್ತದೆ. ಎಐ, ಈ ಡೇಟಾವನ್ನು ನ್ಯೂರಲ್ ಸ್ಪೀಕರ್‌ಗಳಿಗೆ(ನರಭಾಷಿಕರು) ತರಬೇತಿ ನೀಡಲು ಬಳಸುತ್ತದೆ - ದೃಶ್ಯ ಕಲೆಗೆ ಲಿಖಿತ ಪ್ರತಿಕ್ರಿಯೆಗಳನ್ನು ಉತ್ಪಾದಿಸುವ ನರಗಳ ಜಾಲಗಳು ಇಲ್ಲಿ ಚುರುಕಾಗಿ ಕಾರ್ಯನಿರ್ವಹಿಸುತ್ತವೆ. ಈ ನ್ಯೂರಲ್ ಸ್ಪೀಕರುಗಳು ಚಿತ್ರಕಲೆ ಪ್ರಚೋದಿಸುವ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ ಮತ್ತು ಆ ಭಾವನೆಗಳ ಹಿಂದಿನ ತಾರ್ಕಿಕತೆಯನ್ನು ಸಹಜ ಭಾಷೆಯಲ್ಲಿ ವಿವರಿಸುತ್ತಾರೆ.

ಈ ತಂತ್ರಜ್ಞಾನವು ಕಲಾವಿದರಿಗೆ ಒಂದು ಸಾಧನವಾಗಿ ಕಾರ್ಯನಿರ್ವಹಿಸುತ್ತದೆ ಎಂಬುದು ಸಂಶೋಧಕರ ಅನಿಸಿಕೆ. ಇದು ಕಲಾವಿದನ ಕೃತಿಗಳನ್ನು ಮೌಲ್ಯಮಾಪನ ಮಾಡಲು ಮತ್ತು ಅವರ ಸೃಜನಶೀಲ ಪ್ರಕ್ರಿಯೆಯನ್ನು ಪರಿಷ್ಕರಿಸಲು ಸಹಾಯ ಮಾಡುತ್ತದೆ. ಕಲೆಯ ಹೊರತಾಗಿ, ಯೋಜನೆಯು ವಿಶಾಲವಾದ ಪರಿಣಾಮಗಳನ್ನು ಇಟ್ಟುಕೊಂಡಿದೆ, ಯಂತ್ರಗಳು ಭಾವನೆಗಳನ್ನು ಹೆಚ್ಚು ಆಳವಾಗಿ ಅರ್ಥಮಾಡಿಕೊಳ್ಳಲು ಮತ್ತು ಭಾವನಾತ್ಮಕ ಸೂಕ್ಷ್ಮತೆಯೊಂದಿಗೆ ಸಂವಹನ ನಡೆಸಲು ಅನುವು ಮಾಡಿಕೊಡುವ ಮೂಲಕ ಮಾನವ ಮನೋವಿಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯ ನಡುವಿನ ಅಂತರವನ್ನು ಸಂಭಾವ್ಯವಾಗಿ ಕಡಿಮೆ ಮಾಡುತ್ತದೆ.

ಜೆನ್ ಝೀಗಳ ಕಿಕ್ಕು ಓವರ್ ಸೈಜ್ ಡ್ರೆಸ್ಸು!

ಅಶ್ವಿನಿ ಸುನಿಲ್

ಅದೊಂದು ಕಾಲವಿತ್ತು. ಯಾವುದಾದರೂ ವಿಶೇಷ ಸಂದರ್ಭವಿದ್ದಾಗಲೋ, ದೀಪಾವಳಿ-ದಸರಾಗಳಂತಹ ಹಬ್ಬಗಳಿದ್ದಾಗಲೋ ಅಷ್ಟೇ ಹೊಸ ಬಟ್ಟೆ ಖರೀದಿಸುತ್ತಿದ್ದದ್ದು. ಬಟ್ಟೆ ಖರೀದಿಸಲು ಹೋಗುವಾಗ ಮಕ್ಕಳನ್ನು ಕರೆದುಕೊಂಡು ಹೋಗುವುದು ಅಪರೂಪವೇ ಆಗಿತ್ತು. ಬಟ್ಟೆ ಅಂಗಡಿಗೆ ಬಂದಿರುವ ಮಕ್ಕಳನ್ನು ತೋರಿಸಿ ಇವಳಿಗಿಂತ ಒಂದು ಸೈಜ್ ಚಿಕ್ಕದು ಕೊಡಿ ಎಂದೋ, ಅವನಿಗಿಂತ ಒಂದು ಸೈಜ್ ದೊಡ್ಡದು ಕೊಡಿ ಎಂದೋ ಹೇಳಿ, ಆ ಮಕ್ಕಳಿಗೆ ಬಟ್ಟೆಯನ್ನು ಹಿಡಿದು ನೋಡಿ ಮನೆಯಲ್ಲಿರುವ ಮಕ್ಕಳಿಗೆ ಬಟ್ಟೆ ತರುತ್ತಿದ್ದರು.

ಇನ್ನು ಬಟ್ಟೆ ಕೊಳ್ಳಲು ಮಕ್ಕಳು ಹೋದರೂ ಅವರದೇ ಅಳತೆಯ ಬಟ್ಟೆ ತೆಗೆದುಕೊಳ್ಳುತ್ತಿದ್ದದ್ದು ಕಡಿಮೆಯೇ. ಒಂದು ಸೈಜ್ ದೊಡ್ಡದೇ ಕೊಡಿ ಮುಂದಿನ ವರ್ಷಕ್ಕೂ ಆಗುತ್ತದೆ ಎನ್ನುವುದು ಎಲ್ಲ ಅಮ್ಮಂದಿರ ಮಂತ್ರವಾಗಿತ್ತು . ಅಣ್ಣ ಅಕ್ಕಂದಿರು ಇದ್ದರೆ ಅವರ ಬಟ್ಟೆ ಚಿಕ್ಕವರಿಗೆ ವರ್ಗಾವಣೆಯಾಗುತ್ತಿತ್ತು. ಫಿಟ್ಟಿಂಗ್ ಸರಿರ ಬೇಕು ಎನ್ನುವುದು ತಲೆಕೆಡಿಸಿಕೊಳ್ಳುವ ವಿಷಯವೇ ಆಗಿರಲಿಲ್ಲ. ದೊಡ್ಡದಾದರೆ ಒಂದು ಹೊಲಿಗೆ ಹಾಕಿದರೆ ಮುಗಿಯಿತು.

ಕಾಲ ಬದಲಾದಂತೆ ಅಮ್ಮಂದಿರು ಬದಲಾದರು. ಅವರು ಬದಲಾಗದಿದ್ದರೂ ಮಕ್ಕಳು ಬಿಡಬೇಕೆಲ್ಲ. ತಮ್ಮ ಅಳತೆಗೆ ಸರಿಯಾದ ಬಟ್ಟೆಯನ್ನು ಆಯ್ಕೆ ಮಾಡುವುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ತಮ್ಮ ಸ್ನೇಹಿತರನ್ನು ನೋಡಿ, ಇಂಟರ್ನೆಟ್‌ಗಳಲ್ಲಿ ನೋಡಿ ಫ್ಯಾಷನ್ ಏನೆನ್ನುವುದು ತಿಳಿದುಕೊಂಡಿದ್ದ ಮಕ್ಕಳು ಅಮ್ಮ ಒಂದು ಒಂದು ಸೈಜ್ ದೊಡ್ಡದು ತೆಗೆದುಕೊಳ್ಳೋಣ ಎಂದರೆ ಕೇಳಬೇಕಲ್ಲ. ಮಕ್ಕಳು ಸ್ಕಿನ್ ಫಿಟ್ ಬಟ್ಟೆಯನ್ನು ಕೊಳ್ಳುವುದು, ಅಮ್ಮಂದಿರು, ಅಜ್ಜಿಯಂದಿರು ಗೊಣಗುವುದು ನಡೆದೇ ಇತ್ತು.

ಕಾಲದ ಜೊತೆಗೆ ಫ್ಯಾಶನ್‌ಗಳು ಕೂಡ ಬದಲಾಗುತ್ತಲೇ ಹೋಗುತ್ತದೆ. ಕೆಲವೊಮ್ಮೆ ಹಳೆಯ ಫ್ಯಾಷನ್ ಮತ್ತೆ ಬರುವುದುಂಟು. ಈಗಿನ ಹದಿಹರೆಯದ ಮಕ್ಕಳ, ಓವರ್ ಸೈಜ್ ಬಟ್ಟೆ ನೋಡಿದಾಗ ನಾವು ನಮ್ಮ ಅಕ್ಕಂದಿರ ಅಣ್ಣಂದಿರ ದೊಗಲೆ ಬಟ್ಟೆ, ಧರಿಸುತ್ತಿದ್ದ ನೆನಪು ಆಗುವುದಿಲ್ಲವೇ? ಮನೆಯಲ್ಲೇ ಆಗಲಿ, ಶಾಪಿಂಗ್ ಮಾಲ್‌ನಲ್ಲೇ ಆಗಲಿ, ಪಾರ್ಟಿಗೆ ಹೋಗಲಿ ಈ ದೊಗಲೆ ಬಟ್ಟೆಯಲ್ಲಿ ಸಖತ್ ಕ್ಯೂಟ್ ಆಗಿ ಕಾಣುತ್ತಾರೆ ಈ ಜೆನ್- ಝೀ ಮಕ್ಕಳು. ಹೌದು, ದೊಗಲೆ ಶರ್ಟ್, ಬ್ಯಾಗೀ ಜೀನ್ಸ್, ಓವರ್ ಸೈಜ್ ಹೂಡಿ, ಓವರ್ ಸೈಜ್ ಕೋಟ್ ಈಗಿನ ಟ್ರೆಂಡ್. ದೊಗಲೆ ಬಟ್ಟೆ ಧರಿಸುವ ಯುವ ಜನತೆಯನೊಮ್ಮೆ ಕೇಳಿ. ಅದು ಕೇವಲ ಫ್ಯಾಶನ್ ಅಷ್ಟೇ ಅಲ್ಲ, ಕಂಫರ್ಟೆಬಲ್ ಕೂಡ, ಜೊತೆಗೆ ಕಾನ್ಫಿಡೆನ್ಸ್ ಹೆಚ್ಚಿಸುತ್ತದೆ ಎನ್ನುತ್ತಾರೆ.

ಅದಕ್ಕೆ ಅಲ್ಲವೇ ಹೇಳುವುದು ಓಲ್ಡ್ ಇಸ್ ಗೋಲ್ಡ್ ಅಂತ.

ಅಹಮಿನ ಕುದುರೆಯನೇರದಿರು!

ಶಂಕರಾನಂದ ಹೆಬ್ಬಾಳ

ಅಹಂ ಎಂಬುದು ಲಗಾಮಿಲ್ಲದ ಕುದುರೆಯಂತೆ. ಮನುಷ್ಯನ ಜೀವನವನ್ನು ಅವಸಾನದ ಅಂಚಿನತ್ತ ಒಯ್ಯುತ್ತದೆ. ಎಲ್ಲರೂ ನನ್ನಡಿಯಾಳಾಗಿ ಬಾಳಬೇಕೆಂಬ ಉಮೇದುವಿನಲ್ಲಿ ಮೂರ್ಖತನದಿಂದ ಸಾಗುತ್ತಿದ್ದಾನೆ. ಸ್ವಭಾವದಿಂದ ಹಾಗೂ ಹಣದ ಮದವೇರಿದಾಗ ಗರ್ವ ಸಹಜವಾಗಿ ಮೈಗೂಡುತ್ತದೆ. ಹೇಗೆ ಕ್ಯಾನ್ಸರೆಂಬುದು ಮೊದಲು ಚಿಕ್ಕ ಗಡ್ಡೆಯಂತೆ ಕಾಣಿಸಿಕೊಂಡು ನಂತರ ಇಡಿ ಶರೀರವನ್ನೇ ಹಾಳು ಮಾಡುತ್ತದೆಯೋ ಅದರಂತೆ ಗರ್ವವೂ ಸ್ವಲ್ಪದರಲ್ಲಿಯೆ ತಲೆ ಕೆಡಿಸಿಕೊಳ್ಳದಿದ್ದರೆ ಮುಂದೆ ಹೆಮ್ಮರವಾಗುತ್ತದೆ.

ಅಹಮಿನಲ್ಲಿರುವವರು ಸದಾ ಅತೃಪ್ತರಾಗಿದ್ದು ಕೋಪದ ಬೇಗುದಿಯಲ್ಲಿ ಬೇಯುತ್ತಿರುತ್ತಾರೆ. ನನ್ನ ಮೂಗಿನ ನೇರಕ್ಕೆ ಎಲ್ಲರೂ ನಡೆಯಬೇಕೆಂಬ ಹುಚ್ಚು ಭ್ರಮೆಗೆ ಒಳಗಾಗಿ ಎಲ್ಲರ ಮೇಲೂ ಹಿಡಿತ ಸಾಧಿಸಿದ್ದೇನೆಂದು ಬೀಗುತ್ತಾರೆ. ಎಷ್ಟು ದಿನ ಹೀಗೆ ಮಾಡಲು ಸಾಧ್ಯ? ಇದಕ್ಕೆ ಅಂತ 'ಮಾಡಿದ್ದುಣ್ಣೋ ಮಾರಾಯ' ಎಂಬ ಗಾದೆಯೆ ಇಲ್ಲವೇ? 'ವಿನಾಶ ಕಾಲಕ್ಕೆ ವಿಪರೀತ ಬುದ್ಧಿ' ಎನ್ನುವಂತೆ ಮುಂದೊಂದು ದಿನ ತಮ್ಮ ಸಾವಿನ ಗುಂಡಿಯನ್ನು ತಾವೆ ತೋಡಿಕೊಳ್ಳುವ ವಿಚಿತ್ರ ಬುದ್ಧಿ ಇವರದು. ಭಸ್ಮಾಸುರನೆಂಬ ಭಕ್ತನೊಬ್ಬ ಈಶ್ವರನ ಕುರಿತು ತಪವನ್ನಾಚರಿಸಿದ ಹಾಗೂ ಮಹಾದೇವನಿಂದ ವರವನ್ನು ಪಡೆದುಕೊಂಡ ಅದು ಏನೆಂದರೆ ನಾನು ಯಾರ ತಲೆಮೇಲೆ ಕೈಯಿಡುವೆನು ಅವರು ಒಂದು ಕ್ಷಣದಲ್ಲಿ ಭಸ್ಮವಾಗಬೇಕು ದೇವರು ತಥಾಸ್ತು ಎಂದ. ಆತ ಗರ್ವದಿಂದ ಕೂಡಲೆ ಈಶ್ವರನನ್ನೇ ಬೆನ್ನಟ್ಟಿ ಬಂದ. ಎಂತಹ ಅಚಾತುರ್ಯವಾಯಿತೆಂದು ವಿಷ್ಣುವಿನಲ್ಲಿ ಈಶ್ವರ ಗೋಳಿಟ್ಟಾಗ, ವಿಷ್ಣು ಹೆಣ್ಣಿನ ರೂಪಧರಿಸಿ ಅವನನ್ನು ತನ್ನ ಕಡೆಗೆ ತಿರುಗಿಸಿ ತನ್ನ ಕೈಯನ್ನು ತಾನೆ ಶಿರದ ಮೇಲೆಟ್ಟುಕೊಂಡು ಸಾವನ್ನಪ್ಪುವಂತೆ ಮಾಡಿದ. ಹೀಗೆ ತನ್ನ ಗರ್ವ ತನ್ನನ್ನೇ ಅವಸಾನದ ಅಂಚಿನತ್ತ ತಳ್ಳಿತದೆಯೆ ಹೊರತು ಬೇರಾರು ಅಲ್ಲ.

ಭರತನಂತ ರಾಜನಿಗೂ ಈ ಗರ್ವ ಬಿಡಲಿಲ್ಲ ಯುದ್ಧದಲ್ಲಿ ತಮ್ಮ ಬಾಹುಬಲಿಯನ್ನು ಗೆದ್ದೆನೆಂಬ ಅಹಮಿನಲಿ, ಭರತ ಚಕ್ರವರ್ತಿ ವೃಷಭಾಚಲದಲ್ಲಿ ಪ್ರಶಸ್ತಿ ಶಾಸನ ಬರೆಸಲು ಹೋದಾಗ, ಅದಾಗಲೇ ಅಲ್ಲಿ ಪ್ರಶಸ್ತಿ ಶಾಸನಗಳು ತುಂಬಿ ಹೋಗಿದ್ದು. ಎಲ್ಲಿ ಬರೆಸಲಿ ಎಂದು ಜಾಗವೇ ಇಲ್ಲದಾಗ, ಆತನ ಎಲ್ಲ ಗರ್ವವು ಇಳಿದೆ ಹೋಯಿತು. ಹೀಗೆ ಗರ್ವದಿಂದ ಬದುಕುವುದು ಎಷ್ಟು ದಿನ? ಇನ್ನೊಬ್ಬರ ನೋವನ್ನರಿತು ಬಾಳುವಲ್ಲಿ ಸಿಗುವ ಸುಖ ಬಹುಶಃ ಸ್ವರ್ಗದಲ್ಲೂ ಸಿಗಲಿಕ್ಕಿಲ್ಲ. ಹಾಗಾಗಿ ನಾವು ನೀವು ಅಹಮಿನ ಕುದುರೆಯ ಏರದೆ ನಿರಹಂಕಾರಿಗಳಾಗಿ ಬದುಕೋಣ.

ಸಮಾಚಾರ ಸಣ್ಣದಲ್ಲ

ಚೆಸ್: ಇಂದು ಕೊನೆಯ ಪಂದ್ಯ

ಸಿಂಗಪುರ: ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಚಾಲೆಂಜರ್ ಡಿ.ಗುಕೇಶ್ ಮತ್ತು ಹಾಲಿ ಚಾಂಪಿಯನ್ ಚೀನಾದ ಡಿಂಗ್ ಲಿರೆನ್ ನಡುವಣ 13ನೇ ಪಂದ್ಯವೂ ಡ್ರಾದಲ್ಲಿ ಅಂತ್ಯಗೊಂಡಿದೆ. ಈ ಚಾಂಪಿಯನ್‌ಶಿಪ್‌ನ ಕೊನೆಯ ಪಂದ್ಯ ಗುರುವಾರ ನಡೆಯಲಿದೆ. ಈ ಪಂದ್ಯದಲ್ಲಿ ಯಾರು ಗೆಲ್ಲಲಿದ್ದಾರೆ ಎಂಬ ಕುತೂಹಲ ಗರಿಗೆದರಿದೆ. 7.5 ಅಂಕವನ್ನು ಮೊದಲು ತಲುಪಿದವರು ವಿಶ್ವ ಚಾಂಪಿಯನ್ ಆಗಲಿದ್ದಾರೆ. ಒಂದು ವೇಳೆ 14 ಪಂದ್ಯಗಳ ನಂತ ರವೂ ಸ್ಕೋರ್ ಸಮಬಲಗೊಂಡರೆ ಟೈಬ್ರೇಕ್ ಮೂಲಕ ವಿಜೇತರನ್ನು ತೀರ್ಮಾನ ಮಾಡಬಹುದು.

ವಿಜಯ್ ಟ್ರೋಫಿ: ಪಾಂಡೆಗೆ ಕೊಕ್

ಬೆಂಗಳೂರು: ವಿಜಯ್ ಹಜಾರೆ ಏಕದಿನ ಕ್ರಿಕೆಟ್ ಟ್ರೋಫಿ ಟೂರ್ನಿಗೆ ಆಡಲಿರುವ ಕರ್ನಾಟಕ

ಸಂಭವನೀಯರ ತಂಡವನ್ನು ಆಯ್ಕೆ ಮಾಡಲಾಗಿದ್ದು, ಆದರೆ, ಈ ತಂಡದಲ್ಲಿ ಅನುಭವಿ ಬ್ಯಾಟರ್ ಮನೀಷ್ ಪಾಂಡೆ ಹೆಸರನ್ನು ಕೈಬಿಡಲಾಗಿದೆ. ಸಂಭವನೀಯರ ತಂಡದಲ್ಲಿ ಹೊಸ ಪ್ರತಿಭೆಗಳಿಗೆ ಮಣೆ ಹಾಕಲಾಗಿದೆ. ಶಿಖರ್ ಶೆಟ್ಟಿ, ಹರ್ಷಿಲ್ ಧಮಾನಿ, ಕೃತಿಕ್ ಕೃಷ್ಣ ಅವರಿಗೆ ಅವಕಾಶ ನೀಡಲಾಗಿದೆ. ಕಳೆದ ಒಂದೂವರೆ ದಶಕದಿಂದ ತಂಡದಲ್ಲಿದ್ದು, ಆಕ್ರಮಣಕಾರಿ ಬ್ಯಾಟಿಂಗ್ ಮೂಲಕ ಗಮನ ಸೆಳೆದ್ದವರು ಪಾಂಡೆ. 2008ರಲ್ಲಿ ಕರ್ನಾಟಕ ತಂಡಕ್ಕೆ ರಣಜಿ ಟ್ರೋಫಿಯಲ್ಲಿ ಪದಾರ್ಪಣೆ ಮಾಡಿದ್ದ ಪಾಂಡೆ ಭಾರತ ತಂಡವನ್ನೂ ಪ್ರತಿನಿಧಿಸಿದ್ದಾರೆ.

ಭಾರತ-ಆಸ್ಟ್ರೇಲಿಯಾ ಏಕದಿನ ಸರಣಿ | 0-3ರಲ್ಲಿ ಆಸ್ಟ್ರೇಲಿಯಾಗೆ ಸರಣಿ ವಶ | ಸ್ಮೃತಿ ಶತಕ ಗಳಿಸಿದರೂ ಗೆಲ್ಲುವ ದಡ ಮುಟ್ಟದ ಭಾರತ | ಭಾರತ ತಂಡಕ್ಕೆ 83ರನ್‌ಗಳ ಹೀನಾಯ ಸೋಲು

ಕ್ಲೀನ್‌ಸ್ವೀಪ್ ಆದ ಭಾರತದ ಕ್ವೀನ್ಸ್!

ಪರ್ತ್: ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ನಡೆಯುತ್ತಿರುವ ಏಕದಿನ ಸರಣಿಯ ಅಂತಿಮ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಭಾರತವನ್ನು 83 ರನ್‌ಗಳಿಂದ ಸೋಲಿಸಿ, 0-3 ಯಿಂದ ಸರಣಿ ವಶ ಮಾಡಿಕೊಂಡಿದು. ಇದೆಲ್ಲದರ ನಡುವೆ ಈ ಪಂದ್ಯದಲ್ಲಿ ಸ್ಮೃತಿ ಮಂದಾನ ಶತಕ ಸಿಡಿಸಿದ್ದರೂ ಉಪಯೋಗಕ್ಕೆ ಬರಲಿಲ್ಲ.

ಆಸ್ಟ್ರೇಲಿಯಾದ ವಾಕಾ ಕ್ರೀಡಾಂಗಣದಲ್ಲಿ ಉತ್ತಮ ಆರಂಭವನ್ನು ಪಡೆದಿದ್ದ ಭಾರತ ಆಸ್ಟ್ರೇಲಿಯಾ 78 ರನ್ ತಲುಪುವಷ್ಟರಲ್ಲೇ 4 ವಿಕೆಟ್‌ಗಳನ್ನು ತಗೆದಿತ್ತು. ಆದರೆ ಮಧ್ಯಮ ಕ್ರಮಾಂಕದ ಆಟಗಾರ್ತಿ ಅನ್ನಾಬೆಲ್ ಸದರ್ ಲ್ಯಾಂಡ್ ಅವರು 95 ಎಸೆತಗಳಲ್ಲಿ 110 ರನ್ ಬಾರಿಸಿ ಆಸ್ಟ್ರೇಲಿಯಾ ತಂಡವನ್ನು ಉತ್ತಮ ಸ್ಥಿತಿಗೆ ತಲುಪಿಸಿದರು. ಅವರಿಗೆ ಅನುಭವಿ ಆ್ಯಶ್ಲೆ ಗಾರ್ಡರ್‌ನ (50) ಮತ್ತು ನಾಯಕಿ ತಾಹಿಲಾ ಮೆಕ್‌ಗ್ರಾತ್ (ಔಟಾಗದೇ 56) ಅವರಿಂದ ಉತ್ತಮ ಬೆಂಬಲ ದೊರೆಯಿತು. ಹೀಗಾಗಿ ತಂಡ 50 ಓವರುಗಳಲ್ಲಿ 8 ವಿಕೆಟ್‌ಗೆ 298 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಇದಕ್ಕೆ ಉತ್ತರವಾಗಿ ಭಾರತ 45.1 ಓವರುಗಳಲ್ಲಿ 215 ರನ್‌ಗಳಿಗೆ ಆಲೌಟ್ ಆಯಿತು.

109 ಎಸೆತಗಳಲ್ಲಿ 105 ರನ್ ಗಳಿಸಿದ್ದ ಎಡಗೈ ಆಟಗಾರ್ತಿ ಮಂದಾನ ಪಂದ್ಯದಲ್ಲಿ ಸೊಗಸಾದ ಆಟವಾಡಿದರು. ಅವರು ಕ್ರೀಸಿನಲ್ಲಿರುವವರೆಗೆ ಭಾರತದ ಅವಕಾಶ ಜೀವಂತವಾಗಿತ್ತು. ಆದರೆ ನಾಲ್ಕನೆಯವರಾಗಿ ನಿರ್ಗಮಿಸಿದ ಮೇಲೆ ಸಮಾಧಾನಕರ ಗೆಲುವು ಕಾಣುವ ಆಸೆ ಕರಗಿಹೋಯಿತು.

ಎರಡನೇ ವಿಕೆಟ್‌ಗೆ ಮಂದಾನ ಮತ್ತು ಹರ್ಲೀನ್ ಡಿಯೋಲ್ (39, 64 ಎಸೆತ) ನಡುವಣ 118 ರನ್ ಜೊತೆಯಾಟವನ್ನು ಅಲನಾ ಕಿಂಗ್ ಮುರಿದ ನಂತರ ಭಾರತದ ರನ್ ಚೇಸ್ ಹಳಿತಪ್ಪಿತು. ನಾಯಕಿ ಹರ್ಮನ್ ಪ್ರೀತ್ (12) ಮತ್ತು ಜೆಮಿಮಾ ರೋಡ್ರಿಗಸ್ (16) ಮತ್ತೆ ನಿರಾಸೆ ಮೂಡಿಸಿದರು.

ಸ್ಪಿನ್ ಬೌಲಿಂಗ್ ಆಲ್ರೌಂಡರ್ ಆ್ಯಶ್ಲೆ ಗಾರ್ಡನರ್ 30 ರನ್ನಿಗೆ 5 ವಿಕೆಟ್ ಪಡೆದು ಪ್ರವಾಸಿ ತಂಡದ ಪತನ ತ್ವರಿತಗೊಳಿಸಿದರು.

ಇದಕ್ಕೆ ಮೊದಲು, ಐದನೇ ಪಂದ್ಯ ಆಡುತ್ತಿರುವ ವೇಗದ ಬೌಲರ್ ಅರುಂಧತಿ ರೆಡ್ಡಿ (26ಕ್ಕೆ4) ಆಸ್ಟ್ರೇಲಿಯಾಕ್ಕೆ ಆರಂಭದಲ್ಲಿ ಪಟ್ಟು ನೀಡಿದರು. ಆದರೆ ಅನ್ನಾಬೆಲ್ ಮತ್ತು ಕೆಳಮಧ್ಯಮ ಕ್ರಮಾಂಕದ ಆಟಗಾರ್ತಿಯರು ತಂಡವನ್ನು ಕಾಪಾಡಿದರು.

ಹೀಗಾಗಿ, ಪ್ರವಾಸಿ ತಂಡ ಭಾರತವು ಆಸ್ಟ್ರೇಲಿಯಾದ ವಿರುದ್ಧ 83ರನ್ ಗಳಿಂದ ಸೋತು, ಸರಣಿಯನ್ನೂ ಸೋತು ತೀವ್ರ ಮುಖಭಂಗವನ್ನು ಅನುಭವಿಸುತ್ತಿದೆ. ಇದರ ರೀತಿಯಲ್ಲೇ ಪುರುಷರ ಪಂದ್ಯಗಳಲ್ಲೂ ಭಾರತ ತಂಡಕ್ಕೆ ಹೀನಾಯ ಸೋಲಾಗುತ್ತಿದ್ದು. ಮುಂದೆ ಏನಾಗುತ್ತದೆ ಎಂದು ಕಾದು ನೋಡಬೇಕಿದೆ.

ಸ್ಕೋರುಗಳು

ಆಸ್ಟ್ರೇಲಿಯಾ: 50 ಓವರುಗಳಲ್ಲಿ 6 ವಿಕೆಟ್‌ಗೆ 298 (ಫೋಬಿ ಲಿಚ್ಫೀಲ್ಡ್ 25, ಜಾರ್ಜಿಯಾ ವೋಲ್ 26, ಅನ್ನಾಬೆಲ್ ಸದರ್‌ಲ್ಯಾಂಡ್ 110, ಆ್ಯಶ್ಲೆ ಗಾರ್ಡನರ್ 50, ತಹಿಲಾ ಮೆಕ್‌ಗ್ರಾತ್ ಔಟಾಗದೇ 56; ಅರುಂಧತಿ ರೆಡ್ಡಿ 26ಕ್ಕೆ4);
ಭಾರತ: 45.1 ಓವರುಗಳಲ್ಲಿ 215 (ಸ್ಮೃತಿ ಮಂದಾನ 105, ಹರ್ಲೀನ್ ಡಿಯೋಲ್ 39; ಮೇಗನ್ ಶುಟ್ 26ಕ್ಕೆ2, ಆಶ್ಲೆ ಗಾರ್ಡನರ್ 30ಕ್ಕೆ5, ಅಲನಾ ಕಿಂಗ್ 27ಕ್ಕೆ2).
ಪಂದ್ಯದ ಮತ್ತು ಸರಣಿಯ ಆಟಗಾರ್ತಿ: ಅನ್ನಾಬೆಲ್ ಸದರ್‌ಲ್ಯಾಂಡ್.

ಬುಮ್ರಾ ಬೆಸ್ಟ್ ಬೌಲರ್ | ಜಡೇಜಾ ಬೆಸ್ಟ್ ಆಲ್ರೌಂಡರ್ | ಇನ್ನಷ್ಟು ಕೆಳಗಿಳಿದ ಕಿಂಗ್ ಕೊಹ್ಲಿ

ಹ್ಯಾರಿ ಬ್ರೂಕ್ ಈಗ ಟಾಪ್ ಬ್ಯಾಟರ್

ದೆಹಲಿ: ನ್ಯೂಜಿಲೆಂಡ್ ವಿರುದ್ಧ ಎರಡನೇ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಶತಕ ಸಿಡಿಸಿದ್ದ ಇಂಗ್ಲೆಂಡ್ ತಂಡದ ಬ್ಯಾಟರ್ ಹ್ಯಾರಿ ಬ್ರೂಕ್ ಐಸಿಸಿ ಟೆಸ್ಟ್ ಬ್ಯಾಟರ್‌ಗಳ ಶ್ರೇಯಾಂಕದಲ್ಲಿ ಅಗ್ರ ಸ್ಥಾನವನ್ನು ಅಲಂಕರಿಸಿದ್ದಾರೆ. ಆ ಮೂಲಕ ದೀರ್ಘಾವಧಿ ಬಳಿಕ ಇಂಗ್ಲೆಂಡ್ ಮಾಜಿ ನಾಯಕ ಜೋ ರೂಟ್ ಅಗ್ರ ಸ್ಥಾನವನ್ನು ಕಳೆದುಕೊಂಡಿದ್ದಾರೆ.

ಭಾರತ ತಂಡದ ಹಿರಿಯ ವೇಗಿ ಜಸ್ಪ್ರೀತ್ ಬುಮ್ರಾ ಅವರು ಟೆಸ್ಟ್ ಬೌಲರ್‌ಗಳ ಶ್ರೇಯಾಂಕದಲ್ಲಿ ಅಗ್ರ ಸ್ಥಾನವನ್ನು ಅಲಂಕರಿಸಿದ್ದರೆ, ಭಾರತದ ರವೀಂದ್ರ ಜಡೇಜಾ ಟೆಸ್ಟ್ ಆಲ್ರೌಂಡರ್‌ಗಳ ಶ್ರೇಯಾಂಕದಲ್ಲಿ ಅಗ್ರ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಬೌಲಿಂಗ್ ಹಾಗೂ ಆಲ್ರೌಂಡ್ ಶ್ರೇಯಾಂಕದಲ್ಲಿ ಭಾರತೀಯ ಆಟಗಾರರ ಪ್ರಾಬಲ್ಯ ಸಾಧಿಸಿದ್ದಾರೆ.

ಕಳೆದ ವಾರ ವೆಲ್ಲಿಂಗ್ಟನ್ ಟೆಸ್ಟ್ ಪಂದ್ಯದಲ್ಲಿ ತಮ್ಮ ಟೆಸ್ಟ್ ವೃತ್ತಿ ಜೀವನದ ಎಂಟನೇ ಶತಕ ಸಿಡಿಸಿದ್ದ 25ನೇ ವಯಸ್ಸಿನ ಹ್ಯಾರಿ ಬ್ರೂಕ್ ಟೆಸ್ಟ್ ಬ್ಯಾಟರ್‌ಗಳ ಶ್ರೇಯಾಂಕದ ಅಗ್ರ ಸ್ಥಾನದಲ್ಲಿದ್ದ ಜೋ ರೂಟ್ ಅವರನ್ನು

ಹಿಂದಿಕ್ಕಿದ್ದಾರೆ. ಜೂ ರೂಟ್ ಒಂದು ಅಂಕ ಹೆಚ್ಚು ಹೊಂದಿರುವುದರ ಲಾಭ ಪಡೆದ ಹ್ಯಾರಿ ಬ್ರೂಕ್ ಅಗ್ರ ಸ್ಥಾನಕ್ಕೆ ಲಗ್ಗೆ ಇಟ್ಟಿದ್ದಾರೆ.

ಹ್ಯಾರಿ ಬ್ರೂಕ್ ಇದೀಗ ತಮ್ಮ ಖಾತೆಯಲ್ಲಿ 898 ಅಂಕಗಳನ್ನು ಹೊಂದಿದ್ದರೆ, ಜೋ ರೂಟ್ 897 ಅಂಕಗಳನ್ನು ಹೊಂದಿದ್ದಾರೆ.

ಕೊಹ್ಲಿಗೆ 20ನೇ ಸ್ಥಾನ

ಭಾರತ ತಂಡ ಗೋಟ್ ಎಂದೇ ಪ್ರಸಿದ್ಧವಾದ ವಿರಾಟ್ ಕೊಹ್ಲಿ ಒಂದು ಕಾಲದಲ್ಲಿ ಬ್ಯಾಟ್ ಹಿಡಿದರೆ, ಸಿಕ್ಸ್ ಫೋರ್‌ಗಳ ಸುರಿಮಳೆ ಬರುತ್ತಿತ್ತು. ತೀವ್ರ ಕಳಪೆ ಫಾರ್ಮ್‌ನಲ್ಲಿರುವ ಕೊಹ್ಲಿಗೆ ಈಗ 20ನೇ ಸ್ಥಾನದಲ್ಲಿ ಇದ್ದಾರೆ.

ಟಾಪ್‌ನಲ್ಲಿ ಭಾರತೀಯರು

ಬೌಲಿಂಗ್‌ನಲ್ಲಿ ಬುಮ್ರಾ: ಭಾರತ ತಂಡದ ಹಿರಿಯ ವೇಗಿ ಜಸ್ಪ್ರೀತ್ ಬುಮ್ರಾ ಅವರು ಬೌಲರ್‌ಗಳ ಶ್ರೇಯಾಂಕದಲ್ಲಿ ಅಗ್ರ ಸ್ಥಾನದಲ್ಲಿಯೇ ಮುಂದುವರಿದಿದ್ದಾರೆ. ಅವರು 890 ಅಂಕಗಳನ್ನು ಕಲೆಹಾಕಿದ್ದಾರೆ. ಇನ್ನು ದಕ್ಷಿಣ ಆಫ್ರಿಕಾ ತಂಡದ ಹಿರಿಯ ವೇಗಿ ಜಾಕ್ ಕಾಲಿಸ್ ಅವರು 856 ಅಂಕಗಳ ಮೂಲಕ ಎರಡನೇ ಸ್ಥಾನದಲ್ಲಿದ್ದರೆ, ಜಾಶ ಹೇಝುಲ್ವುಡ್ ಮೂರನೇ ಸ್ಥಾನದಲ್ಲಿದ್ದಾರೆ.
ಆಲ್ರೌಂಡರ್‌ನಲ್ಲಿ ಜಡೇಜಾ: 415 ಅಂಕಗಳನ್ನು ಹೊಂದಿರುವ ರವೀಂದ್ರ ಜಡೇಜಾ ಅವರು ಟೆಸ್ಟ್ ಆಲ್ರೌಂಡರ್‌ಗಳ ಶ್ರೇಯಾಂಕದಲ್ಲಿ ಅಗ್ರ ಸ್ಥಾನದಲ್ಲಿದ್ದಾರೆ. ಇವರ ಬಳಿಕ ಬಾಂಗ್ಲಾದೇಶ ತಂಡದ ಆಲ್ರೌಂಡರ್ ಮೆಹಿಡಿ ಮಿರಾಜ್ ಎರಡನೇ ಸ್ಥಾನದಲ್ಲಿದ್ದಾರೆ. ವೆಸ್ಟ್ ಇಂಡೀಸ್ ವಿರುದ್ಧ ಟೆಸ್ಟ್ ಸರಣಿಯಲ್ಲಿ ಮೆಹಡಿ ಮಿರಾಜ್ ಉತ್ತಮ ಪ್ರದರ್ಶನವನ್ನು ತೋರಿದ್ದರು.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ | ವಿದರ್ಭ ಎದುರು ಜಯಗಳಿಸಿದ ಮುಂಬೈ | ಬಂಗಾಳದ ಎದುರು ಗೆದ್ದ ಬರೋಡಾ

ಮುಂಬೈ, ಬರೋಡಾ ಸೆಮಿಸ್‌ಗೆ

ಬೆಂಗಳೂರು: ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಶ್ರೇಯಸ್ ಅಯ್ಯರ್ ನಾಯಕತ್ವದ ಮುಂಬೈ ಮತ್ತು ಆಲ್ರೌಂಡರ್ ಕೃಣಾಲ್ ಪಾಂಡ್ಯ ನೇತೃತ್ವದ ಬರೋಡಾ ತಂಡಗಳು ಮುಖಾಮುಖಿಯಾಗಲಿವೆ.

ಬುಧವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಮುಂಬೈ ತಂಡವು 6 ವಿಕೆಟ್‌ಗಳಿಂದ ವಿದರ್ಭ ಎದುರು ಜಯಿಸಿತು. ಬರೋಡಾ ತಂಡವು 41 ರನ್‌ಗಳಿಂದ ಬಂಗಾಳ ವಿರುದ್ಧ ಗೆದ್ದಿತು. ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ರಹಾನೆ (84; 45ಎ) ಗೆಲುವಿನ ರೂವಾರಿಯಾದರು. ಟಾಸ್ ಗೆದ್ದ ಮುಂಬೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಿದರ್ಭ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 221 ರನ್ ಗಳಿಸಿತು. ಈ ಬೃಹತ್ ಗುರಿಯನ್ನು ಮುಂಬೈ ತಂಡವು 19.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ದಾಟಿತು. ಅಜಿಂಕ್ಯ ಮತ್ತು ಒಂದು ರನ್ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡ ಪೃಥ್ವಿ ಶಾ (49; 26ಎ) ಮೊದಲ ವಿಕೆಟ್ ಜೊತೆಯಾಟ ದಲ್ಲಿ ಕೇವಲ ಏಳು ಓವರ್‌ಗಳಲ್ಲಿ 83 ರನ್ ಕಲೆಹಾಕಿ ದರು. ಇದರಿಂದಾಗಿ ತಂಡವು ಇನ್ನಿಂಗ್ಸ್‌ನಲ್ಲಿ ಇನ್ನೂ ನಾಲ್ಕು ಎಸೆತಗಳು ಬಾಕಿ ಇರುವಾಗಲೇ ಗೆಲುವಿನ ಗುರಿ ಮುಟ್ಟಿತು.

ಆರಂಭಿಕ ಜೋಡಿ ಅಥರ್ವ ತೈಡೆ (66; 41ಎ) ಮತ್ತು ಕರುಣ್ ನಾಯರ್ (26; 15ಎ) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 5.3 ಓವರ್‌ಗಳಲ್ಲಿ 60 ರನ್ ಕಲೆಹಾಕಿದರು. ಅಪೂರ್ವ ವಾಂಖೆಡೆ (51; 33ಎ) ಕೂಡ ಅರ್ಧಶತಕ ಹೊಡೆದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಎಂಟರ ಘಟ್ಟದ ಪಂದ್ಯದಲ್ಲಿ ಬರೋಡಾ ತಂಡವು 41 ರನ್ ಗಳಿಂದ ಬಂಗಾಳ ಎದುರು ಗೆದ್ದಿತು. ಹಾರ್ದಿಕ್ ಪಾಂಡ್ಯ ಮತ್ತು ಲುಕ್ಮನ್ ಮೆರಿವಾಲ ತಲಾ ಮೂರು ವಿಕೆಟ್ ಗಳಿಸಿ ಗೆಲುವಿನ ರೂವಾರಿಯಾದರು. ಮತ್ತೊಂದು ಪಂದ್ಯದಲ್ಲಿ ವೆಂಕಟೇಶ್ ಅಯ್ಯರ್ ಆಲ್ರೌಂಡ್ ಆಟದಿಂದ ಮಧ್ಯ ಪ್ರದೇಶ ತಂಡವು 6 ವಿಕೆಟ್‌ಗಳಿಂದ ಸೌರಾಷ್ಟ್ರ ಎದುರು ಗೆದ್ದಿತು.

ಸಂಕ್ಷಿಪ್ತ ಸ್ಕೋರು

ಆಲೂರು ಕ್ರೀಡಾಂಗಣ: ವಿದರ್ಭ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 221 (ಅಥರ್ವ ತೈಡೆ 66, ಕರುಣ್ ನಾಯರ್ 26, ಅಪೂರ್ವ ವಾಂಖೆಡೆ 51, ಶುಭಂ ದುಬೆ ಔಟಾಗದೆ 43) ಮುಂಬೈ: 19.2 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 224 (ಪೃಥ್ವಿ ಶಾ 49, ಅಜಿಂಕ್ಯ ರಹಾನೆ 84, ಶಿವಂ ದುಬೆ ಔಟಾಗದೆ 37, ಸೂರ್ಯಾಂಶ್ ಶೆಡಗೆ ಔಟಾಗದೆ 36) ಫಲಿತಾಂಶ: ಮುಂಬೈ ತಂಡಕ್ಕೆ 6 ವಿಕೆಟ್ ಜಯ. ಪಂದ್ಯಶ್ರೇಷ್ಠ: ಅಜಿಂಕ್ಯ ರಹಾನೆ.
ಸೌರಾಷ್ಟ್ರ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 173 (ಚಿರಾಗ್ ಜಾನಿ ಔಟಾಗದೆ 80) ಮಧ್ಯಪ್ರದೇಶ: 19.2 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 174 (ಅರ್ಪಿತ್ ಗೌಡ 42, ಸುಧ್ರಾಂಶು ಸೇನಾಪತಿ 24) ಫಲಿತಾಂಶ: ಮಧ್ಯಪ್ರದೇಶ ತಂಡಕ್ಕೆ 6 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ವೆಂಕಟೇಶ್ ಅಯ್ಯರ್.
ಚಿನ್ನಸ್ವಾಮಿ ಕ್ರೀಡಾಂಗಣ: ಬರೋಡಾ: 20 ಓವರ್‌ಗಳಲ್ಲಿ 7ಕ್ಕೆ172 (ಶಾಶ್ವತ್ ರಾವತ್ 40, ಅಭಿಮನ್ಯು ಸಿಂಗ್ 37, ಶಿವಾಲಿಕ್ ಶರ್ಮಾ 24) ಬಂಗಾಳ: 18 ಓವರ್‌ಗಳಲ್ಲಿ 131 (ಅಭಿಷೇಕ್ ಪೊರೆಲ್ 22, ಋತ್ವಿಕ್ ಚೌಧರಿ 29, ಶಹಬಾಜ್ ಅಹಮದ್ 55, ಹಾರ್ದಿಕ್ ಪಾಂಡ್ಯ 27ಕ್ಕೆ3, ಲುಕ್ಮನ್ ಮೆರಿವಾಲಾ 17ಕ್ಕೆ3, ಅತಿಥ್ ಶೇತ್ 41ಕ್ಕೆ3) ಫಲಿತಾಂಶ: ಬರೋಡಾ ತಂಡಕ್ಕೆ 41 ರನ್‌ಗಳ ಜಯ. ಪಂದ್ಯಶ್ರೇಷ್ಠ: ಲುಕ್ಮನ್ ಮೆರಿವಾಲಾ.

ಜನವರಿಗೆ ಭೂಮಂತರ್

ಶರಣ್ ಅಭಿನಯದ ಸಿನಿಮಾಗಳು ತೆರೆಗೆ ಬರದೆ ಬಹು ದಿನಗಳೇ ಕಳೆದಿವೆ. ಶರಣ್ ಅವರನ್ನು ತೆರೆಯಲ್ಲಿ ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದರು. ಅಂತು ಸಿನಿಪಿಯರಿಗೆ ಸಿಹಿ ಸುದ್ದಿ ಸಿಕ್ಕಿದೆ. ಶರಣ್ ನಾಯಕರಾಗಿ ನಟಿಸಿರುವ ಬಹು ನಿರೀಕ್ಷಿತ ಛೂ ಮಂತರ್ ಜನವರಿ 10 ರಂದು ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಸಂಕ್ರಾಂತಿ ಸಮಯದಲ್ಲಿ ತೆಲುಗು, ತಮಿಳಿನ ದೊಡ್ಡದೊಡ್ಡ ಚಿತ್ರಗಳು ಬಿಡುಗಡೆಯಾಗುತ್ತಿದ್ದವು. ಆದರೆ ಕನ್ನಡದಲ್ಲಿ ಯಾವುದೇ ಚಿತ್ರಗಳು ಈ ಸಮಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಬಿಡುಗಡೆಯಾಗಿರಲ್ಲ. ಬಹಳ ವರ್ಷಗಳ ನಂತರ ಕನ್ನಡದ ಛೂ ಮಂತರ್ ಚಿತ್ರವನ್ನು ಸಂಕ್ರಾಂತಿ ಸಮಯದಲ್ಲಿಯೇ ಬಿಡುಗಡೆಯಾಗುತ್ತಿದೆ. ಕರ್ವ ಖ್ಯಾತಿಯ ನವನೀತ್ ನಿರ್ದೇಶನದ ಈ ಚಿತ್ರವನ್ನು ತರುಣ್ ಸ್ಟುಡಿಯೋಸ್ ಲಾಂಛನದಲ್ಲಿ ತರುಣ್ ಹಾಗೂ ಮಾನಸಾ ತರುಣ್ ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ.

ಇದೊಂದು ಡಾರ್ಕ್ ಹ್ಯೂಮರ್ ಜಾನರ್‌ನ ಹಾರಾರ್ ಚಿತ್ರವಾಗಿದ್ದು, ಕಾಮಿಡಿಯೂ ಬೆರೆತಿದೆ. ಈ ಚಿತ್ರದಲ್ಲಿ ಶರಣ್ ಹಿಂದೆಂದೂ ಕಾಣಿಸಿಕೊಳ್ಳ ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ತರುಣ್ ಸುಧೀರ್ ಈ ಚಿತ್ರಕ್ಕೆ ಓಂಕಾರ ಹಾಕಿದರು, ದರ್ಶನ್ ಅವರು ಶೀರ್ಷಿಕೆ ನೀಡಿದರು. ಅಲ್ಲಿಂದ ಚಿತ್ರದ ಜರ್ನಿ ಆರಂಭವಾಯಿತು. ಸುಮಾರು ವರ್ಷಗಳಿಂದ ಸಾಮಾನ್ಯವಾಗಿ ಸಂಕ್ರಾಂತಿ ಸಮಯಕ್ಕೆ ಕನ್ನಡ ಚಿತ್ರಗಳನ್ನು ಬಿಡುಗಡೆ ಮಾಡುತ್ತಿರಲಿಲ್ಲ. ಆದರೆ ತರುಣ್ ಅವರು ಸಂಕ್ರಾಂತಿ ಸಮಯಕ್ಕೆ ಚಿತ್ರ ಬಿಡುಗಡೆ ಮಾಡುತ್ತಿದ್ದಾರೆ. ಉತ್ತಮ ಕಥಾಹಂದರ ಹೊಂದಿರುವ ಈ ಚಿತ್ರ ಗೆದ್ದೇ ಗೆಲ್ಲುತ್ತದೆ ಎಂಬ ನಂಬಿಕೆ ನನಗಿದೆ ಎಂದು ಶರಣ್ ಹೇಳಿದರು.

ನಾನು ನಾಯಕನಾಗಿ ನಟಿಸಿದ್ದ ಉಪಾಧ್ಯಕ್ಷ ಕಳೆದ ಜನವರಿಯಲ್ಲಿ ಬಿಡುಗಡೆ ಯಾಗಿತ್ತು. ಈ ಜನವರಿಯಲ್ಲಿ ನಮ್ಮಿಬ್ಬರ ಕಾಂಬಿನೇಶ್‌ನಲ್ಲಿ ಬಂದಿರುವ ಈ ಚಿತ್ರ ಬಿಡುಗಡೆ ಯಾಗುತ್ತಿದೆ. ಈ ಚಿತ್ರ ನಮ್ಮಿಬ್ಬರ ಹಿಂದಿನ ಚಿತ್ರಗಳಿಗಿಂತ ವಿಭಿನ್ನ ಎಂದು ನಟ ಚಿಕ್ಕಣ್ಣ ತಿಳಿಸಿದರು.

ದಾಸರಹಳ್ಳಿಯಲ್ಲಿ ಧರ್ಮ

ಬಿಗ್‌ಬಾಸ್ ಖ್ಯಾತಿಯ ಧರ್ಮ ಕೀರ್ತಿರಾಜ್ ಅಭಿನಯದ ದಾಸರಹಳ್ಳಿ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಟ್ರೇಲರ್‌ನಲ್ಲಿ ಮಾಸ್ ಅಂಶಗಳಿದ್ದು, ಮಾಸ್ ಪ್ರಿಯರಿಗೆ ಹೇಳಿ ಮಾಡಿಸಿದ ಸಿನಿಮಾವಾಗಿದೆ. ಚಾಕ್ಲೇಟ್ ಬಾಯ್ ಆಗಿದ್ದ ಧರ್ಮ ಕೀರ್ತಿರಾಜ್, ಆ್ಯಕ್ಷನ್ ಹೀರೊ ಆಗಿ ಮಿಂಚಿದ್ದಾರೆ. ಎಂ.ಆರ್.ಶ್ರೀನಿವಾಸ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ನೇಹಾ ನಾಯಕಿಯಾಗಿ ಬಣ್ಣಹಚ್ಚಿದ್ದು, ಉಳಿದಂತೆ ಉಮೇಶ್ ರಾಜ್, ಜಾಗ್ವಾರ್ ಸಣ್ಣಪ್ಪ, ಎಂ ಎಸ್ ಉಮೇಶ್, ಹೊನ್ನವಳ್ಳಿ ಕೃಷ್ಣ, ಬಿರಾದರ್, ಬೆಂಗಳೂರು ನಾಗೇಶ್, ಶಿವಕುಮಾರ್ ಆರಾಧ್ಯ, ಮಿಮಿಕ್ರಿ ಗೋಪಿ, ಮಜಾ ಟಾಕೀಸ್ ಪವನ್, ಪದ್ಮಾವಸಂತಿ, ರೇಖಾ ದಾಸ್, ಸಿತಾರ, ಕವನಾ, ಥ್ರಿಲ್ಲರ್ ಮಂಜು, ಕೌರವ ವೆಂಕಟೇಶ್ ಇಬ್ಬರು ಚಿತ್ರಕ್ಕೆ ಸಾಹಸ ನಿರ್ದೇಶನ ಮಾಡುವ ಜತೆಗೆ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ತಂದೆಯ ಸರಿಯಾದ ಮಾರ್ಗದರ್ಶವಿಲ್ಲದೆ ಹೋದರೆ ಮಕ್ಕಳು ಹೇಗೆ ದಾರಿ ತಪ್ಪುತ್ತಾರೆ ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ಮಾಸ್ ಎಲಿಮೆಂಟ್ಸ್ ಜತೆಗೆ ಸಾಮಾಜಿಕ ಸಂದೇಶವೂ ಚಿತ್ರದಲ್ಲಿದೆ. ಧರ್ಮ ಅವರನ್ನು ಹೊಸ ಅವತಾರದಲ್ಲಿ ಕಣ್ತುಂಬಿಕೊಳ್ಳಬಹುದಾಗಿದೆ. ಎಲ್ಲರಿಗೂ ಚಿತ್ರ ಖಂಡಿತಾ ಹಿಡಿಲಿದೆ ಎಂಬ ನಂಬಿಕೆ ನನಗಿದೆ. ಫೆಬ್ರವರಿಯಲ್ಲಿ ಚಿತ್ರ ತೆರೆಗೆ ಬರಲಿದೆ.
-ಎಂ.ಆರ್. ಶ್ರೀನಿವಾಸ್ ನಿರ್ದೇಶಕ

ನಿರ್ದೇಶಕರು ಒಳ್ಳೆಯ ಕಥೆ ಹೆಣೆದು, ಸಿನಿಮಾ ಮಾಡಿದ್ದಾರೆ. ಕಷ್ಟ ಪಟ್ಟು ಎಲ್ಲಾ ಕಲಾವಿದರನ್ನು ಸೇರಿಸಿದ್ದಾರೆ. ನಮ್ಮ ಹಳೆಯ ಗೆಳೆಯರೆಲ್ಲಾ ಒಂದೇ ಸಿನಿಮಾದಲ್ಲಿ ಸಿಕ್ಕಿದ್ದಾರೆ. ಅವರೆಲ್ಲಾ ಇಷ್ಟಪಟ್ಟು ಸಿನಿಮಾದಲ್ಲಿ ನಟಿಸಿದ್ದಾರೆ. ಇಂದಿನ ಕಾಲಘಟ್ಟಕ್ಕೆ ಹೊಂದುವ ಕಥೆ ಚಿತ್ರದಲ್ಲಿದೆ.
-ಉಮೇಶ್ ಹಿರಿಯ ನಟ

ನಿರ್ದೇಶನಕರು ನನಗೆ ಮೊದಲಿನಿಂದಲೂ ಪರಿಚಯ. ನಾನೊಂದು ಸಿನಿಮಾ ಮಾಡುತ್ತಿದ್ದೇನೆ, ನೀವೂ ಅದರಲ್ಲಿ ಮುಖ್ಯ ಪಾತ್ರದಲ್ಲಿ ನಟಿಸಬೇಕು ಎಂದರು. ನಾನು ಕೂಡ ಖುಷಿಯಿಂದ ಒಪ್ಪಿಕೊಂಡೆ. ಚಿತ್ರದಲ್ಲಿ ನನಗೆ ಒಳ್ಳೆಯ ಪಾತ್ರವೇ ಸಿಕ್ಕಿದೆ. ಈ ಸಿನಿಮಾದಲ್ಲಿ ಒಳ್ಳೆಯ ಸಂದೇಶವೂ ಇದೆ. ಕುಡಿತದ ದಾಸನಾದರೆ ಏನಾಗುತ್ತೆ ಎಂಬುದೇ ಚಿತ್ರದ ಕಥೆ. ಸಿನಿಮಾದ ಸ್ಟೋರಿ ನಾಲ್ಕು ಆಯಾಮಗಳಲ್ಲಿ ಸಾಗುತ್ತದೆ.
-ಧರ್ಮ ಕೀರ್ತಿರಾಜ್ ನಟ

ವೈಷ್ಣವಿ ವಸುಂಧರೆ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ಪಿ.ಉಮೇಶ ಚಿತ್ರ ನಿರ್ಮಾಣ ಮಾಡಿದ್ದಾರೆ. ಎಂ.ಎಸ್. ತ್ಯಾಗರಾಜ ಸಂಗೀತ ನಿರ್ದೇಶನ, ಸಿ.ನಾರಾಯಣ್ ಛಾಯಾಗ್ರಹಣ, ಆರ್.ಡಿ.ರವಿ ಸಂಕಲನ ಈ ಚಿತ್ರಕ್ಕಿದೆ.



ಮಹಾಕಾಳಿ ಸನ್ನಿಧಿಯಲ್ಲಿ ಬಾಸ್

ನಟ್ವರ್ ಲಾಲ್ ಸಿನಿಮಾ ಮೂಲಕ ಗಮನಸೆಳೆದಿದ್ದ ನಟ ತನುಷ್ ಶಿವಣ್ಣ ಈಗ ಮತ್ತೊಂದು ಹೊಸ ಚಿತ್ರದಲ್ಲಿ ನಟಿಸಲು ಸಿದ್ಧವಾಗಿದ್ದಾರೆ. ಬಾಸ್ ಶೀರ್ಷಿಕೆಯಲ್ಲಿ ಸಿದ್ಧವಾಗುತ್ತಿರುವ ಈ ಚಿತ್ರದಲ್ಲಿ ತನುಷ್ ಶಿವಣ್ಣ ನಾಯಕನಾಗಿ ಮಿಂಚಲಿದ್ದಾರೆ. ಸದ್ಯ ಈ ಚಿತ್ರದ ಮುಹೂರ್ತ ಸಮಾರಂಭ ಬೆಂಗಳೂರಿನ ಬಂಡೆ ಮಹಾಂಕಾಳಿ ದೇವಸ್ಥಾನದಲ್ಲಿ ಸರಳವಾಗಿ ನೆರವೇರಿತು. ಚಿತ್ರತಂಡದ ಸದಸ್ಯರು ಮುಹೂರ್ತ ಸಮಾರಂಭದಲ್ಲಿ ಭಾಗಿಯಾಗಿದ್ದರು. ಬಾಸ್ ಚಿತ್ರಕ್ಕೆ ಸತ್ಯಮೇವ ಜಯತೇ ಎಂಬ ಅಡಿಬರಹವಿದೆ. ಬೆಂಗಳೂರಿನಲ್ಲಿ ನಡೆದ ನೈಜಘಟನೆಯನ್ನು ಆಧರಿಸಿ ಚಿತ್ರದ ಕಥೆ ಹೆಣೆಯಲಾಗಿದೆ. ಆ್ಯಕ್ಷನ್, ಥ್ರಿಲ್ಲರ್ ಸಸ್ಪೆನ್ಸ್ ಜಾನರ್‌ನಲ್ಲಿ ಮೂಡಿಬರಲಿದೆ. ನಟ್ವರ್ ಲಾಲ್ ಚಿತ್ರವನ್ನು ನಿರ್ದೇಶಿಸಿದ್ದ ನಿರ್ದೇಶಕ ವಿ.ಲವ ಈ ಚಿತ್ರಕ್ಕೂ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ತನುಷ್ ಶಿವಣ್ಣ ಈ ಚಿತ್ರದಲ್ಲಿ ವಿಭಿನ್ನ ಗೆಟಪ್‌ನಲ್ಲಿ ಕಂಗೊಳಿಸಲಿದ್ದಾರೆ. ವಿಕ್ರಾಂತ್ ರೋಣ ಖ್ಯಾತಿಯ ವಿಲಿಯಂ ಡೇವಿಡ್ ಛಾಯಾಗ್ರಹಣ ಹಾಗೂ ಡೇವಿ ಸುರೇಶ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಸಿರಿ ಪ್ರೊಡಕ್ಷನ್ ಲಾಂಛನದಲ್ಲಿ ಪಿ.ಅನಿಲ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಇದೇ ತಿಂಗಳ 20ರಿಂದ ಬೆಂಗಳೂರಿನಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ.